ವಿತ್ತೀಯ ಕಾರ್ಯಕಲಾಪಗಳು

2000-2001 ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆ

+ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) : ಮಾನ್ಯ ಅಧ್ಯಕ್ಷರೆ, ನಿನ್ನೆ ನನಗೆ ಸಮಯವಿಲ್ಲದ್ದಕ್ಕೆ ಇವತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಇವತ್ತು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳಿವೆ. ನಮ್ಮ ಮುಖ್ಯಮಂತ್ರಿಗಳು ಹೈ ಟೆಕ್ನಾಲಜಿ ಬಗ್ಗೆ ಬಹಳ ಆಸಕ್ತಿ ವಹಿಸಿದವರಾಗಿದ್ದಾರೆ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಹೊರದೇಶಗಳಿಂದ ಯಾರಾದರೂ ಕೈಗಾರಿಕೋದ್ಯಮಿಗಳು ಬಂದರೆ ಜಮೀನು ಕೊಡುವುದರಿಂದ ಹಿಡಿದು ಎಲಿನೇಷನ್‌ವರೆಗೂ ನೋಡಿಕೊಳ್ಳುತ್ತಾರೆ. ನಾನು ಮೂರು ವರ್ಷಗಳ ಹಿಂದೆ ಪ್ಯಾರಿಸ್‌ನಿಂದ ನೀಸ್‌ಗೆ ಹೋಗುತ್ತಿದ್ದೆ, ನನಗೆ ಪರಿಚಯವಿಲ್ಲದೆ ವಿಶ್ವಬ್ಯಾಂಕ್‌ನ ಒಬ್ಬ ಸಲಹೆಗಾರರು ನನ್ನ ಪಕ್ಕದಲ್ಲಿ ಕುಳಿತಿದ್ದರು. ಅವರು ನನ್ನನ್ನು ಯಾವ ದೇಶದವರೆಂದು ಕೇಳಿದಾಗ ನಾನು ಕರ್ನಾಟಕದವನೆಂದು ಹೇಳಿದೆ. ಆಗ ತಾನೆ ಮಾನ್ಯ ಎನ್‌ಟಿಆರ್ ನಂತರ ಮಾನ್ಯ ಚಂದ್ರಬಾಬು ನಾಯ್ಡುರವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು, ಅವರು ಮುಖ್ಯಮಂತ್ರಿಗಳಾಗಿ ಕೇವಲ ಆರು ತಿಂಗಳಾಗಿರಬಹುದು, ಅವತ್ತು ಅವರು ಆಡಿದ ಮಾತನ್ನು ನಿಜವಾಗಲೂ ಇವತ್ತು ಪ್ರೂವ್ ಮಾಡಿದ್ದಾರೆ. ನಮ್ಮ ಬೆಂಗಳೂರು ಸಿಲಿಕಾನ್ ವ್ಯಾಲಿ ಎಂದೆ ಹೆಸರಾಗಿದೆ, ಆದುದರಿಂದ ನಮ್ಮ ರಾಜ್ಯಕ್ಕೆ ಬರುವಂತಹ ಕೈಗಾರಿಕೆಗಳನ್ನು ಮತ್ತಷ್ಟು ಆಕರ್ಷಣೆ ಮಾಡಬೇಕು. ಚೈನಾದಲ್ಲಿನ ಜೈಮನ್ ಎನ್ನುವ ಒಂದು ರಾಜ್ಯಕ್ಕೆ ಹೋಗಿದ್ದೆ, ಯಾರು ಹೊರದೇಶಗಳಿಂದ ಬಂದು ಇಲ್ಲಿ ಕೈಗಾರಿಕೆಗಳನ್ನು ಆರಂಭ ಮಾಡುತ್ತಾರೆ, ಅವರಿಗೆ ಆದಾಯ ಹಾಗೂ ಮಾರಾಟ ತೆರಿಗೆ ಇಲ್ಲ, ಕೇವಲ ಉದ್ಯೋಗ ಕೊಡುವ ದೃಷ್ಟಿಯಿಂದ ಅಲ್ಲಿನ ಚೈನಾ ಸರ್ಕಾರ ಹಾಗೆ ಮಾಡುತ್ತಿದೆ. ಈ ರೀತಿಯಾಗಿ ನಮ್ಮ ರಾಜ್ಯದ ಕೆಲವು ಜಿಲ್ಲೆಗಳನ್ನು ಆಯ್ದುಕೊಂಡು ಕೈಗಾರಿಕಾ ಅಭಿವೃದ್ಧಿ ಪ್ರದೇಶಗಳನ್ನಾಗಿ ಮಾಡಿದರೆ ನಿಜವಾಗಿಯೂ ಈ ರಾಜ್ಯಕ್ಕೆ ಬಹಳ ಅನುಕೂಲವಾಗುತ್ತದೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಹಿಂದಿನ ಸರ್ಕಾರ ಪ್ರವಾಸೋದ್ಯಮದ ಬಗ್ಗೆ ಒಂದು ನೀತಿಯನ್ನು ಘೋಷಿಸಿದೆ, ಇದಕ್ಕೆ ಈ ಸರ್ಕಾರ ಆದಷ್ಟು ಆದ್ಯತೆಯನ್ನು ಕೊಡಬೇಕು. ಇದರ ಮೂಲಕ ನಾವು ಸಂಪನ್ಮೂಲವನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶವಿದೆ, ಬರೀ ಪ್ರವಾಸೋದ್ಯಮ ಮಾಡಿ, ಜನರು ಬಂದು ಹೋಗುವುದೇ ಮುಖ್ಯವಲ್ಲ. ಇವತ್ತು ಹಾಸನದಲ್ಲಿ ಒಂದು ಅಶೋಕ ಹೋಟೆಲ್ ಅನ್ನು ಕಟ್ಟಿದ್ದರಿಂದ ಇನ್ನೊಂದಷ್ಟು ಜನರು ಬರುವ ಅವಕಾಶವಿದೆ. ಈ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಅವಕಾಶವಿದೆ ಅಲ್ಲಿ ಸಂಪನ್ಮೂಲ ಸಂಗ್ರಹಣೆ ಮಾಡಬೇಕು, ಇದರಿಂದ ಸಂಪನ್ಮೂಲ ಸಂಗ್ರಹಣೆಯ ಕ್ಯಾಂಪ್ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಹುದ್ದೆಗಳನ್ನು ನೇಮಕಾತಿಯನ್ನು ರದ್ದು ಮಾಡಿರುವುದನ್ನು ತಿಳಿದು ನನಗಂತೂ ಸಂತೋಷವಾಗಿದೆ. ಇವತ್ತು ನಮ್ಮ ರಾಜ್ಯದ ಬೊಕ್ಕಸದ ಸುಮಾರು ಶೇಕಡ 70ರಷ್ಟು ಹಣವನ್ನು ಈ ನೌಕರರ ಸಾರಿಗೆ ಸಂಬಳಗಳಿಗೆ ನಾವು ಕೊಡಬೇಕಾಗಿದೆ. ನಮಗೆ ಅಗತ್ಯ ಬಿದ್ದಷ್ಟು ಹುದ್ದೆಗಳಿಗೆ

ಮಾತ್ರ ನೇಮಕಾತಿ ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಬಿಟ್ಟು ಎಲ್ಲ ಹುದ್ದೆಗಳಿಗೂ ನೇಮಕಾತಿಗಳನ್ನು ಮಾಡಿಕೊಳ್ಳುತ್ತಾ ಹೋದರೆ, ಈ ರಾಜ್ಯದ ಸಂಪನ್ಮೂಲಗಳಿಂದ ಬಂದ ಹಣವನ್ನು ಈ ನೌಕರರ ಸಂಬಳ ಸಾರಿಗೆಗಳಿಗೆ ಕೊಡುತ್ತಾ ಹೋದರೆ ನಾವು ಹೋದರೆ ನಾವು ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ನಾವು ಅಭಿವೃದ್ಧಿ ಕೆಲಸಗಳನ್ನು ಮಾಡಲು ಅದು ವಿಶ್ವಬ್ಯಾಂಕ್ ಇರಬಹುದು, ಎನ್‌ಡಿಡಿಬಿ ಇರಬಹುದು, ನಬಾರ್ಡ್ ಇರಬಹುದು ಇತ್ಯಾದಿ ಸಂಸ್ಥೆಗಳಿಂದ ಸಾಲಗಳನ್ನು ಪಡೆಯಬೇಕಾಗುತ್ತದೆ, ಇದರಿಂದ ರಾಜ್ಯ ಬೊಕ್ಕಸಕ್ಕೆ ಹೊರೆಯಾಗುತ್ತದೆ. ರಾಜ್ಯದಲ್ಲಿ ಸಂಪನ್ಮೂಲವನ್ನು ಸಂಗ್ರಹಣೆ ಮಾಡಬೇಕು ಎನ್ನುವುದರ ಜೊತೆಗೆ ಶೇಕಡ 80ರಷ್ಟು ಹುದ್ದೆಗಳನ್ನು ಸರ್ಕಾರ ರದ್ದು ಮಾಡಿರುವುದು ಒಳ್ಳೆಯ ಕೆಲಸವೆಂದು ನಾನು ವೈಯಕ್ತಿಕವಾಗಿ ಹೇಳುತ್ತೇನೆ.

ಇನ್ನು ಮಾನ್ಯ ಮುಖ್ಯಮಂತ್ರಿಗಳು ಶಾಸಕರ ನಿಧಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇದು ಬಹಳ ಸಂತೋಷದ ವಿಷಯ. ಇತ್ತೀಚೆಗೆ ಲೋಕಸಭಾ ಸದಸ್ಯರಿಗೆ ಮೂರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ, ಕನಿಷ್ಠ ಪಕ್ಷ ನಮಗೂ ಕೂಡ ಒಂದು ಕೋಟಿ ರೂಪಾಯಿಗಳನ್ನಾದರೂ ಈ ನಿಧಿಯಿಂದ ಕೊಡಿಸಬೇಕಾಗುತ್ತದೆ. ಕಾರಣವೇನೆಂದರೆ, ಇವತ್ತು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳು ಬಂದ ಮೇಲೆ, ಶಾಸಕರು ಏನೂ ಕೆಲಸ ಮಾಡಬೇಕಾಗಿಲ್ಲ. ಅವರ ಪಕ್ಷದವರ್‍ಯಾರದರೂ ತಾಲ್ಲೂಕು, ಜಿಲ್ಲಾ ಪಂಚಾಯಿತಿಯಲ್ಲಿ ಇದ್ದರೆ ಕೆಲಸಗಳು ನಡೆಯುತ್ತದೆ, ಇಲ್ಲದಿದ್ದರೆ ಶಾಸಕರ ಕೆಲಸವಾಗುವುದಿಲ್ಲ. ಇವತ್ತು ಈ ಪರಿಸ್ಥಿತಿ ಶಾಸಕರದಿರುವುದರಿಂದ ಕನಿಷ್ಠ ಪಕ್ಷ ಒಂದು ಕೋಟಿ ರೂಪಾಯಿಗಳನ್ನು ಆದರೂ ಶಾಸಕರ ನಿಧಿಗೆ ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಇವತ್ತು ಆಯವ್ಯಯದಲ್ಲಿ ಸುಮಾರು ಮುನ್ನೂರು ಕೋಟಿ ಚಿಲ್ಲರೆ ರೂಪಾಯಿಗಳ ಕೊರತೆಯನ್ನು ತೋರಿಸಲಾಗಿದೆ. ಇವತ್ತು ಈ ಸೆಕೆಂಡ್ಸ್‌ನಲ್ಲಿ ಒಂದು ದಿವಸಕ್ಕೆ ಎರಡು ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಇದರ ಬಗ್ಗೆ ಚೆನ್ನಾಗಿ ಗೊತ್ತು, ಅವರು ನಾವು ಸೇರಿಕೊಂಡು 15 ವರ್ಷಗಳ ಹಿಂದೆ ಒಂದು ಸಾರಾಯಿ ಫ್ಯಾಕ್ಟರಿಯನ್ನು ಆರಂಭ ಮಾಡಿದೆವು, ಆದುದರಿಂದ ಇದರ ಬಗ್ಗೆ ನನಗೂ ಮತ್ತು ಅವರಿಗೂ ಅನುಭವವಿದೆ. ಈ ಸೆಕೆಂಡ್ಸ್ ಅನ್ನು ನಿಲ್ಲಿಸಿದರೆ ದಿವಸಕ್ಕೆ ಎರಡು ಕೋಟಿ ರೂಪಾಯಿಗಳ ಆದಾಯ ಬರುತ್ತದೆ. XXX

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಇವತ್ತು ರಾಜ್ಯದಲ್ಲಿ ಈ ಪರಿಸ್ಥಿತಿ ಉಲ್ಬಣವಾಗಿದೆ. ಇವತ್ತು ಕೇವಲ ಮಾನ್ಯ ರಾಜಶೇಖರಮೂರ್ತಿಯವರು ರಾಜ್ಯಸಭಾ ಅಭ್ಯರ್ಥಿಗಳಾಗಿ ನಿಂತಿದ್ದಾರೆ, ಹಿಂದೆ ಅವರು ಹಣಕಾಸಿನ ಮಂತ್ರಿಯಾಗಿ ರಾಜ್ಯದಲ್ಲಿದ್ದಾಗ ಹನ್ನೊಂದುವರೆ ತಿಂಗಳಲ್ಲಿ ನಾನೂರು ಕೋಟಿ ರೂಪಾಯಿಗಳ ಆದಾಯ ಬಂದಿತ್ತು. ಅವರು ಬೇರೆಯಲ್ಲ, ನೀವು ಬೇರೆಯಲ್ಲ, ನೀವು ಕೂಡ ಅದನ್ನು ಮಾಡಬಹುದಿತ್ತು. ಈ ಆರು ತಿಂಗಳಲ್ಲಿ ಏನು ಈ ಸೆಕೆಂಡ್ಸ್ ಮೂಲಕ ಪ್ರತಿ ದಿವಸ ಎರಡು ಕೋಟಿ ನಷ್ಟವಾಗುತ್ತಿದೆ ಇದನ್ನು ನಿಲ್ಲಿಸಬೇಕು, ಜೊತೆಗೆ ತಾವು ತೆರಿಗೆಯನ್ನು ಎರಡು ಹಂತದಲ್ಲಿ ವಸೂಲ್ಮಾಡಬೇಕೆಂದು ಇಲ್ಲಿ ತೋರಿಸಿದ್ದೀರಿ. ಈ ಸೆಕೆಂಡ್ಸ ಅನ್ನು ತಡೆಗಟ್ಟಲು

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ತೆರಿಗೆಯನ್ನು ಮೊದಲೇ ವಸೂಲ್ಮಾಡಬೇಕು ಅಂದರೆ ಅದನ್ನು ಸಿಂಗಲ್ ಪಾಯಿಂಟ್‌ನಲ್ಲಿ ಮಾಡಬೇಕು, ಎರಡನೇ ಪಾಯಿಂಟ್‌ನಲ್ಲಿ ತೆರಿಗೆಯನ್ನು ವಸೂಲು ಮಾಡಿದಾಗ ಈ ಸೆಕೆಂಡ್ಸ್‌ಗೆ ಅವಕಾಶವಾಗುತ್ತದೆ. ಈ ಸಿಂಗಲ್ ಪಾಯಿಂಟ್‌ನಲ್ಲಿ ತೆರಿಗೆಯನ್ನು ಮೊದಲೇ ವಸೂಲ್ಮಾಡಿದರೆ ಇಷ್ಟೊಂದು ತೆರೆಗೆಯನ್ನು ವಸೂಲ್ಮಾಡುವುದಕ್ಕೆ ಅವಕಾಶವಿದೆ, ಆದ್ದರಿಂದ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ವಸೂಲು ಮಾಡುವುದು ಒಳ್ಳೆಯದೆಂದು ನಾನು ಹೇಳಬಯಸುತ್ತೇನೆ. ಇವತ್ತು ಚೆಕ್ ಪೋಸ್ಟ್‌ಗಳಲ್ಲಿ ನಡೆಯುವ ಅವ್ಯವಹಾರಗಳು ಅಷ್ಟಿಷ್ಟಲ್ಲ ನನ್ನದೇ ಆದ ಒಂದು ಉದಾಹರಣೆಯನ್ನು ಹೇಳುವುದಾದರೆ ಸುಮಾರು 20 ವರ್ಷಗಳ ಹಿಂದೆ ನಾನು ಹುಣಸೂರಿನಲ್ಲಿ ಹುಣಸೆಕಾಯಿಯನ್ನು ತೆಗೆದುಕೊಂಡಿದ್ದೆ.

ಶ್ರೀ ಎಸ್.ಎಂ. ಕೃಷ್ಣ : ಸನ್ಮಾನ್ಯ ಅಧ್ಯಕ್ಷರೆ, ನಾನು ಮೊದಲು ಇವತ್ತು ರಾಜ್ಯಸಭೆ ಅಭ್ಯರ್ಥಿಯಾಗಿ ಸ್ಪರ್ಧಿಸಿರುವವರ ಬಗ್ಗೆ ವ್ಯಾಖ್ಯಾನ ಮಾಡಿದೆ, on second thoughts, I should not have made that comments. I beg of this House to allow me to withdraw that comments. I do not want it to be a part of the records of this House. I seek the apology of the Hon'ble Members. Any one can become members according to the constitution. We have to respect the Constitution.

ಶ್ರೀ ಸಿ. ಬೈರೇಗೌಡ : Likewise, I have made some comments, ಅಂತಹವರನ್ನು ತಮ್ಮ ಸಚಿವ ಸಂಪುಟದಲ್ಲಿಟ್ಟುಕೊಳ್ಳಬಾರದೆಂದು ಹೇಳಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಔದಾರ್ಯದಿಂದ ತಾವು ಬಳಸಿದ್ದನ್ನು ವಾಪಸ್ ಪಡೆದಿರುವುದರಿಂದ, ನಾನು ಬಳಸಿದ ಪದವನ್ನು ಕೂಡ ವಾಪಸ್ ಪಡೆದುಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಇಬ್ಬರು ಹೇಳಿರುವುದನ್ನೂ ಕಡತದಿಂದ ತೆಗೆದುಬಿಡಿ. ಮಾನ್ಯ ಶ್ರೀನಿವಾಸಗೌಡರೇ, ತಾವು ದೆಹಲಿಗೆ ಹೋಗಬೇಕು ಎಂದು ಹೇಳಿದ್ದಿರಿ. ತಮಗೆ ಇನ್ನೂ ಎಷ್ಟು ಹೊತ್ತು ಬೇಕು? ಬೇಗನೆ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಈ ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲು ಮಾಡಿದ್ದರೆ ಇವತ್ತು ಕೊರತೆಯ ಬಜೆಟ್ ಆಗುತ್ತಿರಲಿಲ್ಲ. ಈ ಎರಡೂ ಜಾಗಗಳಲ್ಲಿ ಬಹಳಷ್ಟು ಶ್ರದ್ಧೆ ವಹಿಸಿದರೆ ಒಳ್ಳೆಯದು. ಇದರ ಜೊತೆಗೆ, ಸಾರಾಯಿಯನ್ನು ಬಲ್ಕ್ ಆಗಿ ಮಾಡಿದರೆ ನಮಗೆ ಎಷ್ಟು ಹಣ ಬರಬೇಕೋ ಅಷ್ಟು ಬರುವುದಿಲ್ಲ. ಸ್ಪಿರಿಟನ್ನು ನೀರಿನಲ್ಲಿ ಮಿಕ್ಸ್ ಮಾಡಿ ಸಾರಾಯಿ ಮಾಡುವಾಗ 100 ಎಂ.ಎಲ್. ಪ್ಯಾಕೆಟ್‌ಗೆ ಅವನು 10 ಜಿ.ಎಂ. ನೀರು ಸೇರಿಸುತ್ತಾನೆ. ಇದನ್ನು ಕೂಡ ನೀವು ಉಳಿಸುವಂಥಾದ್ದಕ್ಕೆ ಅವಕಾಶವಿದೆ. ಅದಕ್ಕೋಸ್ಕರವಾಗಿ ಸಾರಾಯಿ ಪ್ಯಾಕೆಟ್‌ಗಳು ಫ್ಯಾಕ್ಟರಿಯಿಂದ ಆಚೆ ಹೋಗುವಾಗಲೇ ಅದರ ಮೇಲೆ ಟ್ಯಾಕ್ಸ್ ಹಾಕಿ ವಸೂಲು ಮಾಡಿದರೆ ನಮ್ಮ ರಾಜ್ಯಕ್ಕೆ ಬರುವಂಥ ಆದಾಯ ಜಾಸ್ತಿಯಾಗುತ್ತದೆ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ.

ಇನ್ನು ಹಳ್ಳಿಗಾಡಿನ ಜನಗಳಿಗೆ ದೂರದರ್ಶನ ಸೌಲಭ್ಯಗಳು ಬರುವಂಥ ಸಮಯದಲ್ಲಿ ಅವುಗಳ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ಹಳ್ಳಿಯವರು ಟೇಪ್ ರೆಕಾರ್ಡರ್, ರೇಡಿಯೋ ಬ್ಯಾಟರಿಗಳನ್ನು ತೆಗೆದುಕೊಳ್ಳುವಂಥ ಸಮಯ, ಇವತ್ತು ಬಹಳಷ್ಟು ಹಳ್ಳಿಗಳಲ್ಲಿ ಟಿ.ವಿ.ಗಳಿಲ್ಲ. ಅಂಥಾದ್ದರಲ್ಲಿ ನೀವು ಅದಕ್ಕೆ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ದಯವಿಟ್ಟು ಅದನ್ನು ಪರಿಷ್ಕರಿಸಿ ಟ್ಯಾಕ್ಸನ್ನು ಇಳಿಸಬೇಕು ಎಂದು ನಾನು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ. ಇದನ್ನು 59ನೇ ಪುಟದಲ್ಲಿ ಕ್ರಮ ಸಂಖ್ಯೆ 148ರಲ್ಲಿ 5ನೆಯದು ನನಗೆ ಅರ್ಥಥವಾಗಲಿಲ್ಲ. 'ರಾಜ್ಯ ಸರ್ಕಾರವನ್ನು ಹೊರತುಪಡಿಸಿ ಸರ್ಕಾರೀ ಇಲಾಖೆಗಳು ಪ್ರವೇಶ ತೆರಿಗೆ ನೀಡುವಂತೆ ತಿದ್ದುಪಡಿ ಮಾಡಲು' ಎಂದು ಇದೆ. ಯಾವ ಇಲಾಖೆಗಳು ತೆರಿಗೆ ನೀಡುವಂಥಾದ್ದಕ್ಕೆ ನೀವು ತಿದ್ದುಪಡಿ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಪ್ರತಿದಿನ ಲಂಚ್ ಹವರ್ ಅನ್ನು 2 ರಿಂದ 3ರವರೆಗೆ ಮಾಡುತ್ತಿದ್ದೆವು. ಇವತ್ತು ಲಂಚ್ ಹವರ್ 1 ಗಂಟೆಯಿಂದ 2 ಗಂಟೆಯವರೆಗೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಪುಟ 65ರಲ್ಲಿ ಕ್ರಮ ಸಂಖ್ಯೆ 159ರಲ್ಲಿ 'ಮದ್ಯದ ಅಂಗಡಿಗಳನ್ನು ವಿವೇಚನಾರಹಿತವಾಗಿ ಸ್ಥಳಾಂತರಿಸುವ ಪ್ರವೃತ್ತಿಯನ್ನು ನಿಯಂತ್ರಿಸುವ ಉದ್ದೇಶದಿಂದ" ಎಂದು ಹೇಳಿದ್ದೀರಿ. ಹಿಂದೆ, ಈ ಮದ್ಯದ ಅಂಗಡಿಗಳು ಎನ್.ಹೆಚ್. ನಿಂದ 100 ಮೀಟರ್‌ಗಳಷ್ಟು ಅಥವಾ 100 ಅಡಿಗಳಷ್ಟು ದೂರವಿರಬೇಕು, ದೇವಸ್ಥಾನದಿಂದ ಇಷ್ಟು ದೂರವಿರಬೇಕು. ಶಾಲೆಗಳಿಂದ ಇಷ್ಟು ದೂರವಿರಬೇಕು ಎನ್ನುವ ನಿಬಂಧನೆಗಳಿದ್ದವು. ಆ ನಿಬಂಧನೆಗಳನ್ನು ಸಡಿಲಿಸಲಾಗಿದೆಯೇ ಎನ್ನುವುದನ್ನು ಕೂಡ ನಾನು ಈ ಸಮಯದಲ್ಲಿ ಕೇಳಲು ಇಚ್ಛೆಪಡುತ್ತೇನೆ. ಇನ್ನು ಸೇಂದಿಯ ವಿಚಾರ. ಇವತ್ತು ಈಚಲು ಮರಗಳು ಎಲ್ಲಿಯೂ ಇಲ್ಲವೇ ಇಲ್ಲ. ತೆಂಗಿನ ಮರಗಳಿಂದ ಸೇಂದಿ ತೆಗೆಯಲು ಬಹಳಷ್ಟು ಜನ ಕೊಡುವುದಿಲ್ಲ. ಆದ್ದರಿಂದ ನವಾಸಾಗರ ಹಾಕಿ ಜನಗಳನ್ನು ಕೊಲ್ಲುವಂಥ ಪ್ರಯತ್ನ ಆಗುತ್ತಿದೆ. ಇದನ್ನು ಎಲ್ಲ ಸರ್ಕಾರಗಳು ಮಾಡಿಕೊಂಡು ಬಂದಿವೆ. ಈ ಸರ್ಕಾರ, ಆ ಸರ್ಕಾರ ಎಂದು ನಾನು ಹೇಳುವುದಿಲ್ಲ. ಜನಗಳ ಆರೋಗ್ಯದ ಮೇಲೆ ಇದು ಬಹಳಷ್ಟು ಪ್ರತಿಬಿಂಬಿಸುತ್ತದೆ. ಇವತ್ತು ಸಾಕಷ್ಟು ಈಚಲು ಮರಗಳು ಇಲ್ಲದೇ ಇರುವುದರಿಂದ ಜನಗಳ ಆರೋಗ್ಯದ ದೃಷ್ಟಿಯಿಂದ ಸೇಂದಿ ಮಾರಾಟವನ್ನು ರದ್ದು ಮಾಡಬೇಕು. ಏಕೆಂದರೆ, ಬಡವರು-ಬಗ್ಗರು, ದಲಿತರು ಇಂಥವರುಗಳು ಕುಡಿಯುವಂಥಾದ್ದು ಈ ಸೇಂದಿ. ಆದ್ದರಿಂದ ಇದನ್ನು ರದ್ದು ಮಾಡಬೇಕು ಎಂದು ನಾನು ಈ ಸಮಯದಲ್ಲಿ ಕೇಳುತ್ತೇನೆ. ಇನ್ನು ದಾನಪತ್ರಗಳ ವಿಚಾರ. ಹಿಂದೆ ಮಾನ್ಯ ಸೋಮಶೇಖರ್‌ರವರು ಕಂದಾಯ ಸಚಿವರಾಗಿದ್ದಾಗ ಕೆಲವು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಅಂಥಾದ್ದನ್ನು ಮುಂದುವರೆಸಿಕೊಂಡು ಹೋದರೆ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ. ಅದು ದಾನಪತ್ರ ಮಾಡುವುದಿರಬಹುದು ಅಥವಾ ಆಸ್ತಿಗಳನ್ನು ವಿಭಾಗ ಮಾಡುವುದಿರಬಹುದು, ಅದನ್ನು ಮುಂದುವರಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಕಡೆಯದಾಗಿ, ಆಯವ್ಯಯದಲ್ಲಿ ಏನು ಕೆಲಸವನ್ನು ಮಾಡಬೇಕಾಗಿತ್ತು ಅದನ್ನು ಮಾಡಿಲ್ಲ ಎನ್ನುವುದನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲು ನಾನು ಇಚ್ಛೆಪಡುತ್ತೇನೆ.

ಬಡತನ ನಿರ್ಮೂಲನೆಗೆ ಯಾವುದೇ ನಿರ್ದಿಷ್ಟವಾದ ಕಾರ್ಯಕ್ರಮ ಈ ಆಯವ್ಯಯದಲ್ಲಿ ಇಲ್ಲ. ರೈತರಿಗೆ ಮಾರುಕಟ್ಟೆ ಇಂಟರ್‌ವೆನ್‌ಷನ್‌ಗೆ ಹಣ ಇಟ್ಟಿಲ್ಲ. ನಾನು ನಿನ್ನೆ ಮಾತನಾಡುವಾಗ, ನಮ್ಮ ರಾಜ್ಯಕ್ಕೆ ಭಿಕ್ಷುಕರು ಆಂಧ್ರದಿಂದ ಬರುತ್ತಾರೆ ಎಂದು ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಪ್ರತಿಕ್ರಿಯಿಸಿದ್ದರು. ನಾನು ಹೇಳಿದ್ದೇನೆಂದರೆ, ಈ ರೀತಿ ಬಂದು ಅವರು ಇಲ್ಲಿ ಸ್ಲಂಗಳನ್ನು ಮಾಡುತ್ತಾರೆ ಎನ್ನುವ ಮಾತನ್ನು ನಾನು ಮತ್ತೊಮ್ಮೆ ಈ ಸಮಯದಲ್ಲಿ ತಮ್ಮ ಮೂಲಕ ಹೇಳಲು ಇಚ್ಛೆಪಡುತ್ತೇನೆ. ರಾಜ್ಯದಲ್ಲಿನ ಹಳ್ಳಿಗಳ ಮತ್ತು ಪಟ್ಟಣಗಳ ಜನರ ಕುಡಿಯುವ ನೀರಿಗಾಗಿ ನಿರ್ದಿಷ್ಟವಾದ ಹಣ ಹೂಡಿಲ್ಲ. ಅಲ್ಪಸಂಖ್ಯಾತರ ಮತ್ತು ದಲಿತರ ಆರ್ಥಿಕ ಅಭಿವೃದ್ಧಿಗೆ ಇಂತಿಷ್ಟು ಎಂದು ನಿರ್ದಿಷ್ಟವಾಗಿ ಹಣ ಕೊಡಿಸುವ ಕೆಲಸ ಮಾಡಿಲ್ಲ. ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಲು ಯಾವುದೇ ನಿರ್ದಿಷ್ಟವಾದಂಥ ಪ್ರಯತ್ನಗಳನ್ನು ಬಜೆಟ್‌ನಲ್ಲಿ ತೋರಿಸಿಲ್ಲ. ಗ್ರಾಮೀಣ ಮೂಲ ಸೌಲಭ್ಯಗಳಿಗಾಗಿ ಈ ಆಯವ್ಯಯದಲ್ಲಿ ನಿರ್ದಿಷ್ಟವಾಗಿ ಚಿಂತನೆ ಮಾಡಿಲ್ಲ. ಕರ್ನಾಟಕ ರೈಲು ಅಭಿವೃದ್ಧಿ ನಿಗಮ ಮಾಡಿ ಅದಕ್ಕೆ ಇಂತಿಷ್ಟು ಹಣವನ್ನು ಈ ಆಯವ್ಯಯದಲ್ಲಿ ಇಟ್ಟಿಲ್ಲವೆಂದು ನನಗನ್ನಿಸುತ್ತದೆ. ಮುಂದಿನ 5 ವರ್ಷಗಳಲ್ಲಿ 300 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದಕ್ಕೆ 12 ಸಾವಿರ ಕೋಟಿ ರೂಪಾಯಿಗಳು ಬೇಕು. ಹಿಂದೆ ನಾನು ಕ್ರಿಬ್ಕೋ ಸಂಸ್ಥೆಯ ಅಧ್ಯಕ್ಷನಾಗಿದ್ದಾಗ ಅಲ್ಲಿ ಇಂಥ ಒಂದು ಪ್ರಾಜೆಕ್ಟನ್ನು ಮಾಡಿದ್ದೆವು. ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬೇಕಾದರೆ ಕನಿಷ್ಟ 4 ಕೋಟಿ ರೂಪಾಯಿಗಳು ಬೇಕು. ಅಂಥಾದ್ದರಲ್ಲಿ 3 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಬೇಕಾದರೆ 12 ಸಾವಿರ ಕೋಟಿ ರೂಪಾಯಿಗಳು ಬೇಕು. ಅದನ್ನು ಯಾವ ರೀತಿ ಕ್ರೋಢೀಕರಿಸುತ್ತೀರಿ ಎನ್ನುವ ಚಿಂತನೆಯನ್ನು ಕೂಡ ನೀವು ಇದರಲ್ಲಿ ತೋರಿಸಿಲ್ಲ. ನಷ್ಟದಲ್ಲಿರುವ ಸಾಂಪ್ರದಾಯಿಕ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಲು ಈ ಆಯವ್ಯಯದಲ್ಲಿ ಹಣ ಇಟ್ಟಿಲ್ಲ. ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಬಹಳಷ್ಟು ಅವಕಾಶಗಳಿವೆ. ಅದಕ್ಕೆ ಈ ಆಯವ್ಯಯದಲ್ಲಿ ನಿರ್ದಿಷ್ಟವಾದ ಗುರಿಯನ್ನು ತೋರಿಸಿಲ್ಲ. ಬೆಂಗಳೂರು ನಗರವನ್ನು ಸಿಂಗಾಪೂರ್ ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ, ಬಹಳ ಸಂತೋಷ. ಹಾಗೆಯೇ, ಕೋಲಾರದಂಥ ಜಿಲ್ಲಾ ಕೇಂದ್ರಗಳನ್ನು ಬೆಂಗಳೂರಿನಷ್ಟಾದರೂ ಅಭಿವೃದ್ಧಿ ಮಾಡಿ ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳಲು ಇಚ್ಛೆಪಡುತ್ತೇನೆ. ಇವತ್ತು ಆಡಳಿತದಲ್ಲಿ ಪಾರದರ್ಶಕತೆ ಇರಬೇಕು, ಮಾಹಿತಿ ತಂತ್ರಜ್ಞಾನವನ್ನು ಅಳವಡಿಸುವ ಮಟ್ಟಕ್ಕೆ ಹೋಗಬೇಕು. ಅದನ್ನು ಯಾವ ರೀತಿ ಮಾಡಬೇಕು ಎಂದು ಈ ಆಯವ್ಯಯದಲ್ಲಿ ತೋರಿಸಿಲ್ಲ. ಇನ್ನು ನಮ್ಮ ರಾಜ್ಯದ ಗಡಿ ಜಿಲ್ಲೆಗಳ ಉದ್ದಿಮೆಗಳ ಬಗ್ಗೆ ಹೇಳುವುದಾದರೆ, ಗಡಿ ಭಾಗದಲ್ಲಿ ಹೊಸೂರು ಇದೆ. ಅವರು ಎಲ್ಲ ಅನುಕೂಲಗಳನ್ನು ಬೆಂಗಳೂರಿನಿಂದ ಪಡೆದುಕೊಳ್ಳುತ್ತಾರೆ. ಆದರೆ ಟ್ಯಾಕ್ಸ್ ತಮಿಳುನಾಡಿಗೆ ಹೋಗುತ್ತದೆ. ಹಾಗೆಯೇ ಆಂಧ್ರ ಪ್ರದೇಶದ ಹಿಂದೂಪುರದಲ್ಲಿ ಒಂದು ಇಂಡಸ್ಟ್ರಿಯನ್ನು ಮಾಡುತ್ತಿದ್ದಾರೆ, ನಿನ್ನೆ ಆ ಭಾಗದ ಶಾಸಕರು ಹೇಳುತ್ತಿದ್ದರು, ಹಿಂದೂಪುರದಲ್ಲಿ ಆಂಧ್ರ ಸರ್ಕಾರ ಡೆವಲಪ್ ಮಾಡಲು ಹೋಗಿದೆ ಎಂದು. ಎಲ್ಲ ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ನಮ್ಮ ರಾಜ್ಯದಿಂದ ತೆಗೆದುಕೊಂಡು ಹೋಗುತ್ತಾರೆ. ಆದರೆ ಅದರಿಂದ ಬರುವಂಥ ಟ್ಯಾಕ್ಸ್ ಈ ರಾಜ್ಯಗಳಿಗೆ ಹೋಗುತ್ತದೆ. ಇದನ್ನು ಯಾವ ರೀತಿ

ನಿಲ್ಲಿಸಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ನಿಮ್ಮ ಚುನಾವಣಾ ಪ್ರಣಾಳಿಕೆಗೂ ಆಯವ್ಯಯಕ್ಕೂ ಎಳ್ಳಷ್ಟೂ ಹೊಂದಾಣಿಕೆ ಇಲ್ಲ. ಇದರ ವ್ಯತ್ಯಾಸ ಹೇಗಿದೆ ಎಂದರೆ, ಗೋಕುಲಾಷ್ಟಮಿಗೂ ಸುಬಾನ್ ಸಾಬಿಗೂ ಎಷ್ಟು ಸಂಬಂಧ ಇದೆಯೋ? ಅಷ್ಟೇ ವ್ಯತ್ಯಾಸ ಈ ಆಯವ್ಯಯಕ್ಕೂ, ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಗೂ ಇದೆ ಎಂದು ಈ ಸಮಯದಲ್ಲಿ ಹೇಳಿ, ಏನು ಕೆಲವೊಂದು ವಿಷಯಗಳು ಇದರಲ್ಲಿ ಬಿಟ್ಟು ಹೋಗಿವೆ, ಅವುಗಳಿಗೆ ಸರ್ಕಾರ ಒತ್ತು ಕೊಡಬೇಕು ಎಂದು ತಮ್ಮ ಮೂಲಕ ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಲ್ಲಿ ಒಂದು ವಿನಂತಿ. ಇವತ್ತು ಸಂಜೆ ಎಷ್ಟು ಹೊತ್ತಾದರೂ ಸರಿ ಆಯವ್ಯಯದ ಮೇಲಿನ ಚರ್ಚೆ ಮುಗಿಯಬೇಕು. ಪಾರ್ಲಿಮೆಂಟ್‌ನಲ್ಲಿ ರಾತ್ರಿ 3 ಗಂಟೆಯವರೆಗೂ ಮಾಡಿದ್ದಾರೆ. ರಾತ್ರಿ 12 ಗಂಟೆಯಾದರೂ ಸರಿ. ನನ್ನದೇನೂ ಅಭ್ಯಂತರವಿಲ್ಲ. ಈ ಬಗ್ಗೆ ಚರ್ಚೆ ಪೂರ್ತಿಯಾಗಬೇಕು. ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆದ್ದರಿಂದ ಸದಸ್ಯರು ಮಾತನಾಡುವಾಗ ದಯವಿಟ್ಟು ವಿಷಯವನ್ನು ಸಂಕ್ಷಿಪ್ತವಾಗಿ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗ ಮಾನ್ಯ ಸಭಾಪತಿಯವರು ಮಾತನಾಡುತ್ತಾರೆ.

+ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಸಭಾಧ್ಯಕ್ಷರೇ, ಹೊಸ ಸಹಸ್ರಮಾನದ ಹಾಗೂ 21ನೇ ಶತಮಾನದ ಪ್ರಪ್ರಥಮ ಬಜೆಟ್ ಅನ್ನು ಮಂಡಿಸುವ ಅವಕಾಶ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣಾರವರಿಗೆ ಲಭಿಸಿದ್ದು ಬಹುಶಃ ಅವರ ಜೀವನದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಈ ಹೊಸ ಸಹಸ್ರಮಾನದ ಹಾಗೂ 21ನೇ ಶತಮಾನದಲ್ಲಿ ಮುಂದಿನ 50 ವರ್ಷಗಳ ನಂತರದ ದೂರದೃಷ್ಟಿ, ಆಗ ಕರ್ನಾಟಕ ಯಾವ ರೀತಿ ಇರಬೇಕು ಎನ್ನುವ ಬಗ್ಗೆ ಸಂಪೂರ್ಣವಾದಂಥ ಆಲೋಚನೆ, ಇದರ ಬಗ್ಗೆ ಸತತವಾದಂಥ ಅಧ್ಯಯನ, ಹಿಂದಿನ ಅನುಭವಗಳು, ದೂರದೃಷ್ಟಿಯ ವಿಚಾರಧಾರೆ ಹಾಗೂ ಆಧುನಿಕ ಯುಗದಲ್ಲಿ ಹೊಸ ತಾಂತ್ರಿಕತೆಯನ್ನು ಬಳಸಿಕೊಂಡು ರಾಜ್ಯದ ಮುಂದಿನ ಭವಿಷ್ಯವನ್ನು ರೂಪಿಸತಕ್ಕಂಥ ಯುವ ಜನಾಂಗಕ್ಕೆ ಒಂದು ಸಂದೇಶ ಈ ಮುಂಗಡ ಪತ್ರದಲ್ಲಿ ಇದೆ ಎಂಬುದು ನನ್ನ ವಾದ. ಆದರೂ ಕೆಲವು ಲೋಪದೋಷಗಳು ಇರುವಂಥಾದ್ದು ಸರ್ವೇ ಸಾಮಾನ್ಯ. ಎಷ್ಟೇ ಬುದ್ಧಿವಂತಿಕೆಯಿಂದ ಇದ್ದರೂ, ಎಷ್ಟೇ ಚಾಕಚಕ್ಯತೆಯಿಂದ ನಾವು ನಡೆದು ಹೋದರೂ ಕೂಡ ಸ್ವಲ್ಪಮಟ್ಟಿಗೆ ಎಡವಿ ಬೀಳುವುದು ಸ್ವಾಭಾವಿಕ.

(ಈ ಹಂತದಲ್ಲಿ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಅಲ್ಲೋ ಇಲ್ಲೋ ಒಂದೆರಡು ಲೋಪದೋಷಗಳು ಇರಬಹುದು. ಅದರಲ್ಲೂ ಸರ್ಕಾರಿ ವಲಯದಲ್ಲಿ ಲೋಪದೋಷಗಳು ಆಗುವುದನ್ನು ನಾವು ನಿರೀಕ್ಷಿಸುವುದು ಸರ್ವೇ ಸಾಮಾನ್ಯ. ಇಂಥ ಲೋಪದೋಷಗಳು ಬಂದಾಗ ಕುಳಿತು ಅದರ ಬಗ್ಗೆ ಅಧ್ಯಯನ ನಡೆಸಿ ಲೋಪದೋಷಗಳನ್ನು ಗುರುತಿಸಿ ಅದನ್ನು ಸರಿಪಡಿಸುವುದು ಕೂಡ ನಮ್ಮೆಲ್ಲರ ಕರ್ತವ್ಯವಾಗಿದೆ. ಇವತ್ತು 2000-2001ನೇ

ಇಸವಿಯ ಈ ಮುಂಗಡಪತ್ರ ನಮ್ಮ ರಾಜ್ಯದ ಆಡಳಿತದಲ್ಲಿ ಮಹತ್ವದ ಬದಲಾವಣೆಯನ್ನು ತರತಕ್ಕ ಒಂದು ದಿಕ್ಸೂಚಿಯಾಗಿ ಕಂಡುಬರುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. ಕರ್ನಾಟಕದ ಜನತೆ ಶ್ರೀ ಎಸ್.ಎಂ. ಕೃಷ್ಣ ಅವರ ನೇತೃತ್ವದ ಕಾಂಗ್ರೆಸ್ ಪಕ್ಷದ ಮೇಲೆ ಇಟ್ಟ ವಿಶ್ವಾಸಕ್ಕೆ ಅನುಗುಣವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ನಡೆದುಕೊಂಡು ಬಂದಿರುವುದನ್ನು ಈ ಮುಂಗಡ ಪತ್ರದಲ್ಲಿ ಸ್ಪಷ್ಟವಾದ ಚಿತ್ರೀಕರಣವನ್ನು ನಾವು ನೋಡಬಹುದು. ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆಯ ದಿವಸ ಮಾತನಾಡುತ್ತಾ - 'ಈ ಮುಂಗಡ ಪತ್ರ ರಾಜ್ಯದ ಜನತೆಗೆ ಹಾಕಿದ ಮೂರು ನಾಮ' ಎನ್ನುವ ಪದವನ್ನು ಬಳಸಿದ್ದಾರೆ. ನಾನು ಅದನ್ನು ಸರ್ವಥಾ ಒಪ್ಪಲಾರೆ. ಇದು ನನ್ನ ವೈಯಕ್ತಿಕವಾದ ವಿಚಾರಧಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ದೂರದೃಷ್ಟಿ ಅಥವಾ ಭವಿಷ್ಯದ ಕೊರತೆ ಇದೆ ಎನ್ನುವ ಮಾತು ಕೂಡ ಈ ಮುಂಗಡ ಪತ್ರದಲ್ಲಿ ಕಂಡುಬರುತ್ತಿಲ್ಲ. ಏಕೆಂದರೆ ಈ ಬಜೆಟ್‌ನಲ್ಲಿ ಪ್ರಸ್ತುತ ಹೊಸ ಶತಮಾನದ ವಾಸ್ತವಿಕತೆಗೆ ಅನುಗುಣವಾಗಿ ಸಂಪನ್ಮೂಲ ಕ್ರೋಢೀಕರಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಧನ ವಿನಿಯೋಗದ ಮಧ್ಯೆ ಮಹಿಳಾ ಜಾಗೃತಿ, ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನದ ಅಳವಡಿಕೆ, ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕ ತೆರಿಗೆಯ ಬಾಕಿ ವಸೂಲಿಗೆ ಹೊಸ ಪ್ರಯೋಗ ಇದಾಗಿದೆ. ಸನ್ಮಾನ್ಯ ಶ್ರೀನಿವಾಸಗೌಡರು ಮಾತನಾಡುತ್ತಾ - 'ನೇರವಾಗಿ ಉದ್ಯೋಗ ಕೊಡತಕ್ಕಂಥ ಯಾವುದೇ ಯೋಜನೆಗಳು ಈ ಬಜೆಟ್‌ನಲ್ಲಿ ಇಲ್ಲ' ಎಂದು ಹೇಳಿದರು. ನೇರವಾಗಿ ಉದ್ಯೋಗ ಭರವಸೆ ಇಲ್ಲದಿದ್ದರೂ ಕೂಡ ವಿದ್ಯಾವಂತ ಯುವಕರಿಗೆ ಸ್ವಶಕ್ತಿಯಿಂದ ಬದುಕಲು ಚಾಲನೆ ಕೊಡುವಂಥ ಯೋಜನೆಗಳು ಈ ಮುಂಗಡ ಪತ್ರದಲ್ಲಿ ಎದ್ದು ಕಾಣುತ್ತಿವೆ. ಚುನಾಯಿತ ಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳಬೇಕೆಂದು, ಶಾಸಕರಿಗಾಗಿ ಒಂದು ಪ್ರತ್ಯೇಕವಾದಂಥ 'ಅಭಿವೃದ್ಧಿ ನಿಧಿ' ಸ್ಥಾಪನೆ, ಈ ಎಲ್ಲಾ ಚಿಂತನೆಗಳು ಸದರಿ ಮುಂಗಡಪತ್ರದಲ್ಲಿ ಬಂದಿದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಒತ್ತು ಖಂಡಿತವಾಗಿಯೂ ಈ ಮುಂಗಡಪತ್ರದಲ್ಲಿ ಇದೆಯೆಂದು ನಾನು ಹೇಳಬಯಸುತ್ತೇನೆ. ಬಡ ಜನರಿಗೆ ಹೆಚ್ಚಿನ ತೆರಿಗೆಯ ಪ್ರಸ್ತಾವನೆಯು ಇಲ್ಲದೆ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಾಲದ ರೂಪದಲ್ಲಿ ಯಾ ಮೂಲ ರೂಪದಲ್ಲಿ ಸಂಪನ್ಮೂಲ ಕ್ರೋಢೀಕರಣದ ಮುಂಗಡಪತ್ರದ ಪ್ರಸ್ತಾವನೆ ರಾಜ್ಯದ ಜನತೆಗಂತೂ ಮೂರು ನಾಮ ಹಾಕಿಲ್ಲ ಎನ್ನುವ ಸ್ಪಷ್ಟವಾದ ಚಿತ್ರಣವನ್ನು ಕೊಟ್ಟಿದೆ. ನಮ್ಮ ರಾಜ್ಯ ಮುಖ್ಯ ವರಮಾನಗಳಲ್ಲಿ ವಾಣಿಜ್ಯ ತೆರಿಗೆ ಹಾಗೂ ಅಬಕಾರಿ ತೆರಿಗೆ ಬಹಳ ಪ್ರಮುಖ ಪಾತ್ರ ವಹಿಸುತ್ತಿದೆ. ಇವುಗಳನ್ನು ಸಂಗ್ರಹಿಸುವಲ್ಲಿ ಕೂಡ ಹಿಂದಿನ ಬಾಕಿಗಳ ವಸೂಲಿಗಾಗಿಯೇ 'ಕರಸಮಾಧಾನ ಯೋಜನೆ'ಯನ್ನು ತಂದು, ಸಂಪನ್ಮೂಲ ಕ್ರೋಢೀಕರಣದಲ್ಲಿ ಎಲ್ಲಾ ಮಡಿವಂತಿಕೆಗಳನ್ನು ಬದಿಗೊತ್ತಿ ಹೊಸ ಆಯಾಮವನ್ನೇ ಈ ಮುಂಗಡಪತ್ರ ಕೊಟ್ಟಿದೆ ಎಂದು ಹೇಳಬಯಸುತ್ತೇನೆ. ಇದು ಸದರಿ ಮುಂಗಡಪತ್ರದ ವೈಶಿಷ್ಟತೆ ಆಗಿದೆ. 1999-2000 ಸಾಲಿನಲ್ಲಿ ರಾಜ್ಯದ ವಾಣಿಜ್ಯ ತೆರಿಗೆ ರೂಪವಾಗಿ ವಸೂಲಿ ಮಾಡಬೇಕಾಗಿರುವ ಹಣ ರೂ. 5,876.19 ಕೋಟಿ ಆಗಿದ್ದು. ನಮ್ಮ ಸರ್ಕಾರ ತೆರಿಗೆ ವಸೂಲಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿಯವರೆಗೆ ಸುಮಾರು

4,650 ಕೋಟಿ ರೂಪಾಯಿಗಳ ತೆರಿಗೆ ವಸೂಲಿ ಆಗಿದೆ. ಅಲ್ಲದೆ, 31.3.1999ರವರೆಗೆ ಸುಮಾರು 1,073 ಕೋಟಿ ರೂಪಾಯಿಗಳ ವಾಣಿಜ್ಯ ತೆರಿಗೆ ಬಾಕಿ ಉಳಿದಿದ್ದು, ಅದನ್ನು ವಸೂಲಿ ಮಾಡಲಿಕ್ಕೋಸ್ಕರ 'ಕರ ಸಮಾಧಾನ ಯೋಜನೆ' ಯಂಥ ಪ್ರತ್ಯೇಕವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಬಹುಶಃ ಈ ಸರ್ಕಾರಕ್ಕೆ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ಇತರಕ್ಕಂಥ ಆಸಕ್ತಿಯನ್ನು ತೋರಿಸುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. 31.12.1999ರ ವೇಳೆಗಾಗಲೇ ಬಾಕಿ ಉಳಿದಿದ್ದ ತೆರಿಗೆಯಲ್ಲಿ ಸುಮಾರು 277.27 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದು, ಉಳಿದ 800 ಕೋಟಿ ರೂಪಾಯಿಗಳ ವಸೂಲಿಗಾಗಿ ಈ ಯೋಜನೆ ಮೂಲಕ ಬೇರೆ ಬೇರೆ ರೀತಿಯಲ್ಲಿ ತೆರಿಗೆ ವಸೂಲಿ ಮಾಡುವಂಥ ಕಠಿಣ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿರುವುದು ಶ್ಲಾಘನೀಯವಾದ ವಿಚಾರ. ನಿನ್ನೆಯ ದಿವಸ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ - 'ಅಬಕಾರಿ ಇಲಾಖೆಯಿಂದ ಬರತಕ್ಕಂಥ ಹಣ ಪಾಪದ ಹಣ ಎನ್ನುವ ಮಾತನ್ನು ಹೇಳಿದರು. ನಾನು ಅದನ್ನು ಒಪ್ಪಲಾರೆ, ಏಕೆಂದರೆ ಇದು ಕೇವಲ ಬಡವರಿಂದ ಬರತಕ್ಕಂಥ ಹಣ ಅಲ್ಲ. ಶ್ರೀಮಂತರು, ಮಧ್ಯಮ ವರ್ಗದವರು ಕೂಡ ಕುಡಿಯುತ್ತಿದ್ದು ಅವರಿಂದಲೂ ಸಹ ತೆರಿಗೆಯನ್ನು ಸಂಗ್ರಹ ಮಾಡುತ್ತಿರುವುದರಿಂದ ಇದು ಪಾಪದ ಹಣ ಎನ್ನುವ ಮಾತಿಗಿಂತಲೂ, ಮಧ್ಯಪಾನಕ್ಕೆ ಹಾಕಿದಂಥ ತೆರಿಗೆಯಿಂದ ಇನ್ನು ಮುಂದೆ ಮದ್ಯಪಾನ ಮಾಡುವುದೇ ಬೇಡ, ಇದು ಕುಡಿಯಲಿಕ್ಕೆ ಅಸಾಧ್ಯ ಎನ್ನುವಂಥ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ, ಇದು ಒಂದು ಲೆಕ್ಕದಲ್ಲಿ ಮದ್ಯಪಾನ ನಿಷೇಧಕ್ಕೆ ಹಾಕಿದಂಥ ಒಂದು ಮೆಟ್ಟಿಲು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹಿಂದಿನ ಸರ್ಕಾರಗಳಲ್ಲಿ ಬಾಕಿ ವಸೂಲಿಗಾಗಿ ಏನಾದರೂ ಕ್ರಮವನ್ನು ಕಾರ್ಯರೂಪಕ್ಕೆ ತಂದರೆ ಎಲ್ಲಿ ನಾವು ಅಬಕಾರಿ ಇಲಾಖೆಯಲ್ಲಿ ಸಿಕ್ಕಿದ್ದೇವೋ, ಅಬಕಾರಿ ಇಲಾಖೆ ಹಿಂದೆ ಇದ್ದೇವೆ ಎಂದು ತಿಳಿಯುತ್ತಾರೆ ಎನ್ನುವಂಥ ಮಡಿವಂತಿಕೆಯ ಪ್ರದರ್ಶನ ಇತ್ತು. ಆದರೆ ಈ ಹೊಸ ಸರ್ಕಾರ 'ಕರ ಸಮಾಧಾನ ಯೋಜನೆ' ಮೂಲಕ ಬಾಕಿ ಇರತಕ್ಕಂಥ ಅಬಕಾರಿ ತೆರಿಗೆಯನ್ನು ವಸೂಲಿ ಮಾಡುವಂಥ ನಿರ್ಣಯ ಅಥವಾ ನಿರ್ಧಾರ ತೆಗೆದುಕೊಂಡಿದ್ದು ಕೂಡ ಈ ಮುಂಗಡಪತ್ರದಲ್ಲಿನ ಒಂದು ವಿಶೇಷವಾದ ಯತ್ನ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರಾಜ್ಯದಲ್ಲಿ ಅಬಕಾರಿ ತೆರಿಗೆ ಬಾಕಿ ಸ್ವಾತಂತ್ರ್ಯ ಪೂರ್ವದಿಂದಲೂ ಇದ್ದು ಇವುಗಳೆಲ್ಲವನ್ನು ವಸೂಲಿ ಮಾಡುವಲ್ಲಿ ಬರತಕ್ಕಂಥ ಒತ್ತಡಗಳನ್ನು ನಿರೀಕ್ಷಿಸಿಕೊಂಡು ಎಲ್ಲಿ ಅವರು ಅಸಲನ್ನು ಕಟ್ಟಲಿಕ್ಕೆ ಮುಂದೆ ಬರುತ್ತಾರೆ ಅಲ್ಲಿ ಬಡ್ಡಿಯನ್ನು ಮನ್ನಾ ಮಾಡಿ ಆ ಮೂಲಕವಾದರೂ ಬಹಳ ವರ್ಷಗಳ ಬಾಕಿ ವಸೂಲಿಗೆ ಒಂದು ದಿಟ್ಟ ಹೆಜ್ಜೆಯನ್ನು ಇಡಲಾಗಿದೆ. ಇದರ ಜೊತೆಗೆ ಮದ್ಯಪಾನದ ಮೇಲೆ ಹಾಕಬೇಕಾಗಿರತಕ್ಕಂಥ ಹೆಚ್ಚುವರಿ ತೆರಿಗೆ ವಿಚಾರವಾಗಿ ನಾನು ಇದಕ್ಕೆ ಸ್ವಾಗತಬಯಸುತ್ತೇನೆ. ಇವತ್ತು ಮಾನ್ಯ ಶ್ರೀನಿವಾಸಗೌಡರು ಮದ್ಯಪಾನದ ಬಗ್ಗೆ ಸಾಕಷ್ಟು ಮಾತನಾಡಿದರು. ಇವತ್ತು ಡಿಸ್ಟಿಲರಿಗಳು, ಮದ್ಯದ ಅಂಗಡಿಗಳು ಸರ್ಕಾರವನ್ನೇ ನಿಯಂತ್ರಣ ಮಾಡುವಷ್ಟರಮಟ್ಟಿಗೆ ಮುಂದುವರೆದಿದ್ದಾರೆ. ಡಿಸ್ಟಿಲರಿಗಳ ಸಂಘ ಯಾ ಮದ್ಯ ಮಾರಾಟಗಾರರ ಸಂಘದಲ್ಲಿ ಸರ್ವ ಪಕ್ಷದ ಜನರು ಇದ್ದಾರೆ. ಈ ಸಂಘಗಳು ಸರ್ಕಾರವನ್ನೇ ತಮ್ಮ ಹತೋಟಿಗೆ ತರತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಅವರ ಮೇಲೆ ಸರ್ಕಾರ ನಿದಾಕ್ಷಿಣ್ಯವಾದಂಥ ಕ್ರಮವನ್ನು ತೆಗೆದುಕೊಳ್ಳಬಹುದು ಎನ್ನುವಂಥ ಚಿಂತನೆ ಈ ಮುಂಗಡ

ಪತ್ರದಲ್ಲಿ ಇದೆ. ಅಂಥ ಸೂಚನೆಯನ್ನು ಇದರಲ್ಲಿ ಕೊಡಲಾಗಿದೆ. ಹೊಸ ತೆರಿಗೆಗಳ ಪ್ರಸ್ತಾವದಿಂದ ಎಲ್ಲರೂ ಈ ಸೂಚನೆಗೆ ಬದ್ಧರಾಗಬೇಕು, ತೆರಿಗೆ ವ್ಯವಸ್ಥೆಯಲ್ಲಿ ಸರಿಯಾಗಿ ತೆರಿಗೆ ಕಟ್ಟಿಕೊಂಡು ನಮ್ಮೊಟ್ಟಿಗೆ ಸಹಕರಿಸಬೇಕು, ಎನ್ನುವಂಥ ಎಚ್ಚರಿಕೆ ಈ ಮುಂಗಡ ಪತ್ರದಲ್ಲಿ ಇದೆ. ಇವತ್ತು ಮದ್ಯ ಮಾರಾಟದ ಅಂಗಡಿಯವರು ಎಲ್ಲಿಯತನಕ ಬೆಳೆದಿದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಉಡುಪಿ ಜಿಲ್ಲೆಯಲ್ಲಿ ಎರಡು ವರ್ಷಗಳ ಹಿಂದೆ ಒಂದು ಮದ್ಯ ಮಾರಾಟಗಾರರ ಅಸೋಸಿಯೇಷನ್ ಸ್ಥಾಪನೆ ಮಾಡಿದರು. ಈ ಮದ್ಯ ಮಾರಾಟಗಾರರ ಅಸೋಸಿಯೇಷನ್‌ನವರು ಎಲ್ಲಾ ಮದ್ಯಪಾನ ಅಂಗಡಿಗಳಿಂದ ತಿಂಗಳಿಗೆ 2,650 ರೂಪಾಯಿಗಳಂತೆ ವಸಲಿ ಮಾಡಬೇಕೆಂದು ನಿರ್ಧರಿಸಿ ಆದರಂತೆ ವಸೂಲಿ ಮಾಡುತ್ತಾರೆ. ತಿಂಗಳಿಗೆ 9,60,000 ರೂಪಾಯಿಗಳಂತೆ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಸಂಗ್ರಹ ಮಾಡಿ ಆ ಮೂಲಕ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ - 'ನೀವು ಯಾರೂ ಅಧಿಕಾರಿಗಳಿಗೆ ದುಡ್ಡು ಕೊಡಬೇಡಿ, ನಮ್ಮ ಅಸೋಸಿಯೇಷನ್‌ನವರು ಕೊಡುತ್ತೇವೆ' ಎಂದು ಘಂಟಾಘೋಷವಾಗಿ ಹೇಳಿಬಿಡುತ್ತಾರೆ. ಈ ಒಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಸಂಗ್ರಹವಾದ ಹಣದ ಲೆಕ್ಕಾಚಾರವನ್ನು ಸಂಬಂಧಪಟ್ಟ ಕಾರ್ಯದರ್ಶಿಗಳು ಓದುವಾಗ - 'ಚುನಾಯಿತ ಪ್ರತಿನಿಧಿಗಳಿಗೆ ಇಂತಿಷ್ಟು, ಅಧಿಕಾರಿಗಳಿಗೆ ಇಂತಿಷ್ಟು, ತಪಾಸಣಾ ದಳದವರಿಗೆ ಇಂತಿಷ್ಟು ಹಣ ಎಂದು ಓದಿ ಹೇಳಿದ ನಂತರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ, ಅಬಕಾರಿ ಅಧಿಕಾರಿಗಳಿಗೆ ಅವರು ಮನವಿಯನ್ನು ಸಲ್ಲಿಸುತ್ತಾ ನೀವು ರೈಡ್ ಮಾಡಬಾರದು, ರೈಡ್ ಮಾಡಿದರೆ ನಾವು ಕೂಡಲೆ ಬಂದ್ ಕಾರ್ಯಾಚರಣೆಯಂಥ ಬಿಗು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ. ಎನ್ನುವಂಥ ಬೆದರಿಕೆಯ ಮಾತುಗಳನ್ನು ಆ ಅಸೋಸಿಯೇಷನ್‌ನವರು ಹಾಕುತ್ತಾರೆ. ಅದೇ ಸಂದರ್ಭದಲ್ಲಿ ಅಲ್ಲಿ ಮದ್ಯ ಗ್ರಾಹಕರ ಚಳುವಳಿ ಪ್ರಾರಂಭವಾಯಿತು. ನಕಲಿ ಮದ್ಯ ಮಾರಾಟ ತಂತ್ರದಲ್ಲಿ ಮದ್ಯ ಮಾರಾಟಗಾರರು ಬಹಳವಾಗಿ ಪಳಗಿದ್ದಾರೆ. ಮದ್ಯ ಗ್ರಾಹಕರ ಸಂಘಟನೆ ಅಸ್ತಿತ್ವಕ್ಕೆ ಬಂದು ಮದ್ಯ ಮಾರಾಟ ಅಂಗಡಿಗಳಲ್ಲಿ ಇರತಕ್ಕಂಥ ನಕಲಿ ಮಾರಾಟ ವ್ಯವಸ್ಥೆಯನ್ನು ತಡೆಯಬೇಕು ಎನ್ನುವ ಒತ್ತಾಯವನ್ನು ಆರಂಭಿಸಿದರು. ಒಂದು ಮದ್ಯದ ಅಂಗಡಿಯಲ್ಲಿ ಒಂದು ದಿನಕ್ಕೆ ಕನಿಷ್ಟ ಒಂದು ಬಾಟಲ್ ಮದ್ಯ ಮಾರಾಟವಾಗುವುದಿಲ್ಲ ಎಂದು ಹೇಳಿದರೆ ಎಷ್ಟೊಂದು ಆಶ್ಚರ್ಯಕರವಾದ ಸಂಗತಿ. ಒಂದು ಮದ್ಯ ಮಾರಾಟ ಅಂಗಡಿಗೆ ತಿಂಗಳಿಗೆ ಕನಿಷ್ಟ 25 ಗರಿಷ್ಠ 45 ಬಾಟಲ್‌ಗಳಿಗೆ ಪರ್ಮಿಟನ್ನು ಕೊಡಬೇಕೆಂದು ಮದ್ಯ ಮಾರಾಟಗಾರರ ಸಂಘದ ಅಸೋಸಿಯೇಷನ್‌ನವರು ಜಿಲ್ಲಾಧಿಕಾರಿಯವರಿಗೆ ಹೇಳುತ್ತಾರೆ. 'ನೀವು ನಮ್ಮ ಅಂಗಡಿಗಳಿಗೆ ರೈಡ್ ಮಾಡಬಾರದು 'ನೀವು ಇಂತಿಷ್ಟೇ ಪರ್ಮಿಟ್ ಹಾಕಬೇಕು, ಈ ಪರ್ಮಿಟ್‌ಗಿಂತ ಜಾಸ್ತಿ ಹಾಕಬಾರದೆಂದು' ಹೇಳುವುದಾದರೆ ಈ ಪರಿಸ್ಥಿತಿ ಎಲ್ಲಿಯತನಕ ಹೋಗಿದೆ ಎನ್ನುವುದನ್ನು ನಾವು ನೋಡಬಹುದು.

12.40 ಪಿ.ಎಂ.

ಡಿಸ್ಟಿಲರಿಯವರಂತು ಅಲ್ಲಿರುವ ಅಬಕಾರಿ ಅಧಿಕಾರಿಗಳು ಯಾವ ಪರಿಸ್ಥಿತಿಯಲ್ಲಿದ್ದಾರೆಂಬುದು ನಮಗೆ ಗೊತ್ತಿಲ್ಲ. ಅವರು ಸ್ವರ್ಗ ಲೋಕದಲ್ಲಿದ್ದಾರೆ. ಒಂದೊಂದು ಡಿಸ್ಟಿಲರಿಯಲ್ಲಿ ಒಂದೊಂದು

ದಿನಕ್ಕೆ ಸಾವಿರ-ಸಾವಿರ ಲೀಟರ್ ವಿಸ್ಕಿ, ವಿಸ್ಕಿ ತಯಾರಾದರೆ ಅಂಥ ಸಂದರ್ಭದಲ್ಲಿಯೂ ಕೇವಲ ದಿನಕ್ಕೆ ನೂರು ಲೀಟರ್‌ಗಳಿಗೆ ಮಾತ್ರ ಲಿಕ್ಕರ್ ಫೀ ಹಾಕಿ, ಉಳಿದ ಒಂಬೈನೂರು ಲೀಟರನ್ನು ಕಳ್ಳಸಾಗಣೆ ಮಾಡಿ, ಅದೇ ಅಧಿಕಾರಿ ಮೂಲಕ ಹೊರಗೆ ಬರುವ ಪ್ರಕರಣಗಳಿವೆ. ಇವತ್ತಿನ ದಿವಸ ಅದಕ್ಕೆ ನಿರ್ಬಂಧವನ್ನು ಹಾಕಲೇಬೇಕಾಗಿದೆ. ಅದಕ್ಕೆ ಇಚ್ಛಾಶಕ್ತಿ ಬೇಕು. ಈ ಸರ್ಕಾರಕ್ಕೆ ಆ ಇಚ್ಛಾಶಕ್ತಿ ಇದೆ ಎನ್ನುವುದನ್ನು ತೋರಿಸಬೇಕಾಗಿದೆ. ಈ ಮುಂಗಡಪತ್ರವನ್ನು ನೋಡುವಾಗ ಈ ಸರ್ಕಾರ ಎಲ್ಲಾ ರೀತಿಯಲ್ಲೂ ಮದ್ಯ ಮಾರಾಟದ ಬಗ್ಗೆ ಮದ್ಯಪಾನದ ಬಗ್ಗೆ ನಿರ್ದಿಷ್ಟವಾದ ಧೋರಣೆಗಳಿಂದ, ಇಚ್ಛಾಶಕ್ತಿಯನ್ನು ಪ್ರಕಟಪಡಿಸಿದೆ ಎಂದು ಹೇಳಲು ನಾನು ಬಹಳ ಹೆಮ್ಮೆಪಡುತ್ತೇನೆ. ಕಳೆದ ವರ್ಷ ಅಬಕಾರಿ ತೆರಿಗೆ ವಸೂಲಿಗಾಗಿ ಸರ್ಕಾರ 34 ಕೋಟಿ ರೂಪಾಯಿಗಳಷ್ಟು ಸ್ವತ್ತುಗಳನ್ನು ಮುಟ್ಟುಗೋಲು ಹಾಕಿದ್ದರೆ, ಈ ವರ್ಷ ಈ ಸರ್ಕಾರ 60 ಕೋಟಿ ರೂಪಾಯಿಗಳವರೆಗೆ ಮುಟ್ಟುಗೋಲು ಹಾಕಿಕೊಳ್ಳುವ ವ್ಯವಸ್ಥೆಯನ್ನು ಮಾಡಿದ್ದಕ್ಕೆ ನಾನು ಸರ್ಕಾರವನ್ನು ಅಭಿನಂದಿಸಬೇಕು. ಸರ್ಕಾರ ಅಬಕಾರಿ ಲಾಬಿಯಲ್ಲಿಲ್ಲ. ಅದರಿಂದ ಮುಕ್ತವಾಗಿದೆ ಎನ್ನುವುದನ್ನು ನೇರವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಅಬಕಾರಿ ಸಚಿವರು ತೋರಿಸಿದ್ದಾರೆ ಹಾಗೂ ಇಲಾಖೆಯವರೂ ತೋರಿಸಿದ್ದಾರೆ. ಆದರೆ, ಇದು ಕೇವಲ ಕಾಲಂಶ, ಇನ್ನೂ ಮುಕ್ಕಾಲಂಶ ಇದರ ಪ್ರಗತಿಗಾಗಿ ಹೋರಾಡಬೇಕಾಗಿದೆ. ಇದರ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಬರುವ ಒತ್ತಡವನ್ನು ಎದುರಿಸಿ, ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ತಾವು ಮುಂಗಡಪತ್ರದಲ್ಲಿ ಹೆಚ್ಚುವರಿ ಪ್ರಸ್ತಾವನೆಗಳನ್ನು ತೋರಿಸಿದ್ದೀರಿ, ಅದಕ್ಕನುಗುಣವಾಗಿ, ಈ ಕಾರ್ಯಕ್ರಮಗಳಲ್ಲೂ ಕೂಡ ತಾವು ನಿರ್ದಿಷ್ಟವಾಗಿ ಮುಂದಕ್ಕೆ ಹೋಗಬೇಕೆಂದು ನಾನು ಹೇಳಬಯಸುತ್ತೇನೆ. ಬಹಳ ದೂರದೃಷ್ಟಿ ಇಟ್ಟುಕೊಂಡಿರುವ ವಿಚಾರವೆಂದರೆ ಬೆಂಗಳೂರು ನಗರದ ಮಧ್ಯದಲ್ಲಿರುವ ರೇಸ್ ಕೋರ್ಸ್‌ನ್ನು ನಗರದ ಹೊರವಲಯಕ್ಕೆ ವರ್ಗಾಯಿಸುವ ಪ್ರಕರಣ. ಈ ಹಿಂದಿನ ಅನೇಕ ಸರ್ಕಾರಗಳು ಈ ಬಗ್ಗೆ ಚಿಂತನೆ ನಡೆಸಿದ್ದರೂ ಸಹ, ಇದನ್ನು ನಿರ್ದಾಕ್ಷಿಣ್ಯವಾಗಿ ಕಾರ್ಯ ರೂಪಕ್ಕೆ ಇಳಿಸಲು ಯಾವುದೇ ಪ್ರಯತ್ನ ನಡೆಸಲಿಲ್ಲ, ಯಾವುದೋ ಒಂದು ಒತ್ತಡಕ್ಕೆ ಒಳಗಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಆದರೆ, ಶ್ರೀ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರ ಈ ಇಚ್ಛಾಶಕ್ತಿಯನ್ನು ಪ್ರಕಟಪಡಿಸಿದ್ದು, ಬೆಂಗಳೂರು ನಗರ ಮಾತ್ರವಲ್ಲ, ಇಡೀ ಕರ್ನಾಟಕ ರಾಜ್ಯದ ಜನತೆಗೆ ಒಂದು ಸ್ವಾಗತಾರ್ಹ ನಿರ್ಧಾರವೆಂದು ಹೇಳಬಯಸುತ್ತೇನೆ. ಆಡಳಿತದಲ್ಲಿ ಪಾರದರ್ಶಕತೆ, ಮಾಹಿತಿ ತಂತ್ರಜ್ಞಾನದ ಬಳಕೆ ಬಗ್ಗೆ ಹೇಳುವುದಾದರೆ, ಇಡೀ ದೇಶದಲ್ಲಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯಾಗುತ್ತಿದೆ. ಆದರೆ, ಅನೇಕ ಜನರಿಗೆ ಮಾಹಿತಿ ತಂತ್ರಜ್ಞಾನವನ್ನು ಆಡಳಿತದಲ್ಲಿ ಅಳವಡಿಸುವುದರಿಂದ ಯಾವ ರೀತಿಯಲ್ಲಿ ಲಾಭವಾಗುತ್ತದೆನ್ನುವ ಬಗ್ಗೆ ಚಿಂತನೆ ಇನ್ನೂ ಬಂದಿಲ್ಲ. ಒಂದು ಪ್ರಕರಣದಲ್ಲಿ, ಶಾಸಕರೊಬ್ಬರು, ದೈನಂದಿನ ಆಗುಹೋಗುಗಳಲ್ಲಿ ಅಥವಾ ಜನಸಾಮಾನ್ಯರಿಗೆ ಸಹಾಯ ಮಾಡಲು ಕಂಪ್ಯೂಟರೈಸೇಷನ್‌ನಿಂದ ಆಗುವ ಲಾಭವೇನು ಎಂದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯಲ್ಲಿ ಕೇಳಿದ್ದನ್ನು ನಾನು ಓದಿದ್ದೆ. ನಾನು ಕೇಳುವುದಿಷ್ಟೆ, ಮೊನ್ನೆ ಅಮೇರಿಕಾ ಅಧ್ಯಕ್ಷರು ಆಂಧ್ರ ಪ್ರದೇಶಕ್ಕೆ ಭೇಟಿ ನೀಡಿದಾಗ ಮಾಡಿದ ಭಾಷಣವನ್ನು ನಾನು ಆಲಿಸಿದ್ದೆ. ಇವತ್ತು ಜಾಗತಿಕ ಮಾಹಿತಿ

ತಂತ್ರಜ್ಞಾನ ಯುಗಕ್ಕೆ ನಮ್ಮ ಕರ್ನಾಟಕದ ಇಂಜಿನಿಯರುಗಳ ಕೊಟ್ಟ ಕೊಡುಗೆ ಅಪೂರ್ವವಾದುದು. ಇವತ್ತು ನಮ್ಮಲ್ಲಿ 500 ಸಾಫ್ಟ್‌ವೇರ್ ಕಂಪನಿಗಳು ಬಂದರೂ ಕೂಡ ಅನೇಕ ಸಾಫ್ಟ್‌ವೇರ್ ಕಂಪನಿಗಳು ಏನೂ ಕೆಲಸವಿಲ್ಲದೆ, ಪರ ದೇಶಗಳಿಗೆ ಪಲಾಯನ ಮಾಡಿದ ಅಥವಾ ಸಾಫ್ಟ್‌ವೇರ್ ಕಂಪನಿಗಳು ಮುಚ್ಚಿದ ಉದಾಹರಣೆಗಳಿವೆ. ಅಂಥ ಪರಿಸ್ಥಿತಿಯಲ್ಲಿಯೂ ಕೂಡ ಹಿಂದಿನ ಯಾವ ಸರ್ಕಾರಗಳೂ ಈ ಬಗ್ಗೆ ಆಸಕ್ತಿ ವಹಿಸದೆ ಇದ್ದಾಗ, ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ, ಮಾಹಿತಿ ತಂತ್ರಜ್ಞಾನಕ್ಕೆ ಆದ್ಯತೆ ಕೊಟ್ಟು, ಸ್ವರವೆತ್ತಿದ್ದಾರೆ. ಇದು ಬಹಳ ಶ್ಲಾಘನೀಯವಾದುದು. ಇದು ಇಚ್ಛಾಶಕ್ತಿ. ಮಾಹಿತಿ ತಂತ್ರಜ್ಞಾನದ ಬಗ್ಗೆ ನಮ್ಮ ಶಾಸಕರಲ್ಲಿ ಸರಿಯಾದ ಮಾಹಿತಿ ಕೊಡಬೇಕು. ಅಧಿಕಾರಿಗಳಲ್ಲಿ ಸಂಪೂರ್ಣ ಇಚ್ಛಾಶಕ್ತಿ ತರಬೇಕು. ಮಾಹಿತಿ ತಂತ್ರಜ್ಞಾನವನ್ನು ಬಳಸುವುದರ ಮೂಲಕ ಜನಸಾಮಾನ್ಯರಿಗೆ ನೇರವಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಲು ಬೇಕಾದ ಕಾರ್ಯಕ್ರಮ ಹಮ್ಮಿಕೊಳ್ಳಲು ಸಾಧ್ಯತೆ ಇದೆ ಎಂದು ತೋರಿಸಬೇಕಾಗಿದೆ. ಇದು ಬಹಳ ದೂರದ ಪ್ರಯಾಣ. ಆ ಪ್ರಯಾಣವನ್ನು ಪ್ರಾರಂಭಿಸಿದ್ದೀರಿ. ನಾವು ಬಹಳ ಎಡರು-ತೊಡರುಗಳನ್ನೆದುರಿಸಬೇಕಾಗಿದೆ. ಕರ್ನಾಟಕ ಸರ್ಕಾರ ಮಾಹಿತಿ ತಂತ್ರಜ್ಞಾನವನ್ನು ಲಾಂಚ್ ಮಾಡಿ, ಮಿಲೆನಿಯಂ ಐ.ಟಿ. ಪಾಲಿಸಿಯನ್ನು ಹೊರಗೆ ತಂದಿದೆ. ಮುಂಗಡ ಪತ್ರದಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಯಾವ ಆಸಕ್ತಿಯನ್ನು ಇವತ್ತು ಮಾನ್ಯ ಮುಖ್ಯಮಂತ್ರಿಗಳು ತೋರಿಸಿದ್ದಾರೆಯೋ ಈ ಆಸಕ್ತಿ ಬಹುಶಃ ನಮ್ಮ ಮಂತ್ರಿಮಂಡಲದ ಎಲ್ಲ ಸಚಿವರಗಳ ವಿರೋಧ ಪಕ್ಷದ ಎಲ್ಲ ಸದಸ್ಯರುಗಳು ಕೂಡ ಅವನ್ನು ಆಸಕ್ತಿಯಿಂದ ನೋಡಬೇಕು. ಇದರ ಬಗ್ಗೆ ತಾವೆಲ್ಲರೂ ಕಾರ್ಯತತ್ಪರರಾಗಬೇಕೆಂಬುದಾಗಿ ನಾನು ವಿನಂತಿ ಮಾಡುತ್ತೇನೆ. ಏಕೆಂದರೆ, ನನಗೆ ಸಾಮಾನ್ಯ ಪ್ರಶ್ನೆ ಕೇಳಿದಾಗ, ನಾನು ನನ್ನ ಕಛೇರಿಯನ್ನು ಕಂಪ್ಯೂಟರೀಕರಣ ಮಾಡಿದಾಗ, ನಾನು ವೆಬ್‌ಸೈಟನ್ನು ಸ್ಥಾಪನೆ ಮಾಡಿದಾಗ ಅನೇಕ ಜನ ನನ್ನ ಪತ್ರಕರ್ತ ಮಿತ್ರರು, ಸಭಾಪತಿಯವರೆ, ನೀವು ನಿಮ್ಮ ಕಛೇರಿಯನ್ನು ಕಂಪ್ಯೂಟರೀಕರಣ ಮಾಡಿದ್ದರಿಂದಾಗಿ ನೀವು ಜನರಿಗೆ ಕೊಟ್ಟ ಲಾಭವೇನೆಂದು ಕೇಳಿದರು. ಇವತ್ತು ಕಂಪ್ಯೂಟರ್ ಮೂಲಕ ನನ್ನ ಉಪಸ್ಥಿತಿ ನನ್ನ ಕ್ಷೇತ್ರದಲ್ಲಿಲ್ಲದಿದ್ದರೂ ನನ್ನ ಕ್ಷೇತ್ರದ ಜನ ನನ್ನ ಕಛೇರಿಗೆ ಹೋಗಿ ನೇರವಾಗಿ ಇ-ಮೇಲ್ ಮೂಲಕ ನನ್ನನ್ನು ಸಂಪರ್ಕಿಸುವ ವ್ಯವಸ್ಥೆ ನನ್ನ ಕಛೇರಿಯಲ್ಲಿರುವುದರಿಂದ, ನನ್ನ ಅನುಪಸ್ಥಿತಿ ಅವರಿಗೆ ಗೋಚರವೇ ಆಗುವುದಿಲ್ಲ. ಇವತ್ತು ಇಡೀ ರಾಜ್ಯದಲ್ಲಿ ಪ್ರಪ್ರಥಮವಾಗಿ ನಮ್ಮ ಉಡುಪಿ ತಾಲ್ಲೂಕು ಪಂಚಾಯಿತಿ, ನಗರಸಭೆಯನ್ನು ಕಂಪ್ಯೂಟರೀಕರಣ ಮಾಡಿ, ಮುಂದಿನ ಮೇ 15ರಂದು ನನ್ನ ಕ್ಷೇತ್ರದ 11 ಗ್ರಾಮ ಪಂಚಾಯಿತಿಗಳಲ್ಲಿ ಏಕಟ್ಟಕ್ಕೆ ಕಂಪ್ಯೂಟರೀಕರಣಗೊಳಿಸುವ ವ್ಯವಸ್ಥೆ ಪ್ರಾರಂಭಿಸಿದ್ದೇವೆ. ಇದಕ್ಕೆ ಸರ್ಕಾರದ ನಿಯಮಾವಳಿಗಳಲ್ಲಿ, ಮುಂಗಡಪತ್ರದಲ್ಲಿ ವಿಶೇಷ ಅನುದಾನವಿಲ್ಲದಿದ್ದರೂ, ನಮ್ಮ ಲೋಕಸಭಾ ಸದಸ್ಯರ ಸಂಸತ್ ನಿಧಿ ಬಳಸಿಕೊಂಡು ಈ ವ್ಯವಸ್ಥೆ ಮಾಡುತ್ತೇವೆಂಬ ಆತ್ಮವಿಶ್ವಾಸ ನಮಗೆ ಇದೆ, ಅದನ್ನು ನಾವು ಮಾಡುತ್ತೇವೆ. ಕರ್ನಾಟಕದಲ್ಲಿ ಪ್ರಥಮ ಗ್ರಾಮ ಪಂಚಾಯಿತಿ ಎಂದರೆ, ಬೆಂಗಳೂರಿನಿಂದ 8 ಕಿ.ಮೀ. ದೂರದಲ್ಲಿರುವ ಬೆಳ್ಳಂದೂರು. ನಾನು ಅಲ್ಲಿಗೆ ಹೋಗಿ ಎರಡು ದಿವಸ ಅಧ್ಯಯನ ಮಾಡಿದೆ. ಅಲ್ಲಿಯ ಗ್ರಾಮ ಪಂಚಾಯಿತಿಯಲ್ಲಿ ಆಗಿರುವುದು ಇಡೀ ದೇಶದ

ಜನತೆ ಕಣ್ತೆರೆದು ನೋಡಬೇಕಾದ ಬೆಳವಣಿಗೆ. ಇವತ್ತು ಅದನ್ನು ನಾವು ಆಸಕ್ತಿಯಿಂದ ನೋಡೋಣ. ಜನಸಾಮಾನ್ಯರಿಗೂ ಕೂಡ ಅಲ್ಲಿ ತುರ್ತಾಗಿ ಸಿಗುವ, ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಸಿಗುವ ಮಾಹಿತಿ ಬಹಳ ಪ್ರಮುಖವಾದುದು. ಗ್ರಾಮ ಪಂಚಾಯಿತಿಯಲ್ಲಿ ಇಂಟರ್‌ನೆಟ್, ಇ-ಮೇಲ್ ಮೂಲಕ ವ್ಯವಸ್ಥೆ ಪ್ರಾರಂಭಿಸಿದರೆ, ಇವತ್ತು ಆ ಗ್ರಾಮಪಂಚಾಯಿತಿಯಲ್ಲಿರುವ ನಾಗರಿಕ ಉಡುಪಿಯಲ್ಲಿರುವ ನನ್ನ ಕಛೇರಿಗೆ ಬರಬೇಕಿಲ್ಲ. ಅವನು ಆ ಗ್ರಾಮಪಂಚಾಯಿತಿ ಮೂಲಕವೇ, ಗ್ರಾಮದ ಕಾರ್ಯದರ್ಶಿ ಮೂಲಕವೇ ಸಂಬಂಧಪಟ್ಟ ಶಾಸಕರನ್ನು, ಅಧಿಕಾರಿಗಳನ್ನು ನೇರವಾಗಿ ಸಂಪರ್ಕಿಸಬಹುದು. ಸತತವಾದ ಅಧ್ಯಯನ ಕೂಡ ಅದರಲ್ಲಿರಬೇಕು. ಇದರಲ್ಲಿ ಅಧಿಕಾರಿಗಳ ಆಸಕ್ತಿ, ಚುನಾಯಿತ ಪ್ರತಿನಿಧಿಗಳ ಆಸಕ್ತಿ ಮುಖ್ಯವಾದುದು. ಮಾಹಿತಿ ತಂತ್ರಜ್ಞಾನ ಎನ್ನುವ ಈ ಕಾರ್ಯಕ್ರಮವನ್ನು ಲಾಂಚ್ ಮಾಡುವಾಗ ಈ ಒಂದು ಇಲಾಖೆ ಕಾರ್ಯದರ್ಶಿ ಒಂದು ತರಬೇತಿಯ ಕ್ರಮವನ್ನು ಇಲ್ಲಿ ಮಾಡಿದ್ದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ನಮ್ಮ ಇಲಾಖಾ ಕಾರ್ಯದರ್ಶಿಗಳೂ ಕೂಡ ಹೆಚ್ಚಿನ ಆಸಕ್ತಿ ತೋರಲಿಲ್ಲ. ಬೆರಳೆಣಿಕೆಯಷ್ಟು ಅಧಿಕಾರಿಗಳು ಆ ಸಾಧನೆಗೆ ತಮ್ಮನ್ನು ತಾವು ತೊಡಗಿಸಿಕೊಂಡು ಇಚ್ಛಾಶಕ್ತಿ ಪ್ರಕಟಿಸಿದ್ದಾರೆ. ಇವತ್ತು ಕಂದಾಯ ಇಲಾಖೆಯಲ್ಲಿ ಆಗಿರುವ ಪ್ರಗತಿಯನ್ನು ಪ್ರತಿಯೊಬ್ಬ ಶಾಸಕರು ಅಲ್ಲಿಗೆ ಹೋಗಿ ರಾಜೀವ್ ಚಾವ್ಲಾರವರ ಹತ್ತಿರ ಕುಳಿತು ನೋಡಿದರೆ ಗೊತ್ತಾಗುತ್ತದೆ. ಕೇವಲ ಒಂದು ಲ್ಯಾಪ್‌ಟಾಪ್ ಮೂಲಕ ನೀವು ಕಳುಹಿಸಿದ ಪ್ರಶ್ನೆಯನ್ನು ಸಂಪೂರ್ಣವಾಗಿ ಲ್ಯಾಪ್-ಟಾಪ್ ಮೂಲಕವೇ ಅವರ ಇಲಾಖೆಯ ಸಿಬ್ಬಂದಿಗೆ ಕಳುಹಿಸಿ, ಅದರ ಮೂಲಕ ಉತ್ತರ ಸಂಗ್ರಹಿಸಿ, ಒಂದೇ ದಿನದಲ್ಲಿ ಕಂದಾಯ ಮಂತ್ರಿಗಳ ಕಛೇರಿಗೆ ಕಳುಹಿಸಿ, ಕಂದಾಯ ಮಂತ್ರಿಗಳ ಕಛೇರಿ ಅಪ್ರೂವಲ್ ಮಾಡುವ ವಿಶೇಷ ಕಾರ್ಯಕ್ರಮವನ್ನು ಅವರು ಮಾಡಿದ್ದಾರೆ. ಆ ಸಾಧನೆ ಈ ಸರ್ಕಾರ ಇರುವಾಗಲೇ ಆಗಿದ ಎಂದು ಹೇಳುವುದಿಲ್ಲ. ಹಿಂದಿನ ಸರ್ಕಾರದಲ್ಲಿ ಶ್ರೀ ಬಿ. ಸೋಮಶೇಖರ್‌ರವರು ಬಹಳ ಆಸಕ್ತಿ ವಹಿಸಿದ್ದರು. ಅದನ್ನು ಹೆಮ್ಮೆಯಿಂದ ಹೇಳಬೇಕಾಗಿದೆ. ಆ ಇಲಾಖೆಯಲ್ಲಾಗಿರುವ ಪ್ರಗತಿಯನ್ನು ನಮ್ಮ ಎಲ್ಲ ಶಾಸಕರು ಹೋಗಿ ನೋಡಿದರೆ, ನಮ್ಮ ಕಾರ್ಯದರ್ಶಿಗಳು ಅವರವರ ಇಲಾಖೆಗೆ ಸಂಬಂಧಪಟ್ಟಂತೆ ಕೂಡ ಇದೇ ವ್ಯವಸ್ಥೆ ಮಾಡಿದರೆ, ನಾವು ಇಡೀ ದೇಶದಲ್ಲಿ ಪ್ರಪ್ರಥಮವಾಗಿ ಮಾಹಿತಿ ತಂತ್ರಜ್ಞಾನವನ್ನು ಆಡಳಿತದಲ್ಲಿ ಇ-ಗೌವರ್ನೆನ್ಸ್ ಎನ್ನುವ ಘೋಷಣೆಯನ್ನು ಕೊಟ್ಟಿದ್ದೇವೆ, ಅದನ್ನು ಅನುಷ್ಠಾನದಲ್ಲಿ ತರುವಾಗ ಹೆಮ್ಮೆಯಿಂದ ಹೇಳಿಕೊಳ್ಳಬಹುದು, ಇವತ್ತು ಶ್ರೀ ಚಂದ್ರಬಾಬು ನಾಯ್ಡುರವರನ್ನು ಅಲ್ಲಿಗೆ ಹೋಗಿ ನೋಡಬೇಕಿಲ್ಲ. ನಮ್ಮಲ್ಲಿ ಬೇಕಾದಷ್ಟು ಜನ ಶ್ರೀ ಚಂದ್ರಬಾಬು ನಾಯ್ಡು ತರಹದ ಇಂಜಿನಿಯರ್‌ಗಳು ಇದ್ದಾರೆ. ಅವರನ್ನು ಬಳಸಿಕೊಳ್ಳಲಿ. ಇವತ್ತು ತಂತ್ರಜ್ಞಾನ ಇಲಾಖೆಯಲ್ಲಿರುವ ಅಧಿಕಾರಿ ವರ್ಗಕ್ಕೆ ಇನ್ನಷ್ಟು ಶಕ್ತಿ ಕೊಡಬೇಕಾಗಿದೆ. ಶ್ರೀ ರಾಜೀವ್ ಚಾವ್ಲಾರಂಥ ಇಂಜಿನಿಯರಿಂಗ್ ಶಿಕ್ಷಣ ಪಡೆದಿರುವ ಅಧಿಕಾರಿಗಳನ್ನು ನೇಮಿಸಿ, ಪ್ರತಿಯೊಂದು ಇಲಾಖಾ ಮಂತ್ರಿಗಳು ಇದರ ಬಗ್ಗೆ ರಿವ್ಯೂ ಇಟ್ಟುಕೊಂಡು, ಶಾಸಕರಿಗೆ ಕಂಪ್ಯೂಟರ್ ಕೊಟ್ಟರೆ ಏನೂ ಪ್ರಯೋಜವಿಲ್ಲ, ಶಾಸಕರಿಗೆ ಕಂಪ್ಯೂಟರ್ ಕೊಟ್ಟಮೇಲೆ ನಾವು ನಮ್ಮ ಕ್ಷೇತ್ರದಿಂದ ನಮ್ಮ ಮಂತ್ರಿಗಳನ್ನು ಸಂಪರ್ಕಿಸುವಾಗ, ಮಂತ್ರಿಗಳ ಕಛೇರಿಯಲ್ಲಿ ಕೂಡ ಇ-ಮೇಲ್ ವ್ಯವಸ್ಥೆ ಇರಬೇಕು.

ಅದಕ್ಕೆ ಸಚಿವ ಸಂಪುಟದವರಿಗೆ ಮಾನ್ಯ ಮುಖ್ಯಮಂತ್ರಿಗಳು ಆದೇಶ ನೀಡಿ, ಇನ್ನು ಮುಂದಿನ ಒಂದು ತಿಂಗಳಲ್ಲಿ ಸಚಿವ ಸಂಪುಟದ ಎಲ್ಲ ಸಚಿವರ ಕಛೇರಿಯಲ್ಲಿ ಇಂಟರ್‌ನೆಟ್ ಕನೆಕ್ಷನ್, ಇ-ಮೇಲ್ ವ್ಯವಸ್ಥೆ ಇರುವ ಕಾರ್ಯಕ್ರಮವನ್ನು ರೂಪಿಸಿದಾಗ, ಇನ್ನು ಮುಂದಿನ ಮೂರು ತಿಂಗಳ ಅವಧಿಯಲ್ಲಿ ಎಂ.ಎಸ್. ಬಿಲ್ಡಿಂಗ್‌ನಲ್ಲಿರುವ ಎಲ್ಲಾ ಕಾರ್ಯದರ್ಶಿಗಳ ಕಛೇರಿಗಳಿಗೂ ಕೂಡ ಇ-ಗೌವರ್ನೆನ್ಸ್, ಸಾಫ್ಟ್‌ವೇರ್ ಏನು ಡೆವಲಪ್ ಮಾಡುತ್ತೀರಾ ಅದರ ಮೂಲಕ ಎಂ.ಎಸ್. ಬಿಲ್ಡಿಂಗ್‌ನಲ್ಲಿರುವ ಕಾರ್ಯದರ್ಶಿಗಳ ಕಛೇರಿಯನ್ನು ಕಂಪ್ಯೂಟರೈಸ್ ಮಾಡುವ ಮೂಲಕ ನಾವೇನು ಭ್ರಷ್ಟಾಚಾರ ನಿಯಂತ್ರಣ ಮಾಡಬೇಕೆನ್ನುವ ಆಶಾವಾದವನ್ನಿಟ್ಟುಕೊಂಡಿದ್ದೇವೆ, ಅದರಲ್ಲಿ ಕನಿಷ್ಠ ಪ್ರಾಥಮಿಕ ಹಂತದಲ್ಲಿ 25 ರಿಂದ 30 ಪರ್ಸೆಂಟ್ ಬೆನಿಫಿಟ್ ಪಡೆದುಕೊಳ್ಳಬಹುದೆಂದು ನಾನು ಹೇಳಬಯಸುತ್ತೇನೆ. ನಾನು ಯಾವತ್ತೂ 100 ಪರ್ಸೆಂಟ್ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿರಲಿಲ್ಲ. ನಮ್ಮ ಪ್ರಯತ್ನದಿಂದ ಒಂದು ಪರ್ಸೆಂಟ್ ಅಭಿವೃದ್ಧಿಯಾದರೂ ಕೂಡ ಅದು ಅಭಿವೃದ್ಧಿ ಎಂದೇ ತಿಳಿದುಕೊಳ್ಳಬೇಕಾಗಿದೆ. ನನ್ನ ಶಾಸಕ ಮಿತ್ರರಿಗೆ ಮಾನ್ಯ ಸಭಾಧ್ಯಕ್ಷರು ತರಬೇತಿ ನೀಡುವ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ನಾನು ಸದನದ ಎಲ್ಲ ನಮ್ಮ ಶಾಸಕರಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ದಯವಿಟ್ಟು ಈ ತರಬೇತಿಯಲ್ಲಿ ಪಾಲ್ಗೊಳ್ಳಿ. ಇವತ್ತು ಈ ಸರ್ಕಾರ ಮಾಡಿರುವ ಈ ಮಾಹಿತಿ ಕಾರ್ಯಕ್ರಮ ಏನಿದೆ ಅದರ ಮೂಲಕ ಕಾರ್ಯಕ್ರಮಗಳು ಅನುಷ್ಠಾನದಲ್ಲಿ ಇ-ಗೌವರ್ನೆನ್ಸನ್ನು ಆಡಳಿತದಲ್ಲಿ ಸಾಕಷ್ಟು ರೀತಿಯ ವೈವಿದ್ಯಮಯವಾದ ವಾತಾವರಣವನ್ನು ಕಲ್ಪಿಸುವ ಸಾಧ್ಯವಿದೆ. ನಮ್ಮ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತೀವ್ರವಾಗಿ ಪ್ರಗತಿ ಕಾಣಬಹುದು. ಹಾಗೆಯೇ, ಎಲ್ಲ ರೀತಿಯಲ್ಲೂ ಕೂಡ ಭ್ರಷ್ಟಾಚಾರವನ್ನು ನಿಗ್ರಹಿಸಲು ಕೂಡ ಸ್ವಲ್ಪಮಟ್ಟಿಗೆ ಪ್ರಯತ್ನವನ್ನು ಮಾಡಬಹುದು ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಮುಂಗಡಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ ಹಾಗೆ, ಹುಬ್ಬಳ್ಳಿಯಲ್ಲಿ ಸಾಫ್ಟ್‌ವೇರ್ ಪಾರ್ಕನ್ನು ಓಪನ್ ಮಾಡುವ ಬಗ್ಗೆ ಹೇಳಿರುವುದು ಸಂತೋಷ. ಹುಬ್ಬಳ್ಳಿಯಲ್ಲಿ ಅದು ಆಗಲೇಬೇಕು. ಆದರೆ, ಕೇಂದ್ರ ಸರ್ಕಾರ ಹಾಕಿರುವ ಇನ್‌ಫರ್ಮೇಷನ್ ಟೆಕ್ನಾಲಜಿ ಆಕ್ಷನ್ ಪ್ಲಾನ್‌ನಲ್ಲಿ ಇವತ್ತು ಕೇಂದ್ರ ಸರ್ಕಾರ ನಮ್ಮ ಉಡುಪಿ, ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣಕ್ಕಾಗಿ,

"A pilot project under the aegis of the National Task Force on Information Technology shall be launched in some lead districts which have already attained universal literacy. With the aim of achieving universal computer literacy in all the secondary schools in these Districts, along side net work of educational institutions in these districts will be assisted to maximise the introduction of I.T. in order to create world class talent at the top end of the education pyramid. These pilot projects will be a joint initiative of the local educational institutions, respective State Governments and the Centre. In the first instance, such a pilot project will be launched

in Dakshina Kannada and Udupi Districts in Karnataka on a substantive self-financing basis. Within a short time, the same will be extended to suitable districts in other States also."

ಕರ್ನಾಟಕ ರಾಜ್ಯದ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಿಗೆ ಕೇಂದ್ರ ಸರ್ಕಾರದ ಸಂಪೂರ್ಣ ಮಾಹಿತಿ ತಂತ್ರಜ್ಞಾನ ಸಾಕ್ಷರತಾ ಆಂದೋಲನದ ಪರವಾಗಿ 48 ಕೋಟಿ ರೂಪಾಯಿಗಳಷ್ಟು ಪ್ರಸ್ತಾವನೆಗಳು, ಮಂಜೂರಾತಿಗಾಗಿ ಹೋಗಿದ್ದು, ಈಗಾಗಲೇ ಅವರು ಪ್ರಕಟಪಡಿಸುತ್ತಿದ್ದಾರೆ. ಇದರ ಜೊತೆಗೆ, ಈಗಾಗಲೇ ನಮ್ಮ ಮಣಿಪಾಲದಲ್ಲಿ ಅರ್ಥ್ ಸ್ಟೇಷನ್ ಇದೆ. ಮಂಗಳೂರಿಗೆ ಅರ್ಥ್ ಸ್ಟೇಷನ್ ಮಂಜೂರಾತಿಯಾಗಿದೆ. ಎರಡೂ ಕಡೆ ಆ ಸ್ಟೇಷನ್ ಇರುವುದರಿಂದ, ಇವತ್ತು ಸಾಫ್ಟ್‌ವೇರ್ ಪಾರ್ಕ್‌ನ ಯೋಜನೆಯೇನೀದೆ, ಅದನ್ನು ಉಡುಪಿಯಲ್ಲಿ ಕಾರ್ಯಗತ ಮಾಡಲು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಯತ್ನ ನಡೆಸಬೇಕು. ನಮ್ಮ ಬೇಡಿಕೆ ಏನಿದೆ ಅಂದರೆ, ನಾವು ಅದನ್ನು ಹುಬ್ಬಳ್ಳಿಯಿಂದ ತೆಗೆದು ನಮ್ಮ ಕಡೆ ಕೊಡಿ ಎಂದು ಹೇಳಲ್ಲ. ಉಡುಪಿ ಮತ್ತು ಮಂಗಳೂರಿನಲ್ಲಿ ಈ ವ್ಯವಸ್ಥೆ ಮಾಡಿ ಹೇಳುತ್ತಿದ್ದೇವೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಇವತ್ತು ಸಾಕ್ಷರತಾ ಆಂದೋಲನದಲ್ಲಿ ನೂರಕ್ಕೆ ನೂರು ಸಾಕ್ಷರತೆಯನ್ನು ಹೊಂದಿದೆ ಎಂದು ನಾವು ಘೋಷಿಸಿದ್ದೇವೆ. ಈ ದಿಸೆಯಲ್ಲಿ ನಮ್ಮ ಪ್ರಯತ್ನಗಳನ್ನು ಇನ್ನುಷ್ಟು ಹೆಚ್ಚಿನ ರೀತಿಯಲ್ಲಿ ಆಸಕ್ತಿಯಿಂದ ಮಾಡುವಾಗ, ಕೇಂದ್ರ ಸರ್ಕಾರ ಯಾವ ಧೋರಣೆಯಿಂದ ಇವತ್ತು ನಮ್ಮ ಎರಡೂ ಜಿಲ್ಲೆಗಳನ್ನು ಆಸಕ್ತಿಯಿಂದ ಗುರುತಿಸಿದೆಯೋ, ಅದೇ ರೀತಿಯಲ್ಲಿ ರಾಜ್ಯ ಸರ್ಕಾರ ಕೂಡ ನಮ್ಮನ್ನು ಆಸಕ್ತಿಯಿಂದ ಗುರುತಿಸಬೇಕೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮ ಮುಂಗಡಪತ್ರದಲ್ಲಿ ಯುವಕರಿಗಾಗಿ ಯುವ-ಡಾಟ್ ಕಾಂ ಎಂಬ ಹೊಸ ಯೋಜನೆಯನ್ನು ಕಾರ್ಯರೂಪಕ್ಕಿಳಿಸಿದ್ದೀರಿ. ಇದು ಸ್ವಾಗತಾರ್ಹ ವಿಚಾರ. ಇವತ್ತು ಮುಂದಿನ ಜನಾಂಗಕ್ಕೆ ತಮ್ಮ ಭವಿಷ್ಯ ಏನಾಗುತ್ತದೆಂಬುದು ಅವರಿಗೆ ಗೊತ್ತಿಲ್ಲ. ಅವರ ಭವಿಷ್ಯವನ್ನು ರೂಪಿಸಬೇಕಾದವರು ನಾವು. ಇಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಬಂದವರು ಅವರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕಾಗಿದೆ. ಇವತ್ತು ಪತ್ರಿಕಾ ಮಾಧ್ಯಮ ಮತ್ತು ದೂರದರ್ಶನ ಮಾಧ್ಯಮದಲ್ಲಿ ಬರುವ ಸೀರಿಯಲ್‌ಗಳ ಬಗ್ಗೆ ನಾನು ಬಹಳ ಖೇದಕರವಾಗಿ ಹೇಳಬಯಸುತ್ತೇನೆ. ಇವತ್ತು ಪತ್ರಿಕಾ ಮತ್ತು ದೂರದರ್ಶನ ಮಾಧ್ಯಮದಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಯಾವ ರೀತಿಯಲ್ಲಿ ಅವಹೇಳನ ಮಾಡುತ್ತಿದ್ದಾರೆ, ಅದರಿಂದ ನಮ್ಮ ಯುವ ಜನಾಂಗಕ್ಕೆ ಯಾವು ರೀತಿ ಪರಿಣಾಮ ಆಗುತ್ತಿದೆ ಎನ್ನುವ ಹಿನ್ನೆಲೆಯಲ್ಲಿ ಇವತ್ತು ಯುವ ಜನಾಂಗವನ್ನು ತರಬೇತಿಗೊಳಿಸುವ ಜವಾಬ್ದಾರಿ ಕೂಡ ನಮ್ಮ ಸರ್ಕಾರಕ್ಕಿದೆ. ಹೊಸ ಮಾಹಿತಿ ತಂತ್ರಜ್ಞಾನ ಯುಗಕ್ಕೆ ಕಾಲಿಡುವ ಸಂದರ್ಭದಲ್ಲಿ ಯುವಕರಿಗೂ ಮಾಹಿತಿ ತಂತ್ರಜ್ಞಾನದ ಬೆಳಕು ಚೆಲ್ಲಬೇಕಾದ ಆದ್ಯತೆ ಸರ್ಕಾರಕ್ಕೆ ಇದೆ ಎನ್ನುವುದನ್ನು ತೋರಿಸುವಾಗ ಯುವ ಜನಾಂಗಕ್ಕೆ ನೇರವಾಗಿ ಉದ್ಯೋಗ ಕೊಡುವುದಕ್ಕಿಂತಲೂ ಪರೋಕ್ಷವಾಗಿ ಉದ್ಯೋಗವನ್ನು ಅಂದರೆ ಅವರು ಸ್ವಶಕ್ತಿಯಿಂದ, ತಮ್ಮ ಸ್ವಂತ ಕಾಲಮೇಲೆ ನಿಲ್ಲುವ ವ್ಯವಸ್ಥೆಗಾಗಿ ಯುವ ಡಾಟ್-ಕಾಮ್ ಎಲ್ಲ ಕ್ಷೇತ್ರಗಳಲ್ಲೂ ಮಾಡಿರುವ ಕಾರ್ಯಕ್ರಮವನ್ನು ನಾನು ಬಹಳಷ್ಟು ಸ್ವಾಗತಿಸುತ್ತೇನೆ. ಮಾಹಿತಿ ತಂತ್ರಜ್ಞಾನ ಇಲಾಖೆಗೆ

ಈ ವ್ಯವಸ್ಥೆಗಾಗಿ ಇನ್ನಷ್ಟು ಹೆಚ್ಚಿನ ಶಕ್ತಿ ಕೊಡಬೇಕೆಂದು ನಾನು ಮತ್ತೆ ಮತ್ತೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಮಾಹಿತಿ ತಂತ್ರಜ್ಞಾನದ ಈ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಬೇಕಾದರೆ ಪ್ರತಿ ತಿಂಗಳು ಕೂಡ ಅದರ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಮುಂದಿನ ತಿಂಗಳೊಳಗೆ ಎಷ್ಟು ಪ್ರಗತಿ ಕಂಡಿದ್ದೇವೆ ಎಂದು ನೋಡಬೇಕು. ಉದಾಹರಣೆಗೆ, ಇಲಾಖಾ ಕಾರ್ಯದರ್ಶಿಗಳ, ಸಚಿವರ ಕಾರ್ಯಾಲಯದ, ಕಾರ್ಪೊರೇಷನ್‌ಗಳ, ನಗರಸಭೆಗಳ, ನಗರ ಪಂಚಾಯಿತಿಗಳ, ಜಿಲ್ಲಾ ಪಂಚಾಯಿತಿಗಳ, ಜಿಲ್ಲಾಧಿಕಾರಿ ಕಛೇರಿಗಳ, ತಾಲ್ಲೂಕು ಕಛೇರಿಗಳ, ತಾಲ್ಲೂಕು ಪಂಚಾಯಿತಿಗಳ ಮಟ್ಟದಲ್ಲಿ ಎಷ್ಟರಮಟ್ಟಿಗೆ ನಾವು ಮಾಹಿತಿ ತಂತ್ರಜ್ಞಾನವನ್ನು ಒಳಗೆ ತಂದಿದ್ದೇವೆ, ಆ ಪರಿಧಿಗೆ ತಂದಿದ್ದೇವೆನ್ನುವ ಬಗ್ಗೆ ಆಗಿಂದಾಗ್ಗೆ ಕನಿಷ್ಠ 15 ದಿನಗಳಿಗೊಮ್ಮೆ ಅದರ ಬಗ್ಗೆ ಪ್ರಗತಿ ಪರಿಶೀಲನೆ ನಡೆಸದೇ ಹೋದರೆ, ಪ್ರಯೋಜನವಿಲ್ಲ. ಐ.ಟಿ. ಕಾರ್ಯಕ್ರಮವೇನಿದೆ ಅದು ಅನುಷ್ಠಾನದಲ್ಲಿ ಪ್ರಗತಿ ಕಾಣಲೇಬೇಕಾಗಿದೆ. ಇದನ್ನು ಅನಿವಾರ್ಯತೆಯಿಂದ ನಾನು ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಮಾಹಿತಿ ತಂತ್ರಜ್ಞಾನದ ಬಗ್ಗೆ 15 ದಿನಗಳಿಗೊಮ್ಮೆ ಸಕಲ ರೀತಿಯಲ್ಲಿ ಪ್ರಗತಿ ಪರಿಶೀಲನೆ ನಡೆಸಿ, ಶಾಸಕರೆಲ್ಲರಿಗೂ ತಿಳುವಳಿಕೆ ಮೂಡಿಸಬೇಕು. ಯಾವುದೇ ಕಂಪ್ಯೂಟರೈಸೇಷನ್ ಮಾಡಲಿ, ಯಾವುದೋ ಒಂದು ಸರ್ಕುಲರ್ ಇಷ್ಯೂ ಆದರೆ ಆಂಗ್ಲ ಭಾಷೆಯಲ್ಲಿ ಬರುತ್ತಿದೆ. ಇದು ಸರಿಯಲ್ಲ. ನಾವು ಆಡಳಿತ ಭಾಷೆ ಕನ್ನಡವೆಂದು ಹೇಳಿದ ಮೇಲೆ, ಕನ್ನಡ ಮಾಧ್ಯಮದ ಮೂಲಕ ಸಾಫ್ಟ್‌ವೇರನ್ನು ಈಗಾಗಲೇ ಡೆವಲಪ್ ಮಾಡಿದ್ದೇವೆ. ಅದರಿಂದಾಗಿ ಇ-ಗೌವರ್ನೆನ್ಸ್ ಕಂಪ್ಯೂಟರೀಕರಣ ತರುವ ಮೂಲಕ ಆಡಳಿತದಲ್ಲಿ ಕನ್ನಡದಲ್ಲಿ ಸಾಫ್ಟ್‌ವೇರ್ ಡೆವಲಪ್ ಮಾಡಿದರೆ, ಆಗ ಶಾಸಕರೆಲ್ಲರಲ್ಲೂ ಆಸಕ್ತಿ ಬರುತ್ತದೆ. ಅದನ್ನು ಹೆಚ್ಚಿಸಬೇಕಾದರೆ, ಅದಕ್ಕೆ ನೀವು ನಿರಂತರವಾಗಿ ಸ್ಪಂದಿಸುತ್ತಾ ಹೋಗಬೇಕು. ಬರೀ ಸರ್ಕ್ಯುಲರ್ ಇಷ್ಯೂ ಮಾಡಿ ಕುಳಿತರೆ ಆಗುವುದಿಲ್ಲ. ನಿರಂತರವಾಗಿ ಇದರ ಬಗ್ಗೆ, brain-storming classesನ್ನು ನಮ್ಮ ಶಾಸಕರಿಗೆ ಮಾಡುತ್ತಾ ಹೋದರೆ, ಮತ್ತು ಅಧಿಕಾರಿ ವರ್ಗಕ್ಕೆ ಮಾಡುತ್ತಾ ಹೋದರೆ ಮಾತ್ರ ಗಂಭೀರವಾದ ಪರಿಣಾಮಗಳನ್ನು ನಾವು ಸ್ವೀಕಾರ ಮಾಡಬಹುದೆನ್ನುವ ಮಾತುಗಳನ್ನು ನಾನು ಹೇಳುತ್ತೇನೆ. ಇನ್ನೂ ಅನೇಕ ಕಾರ್ಯಕ್ರಮಗಳ ಬಗ್ಗೆ ಮುಂಗಡಪತ್ರದಲ್ಲಿ ಹೇಳಿದ್ದೇವೆ. ಆದರೆ, ನಾನು ಮದಲೇ ಹೇಳಿದೆ, ಎಷ್ಟು ಚಾಕಚಕ್ಯತೆಯಿಂದ ಮುಂಗಡ ಪತ್ರ ರಚನೆ ಮಾಡಿದರೂ ಕೂಡ, ಕೆಲವು ಸಣ್ಣಪುಟ್ಟ ಕಣ್ತಪ್ಪು ಕೈ ತಪ್ಪು, ಕೆಲವು ಲೋಪದೋಷಗಳಾಗುತ್ತವೆ. ಅದನ್ನೂ ಸಹ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ಇದು ಅಧಿಕಾರಿಗಳ ಮಟ್ಟದಲ್ಲೂ ಅಥವಾ ನಾವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಒಂದೆರಡು ಕಾರ್ಯಕ್ರಮಗಳು ತಪ್ಪಿ ಹೋಗಬಹುದು. ಅದರಲ್ಲಿ ಎರಡು ಪ್ರಮುಖ ಕಾರ್ಯಕ್ರಮಗಳು ತಪ್ಪಿಹೋಗಿವೆ. ಈ ಮುಂಗಡ ಪತ್ರದಲ್ಲಿ ಎಲ್ಲೂ ಹೊಸ ಜಿಲ್ಲೆಗಳ ಬಗ್ಗೆ ಯಾವುದೇ ಪ್ರಸ್ತಾವನೆ ಇಲ್ಲ. ನಮ್ಮದೂ ಸಹ ಹೊಸ ಜಿಲ್ಲೆಗಳು. ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಅವರ ಬಾಯಲ್ಲಿ ಈ ವಿಷಯ ಬರಬಹುದೆಂದೆನಿಸಿದ್ದೆ. ಹೊಸ ಜಿಲ್ಲೆಗಳ ಬಗ್ಗೆ ಮುಂಗಡ ಪತ್ರದಲ್ಲಿಲ್ಲದಿರುವ ಮಾತು ಅವರ ಬಾಯಿಂದ ಬರಲಿಲ್ಲ. ಆದರೆ, ಇದೊಂದು ಲೋಪದೋಷ. ಸರ್ಕಾರ ಹೊಸ ಜಿಲ್ಲೆಗಳನ್ನು ಯಾವ

ಉದ್ದೇಶ ಇಟ್ಟುಕೊಂಡು ರಚನೆ ಮಾಡಲಾಗಿದೆ ಎಂಬುದರ ಪರಿಕಲ್ಪನೆ ಏನೆಂದರೆ, ಹೊಸ ಜಿಲ್ಲೆಗಳ ಮೂಲಕ ಆಡಳಿತದಲ್ಲಿ ಯಾವ ರೀತಿಯಲ್ಲಿ ಬದಲಾವಣೆಯನ್ನು ತರಬೇಕೆಂಬ ಇಚ್ಛಾಶಕ್ತಿಯನ್ನು ಸರ್ಕಾರ ಪ್ರಕಟ ಪ್ರಕಟಿಸಿತ್ತೋ ಆ ಇಚ್ಛಾಶಕ್ತಿಯನ್ನು ಹೊಸ ಜಿಲ್ಲೆಗಳ ಬೆಳವಣಿಗೆಯಲ್ಲಿ ಸರ್ಕಾರ ತೋರಿಸಬೇಕಾಗಿತ್ತು. ಹೊಸ ಜಿಲ್ಲೆಗಳನ್ನು ಮಾಡುವಾಗ ಎಲ್ಲಾ ಸೌಲಭ್ಯಗಳನ್ನು ಹೊಸದಾಗಿ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಈ 7 ಹೊಸ ಜಿಲ್ಲೆಗಳಲ್ಲಿ ಹೊಸದಾಗಿ ಜಿಲ್ಲಾ ಕಛೇರಿಗಳನ್ನು ಹಾಗೂ ಇತರ ಕಛೇರಿಗಳನ್ನು ಪ್ರಾರಂಭ ಮಾಡುವ ದೃಷ್ಟಿಯಿರುವುದರಿಂದ ಇಲ್ಲಿಗೆ ಮೊದಲೇ ಕಂಪ್ಯೂಟರೀಕರಣಗೊಳಿಸುವುದು ಬಹಳ ಸುಲಭವಾಗಿ ಮಾಡಬಹುದು. ಮಾಹಿತಿ ತಂತ್ರಜ್ಞಾನದ ಇ-ಗೌವರ್ನೆನ್ಸ್ ಅಳವಡಿಕೆಗಳನ್ನು ಈ 7 ಹೊಸ ಜಿಲ್ಲೆಗಳಿಗೆ ಆದ್ಯತೆ ಮೇಲೆ ತೆಗೆದುಕೊಂಡರೆ ಬಹುಶಃ ಇದರಿಂದ ಬಹಳಷ್ಟು ಪರಿಣಾಮಕಾರಿಯಾಗಿ ಹೊಸ ಜಿಲ್ಲೆಗಳ ಆಡಳಿತ ವ್ಯವಹಾರವನ್ನು ರೂಪಿಸಬಹುದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸದಸ್ಯರು ಮಾಹಿತಿ ತಂತ್ರಜ್ಞಾನದ ಬಗ್ಗೆ ಬಹಳ ದೀರ್ಘವಾಗಿ ಪ್ರಸ್ತಾಪ ಮಾಡುತ್ತಿದ್ದಾರೆ ಇದಕ್ಕೆ ನಾನೂ ಸಹ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈ ಒಂದು ವ್ಯವಸ್ಥೆ ಬೇಗ ಅಭಿವೃದ್ಧಿಯಾಗಬೇಕಾದರೆ ಆ ಒಂದು ತಂತ್ರಜ್ಞಾನ ಸಂಸ್ಥೆಗಳಿಗೆ ಹೆಚ್ಚಿನ ಹಣವನ್ನು ತುಂಬಬೇಕಾಗುತ್ತದೆ. Whatever is fed by human brains that goes into the computer. ಆದ್ದರಿಂದ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಹಣ ಕೊಡಬೇಕಾಗುತ್ತದೆ. ಈ ವಿಷಯವನ್ನು ತಾವು ದಯವಿಟ್ಟು ಕೇಳಬೇಕು.

ಶ್ರೀ ಯು.ಆರ್. ಸಭಾಪತಿ : ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಹಿತಿ ತಂತ್ರಜ್ಞಾನದ ಯೋಜನೆಯ ಸಲುವಾಗಿ 'ಮಾಹಿತಿ ಬಾಂಡ್' ದು 300 ಕೋಟಿ ರೂಪಾಯಿಗಳ ಸಂಗ್ರಹ ಮಾಡುವ ನಿರ್ಧಾರವನ್ನು ಮಾಡಿದ್ದಾರೆ. ಈ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಒಂದು ತಂತ್ರಜ್ಞಾನಕ್ಕೋಸ್ಕರ ಸಂಗ್ರಹ ಮಾಡತಕ್ಕಂತಹ ಹಣವನ್ನು ಅದರಲ್ಲಿ ತೊಡಗಿಸಿ ಆದಷ್ಟು ಬೇಗ ಈ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ದೃಢವಾದಂತಹ ನಿರ್ಧಾರದಿಂದ ಇವತ್ತು 300 ಕೋಟಿ ರೂಪಾಯಿಗಳ ಬಾಂಡ್ ರೂಪದಲ್ಲಿ ಹಣ ಸಂಗ್ರಹ ಮಾಡುವಂತಹ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಆದ್ದರಿಂದ ಸರ್ಕಾರ ಮನಸ್ಸು ಮಾಡಿದರೆ ಈ ವ್ಯವಸ್ಥೆಗೆ ಯಾವುದೇ ರೀತಿಯಿಂದ ಹಣದ ಅಡಚಣೆಯಾಗುವುದಿಲ್ಲ. ಆದರೆ ಇದರ ಬಗ್ಗೆ ಒಂದು ಕಠಿಣ ನಿರ್ಧಾರಕ್ಕೆ ಬರಬೇಕಾಗಿದೆ, ಇವತ್ತು ಹೊಸ ಜಿಲ್ಲೆಗಳಿಗೆ ಇನ್ನೂ ಅನೇಕ ಹೊಸ ಕಛೇರಿಗಳು ಬರಬೇಕಾಗಿರುವ ಪ್ರಕರಣಗಳಿರುವುದರಿಂದ ಹಾಗೂ ಹೊಸ ಮಿನಿ ವಿಧಾನಸೌಧ ಮತ್ತು ಹೊಸ ಇಲಾಖೆಗಳಿಗೆ ಕಟ್ಟಡದ ಅವಶ್ಯಕತೆ ಇದ್ದು ಇದಕ್ಕೆ ಹಣ ಒದಗಿಸುವುದರ ಬಗ್ಗೆ ಬಜೆಟ್‌ನಲ್ಲಿ ಪ್ರಯತ್ನ ಮಾಡಲಿಲ್ಲ. ಬಹುಶಃ ಆರ್ಥಿಕ ಇಲಾಖೆಯ ಕಾರ್ಯದರ್ಶಿಯಾಗಿರುವ ಶ್ರೀ ಸಿ. ಗೋಪಾಲ ರೆಡ್ಡಿಯವರು ಹಣವನ್ನು ಅಡ್ಜೆಸ್ಟ್ ಮಾಡುವುದರಲ್ಲಿ ಬಹಳ ನಿಪುಣರಿದ್ದಾರೆ. ಇವರು ಐದು ವರ್ಷಗಳಿಂದ. ಹಿಂದಿನ ಸರ್ಕಾರವಿದ್ದಾಗ ಅವರು ಏನೇನು ಮಾಡಿದ್ದಾರೆ, ಅದನ್ನು ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಾಗ ಹೊಸ ಜಿಲ್ಲೆಗಳನ್ನು ಬಹುಶಃ ಕಣ್ತಪ್ಪಿನಿಂದಾಗಿ

ಮರೆತಿರಬೇಕು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಕಣ್ಣು ತಪ್ಪಿನಿಂದ ಆಗಿರತಕ್ಕಂತಹ ಲೋಪದೋಷಗಳನ್ನು ದಯವಿಟ್ಟು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಕರ್ನಾಟಕ ಕರಾವಳಿಯ ಮೀನುಗಾರರ ಉದ್ದಿಮೆಯ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವತ್ತು ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಇರತಕ್ಕಂತಹ ಕರಾವಳಿ ಮೀನುಗಾರಿಕಾ ಉದ್ಯಮ ಅತ್ಯಂತ ಸಂಕಷ್ಟ ಪರಿಸ್ಥಿತಿಯಲ್ಲಿ ಕಳೆದ 3-4 ವರ್ಷಗಳಿಂದ ನಿರಂತರವಾಗಿ ಬೆಳೆದುಬಂದಿದೆ. ಇದಕ್ಕೆ ಇವತ್ತಿನದಿವಸ ಹಲವಾರು ಕಾರಣಗಳಿವೆ, ಹಾಗೆಯೇ ಇವತ್ತು ನಾವು ಕೊಂಕಣ ರೈಲ್ವೆಯನ್ನು ಸ್ವಾಗತಿಸಿ ಹೊಸ ಹೊಸದಾಗಿ ಬೃಹತ್ ಕೈಗಾರಿಕೆಗಳನ್ನೆಲ್ಲಾ ಇಲ್ಲಿ ಸ್ಥಾಪನೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಇದರಿಂದ ಎಲ್ಲಾ ಬೃಹತ್ ಕೈಗಾರಿಕೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವುದಕ್ಕೆ ಕಣ್ಣು ಹಾಕಿದೆ. ಇವತ್ತಿನ ದಿವಸ ಇಲ್ಲಿರತಕ್ಕಂತಹ ಎಂಆರ್‌ಪಿಎಲ್ ಹಾಗೂ ಬಿಎಎಸ್‌ಎಫ್ ಕೈಗಾರಿಕೆಗಳು ಸಮುದ್ರಕ್ಕೆ ಬಿಡತಕ್ಕಂತಹ ತ್ಯಾಜ್ಯ ವಸ್ತುಗಳನ್ನು ಬಿಡದೆ ಇರುವುದಕ್ಕೆ ನಿರ್ಬಂದಿಸಬೇಕು. ಇದರ ಮೇಲೆ ಪರಿಸರ ಇಲಾಖೆಯು ಕಣ್ಣಿಟ್ಟು ಯಾವ ರೀತಿಯ ನಿರ್ಬಂಧವನ್ನು ಹೇರಬೇಕು, ನಮ್ಮ ಚಲನವಲನ ಏನಿತ್ತು ಅದನ್ನು ಪರಿಸರ ಇಲಾಖೆಯು ಮಾಡದೆ ಇರುವುದರಿಂದ ಈ ಬೃಹತ್ ಕೈಗಾರಿಕೆಗಳು ತಮ್ಮ ತ್ಯಾಜ್ಯವಸ್ತುಗಳನ್ನು ಸಮುದ್ರಕ್ಕೆ ಬಿಡುವುದರಿಂದ ಸಮುದ್ರದ ಮೀನಿನ ಉತ್ಪಾದನೆ ಸಂಪೂರ್ಣವಾಗಿ ಕುಂಠಿತಗೊಂಡಿದೆ. ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತಿನದಿವಸ 180 ಕೋಟಿ ರೂಪಾಯಿಗಳ ವಿದೇಶಿ ಮಿನಿಮಯ ಗಳಿಸುತ್ತಿರುವ ಈ ಮೀನುಗಾರಿಕಾ ಉದ್ಯಮದಲ್ಲಿ 3 ಲಕ್ಷ ಜನ ಮೀನುಗಾರಿಕೆಯ ವೃತ್ತಿಯಿಂದ ಜೀವನವನ್ನು ನಡೆಸುತ್ತಿದ್ದಾರೆ. ಈ 3 ಲಕ್ಷ ಜನ ಮೀನುಗಾರರು 3-4 ವರ್ಷಗಳಿಂದ ಸತತವಾಗಿ ಅವ್ಯಾಹತವಾಗಿ ವಿವಿಧ ರೀತಿಯಲ್ಲಿ ಹೊಡೆತ ಅನುಭವಿಸುತ್ತಿರುವಾಗ ಇದಕ್ಕಾಗಿ ನಾವು ಒಂದು ದೊಡ್ಡ ಅಂದೋಲನವನ್ನು ಮಾಡಿದ್ದೇವು. ಅದೇನೆಂದರೆ, ಕೊನೆಯ ಪಕ್ಷ ಮೀನುಗಾರರು ಬಳಸತಕ್ಕಂತಹ ಯಾಂತ್ರೀಕೃತ ದೋಣಿಗಳಿಗೆ ಉಪಯೋಗಿಸತಕ್ಕಂತಹ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ತಾವು ಸಂಪೂರ್ಣವಾಗಿ ರದ್ದುಗೊಳಿಸಬೇಕು, ಒಂದು ವೇಳೆ ರಾಜ್ಯ ಸರ್ಕಾರ ಸಂಪೂರ್ಣವಾಗಿ ಈ ತೆರಿಗೆಯನ್ನು ರದ್ದುಗೊಳಿಸಿದರೆ, ಕೇಂದ್ರ ಸರ್ಕಾರದ ಅಬ್ಕಾರಿ ತೆರಿಗೆಯನ್ನು ಕೂಡ ರದ್ದು ಮಾಡಿಸುವಂತಹ ಒಂದು ಪ್ರಾವಿಸನ್ ಇದೆ. ಅದಕ್ಕೋಸ್ಕರ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂಬುದೇ ನಮ್ಮ ವಾದವಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಸಭಾಪತಿಯವರು ಈ ವಿಷಯವನ್ನು ಮೊದಲೇ ತೆಗೆದುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅಬ್ಕಾರಿ ವಿಷಯವನ್ನು ಮೊದಲು ತೆಗೆದುಕೊಂಡು ನಂತರ ಈ ವಿಷಯವನ್ನು ಕೊನೆಗೆ ತೆಗೆದುಕೊಂಡಿದ್ದಾರೆ. ಈ ವಿಷಯ ಅವರಿಗೆ ಸಂಬಂಧಪಟ್ಟಂತೆ ಬಹಳ ಮುಖ್ಯವಾದುದು, ಏಕೆಂದರೆ ಅವರು ವಿರೋಧಪಕ್ಷದಲ್ಲಿ ಇದ್ದಾಗ ಈ ವಿಷಯದ ಬಗ್ಗೆ ದಿನನಿತ್ಯ ಬಹಳ ಗಲಾಟೆಯನ್ನು ಮಾಡುತ್ತಿದ್ದರು. ನಮ್ಮ ಸರ್ಕಾರ ಕೊಟ್ಟಂತಹ ಸೌಲಭ್ಯವನ್ನು ಇವರು ಈಗ ವಾಪಸ್ಸು ತೆಗೆದುಕೊಂಡಿರುವುದರಿಂದ ಈ ವಿಷಯವನ್ನು ಕೊನೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆಂದು ನನಗನಿಸುತ್ತದೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ನಾನು ವಿರೋಧಪಕ್ಷದಲ್ಲಿದ್ದಾಗ ಯಾವ ನಿಲುವನ್ನು ಇಟ್ಟುಕೊಂಡಿದ್ದೆನೋ ಅದನ್ನೇ ಇವತ್ತು ಸಹ ಇಟ್ಟುಕೊಂಡ್ಡಿದ್ದೇನೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ, ಆದರೆ ಇವತ್ತು ನಾನು ಈ ಮುಂಗಡ ಪತ್ರದ ಬಗ್ಗೆ ಚರ್ಚೆ ಪ್ರಾರಂಭಿಸುವಾಗ ಈ ರಾಜ್ಯದ ಜನತೆಗೆ ಮುಂಗಡಪತ್ರದಿಂದ ನೀಡಿರತಕ್ಕಂತಹ ಸಂದೇಶವನ್ನು ಹೇಳುವುದರ ಜೊತೆಗೆ ಇದರಲ್ಲಿರುವ ಲೋಪದೋಷಗಳನ್ನು ಸಹ ನಾನು ಎತ್ತಿಹಿಡಿದಿದ್ದೇನೆ. ಆದ್ದರಿಂದ ಕೊನೆ ಅಥವಾ ಪ್ರಾರಂಭದಲ್ಲಿ ಎಂಬ ವಿಷಯ ಇಲ್ಲಿ ಬರುವುದಿಲ್ಲ, ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿರುವುದರಿಂದ ಇದಕ್ಕೆ ಯಾರ್‍ಯಾರು ಹೆಚ್ಚಿಗೆ ಹೋರಾಟ ಮಾಡಿದ್ದಾರೆ ಎಂಬ ಪ್ರಶ್ನೆಯೂ ಇಲ್ಲಿ ಬರುವುದಿಲ್ಲ. ನಿಮ್ಮ ಸರ್ಕಾರವು ಕೂಡ ಸಾಕಷ್ಟು ಕೆಲಸ ಮಾಡಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಹಿಂದಿನ ಸರ್ಕಾರ ಬಹಳ ಗಂಭೀರತೆಯಿಂದ ಇದೇ ಸದನದಲ್ಲಿ ಮಾರಾಟ ತೆರಿಗೆಯನ್ನು ರದ್ದು ಮಾಡಿದ್ದೇವೆಂದು ಹೇಳಿದ್ದು, ಆದರೆ ಈ ಸದನದಿಂದ ತಾವು ಹೊರಗಡೆ ಬಂದ ಮೇಲೆ ನಿಮ್ಮ ಅಧಿಕಾರಿಗಳು ಏನು ಮಾಡಿದ್ದಾರೆ? ಆ ಮಾರಾಟ ತೆರಿಗೆಯನ್ನು ರದ್ದು ಮಾಡಿದಂತಹ ಆದೇಶ ನಿಮ್ಮ ಅವಧಿಯಲ್ಲಿ ಹೊರಗಡೆ ಬರಲೇ ಇಲ್ಲ. ಇದರಿಂದ ಈ ಸದನದಲ್ಲಿ ಕೊಟ್ಟಂತಹ ಆಶ್ವಾಸನೆಗೆ ಅಧಿಕಾರಿಗಳು ಅವಮಾನ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಸರ್ಕಾರ ಇರುವಾಗ 30 ಸಾವಿರ ಲೀಟರ್ ಲಿಮಿಟೇಷನ್ ಮಾಡಿದಂತಹ ನಿರ್ಣಯದ ಆದೇಶ ಕೂಡ ಹೊರಗಡೆ ಬರಲೇ ಇಲ್ಲ. ಇದರಿಂದ ಈ ಸದನಕ್ಕೆ ಅಧಿಕಾರಿಗಳು ಅವಮಾನ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ಮೀನುಗಾರಿಕಾ ಯಾಂತ್ರೀಕೃತ ದೋಣಿಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಮಾಡುವುದು ಅಥವಾ ಬಿಡುವುದು ಮುಖ್ಯವಲ್ಲ. ಈ ಸದನದ ಗೌರವ ಉಳಿಯಬೇಕು, ಮಾರಾಟ ತೆರಿಗೆ ಮನ್ನಾ ಮಾಡಬೇಕೆಂದು ಈ ಸದನದಲ್ಲಿ ತೀರ್ಮಾನವಾಗಿ ಮುಂಗಡ ಪತ್ರದಲ್ಲಿ ಘೋಷಣೆಯಾಗಿದೆ. ಇದರ ಬಗ್ಗೆ ನಾನು ಸ್ಪಷ್ಟೀಕರಣ ಕೇಳಿದಾಗ ಮಾನ್ಯ ಜಯಪ್ರಕಾಶ್ ಹೆಗಡೆಯವರು ಮಾಜಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ನನಗೆ ಸ್ಪಷ್ಟೀಕರಣವನ್ನು ಕೊಟ್ಟಿದ್ದರು. ಆದರೆ ಇವರು ವಿಧಾನಸಭೆಯಿಂದ ಹೊರಗೆ ಹೋಗುವಾಗ ಸರ್ಕಾರದ ಅಧಿಕಾರಿಗಳು ಆದೇಶ ತಂದಿದ್ದೇ ಬೇರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮೊದಲು 30 ಸಾವಿರ ಲೀಟರ್ ಲಿಮಿಟೇಷನ್ ಮಾಡುವುದಕ್ಕೆ ಆರ್ಡರ್ ಆಗಿತ್ತು. ಈಗ ಸಂಪೂರ್ಣವಾಗಿ ಅದನ್ನು ರದ್ದು ಮಾಡಿರುವುದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಅಧಿಕಾರಿಗಳು ಕೊಟ್ಟಿರತಕ್ಕಂತಹ ತಪ್ಪು ಮಾಹಿತಿಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಬಯಸುತ್ತೇನೆ. ಹಾಗೆಯೇ ಮುಂಗಡ ಪತ್ರದಲ್ಲಿ ಇರತಕ್ಕಂತಹ ಲೋಪದೋಷಗಳ ಬಗ್ಗೆಯೂ ತಿಳಿಸುತ್ತಿದ್ದೇನೆ. ಏಕೆಂದರೆ ಮಾರಾಟ ತೆರಿಗೆ ಸಂಪೂರ್ಣ ರದ್ದು ಎನ್ನತಕ್ಕಂತಹ ಪ್ರಸ್ತಾವನೆ ಬೇರೆ, ಮಾರಾಟ ತೆರಿಗೆಯನ್ನು ವಾಣಿಜ್ಯ ಇಲಾಖೆಯಿಂದ ಮೀನುಗಾರಿಕಾ ಇಲಾಖೆಗೆ ಹಾಕಿ ಅದನ್ನು ಸಾರ್ವಜನಿಕರ ಮೂಲಕ ಪ್ರತ್ಯೇಕವಾದಂತಹ ಹಣವನ್ನು ನೀವು ಕಾದಿರಿಸಿರುವುದು ಬೇರೆಯಾಗಿದೆ. ವಾಣಿಜ್ಯ ಇಲಾಖೆಯಲ್ಲಿರತಕ್ಕಂತಹ ಮಾರಾಟ ತೆರಿಗೆಯ

ಪ್ರಸ್ತಾವವನ್ನು ಮೀನುಗಾರಿಕೆ ಇಲಾಖೆಗೆ ಹಾಕಿರುವುದರಿಂದ ಬಹಳ ತೊಂದರೆಯಾಗುತ್ತದೆ, ಇದು ಸರಿಯಾದ ಪ್ರಸ್ತಾವನೆ ಅಲ್ಲ. ಮಾರಾಟ ತೆರಿಗೆ ರದ್ದು ಆಗಬೇಕೆಂಬ ನಮ್ಮ ವಾದ ಏನಿದೆ ಅದಕ್ಕೆ ಹೆಚ್ಚಿನ ಒತ್ತನ್ನು ನಾನು ಕೊಡುತ್ತೇನೆ. ಇವತ್ತಿನ ದಿವಸ ಮಾರಾಟ ತೆರಿಗೆ ಸಂಪೂರ್ಣವಾಗಿ ರದ್ದಾದರೆ ಮಾತ್ರ ಮೀನುಗಾರರಿಗೆ ಜೀವ ಬಂದ ಹಾಗೆ ಆಗುತ್ತದೆ ಎಂಬ ಮಾತನ್ನು ನಾನು ಮತ್ತೆ ಮತ್ತೆ ಸ್ಪಷ್ಟವಾಗಿ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತರಿದ್ದು, ಆಯವ್ಯಯ ಮುಂಗಡಪತ್ರವನ್ನು ಮಂಡಿಸುವ ಮೂಲಕ ಕರ್ನಾಟಕ ಜನತೆ ಹಾಗೂ ಭಾರತದ ಜನತೆಗೆ ಒಂದು ಒಳ್ಳೆಯ ಸಂದೇಶವನ್ನು ಕಳುಹಿಸಿದ್ದಾರೆ. ಏಕೆಂದರೆ, ಆಯವ್ಯಯವನ್ನು ಮಂಡಿಸುವುದೆಂದರೆ ಅದೇನು ಅಷ್ಟು ಸುಲಭದ ಕೆಲಸವೇನಲ್ಲ. ಇವತ್ತಿನ ದಿವಸ ಆಯವ್ಯಯದಲ್ಲಿ ಎಲ್ಲಾ ರೀತಿಯ ಕಸರತ್ತುಗಳನ್ನು ನಾವು ಮಾಡಬೇಕಾಗುತ್ತದೆ, ಅನೇಕ ಮಾನ್ಯ ವಿರೋಧಪಕ್ಷದ ನಾಯಕರುಗಳು ದೂರದರ್ಶನದಲ್ಲಿ ಸಂದರ್ಶನ ನೀಡತಕ್ಕಂತಹ ಸಂದರ್ಭದಲ್ಲಿ ಸಾಲಕ್ಕೆ ಮಾತ್ರ ಹಣ ಸಾಕಾಗುತ್ತದೆಯೇ ಹೊರತು ಇದರಿಂದ ಬೇರೆ ಯಾವುದೇ ರೀತಿಯ ಪ್ರಗತಿಯನ್ನು ನಾವು ಕಾಣಲಿಲ್ಲವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ನಾವು ಶಾಸಕರ ಕ್ಷೇತ್ರಕ್ಕೆ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದೇವೆ. ಈ ಹಣವನ್ನು ಅವರು ಎಲ್ಲಿಂದ ತರಬೇಕಾಗುತ್ತದೆ? ಅದು ಅಲ್ಲದೆ ನಬಾರ್ಡ್‌ನಿಂದ, ಹುಡ್ಕೋದಿಂದ ಮತ್ತು ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ತಂದಂತಹ ಹಣದಿಂದ ನಮ್ಮಲ್ಲಿ ಆಗಿರತಕ್ಕಂತಹ ಡಾಂಬರೀಕರಣ, ಕಾಂಕ್ರೀಟಿಕರಣ ಮತ್ತು ಸೇತುವೆ ನಿರ್ಮಾಣಗಳನ್ನು ಮಾಡಲಾಗಿದೆ. ಇವತ್ತಿನ ದಿವಸ ಇಂತಹ ಕೆಲಸಗಳನ್ನು ಮಾಡುವುದಕ್ಕೆ ನಾವು ಎಲ್ಲಿಂದ ಹಣ ತರಬೇಕಾಗುತ್ತದೆ ನೀವೇ ಹೇಳಿ? ನಮ್ಮ ಆಯವ್ಯಯದಲ್ಲಿ ಬರತಕ್ಕಂತಹ ರೆವಿನ್ಯೂನಿಂದ ಈ ಎಲ್ಲಾ ಅಭಿವೃದ್ಧಿ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆಯೇ? ಇದರ ಬಗ್ಗೆ ನಾವೆಲ್ಲರೂ ಮನ ಬಿಚ್ಚಿಕೊಂಡು ಚಿಂತನೆ ಮಾಡಬೇಕು, ಈ ಆಯವ್ಯಯದಲ್ಲಿ ಬಹಳಷ್ಟು ಜಾಣತನವನ್ನು ಪ್ರದರ್ಶನ ಮಾಡಿ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಆಯವ್ಯಯವನ್ನು ಮಂಡಿಸಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಎಲ್ಲಾ ಸರ್ಕಾರಗಳು ಸಾಲ ಮಾಡಿ ಮತ್ತೆ "ಸಾಲವನ್ನು ಕೊಳ್ಳುವಾಗ ಸಾಲೋಗಾರ ಉಂಡಂತೆ, ಸಾಲಿಗನು ಬಂದು ಕೇಳುವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ" - ಎಂದು ಸರ್ವಜ್ಞನೇ ಹೇಳಿದ್ದಾನೆ. ಆದ್ದರಿಂದ ಸಾಲವನ್ನು ಮಾಡಿ ಅಭಿವೃದ್ಧಿ ಮಾಡಿದ ಮೇಲೆ ನಾವು ಕೊನೆಗೆ ಎಲ್ಲಿಗೆ ಸೇರುತ್ತೇವೆಂಬುದರ ಬಗ್ಗೆಯೂ ಚಿಂತನೆ ಮಾಡಬೇಕಾದಂತಹ ಕಾಲ ಬಂದಿದೆ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಶ್ರೀನಿವಾಸಗೌಡರು ಬಹಳ ಚತುರರಿದ್ದಾರೆ, ಗ್ರಾಮೀಣ ಅಭಿವೃದ್ಧಿಯಲ್ಲಿ "ನಿರ್ಮಲ ಗ್ರಾಮ ಯೋಜನೆಯನ್ನು" ನಾವು ಕಾಪಿ ಮಾಡಿದ್ದೇವೆಂದು ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರು.

ಶ್ರೀ ಕೆ. ಶ್ರೀನಿವಾಸ ಗೌಡ ಕುದುವನಹಳ್ಳಿ : ಅಲ್ಲಿ 1500 ಕೋಟಿ ಸರ್‌ಪ್ಲಸ್ ಫಂಡ್ ಇದೆ. ನಾವು ಏನೂ ಸಾಲ ಮಾಡಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಶ್ರೀನಿವಾಸಗೌಡರು ನಿನ್ನೆಯ ದಿವಸ ಈ ಬಜೆಟ್ ಬಗ್ಗೆ ಪ್ರಸ್ತಾಪ ಮಾಡತಕ್ಕಂತಹ ಸಮಯದಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ಕೊಡಲಿಲ್ಲ, ಮತ್ತು "ನಿರ್ಮಲ ಗ್ರಾಮ ಯೋಜನೆ"ಯನ್ನು ನೀವು ಕಾಪಿ ಮಾಡಿಕೊಂಡು ಸ್ವಸ್ತಿ ಗ್ರಾಮ ತಂದಿದ್ದೀರೆಂದು ಪ್ರಸ್ತಾಪ ಮಾಡಿದ್ದೀರಿ, ಆದ್ದರಿಂದ ತಾವು ಆ ಪುಸ್ತಕವನ್ನು ಓದಬೇಕು. ನಿರ್ಮಲ ಗ್ರಾಮ ಯೋಜನೆಯನ್ನು ನಾವು ರದ್ದುಪಡಿಸಲಿಲ್ಲ, ಆದರೆ ನಾವು ಸ್ವಸ್ತಿ ಗ್ರಾಮ ಯೋಜನೆಯನ್ನು ಪ್ರತ್ಯೇಕವಾಗಿ ತಂದಿದ್ದೇವೆ. ಇವತ್ತು ಗ್ರಾಮೀಣ ಅಭಿವೃದ್ಧಿಗೆ ನಮ್ಮ ಸರ್ಕಾರ ಕೊಟ್ಟಂತಹ ಚಿಂತನೆಯನ್ನು ನಿಮ್ಮ ಸರ್ಕಾರ ಮಾಡಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಗ್ರಾಮಪಂಚಾಯಿತಿಗೆ ಒಂದು ಲಕ್ಷ ರೂಪಾಯಿಗಳನ್ನು ಅನುದಾನ ಕೊಡುತ್ತಿದ್ದುದನ್ನು ದುಪ್ಪಟ್ಟು ಮಾಡಿ 2 ಲಕ್ಷ ರೂಪಾಯಿಗಳಿಗೆ ಹೆಚ್ಚುವರಿಯಾಗಿ ಗ್ರಾಮಪಂಚಾಯಿತಿಗೆ ಕಳುಹಿಸಿದ್ದೇವೆ. ಇವತ್ತು ಸ್ವಸ್ತಿ ಗ್ರಾಮ ಯೋಜನೆಯಲ್ಲಿ ಒಳಚರಂಡಿ ವ್ಯವಸ್ಥೆ, ರಸ್ತೆ ಕಾಮಗಾರಿಗಳು, ಶೌಚಾಲಯಗಳ ನಿರ್ಮಾಣ, ಹಾಗೆಯೇ ಬೇರೆ ಬೇರೆ ರೀತಿಯಲ್ಲಿ 1000 ಆಯ್ದ ಗ್ರಾಮಗಳಿಗೆ 20 ಕೋಟಿ ರೂಪಾಯಿಗಳ ಅನುದಾನದ ಜೊತೆಗೆ 150 ಕೋಟಿ ರೂಪಾಯಿಗಳ ಹುಡ್ಕೋ ಸಾಲದ ನೆರವನ್ನು ಪಡೆದುಕೊಂಡು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಆದ್ದರಿಂದ ನಿಮ್ಮ ಯೋಜನೆಯನ್ನು ನಾವು ಏಕೆ ಕಾಪಿ ಮಾಡಬೇಕು? ನಮಗೆ ಸ್ವಂತ ಬುದ್ಧಿಶಕ್ತಿ ಇಲ್ಲವೇ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : "ಸ್ವಸ್ತಿ ಗ್ರಾಮ ಯೋಜನೆ" ಯನ್ನು ತಂದಿದ್ದೇವೆಂದು ಈ ಸದನದಲ್ಲಿ ಅನೌನ್ಸ್ ಮಾಡಿದ್ದೀರಿ, ಯಾವುದಾದರೂ ಹಳ್ಳಿಯಲ್ಲಿ ಈ ಯೋಜನೆ ಕಾರ್ಯಗತವಾಗಿದೆಯೇ ಎಂಬುದರ ಬಗ್ಗೆ ಎಂದು ಉದಾಹರಣೆ ಇದ್ದರೆ ಹೇಳಿ.

ಉಪಾಧ್ಯಕ್ಷರು : ಮಾನ್ಯ ಸಭಾಪತಿಯವರೆ, ತಮ್ಮ ಚರ್ಚೆಯನ್ನು ಬೇಗ ಮುಗಿಸಬೇಕು.

ಶ್ರೀ ಯು.ಆರ್. ಸಭಾಪತಿ : ತಾವು ಭೋಜನ ವಿರಾಮದ ನಂತರ ನನಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ನಾನು ತಮಗೆ ಅವಕಾಶವನ್ನು ಮಾಡುಕೊಡುತ್ತೇನೆ. ಈಗ ಸದನದ ಕಲಾಪವನ್ನು ಸ್ಥಗಿತಗೊಳಿಸಿ ಮತ್ತೆ 2 ಗಂಟೆ 15 ನಿಮಿಷಕ್ಕೆ ಪುನಃ ಸಮಾವೇಶಗೊಳ್ಳುತ್ತದೆ.

(ಸದನವು 1 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 2 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸಭೆಯು 2-40 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರು)

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೇ, ಈ 2000-20001ನೇ ಇಸವಿಯ ಮುಂಗಡ ಪತ್ರದಲ್ಲಿ ದೂರದೃಷ್ಟಿಯನ್ನು ನಾವು ಕಾಣಬಹುದು, 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎನ್ನುವಂತಹ ಒಂದು ವಿಚಾರಧಾರೆಯಲ್ಲಿಯೇ ಈ ಮುಂಗಡಪತ್ರವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ಈ ಸರ್ಕಾರ ಯಾವ ಅಬಕಾರಿ ಲಾಬಿಗೂ ಮಣಿಯುವುದಿಲ್ಲ, ಯಾವ ಗ್ರಾನೈಟ್ ಲಾಬಿಗೂ ಮಣಿಯುವುದಿಲ್ಲ, ಯಾವುದೇ ಹೊರಗಿನ ಶಕ್ತಿಗಳಿಗೆ ಮಣಿಯುವುದಿಲ್ಲ ಎನ್ನುವ ಒಂದು ಸ್ಪಷ್ಟ ಚಿತ್ರಣವನ್ನು ಈ ಮುಂಗಡ ಪತ್ರದಲ್ಲಿ ಅವರು ಬಹಳ ನಿರ್ದಾಕ್ಷಿಣ್ಯವಾಗಿ ತೋರಿಸಿಕೊಟ್ಟಿದ್ದಾರೆಂದರೆ ಅದು ತಪ್ಪಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ನಮ್ಮ ವಿರೋಧಪಕ್ಷದ ನಾಯಕರುಗಳು ಮಾತನಾಡುವಾಗ ಅವರು ಹೇಳುತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳಿಗೂ ಮಾನ್ಯ ಗೃಹಸಚಿವರಿಗೂ ಭಿನ್ನಾಭಿಪ್ರಾಯ ಇದೆ, ನಿಮ್ಮ ನಿಮ್ಮೊಳಗೆ ಏನೋ ತಕರಾರು ಇದೆ, ಈ ತರಹದ ಮಾತುಗಳನ್ನು ನಾವು ಕೇಳುತ್ತಿದ್ದೆವು. ಆದರೆ ಈ ಮುಂಗಡ ಪತ್ರವನ್ನು ನೋಡಿದಾಗ ಒಂದು ಸ್ಪಷ್ಟವಾದ ಚಿತ್ರಣ ಅಲ್ಲಿ ಕಂಡು ಬರುತ್ತದೆ, ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಗೃಹ ಮಂತ್ರಿಗಳಿಗೂ ಯಾವುದೇ ರೀತಿಯ ಬಿನ್ನಾಭಿಪ್ರಾಯ ಇಲ್ಲ, ಅವರಿಬ್ಬರೂ ಒಟ್ಟಾಗಿಯೇ ಕಾರ್ಯನಿರ್ವಹಿಸುತ್ತಿದ್ದಾರೆ, ಈ ಮುಂಗಡ ಪತ್ರದಲ್ಲಿಯೂ ಸಹ ಗೃಹ ಖಾತೆಯ ಬಗ್ಗೆ ಸಂಪೂರ್ಣವಾಗಿ ವ್ಯಾಪಕವಾದ ಪೋಲೀಸ್ ವ್ಯವಸ್ಥೆಯಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬಳಸಿ ಅದನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಒಂದು ಕಾರ್ಯಕ್ರಮವನ್ನು ನಿರ್ಧರಿಸುವ ಬಗ್ಗೆ ನಾವು ನೋಡಿದರೆ ಬಹುಶಃ ಮಾನ್ಯ ವಿರೋಧಪಕ್ಷದ ನಾಯಕರುಗಳ ಒಂದು ಆರೋಪ ಏನು ಇದೆ, ಅದಕ್ಕೆ ಅವರು ಇಲ್ಲಿ ಮಂಡಿಸಿದ ಮುಂಗಡ ಪತ್ರದಲ್ಲಿಯೇ ಉತ್ತರಿಸಿದ್ದಾರೆಂದರೆ ತಪ್ಪಾಗುವುದಿಲ್ಲ. ಇವತ್ತು ಆಡಳಿತ ವ್ಯವಸ್ಥೆಯಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬಳಸಿ ಪೋಲಿಸ್ ವ್ಯವಸ್ಥೆಯನ್ನು ಆಧುನೀಕರಣಗೊಳಿಸಿ ರಾಜ್ಯದಲ್ಲಿ ಅಪರಾಧ ದಾಖಲೆ ಕಾರ್ಯಾಲಯವನ್ನು ಅಭಿವೃದ್ಧಿಪಡಿಸುವ ಒಂದು ವಿಚಾರಧಾರೆಯನ್ನು ಅವರು ತಮ್ಮ ಮುಂಗಡ ಪತ್ರದಲ್ಲಿ ತೋರಿಸಿದ್ದಾರೆ. ಎಲ್ಲಾ ಪೋಲೀಸ್ ಠಾಣೆಗಳಿಗೆ ನೆಟ್-ವರ್ಕ್ ಸಂಪರ್ಕವನ್ನು ಕಲ್ಪಿಸಲಾಗುವುದು, ಬೇಹುಗಾರಿಕಾ ವಿಭಾಗದ ಸಾಮರ್ಥ್ಯವನ್ನು ವೃದ್ಧಿಸಲಾಗುವ ಬಗ್ಗೆ, ಒಂದು ನಿರ್ದಿಷ್ಟವಾದ ಕಾರ್ಯಯೋಜನೆಯನ್ನು ರೂಪಿಸಿ, ಆ ಮೂಲಕ ಕಾನೂನು ಮತ್ತು ಸುವ್ಯವಸ್ಥೆಗಾಗಿ ಒಂದು ಸದೃಢವಾದ ಕಾರ್ಯಕ್ರಮವನ್ನು ಯೋಜಿಸಿರುವುದು ಬಹಳ ಸ್ವಾಗತಾರ್ಹವಾದುದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹುಶಃ ಈ ಸಮಾಜದಲ್ಲಿ ಮಹಿಳೆ ಒಬ್ಬಳು ಶೋಷಿತ ವರ್ಗಕ್ಕೆ ಸೇರಿದಂತಹ ಒಬ್ಬ ವ್ಯಕ್ತಿ ಎಂದು ಹೇಳಿದರೆ ತಪ್ಪಾಗಲಾರದು. ಈ ಸಮಾಜದಲ್ಲಿ ಮಹಿಳೆಯರು ಎಲ್ಲಾ ಹಂತದಲ್ಲಿ ಶೋಷಣೆಗೆ ಒಳಗಾಗಿದ್ದಾರೆ. ಆದರೆ ಅವರ ತ್ಯಾಗ ಮನೋಭಾವ, ಅವರ ತಾಯಿಯ ಮನೋಭಾವನೆಯಿಂದ ಅವಳು ಈ ಸಮಾಜದಲ್ಲಿ ಶೋಷಣೆಗೆ ಒಳಗಾದರೂ ಕೂಡ ಪುರುಷನನ್ನು ಕ್ಷಮಿಸಿ ಆ ಮೂಲಕ ತನ್ನದೇ ಆದ ತ್ಯಾಗ ಜೀವನದಲ್ಲಿ ಮುಂದುವರಿಯುವಾಗ ಇವತ್ತು ಸರ್ಕಾರ ಸ್ಪಂದಿಸಿರುವುದು ಅದರಲ್ಲೂ ಸಹ ಸ್ತ್ರೀಶಕ್ತಿ ಎನ್ನುವಂತಹ ಬಹಳ ಮಹತ್ತರವಾದ ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ರೂಪಿಸಿದ್ದಾರೆ. ಒಂದು ಲಕ್ಷ ಮಹಿಳಾ ಸ್ವಸಹಾಯಕ

ತಂಡಗಳಿಗೆ ಸಾಲದ ನೆರವು ನೀಡಿ, ಆ ಮೂಲಕ 50 ಕೋಟಿಗೂ ಹೆಚ್ಚು ಆವರ್ತಕ ಯೋಜನೆಗೆ ಹಣವನ್ನು ಉಳಿಸಿದ್ದು, ಮಹಿಳೆಯ ಆರೋಗ್ಯದ ಕಾಳಜಿಯ ಬಗ್ಗೆ, ಸುರಕ್ಷ ಹೆರಿಗೆ ಎನ್ನುವಂತಹ ಒಂದು ಕಾರ್ಯಕ್ರಮವನ್ನು ರೂಪಿಸಿರುವುದು. ಇದನ್ನೆಲ್ಲಾ ನೋಡುವಾಗ ಈ ಮುಂಗಡ ಪತ್ರದಲ್ಲಿ ಮಹಿಳೆಯರಿಗೆ ಎಷ್ಟರ ಮಟ್ಟಿಗೆ ಆದ್ಯತೆಯನ್ನು ಕೊಡಲಾಗಿದೆ ಎನ್ನುವ ಒಂದು ಸ್ಪಷ್ಟ ಚಿತ್ರವನ್ನು ಅವರು ಕೊಟ್ಟಿದ್ದಾರೆ. ಆರೋಗ್ಯ ರಕ್ಷಣೆಯ ಹಿತವನ್ನು ಕಾದಿರಿಸಿಕೊಂಡು ಇವತ್ತು ಅದರಲ್ಲೂ ಕೂಡ ಕೊಳಚೆ ಪ್ರದೇಶದಲ್ಲಿರತಕ್ಕಂಥ ಜನಸಾಮಾನ್ಯರ ಒಂದು ಪರಿಸ್ಥಿತಿ ಎಲ್ಲಿಯವರೆಗೆ ಅದು ಕೊಂಡೊಯ್ದಿದೆ ಎನ್ನುವಂತಾದ್ದನ್ನು ಗಂಭೀರವಾಗಿ ಗಮನಕ್ಕೆ ತೆಗೆದುಕೊಂಡು 26 ಕೋಟಿ ರೂಪಾಯಿಗಳ ವಿಶ್ವಬ್ಯಾಂಕ್‌ನ ಜನಸಂಖ್ಯಾ - 7ರ ಅಡಿಯಲ್ಲಿ ಹಾಕಿಕೊಂಡಿರುವಂತಹ ಒಂದು ಯೋಜನೆ ಏನು ಇದೆ ಅದು ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂತ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪ್ರಯೋಗಾಲಯದ ತಂತ್ರಜ್ಞರ ನೇಮಕಕ್ಕೆ ಒಂದು ಹೊಸ ಚಾಲನೆಯಲ್ಲಿ ಈ ಮುಂಗಡ ಪತ್ರವನ್ನು ನಾವು ಕಾಣುತ್ತಿದ್ದೇವೆ. ಅಂದರೆ ರಾಜ್ಯದ ಜನಸಾಮಾನ್ಯನ ಆರೋಗ್ಯದ ಹಿತರಕ್ಷಣೆಯನ್ನು ಕೂಡ ಈ ಮುಂಗಡ ಪತ್ರದಲ್ಲಿ ಅಳವಡಿಸಲಾಗಿದೆ ಎನ್ನುವಂತಹ ಸ್ಪಷ್ಟ ಚಿತ್ರಣವನ್ನು ನಾವು ಕಾಣಬಹುದು. ನಮ್ಮನ್ನು ಇಲ್ಲಿಗೆ ಕಳುಹಿಸಿರುವಂತಹ ಒಬ್ಬ ಜನಸಾಮಾನ್ಯ ಗ್ರಾಮೀಣ ಪ್ರದೇಶದಲ್ಲಿರುವ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅವನು ತೆರಳುವಾಗ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವಂತಹ ಉದ್ದೇಶ ಈ ಸರ್ಕಾರದ ಮುಂಗಡ ಪತ್ರದಲ್ಲಿ ಪ್ರಾರಂಭವಾಗಿದೆ. ಹಿಂದಿನ ಸರ್ಕಾರದ ಪ್ರಯತ್ನಗಳು ವಿಫಲ ಎಂದು ಹೇಳುವುದಕ್ಕಿಂತಲೂ ಸಾಕಷ್ಟು ಪರಿಣಾಮಕಾರಿಯಾಗಿ ಆಗಲಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ನಾವು ಬಂದು ಇಲ್ಲಿ ಕುಳಿತುಕೊಳ್ಳಬೇಕಾದರೆ ಒಬ್ಬ ಜನಸಾಮಾನ್ಯ ಅಲ್ಲಿ ಕುಳಿತುಕೊಂಡು ನಾವು ಅವನ ಎದುರಿಗೆ ಜನಸಾಮಾನ್ಯನ ಎದುರಿಗೆ ಸಾಕಷ್ಟು ಕಾಳಜಿಯನ್ನು ವಹಿಸಿ ಭಾಷಣವನ್ನು ಬಿಗಿಯುತ್ತೇವೆ. ಆ ಕಡೆಯಲ್ಲಿದ್ದರೂ ಈ ಕಡೆಯಲ್ಲಿದ್ದರೂ ಸಹ ನಾವೆಲ್ಲರೂ ಸೇರಿಕೊಂಡು ಹೇಳುತ್ತೇವೆ. ಅದರ ಬಗ್ಗೆ ನಾವು ಕಾಳಜಿಯನ್ನು ವಹಿಸಬೇಕೆನ್ನುವಂತಹ ನಿಲುವು ಈ ಸರ್ಕಾರದ್ದು ಎನ್ನುವುದನ್ನು ಆರೋಗ್ಯ ರಕ್ಷಣೆಯ ಬಗ್ಗೆ ಅದರಲ್ಲೂ ಕೊಳಚೆ ನಿವಾಸಿಗಳ ಬಗ್ಗೆ ಕಾಳಜಿಯನ್ನು ವಹಿಸಿರುವುದು ಮತ್ತು ಪ್ರಯೋಗಾಲಯಗಳ ತಂತ್ರಜ್ಞರ ಬಗ್ಗೆ ನೇಮಕ ಮಾಡಿಕೊಳ್ಳುವುದಕ್ಕೆ ಒಂದು ಹೊಸ ಚಾಲನೆಯನ್ನು ನೀಡಿರುವುದು ಹಾಗೆಯೇ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂತಹ ಈ ಎಲ್ಲಾ ವಿಚಾರಗಳನ್ನು ಮತ್ತೆ ಅದಕ್ಕೆ ಒಂದು ಕಾಯಕಲ್ಪ ಕೊಡುವುದಕ್ಕೆ ಹೊರಟಿದ್ದಾರೆ ಎನ್ನುವುದನ್ನು ನಮ್ಮ ಮುಖ್ಯಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲಿ ತೋರಿಸಿದ್ದಾರೆ.

ಇನ್ನು ತೋಟಗಾರಿಕಾ ಇಲಾಖೆಯ ಬಗ್ಗೆ ಹೇಳುವುದಾದರೆ ನಾನು 1994ನೇ ಇಸವಿಯಲ್ಲಿ ವಿಷಯ ಸಮಿತಿಯ ಅಧ್ಯಕ್ಷನಾಗಿದ್ದಾಗ ಅಂದಿನಿಂದ ಇಂದಿನವರೆಗೂ ಶೈತ್ಯಾಗಾರಗಳಿಗೆ ಹೊಸ ಆಯಾಮ ನೀಡಬೇಕು, ಕರ್ನಾಟಕ ರಾಜ್ಯದ ತೋಟಗಾರಿಕಾ ಬೆಳೆಗಳನ್ನು ಕಾದಿರಿಸುವುದಕ್ಕೋಸ್ಕರ ತಮಿಳುನಾಡಿಗೆ ಕಳುಹಿಸಿ ಅಲ್ಲಿ ಶೈತ್ಯಾಗಾರದಲ್ಲಿ ಕಾಯ್ದಿರಿಸಿ ಅಲ್ಲಿಂದ ಪುನಃ ವಾಪಸ್ಸು ಮಾರುಕಟ್ಟೆಗೆ ತರುವಂತಹ ಪರಿಸ್ಥಿತಿ ನಮ್ಮದಾಗಿದೆ. ಇಂತಹ ಸಂದರ್ಭದಲ್ಲಿ ಕನಿಷ್ಟ ನೂರು ಶೈತ್ಯಾಗಾರಗಳನ್ನು ಸ್ಥಾಪನೆ ಮಾಡಬೇಕೆಂದು ನಮ್ಮ ವಿಷಯ ಸಮಿತಿಯ ಶಿಫಾರಸ್ಸು ಆಗಿತ್ತು, ಅದಕ್ಕೆ ಈ ಮುಂಗಡ

ಪತ್ರದಲ್ಲಿ ನಾವು ಒಂದು ಹೊಸ ಆಯಾಮವನ್ನು ಕಾಣಬಹುದು, ಇವತ್ತು ತೋಟಗಾರಿಕಾ ಇಲಾಖೆಯು ಖಾಸಗಿ ವಲಯದಲ್ಲಿ ಸೇರಿಕೊಂಡು ನೂರು ಶೈತ್ಯಾಗಾರಗಳನ್ನು ಸ್ಥಾಪನೆ ಮಾಡಬೇಕೆನ್ನುವ ಒಂದು ದಿಟ್ಟ ನಿಲುವನ್ನು ಈ ಮುಂಗಡ ಪತ್ರದಲ್ಲಿ ನಾವು ಕಾಣುತ್ತಿದ್ದೇವೆ. ಇವತ್ತು ತೋಟಗಾರಿಕಾ ಕ್ಷೇತ್ರದಲ್ಲಿ ಸುಮಾರು 415 ತೋಟಗಾರಿಕಾ ಫಾರಂಗಳು ಇವೆ. ಅದಕ್ಕೆ ಒಂದು ಗತಿಗೋತ್ರ ಇಲ್ಲದೆ ಅದರಲ್ಲಿ ಬರತಕ್ಕಂಥ ಆದಾಯ ಮೂಲೆಗೆ ಸೇರಿಕೊಂಡು ಅನೇಕ ರೀತಿಯ ದುರ್ವ್ಯವಹಾರಗಳು ಆಗಿರುವಂತಾದ್ದನ್ನು ನಾವು ನಮ್ಮ ವಿಷಯ ಸಮಿತಿಯ ವರದಿಯಲ್ಲಿ ತೋರಿಸಿಕೊಟ್ಟಿದ್ದೇವೆ. ಅಂದಿನಿಂದ ಇವತ್ತಿನವರೆಗೂ ಬಂದಿರತಕ್ಕಂಥ ಮುಂಗಡಪತ್ರದಲ್ಲಿ ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು 415 ತೋಟಗಾರಿಕಾ ಫಾರಂಗಳನ್ನು ಅಭಿವೃದ್ಧಿಪಡಿಸಲು ಒಂದು ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸಿರುವುದು ಸ್ವಾಗತಾರ್ಹವಾದುದು ಎಂದು ಹೇಳುತ್ತೇನೆ.

ಇನ್ನು ಸಣ್ಣ ನೀರಾವರಿಯಲ್ಲಿ 'ಜಲಸಂವರ್ಧನ' ಎನ್ನುವಂತಹ ಕಾರ್ಯಕ್ರಮ, ಇದರಲ್ಲಿ 25 ಸಾವಿರ ಕೆರೆಗಳ ಹೂಳು ಎತ್ತುವ ಕಾರ್ಯಕ್ರಮವೂ ಇದೆ. ಇದಕ್ಕೆ ನಿರಂತರವಾದ ಚಿಂತನೆ ಬೇಕು. ಈ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನಿರಂತರ ಚಿಂತನೆ ಮಾಡಿಕೊಂಡು ನಾವು ಮುಂದೆ ಹೋಗುವಾಗ ನೋಡಬೇಕಾಗುತ್ತದೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ವಿಚಾರದಲ್ಲಿ ಜಲಸಂಪನ್ಮೂಲವನ್ನು ಹೆಚ್ಚು ಮಾಡುವ ಆಸಕ್ತಿ ಹೊಂದಿ ಸಣ್ಣ ನೀರಾವರಿ ಇಲಾಖೆಯ ಮೂಲಕ 'ಜಲಸಂವರ್ಧನೆ' ಎನ್ನುವಂತಹ ಕಾರ್ಯಕ್ರಮದೊಂದಿಗೆ 25 ಸಾವಿರ ಕೆರೆಗಳ ಹೂಳು ಎತ್ತುವ ಒಂದು ಕಾರ್ಯಕ್ರಮವನ್ನು ಪ್ರಾರಂಭಿಸಿರುವುದಕ್ಕೆ ಒಂದು ಚಾಲನೆಯನ್ನು ಕೊಟ್ಟಿದ್ದಾರೆ. ಇದೂ ಕೂಡ ಸ್ವಾಗತಾರ್ಹವಾದುದು. ಇವತ್ತು ಕರಾವಳಿಯುದ್ದಕ್ಕೂ ಸಮುದ್ರದ ಕೊರೆತ, ನಮಗೆ ಇದು ನಿತ್ಯದ ರೋಗ. ನಮ್ಮ ಜಿಲ್ಲೆಯ ಕರಾವಳಿ ಪ್ರದೇಶ ಸಮುದ್ರಕ್ಕೆ ಹೊಂದಿಕೊಂಡಂತೆ ಸುಮಾರು 500 ಕೋಟಿ ರೂಪಾಯಿಗಳ ಯೋಜನೆಯ ಬಗ್ಗೆ ನಾವು ಆಗಿನಿಂದಲೇ ಹೇಳುತ್ತಿದ್ದೆವು, ಕೇಂದ್ರ ಸರ್ಕಾರಕ್ಕೆ ನಾವು ಒಂದು ಪ್ರಸ್ತಾವನೆಯನ್ನು ಕಳುಹಿಸಿ ಅಲ್ಲಿಂದ ಮಂಜೂರಾತಿಯಾಗಿ ಬರಬೇಕೆನ್ನುವ ಒಂದು ಸಂಗತಿ, ಈಗ ಏನಾಗಿದೆ ಅಂದರೆ ಮಳೆ ಬರುತ್ತದೆ ಎನ್ನುವಂತಹ ಸಂದರ್ಭದಲ್ಲಿ ಕರಾವಳಿ ಪ್ರದೇಶದಲ್ಲಿ ಸಮುದ್ರದ ಕೊರೆತ ಪ್ರಾರಂಭವಾಗಿಬಿಡುತ್ತದೆ. ಒಂದು ಕಡೆಯಿಂದ ಸಮುದ್ರ ಕೊರೆತ ಇನ್ನೊಂದು ಕಡೆಯಿಂದ ನದಿ ಕೊರೆತ. ಈ ಮಧ್ಯೆ ಇರತಕ್ಕಂಥ ದ್ವೀಪ ಪ್ರದೇಶಗಳು ಸಣ್ಣ ಸಣ್ಣ ದ್ವೀಪಗಳಾಗಿ ಆ ಕಡೆಯಿಂದ ಕಡಲು ಈ ಕಡೆಯಿಂದ ನದಿ ಎರಡೂ ಸಮನ್ವಯವಾಗುವಂತಹ ಒಂದು ಪರಿಸ್ಥಿತಿ ಉದ್ಭವವಾಗುವಾಗ ಇವತ್ತು ಕಡಲ ಕೊರೆತಕ್ಕೆ ಪರಿಣಾಮಕಾರಿಯಾದ ಒಂದು ತಡೆಗೋಡೆಯ ನಿರ್ಮಾಣದ ಒಂದು ಯೋಜನೆಯ ಕಲ್ಪನೆ ಬೇಕೇ ಬೇಕು. ಆ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ನಾವು ಇವತ್ತಿನವರೆಗೂ ವಿಫಲರಾಗಿದ್ದೇವೆ. ಕೇರಳ ಸರ್ಕಾರದ ಮಾದರಿಯಲ್ಲಿ ನಾವು ಏನು ತಡೆಗೋಡೆಗಳನ್ನು ನಿರ್ಮಾಣ ಮಾಡಿದ್ದೇವೆ, ಆ ತಡೆಗೋಡೆಗಳ ನಿರ್ಮಾಣದ ಬಗ್ಗೆ ಕೂಡ ಒಂದು ಹೊಸ ಯೋಜನೆ ಮಾಡಬೇಕು, ಅದನ್ನು ಅನುಷ್ಠಾನಕ್ಕೆ ತರಬೇಕು. ಕರಾವಳಿಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು ಒಂದು ಹೊಸ ಯೋಜನೆಗೆ ಕಾಯಕಲ್ಪ ಕೊಡಲಾಗಿದೆ ಎನ್ನುವ ಒಂದು ಮಾತು ಮುಂಗಡಪತ್ರದಲ್ಲಿ ಬರಬೇಕು. "ಕರಾವಳಿಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು

ಒಂದು ಹೊಸ ಯೋಜನೆಗೆ ಕಾಯಕಲ್ಪ ಕೊಡಲಾಗಿದೆ"- ಎನ್ನುವ ಮುಂಗಡಪತ್ರದ ಆದ್ಯತೆ ಏನಿದೆ, ಇವೊತ್ತು ಕರಾವಳಿಯುದ್ದಕ್ಕೂ ಸಮುದ್ರದಲ್ಲಿರತಕ್ಕಂಥ ಮೀನುಗಾರರಿಗೆ ರಕ್ಷಣೆ ಕೊಡತಕ್ಕಂಥ ಒಂದು ಆಶ್ವಾಸನೆಯು ಈ ಮುಂಗಡ ಪತ್ರದಲ್ಲಿ ಇರುವುದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ.

ಇನ್ನು ರಾಜ್ಯದಾದ್ಯಂತ ವಸತಿ ನಿರ್ಮಾಣದ ಬಗ್ಗೆ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ಸ್ಥಾಪನೆ. ಬಹುಶಃ ಈ ನಿಗಮಕ್ಕೆ ರಾಜೀವ ಗಾಂಧಿಯವರ ಹೆಸರನ್ನು ಇಡುವದರ ಮೂಲಕ ರಾಜ್ಯದ ಜನತೆಗೆ ಒಂದು ಸಂದೇಶವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ರಾಜೀವ್ ಗಾಂಧಿಯವರ ಕಲ್ಪನೆ ಏನಿತ್ತು? 21ನೇ ಶತಮಾನಕ್ಕೆ ದೇಶದ ಜನರನ್ನು ಕೊಂಡೊಯ್ಯಬೇಕೆನ್ನುವ ಚಿಂತನೆಯು ಅವರಲ್ಲಿತ್ತು. ಅವರ ಕಲ್ಪನೆಗೆ ಒತ್ತು ಕೊಟ್ಟು ಅವರನ್ನು ಸ್ಮರಿಸುವ ಹಾಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವನ್ನು ಸ್ಥಾಪನೆ ಮಾಡಿ ಎರಡು ಲಕ್ಷ ಹೊಸ ಮನೆಗಳ ನಿರ್ಮಾಣದ ಬಗ್ಗೆ ಆಸಕ್ತಿ ವಹಿಸಿರುವುದು ಕೂಡ ಅತ್ಯಂತ ಶ್ಲಾಘನೀಯ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ.

ಕುಡಿಯುವ ನೀರಿನ ಸೌಲಭ್ಯಕ್ಕಾಗಿ ನಮ್ಮ ಸರಕಾರದವರು ಅದ್ಯತೆಯನ್ನು ಕೊಟ್ಟಿದ್ದಾರೆ. ಸುಮಾರು 321 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯು 47 ಪಟ್ಟಣ ಪ್ರದೇಶಗಳಿಗೆ ನಿಗದಿಪಡಿಸಿದ್ದು ಅದರ ಜೊತೆಗೆ ಚುನಾಯಿತ ಪ್ರತಿನಿಧಿಗಳಿಗೆ ಒಂದು ತರಬೇತಿ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಬಹುಶಃ ಈ ಚುನಾಯಿತ ಪ್ರತಿನಿಧಿಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ, ಗ್ರಾಮಪಂಚಾಯತ್ ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಮತ್ತು ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಬರತಕ್ಕಂಥ ಪ್ರತಿನಿಧಿಗಳಿಗೆ ಒಂದು ತರಬೇತು ಕಾರ್ಯಕ್ರಮದ ಅತ್ಯಾವಶ್ಯಕತೆಯು ಇದ್ದೇ ಇದೆ. ಅದು ಶಾಸಕರುಗಳಿಗೂ ಇದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಯಾವ ಯಾವ ಸಂದರ್ಭಗಳಲ್ಲಿ ಈ ಸದನವನ್ನು ಬಳಸಬೇಕು, ಯಾವ ಯಾವ ಸಂದರ್ಭಗಳಲ್ಲಿ ಗ್ರಾಮಪಂಚಾಯತ್‌ಗಳಲ್ಲಿ ಆಯ್ಕೆಯಾಗಿ ಬಂದಿರತಕ್ಕಂಥವರು ತಮ್ಮ ಕ್ಷೇತ್ರವನ್ನು ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಅಣಿಗೊಳಿಸಲು ಹೇಗೆ ತನ್ನನ್ನು ತಾನು ತೊಡಗಿಸಿಕೊಳ್ಳಬೇಕೆಂದು ಅರಿತುಕೊಳ್ಳುವ ಬಗ್ಗೆ ಈ ಕಾರ್ಯಕ್ರಮವು ಅತ್ಯಾವಶ್ಯಕವಾಗಿದ್ದು ಸರಕಾರವು ಅದರ ಬಗ್ಗೆ ಚಿಂತನೆ ನಡೆಸಿರುವುದು ಅಭಿನಂದನೀಯವಾಗಿದೆ. ಇವೊತ್ತು ಏನಾಗಿದೆ ಅಂದರೆ, ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಅವರಿಗೆ ಹೆಚ್ಚು ಈ ಕುರಿತು ಅನುಭವವಿರುವುದಿಲ್ಲ. ಅವರ ಶಕ್ತಿ ಏನು? ಹೇಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು? ಎಂಬಿತ್ಯಾದಿ ವಿಷಯಗಳು ಗೊತ್ತಿರುವುದಿಲ್ಲ. ಏನೇನೋ ಹೇಳಿ ಬಿಡುತ್ತಾರೆ. ಒಂದೊಂದು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳಿಗೆ ನಾವು ಹೋದಾಗ ಅವರ ಕಳಕಳಿಯನ್ನು ನಾವು ನೋಡುತ್ತೇವೆ. ಕೆಲವರು ಮೈಕ್ ಹಿಡಿದುಕೊಂಡು ಕುಳಿತರೆಂದರೆ ಬಿಡುವುದೇ ಇಲ್ಲ. ಯಾವ ಸಂದರ್ಭದಲ್ಲಿ ಯಾವ ವಿಷಯವನ್ನು ಯಾವ ರೀತಿಯಲ್ಲಿ ಪ್ರಸ್ತಾಪಿಸಬೇಕೆಂದು ಅವರಿಗೆ ಯಾವ ಮಾರ್ಗದರ್ಶನವೂ ಇಲ್ಲ. ಇವೊತ್ತು ನಾವು ಅವರಿಗೆ ಮೀಸಲಾತಿಯನ್ನು ಕೊಟ್ಟಿದ್ದೇವೆ.

ಮೀಸಲಾತಿಯನ್ನು ಕೊಟ್ಟು ಅಲ್ಲಿಂದ, ಇಲ್ಲಿಂದ ಅವರನ್ನು ಕರೆದುಕೊಂಡು ಬಂದು ಅವರನ್ನು ಚುನಾವಣಾ ಕಣದಲ್ಲಿ ನಿಲ್ಲಿಸುವಂಥ ಪರಿಸ್ಥಿತಿಯು ನಿರ್ಮಾಣವಾಗಿದೆ. ಇದು ಎಲ್ಲಾ ಪಕ್ಷದವರಿಗೂ ಅನ್ವಯವಾಗುತ್ತದೆ. ಒಂದು ಪಕ್ಷದವರು ಗ್ರಾಮಪಂಚಾಯತ್‌ಗೆ ಒಬ್ಬನನ್ನು ಎಳೆದುಕೊಂಡು ಬಂದು ನಿಲ್ಲಿಸಿದರೆ, ಇನ್ನೊಂದು ಪಕ್ಷದವರು ಮತ್ತೊಬ್ಬನನ್ನು ಎಳೆದುಕೊಂಡು ಬಂದು ನಿಲ್ಲಿಸುತ್ತಾರೆ. ಆದರೆ ಸ್ಪರ್ಧಿಸುವವನು ತಾನು ಏತಕ್ಕಾಗಿ ಸ್ಪರ್ಧಿಸುತ್ತಿದ್ದೇನೆ, ಚುನಾಯಿತನಾದ ಮೇಲೆ ಆ ವೇದಿಕೆಯಲ್ಲಿ ನಾನು ಯಾವ ರೀತಿಯಲ್ಲಿ ವರ್ತಿಸಬೇಕೆಂಬ ಬಗ್ಗೆ ಅವರಿಗೆ ಮಾರ್ಗದರ್ಶನವನ್ನು ಕೊಡುವಲ್ಲಿ ಇವೊತ್ತಿನವರೆಗೂ ಯಶಸ್ವಿಯಾಗಲಿಲ್ಲ. ನಾವು ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಮುಂತಾಗಿ ಬೇರೆ ಬೇರೆ ರೀತಿಯಲ್ಲಿ ಮೀಸಲಾತಿಯನ್ನು ಕೊಟ್ಟಿದ್ದೇವೆ. ಆದರೆ ಅವರಿಗೆ ತಮ್ಮ ಕಾರ್ಯವ್ಯಾಪ್ತಿಯ ಅರಿವನ್ನು ನಾವು ಕೊಟ್ಟಿಲ್ಲ. ಅಂಥವರು ಕೇವಲ ರಬ್ಬರ್ ಸ್ಟ್ಯಾಂಪ್‌ನ ಅಧ್ಯಕ್ಷರಾಗಬಾರದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ, ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗಗಳವರಿಗೆ ನಾವು ಮೀಸಲಾತಿಯನ್ನು ಕೊಟ್ಟು ಅಧ್ಯಕ್ಷರಾಗಿ ಆ ಸ್ಥಾನದಲ್ಲಿ ಕುಳಿರಿಸಿದಾಗ ಅವರನ್ನು ಬಿಟ್ಟು ಬೇರೆ ಯಾರೋ ಅಲ್ಲಿ ಆಡಳಿತವನ್ನು ನಡೆಸುವುದಾದರೆ ಆ ವ್ಯವಸ್ಥೆಯು ಪರಿಣಾಮಕಾರಿಯಾಗಿ ಆಗುವುದಿಲ್ಲ ಎನ್ನುವುದನ್ನು ಮನಗಂಡು, ಅಂಥ ಚುನಾಯಿತ ಪ್ರತಿನಿಧಿಗಳಿಗೆ ಯೋಗ್ಯವಾದಂಥ ತರಬೇತನ್ನು ಕೊಡುವಂಥ ಯೋಗ್ಯವಾದ ಉದ್ದೇಶವನ್ನು ಇಟ್ಟುಕೊಂಡು ನಮ್ಮ ಸರ್ಕಾರ ಆದ್ಯತೆಯನ್ನು ಕೊಟ್ಟು ತರಬೇತು ಕಾರ್ಯಕ್ರಮವನ್ನು ಯೋಚಿಸಿರುವುದು ಅತ್ಯಂತ ಶ್ಲಾಘನೀಯವಾದುದು ಎಂದು ನಾನು ಹೇಳಬಯಸುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮನೆ ನಿರ್ಮಾಣದ ಬಗ್ಗೆ 50 ಸಾವಿರ ಇದ್ದುದನ್ನು ಒಂದು ಲಕ್ಷದವರೆಗೆ ಕೊಂಡೊಯ್ದುದನ್ನು ಶ್ಲಾಘಿಸುತ್ತಾ, ಆ ವರ್ಗಗಳ ಬಗ್ಗೆ ಸರಕಾರದ ಕಳಕಳಿಯನ್ನು ವ್ಯಕ್ತಪಡಿಸಿ ಅವರುಗಳ ಗಮನವನ್ನು ಸೆಳೆದಿದ್ದಾರೆ ಎಂಬುದನ್ನು ನಾವು ಗಂಭೀರವಾಗಿ ಹೇಳಬಹುದು.

ಎಲ್ಲಕ್ಕಿಂತಲೂ ಮುಖ್ಯವಾಗಿ ಆಡಳಿತದಲ್ಲಿ ಪಾರದರ್ಶಕತೆಯ ವಿಚಾರ, ಹೊಸ ಆಯುಷ್ಕಾರದ ಪ್ರಯೋಗ, ಹೊಸ ಕಾರ್ಯಶೈಲಿ, ಇದು ಬಹಳ ಮುಖ್ಯವಾದುದು. ಇದು ಸದನದಲ್ಲಿ ಪ್ರಾರಂಭಗೊಂಡು, ಎಂ.ಎಸ್. ಬಿಲ್ಡಿಂಗ್‌ನಲ್ಲಿ ಸೇರಿಕೊಂಡು ಎಲ್ಲಾ ಹಂತಗಳಲ್ಲಿಯೂ ಆಡಳಿತದಲ್ಲಿ ನಾವು ಪಾರದರ್ಶಕತೆಯನ್ನು ತರಬೇಕಾಗಿದೆ. ಹೊಸ ಕಾರ್ಯ ವಿಧಾನವನ್ನು ನಾವು ತರಬೇಕಾಗಿದೆ. ಕಳೆದ ಹಲವಾರು ದಿನಗಳಿಂದ ನಾವು ಇಲ್ಲಿ ನೋಡುತ್ತಿದ್ದೇವೆ ನಮ್ಮ ಸಭೆಯ ಕಾರ್ಯವೈಖರಿಯನ್ನು ನಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವಲ್ಲಿ, ತಮ್ಮ ಇಲಾಖೆಯ ಸಿಬ್ಬಂದಿಗಳಿಗೂ ಸ್ವಲ್ಪ ತರಬೇತನ್ನು ಕೊಡುವುದು ಒಳ್ಳೆಯದೆಂದು ಕಾಣುತ್ತದೆ. ಇವೊತ್ತು ನಮಗೆ ಮಂತ್ರಿಗಳು ಕೊಡುವಂಥ ಉತ್ತರಗಳನ್ನು ನಮಗೆ ಈ ಸದನದಲ್ಲಿ ಒದಗಿಸಿಕೊಡಲು ತಮ್ಮದ್ದೇ ಆದಂಥ ಇಲಾಖೆಯಿದೆ. ತಮ್ಮ ಕಾರ್ಯದರ್ಶಿಗಳೇ ಅದಕ್ಕೆ ಜವಾಬ್ದಾರರು. ಆ ಕಾರ್ಯದರ್ಶಿಗಳು ಸರಿಯಾಗಿ ಕೆಲಸ ಮಾಡಿ, ಇವೊತ್ತು ಯಾವ ಯಾವ ಪ್ರಶ್ನೆಗಳನ್ನು ಸದನದಲ್ಲಿ ಮಂಡಿಸಬೇಕು, ಯಾವ ವಿಷಯಗಳನ್ನು ಮಂಡಿಸುತ್ತಾ ಇದ್ದಾರೆ, ಯಾವ ಪ್ರತಿಗಳನ್ನು ನಮಗೆ ಕೊಡಬೇಕೆಂಬ ಬಗ್ಗೆ ನಮ್ಮ ಲೆಜಿಸ್ಲೇಚರ್ ಡಿಪಾರ್ಟ್‌ಮೆಂಟ್‌ಗೆ ಕೂಡ, ಜವಾಬ್ದಾರಿ ಹೊಂದಿರತಕ್ಕಂಥ ಸಿಬ್ಬಂದಿಗಳಿಗೂ ಕೂಡ ನಾವು ತರಬೇತನ್ನು

ಕೊಡಬೇಕಾಗುತ್ತದೆ. ಇವೊತ್ತು ಮಂತ್ರಿಗಳು ಸಹಿ ಹಾಕಿ ಕೊಟ್ಟಿರತಕ್ಕಂಥ ಪ್ರಶ್ನೆಗಳ ಉತ್ತರಗಳು ನಮಗೆ ಸದನದಲ್ಲಿ ಸರಿಯಾಗಿ ಸಿಗುವುದಿಲ್ಲ ಅಂದರೆ ಅದರ ಪರಿಣಾಮಗಳೇನು? ಇವೊತ್ತು ನಾವು ಇಲ್ಲಿ ತೆಗೆದುಕೊಳ್ಳತಕ್ಕಂಥ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಆ ಜವಾಬ್ದಾರಿಯಾಗಿರುತ್ತದೆ? ಎಂ.ಎಸ್. ಬಿಲ್ಡಿಂಗ್‌ನಲ್ಲಿರತಕ್ಕಂಥ ಇಲಾಖಾ ಕಾರ್ಯದರ್ಶಿಗಳ ಜವಾಬ್ದಾರಿ ಏನು? ಅವರು ಕೇವಲ ಇಲ್ಲಿ ಬಂದು ಭಾಷಣ ಕೇಳಿ ಹೋಗುವುದು ಮಾತ್ರವಲ್ಲ, ಇಲ್ಲಿ ಸದನದಲ್ಲಿ ಒಬ್ಬೊಬ್ಬ ಸದಸ್ಯರೂ ವ್ಯಕ್ತಪಡಿಸುವ ತಮ್ಮ ಜನತೆಯ ಕುರಿತಾದ ನೋವು ನಲಿವುಗಳು ಏನಿವೆ, ಅವುಗಳನ್ನು ಮನಗಂಡು, ಇದು ಯಾಕೆ ಹೀಗಾಗುತ್ತಿದೆ ಎಂಬ ಬಗ್ಗೆ ಸ್ಪಂದಿಸಿ ಅದನ್ನು ಕಾರ್ಯರೂಪಕ್ಕೆ ತರುವಲ್ಲಿಯೂ ಕೂಡ ಬಹುಮಹಡಿಯ ಕಟ್ಟಡದ ಕಾರ್ಯದರ್ಶಿಗಳು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಆಡಳಿತದಲ್ಲಿ ಪಾರದರ್ಶಕತೆ, ಎಂ.ಎಸ್. ಬಿಲ್ಡಿಂಗ್‌ನಲ್ಲಿ" ತಾವುಗಳು 38ನೇ ಪೇಜ್‌ನಲ್ಲಿ ಅದನ್ನು ಗಮನಿಸಬಹುದು". "ನಾನು ಎಲ್ಲಾ ಸರಕಾರಿ ಕಾರ್ಯಾಲಯಗಳಲ್ಲಿ ಹೊಸ ಕಾರ್ಯಶೈಲಿಯನ್ನು ಜಾರಿಗೆ ತರಲು ನಿರ್ಧರಿಸಿದ್ದೇನೆ. ಒಂದು ಕಡತವು ಅಂತಿಮವಾಗಿ ತೀರ್ಮಾನವಾಗಬೇಕಾದರೆ ಅದು ನಾಗರೀಕರ ಕೈಗೆ ತಲುಪಬೇಕಾದರೆ 15ರಿಂದ 25 ಹಂತಗಳನ್ನು ದಾಟಬೇಕು ಎಂದು ಹೇಳುವ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಮುಂಗಡಪತ್ರದ ಪ್ರಸ್ತಾವನೆಯಲ್ಲಿ ತಂದಿದ್ದಾರೆ ಎನ್ನುವುದಾದರೆ ಅವರ ಕಳಕಳಿಯನ್ನು ನಾವು ಪ್ರಶಂಶಿಸಬೇಕು. ಬಹು ಮಹಡಿಗಳ ಕಟ್ಟಡದಲ್ಲಿ ಒಬ್ಬ ಟೈಪಿಸ್ಟ್ ಸರಿಯಾಗಿ ಕೆಲಸ ಮಾಡುತ್ತಿದ್ದಾನೆ ಅಂದರೆ ಅವನಿಗೆ ಸರಿಯಾಗಿ ಹಣ ತಲುಪಿದೆ ಎನ್ನುವಂಥ ಪರಿಸ್ಥಿತಿಯಲ್ಲಿ ಅದನ್ನು ಮುಖ್ಯಮಂತ್ರಿಯವರು ಮನಗಂಡಿದ್ದಾರೆ. ಅದಕ್ಕಾಗಿ ಹೊಸ ಶೈಲಿಯನ್ನು ಕಾರ್ಯಗತಗೊಳಿಸಬೇಕು, ಹೀಗೆ ವಿಳಂಬವಾಗುತ್ತಿರುವ ಕಡತಗಳ ಶೀಘ್ರ ವಿಲೇವಾರಿಗಾಗಿ ಹೊಸ ಶೈಲಿಯ ಮೂಲಕ ಸಮಯ ನಿಗದಿತ ಕಾರ್ಯಕ್ರಮವನ್ನು ಮುಂಗಡ ಪತ್ರದಲ್ಲಿ ಹಾಕಿಕೊಂಡಿರುವುದಕ್ಕೆ ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಬಹು ಮಹಡಿಗಳ ಕಟ್ಟಡದಲ್ಲಿ ಆಗತಕ್ಕಂಥ ಕಾರ್ಯನಿರ್ವಹಣೆಯಲ್ಲಿ ಕಟ್ಟುನಿಟ್ಟಿನ ವಿಶಿಷ್ಟವಾದ ಹೊಸ ಕಾರ್ಯಕ್ರಮವನ್ನು ರೂಪಿಸಿ ವಿಳಂಬವಾಗದಂತೆ ನೋಡಿಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ನಾವು ವಿರೋಧಿ ಪಕ್ಷದಲ್ಲಿದ್ದು ಕೆಲಸವನ್ನು ಮಾಡಿದ್ದೇವೆ. ನಮ್ಮ ವಿರೋಧಪಕ್ಷಗಳ ಟೀಕಾ ಪ್ರಹಾರಗಳು ಕೇವಲ ಚರ್ವಿತ ಚರ್ವಣ ಆಗಬಾರದು. ಕೇವಲ ಸಾಂಪ್ರದಾಯಿಕವಾಗಿ ವಿರೋಧಕ್ಕಾಗಿ ವಿರೋಧ ಎಂಬ ರೀತಿಯಲ್ಲಿ ವಿರೋಧ ಆಗಬಾರದು. ಮೊಸರಿನಲ್ಲಿ ಕಲ್ಲು ಹುಡುಕುವಂಥ ಪ್ರಯತ್ನ ವಿರೋಧಪಕ್ಷಗಳಿಂದ ಆಗಬಾರದು. ಇವೊತ್ತು ಅತ್ಯಂತ ಚಾಕಚಕ್ಯತೆಯಿಂದ ಮತ್ತು ನಿರ್ದಾಕ್ಷಿಣ್ಯದಿಂದ ಯಾವುದೇ ಲಾಬಿಗೆ ಮಣಿಯದೆ ಒಂದು ಹೊಸ ಆವಿಷ್ಕಾರವನ್ನು ಆಡಳಿತದಲ್ಲಿ ತರಬೇಕೆಂಬ ಛಲದಿಂದ ಹೊಸ ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವಲ್ಲಿ ಕೂಡ ವಿರೋಧಪಕ್ಷಗಳು ಮುಖ್ಯಮಂತ್ರಿಗಳಿಗೆ ಸಲಹೆ - ಸೂಚನೆಗಳನ್ನು ಕೊಡಬೇಕು ಎಂಬುದು ನನ್ನ ವಾದವಾಗಿದೆ. ಈ ನನ್ನ ವಾದವನ್ನು ಪುಷ್ಟೀಕರಣಗೊಳಿಸುವಂತೆ ಆಡಳಿತದ ಖುರ್ಚಿಯಲ್ಲಿ ಕುಳಿತಿರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರು ವಿರೋಧಪಕ್ಷದವರು ಎತ್ತಿರತಕ್ಕಂಥ ಪ್ರತಿಯೊಂದು ವಾದವಿವಾದಗಳಿಗೆ ತನ್ನನ್ನು ತಾನು ಸ್ಪಂದಿಸಿಕೊಳ್ಳುತ್ತಾ

ಬಂದಿದ್ದಾರೆ. ತಾನು ಕೊಟ್ಟ ಹೇಳಿಕೆಯಲ್ಲಿ ಎಲ್ಲಿಯಾದರೂ ಸೂಕ್ಷ್ಮವಾಗಿ ತಪ್ಪಾಗಿ ಹೋಗಿದೆ ಎಂದು ಕಂಡು ಬಂದಾಗ ಕೂಡಲೇ ಅದಕ್ಕೆ ಸ್ಪಂದಿಸಿ ಉತ್ತರ ಕೊಡುವುದನ್ನು ನಾವು ನೋಡಿದ್ದೇವೆ. ಇದು ಅವರ ದೊಡ್ಡ ಮನಸ್ಸು ಮತ್ತು ದೊಡ್ಡ ಗುಣವಾಗಿದೆ. ಮುಖ್ಯಮಂತ್ರಿಯಾಗಿ ಅವರ ವರ್ತನೆಯು ಶ್ಲಾಘನೀಯವಾಗಿದೆ. ಇವೊತ್ತು ಮಾನ್ಯ ಬೈರೇಗೌಡರು ಪ್ರಸ್ತಾಪಿಸಿದಂತೆ ಅವರು ಸ್ಪಂಧಿಸಿದಾಗ ಎಲ್ಲೋ ಒಂದು ಕೊರತೆ ಕಂಡು ಬಂದ ಕೂಡಲೇ ಎದ್ದು ನಿಂತು ಆ ವಿಚಾರಧಾರೆಯನ್ನು ವಾಪಸ್ ಪಡೆದಿದ್ದೇನೆ ಎಂದು ಹೇಳುವ ಅವರ ಗುಣ, ಒಂದು ತಪ್ಪು ಎಂದು ಕಂಡು ಬಂದಾಗ ಅದನ್ನು ತಪ್ಪು ಆಗಿದೆ ಎಂದು ತಿದ್ದುಕೊಳ್ಳುವಂಥ ಒಂದು ದೊಡ್ಡ ಔದಾರ್ಯದ ಗುಣ ಅವರಲ್ಲಿದೆ. ಯಾವುದೇ ಒಂದು ಸಂದರ್ಭದಲ್ಲಿ ಒಂದು ಕಠಿಣ ನಿರ್ಧಾರಗಳನ್ನು ನಿರ್ಧರಿಸುವಾಗ ವಿರೋಧ ಪಕ್ಷದವರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ ಎನ್ನುವಂಥ ಮಾತು ನಮ್ಮ ಹಿಂದಿನ ಮುಖ್ಯಮಂತ್ರಿಗಳಲ್ಲಿ ಇರಲಿಲ್ಲ. ನಾವು ಸದನದಲ್ಲಿದ್ದಾಗ ಇಂಥ ಗುಣವರ್ತನೆಯನ್ನು ನಾವು ನೋಡಲಿಲ್ಲ. ಅವರು 'ನೀವು ಮಾಡುವುದನ್ನು ಮಾಡಿ, ನಾವು ನೋಡುವುದನ್ನು ನೋಡುತ್ತೇವೆ' ಎಂದು ಹೇಳಿದ್ದನ್ನು ನಾವು ಎಷ್ಟೋ ಸಾರಿ ನೋಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ನಾವು ಬಹಳಷ್ಟು ಗಲಾಟೆ ಮಾಡಿದಾಗ ಆಗಿನ ಮುಖ್ಯಮಂತ್ರಿಗಳು ನೀವು ಮಾಡುವುದು ಮಾಡಿ, ನಾವು ಮಾಡುವುದು ಮಾಡುತ್ತೇವೆ ಎಂದು ಹೇಳಿಕೊಂಡು ಹೋಗಿದ್ದಾರೆ ವಿನಹ ಸಂಬಂಧಪಟ್ಟವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿಮ್ಮನ್ನು ನಮ್ಮ ಜೊತೆಗೆ ಸೇರಿಸಿಕೊಂಡು ಹೋಗುತ್ತೇವೆ ಎಂಬ ಮಾತನ್ನು ಯಾರೂ ಹೇಳಿರಲಿಲ್ಲ. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ಆ ಒಂದು ಔದಾರ್ಯವು ಇರುವುದನ್ನು ನಾವೆಲ್ಲರೂ ಶ್ಲಾಘಿಸಲೇಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಕೂಡ ಮಾನ್ಯ ಮುಖ್ಯಮಂತ್ರಿಗಳನ್ನು ನಿಮ್ಮ ಜೊತೆಯಲ್ಲಿ ಅಭಿನಂದಿಸುತ್ತೇನೆ. ವಿರೋಧಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದರಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಎಲ್ಲಾ ವಿರೋಧಪಕ್ಷಗಳಿಂದಲೂ ಸದಸ್ಯರುಗಳನ್ನು ನಿಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುತ್ತಾ ಇದ್ದಾರೆ. ಅದಕ್ಕೋಸ್ಕರ ನಾನು ಅವರನ್ನು ಅಭಿನಂದಿಸುತ್ತೇನೆ.

(ನಗು)

ಶ್ರೀ ಯು.ಆರ್. ಸಭಾಪತಿ : ನೀವು ಅವರನ್ನು ಅಭಿನಂದಿಸಿ ಅವರ ಕಡೆಗೆ ಬರುವುದಾದರೆ ಅವರು ನಿಮ್ಮನ್ನು ಸ್ವಾಗತಿಸುತ್ತಾರೆ. ಅಂತೂ ಇಂತು ಮುಂಗಡಪತ್ರದಲ್ಲಿ ಸ್ತ್ರೀಶಕ್ತಿ ಸುರಕ್ಷಾ ಹೆಂಗೆ, ರೈತಮಿತ್ರ, ಜಲಸಂವರ್ಧನೆ ಹಾಗೂ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ, ಮತ್ಸ್ಯಗ್ರಾಮ, ಯುವ ಡಾಟ್ ಕಾಮ್, ಸಾರ್ವಜನಿಕ ಉದ್ಯಮ ಸುಧಾರಣಾ ಆಯೋಗ, ಕರ್ನಾಟಕ ರೈಲು ಅಭಿವೃದ್ಧಿ ನಿಗಮ, ಕರಸಮಾಧಾನ - ಎಲ್ಲಾ ವಲಯಗಳಲ್ಲೂ ಮುಂಗಡ ಪತ್ರದಲ್ಲಿ ಆದ್ಯತೆಯನ್ನು ಕೊಟ್ಟು ಸಂಪನ್ಮೂಲ ಕ್ರೋಢೀಕರಣಕ್ಕೂ ಆದ್ಯತೆ ಕೊಟ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೂ ಆದ್ಯತೆ ಕೊಟ್ಟು ಚುನಾಯಿತ ಪ್ರತಿನಿಧಿಗಳಾದ ನಾವೇನು ಅಲ್ಲಿ ಆಶ್ವಾಸನೆ ಕೊಟ್ಟು ಬರುತ್ತೇವೆ ನೋಡಿ ಈ ಆಶ್ವಾಸನೆಗಳನ್ನು ಕಾರ್ಯಗತಗೊಳಿಸಬೇಕು, ಚುನಾಯಿತ ಪ್ರತಿನಿಧಿಗಳಾಗಿ ನಾವು ಕೆಲಸ ನಿರ್ವಹಿಸುವಲ್ಲಿ

ಯಶಸ್ಸನ್ನು ಕಾಣಬೇಕು ಎನ್ನುವ ಪ್ರಯತ್ನದಲ್ಲಿ ಅವರು ಒಂದು ಹೆಜ್ಜೆ ಮುಂದಿಟ್ಟು ಶಾಸಕರಿಗೆ ಒಂದು ಪ್ರತ್ಯೇಕ ನಿಧಿ ಸ್ಥಾಪನೆಗೂ ಕೂಡ ಪ್ರಯತ್ನಿಸಿದ್ದಾರೆ. ಎಲ್ಲ ಸಂಕಷ್ಟಗಳ ಮಧ್ಯೆ 2000-2001ರ ವಾರ್ಷಿಕ ಯೋಜನಾ ವೆಚ್ಚವನ್ನು 7274 ಕೋಟಿ ರೂಪಾಯಿಗಳಿಗೆ ನಿಗದಿಗೊಳಿಸಿ ಸಾಹಸದ ಕೆಲಸಕ್ಕೆ ಹೊಂದಿಕೊಂಡು ಹೋಗಿದ್ದಾರೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಇದು ಅಷ್ಟು ಸುಲಭವಾಗಿ, ಒಬ್ಬ ಮುಖ್ಯಮಂತ್ರಿಯಾಗಿ ಬಂದ ತಕ್ಷಣ ಅಧಿಕಾರಿಗಳನ್ನು ಸಮನ್ವಯಗೊಳಿಸಿ ವಿರೋಧಪಕ್ಷಗಳ ಅಹವಾಲುಗಳನ್ನೂ ಸೇರಿಸಿಕೊಂಡು, ಚುನಾವಣಾ ಪ್ರಣಾಳಿಕೆ ಬಗ್ಗೆ ಮಾನ್ಯ ಶ್ರೀನಿವಾಸಗೌಡರು ಹೇಳಿದರು, ಚುನಾವಣೆಗೆ ಸ್ಪರ್ಧಿಸಿದಾಗ ಎಲ್ಲ ಪಕ್ಷಗಳೂ ಪ್ರಣಾಳಿಕೆ ತರುತ್ತವೆ. ಆದರೆ ಆ ಪ್ರಣಾಳಿಕೆಯಲ್ಲಿನ ಮುಖ್ಯ ಅಂಶಗಳು ನಮ್ಮ ಐದು ವರ್ಷ ಕಾಲಗಳ ಆಶ್ವಾಸನೆಗಳು, ಬದಲಿಗೆ ಆ ಅಂಶಗಳನ್ನೆಲ್ಲ ಒಂದೇ ವರ್ಷದ ಕಾರ್ಯಕ್ರಮದಡಿ ಅನುಷ್ಠಾನಕ್ಕೆ ತರಲಿಕ್ಕೆ ಆಗುವುದೇ ಇಲ್ಲ. ಅದಕ್ಕಾಗಿ ಇಡೀ ಪ್ರಣಾಳಿಕೆ ಓದಿ, 'ನೀವು ಅದನ್ನು ತರಲಿಲ್ಲ,' ಇದನ್ನು ತರಲಿಲ್ಲ ಎಂದು ಹೇಳುವ ಮಾತು ಸರಿಯಲ್ಲ. ತನ್ನ ಪ್ರಣಾಳಿಕೆ ಮೂಲಕ ಕರ್ನಾಟಕದ ಜನಸಾಮಾನ್ಯರಿಗೆ ಕಾಂಗ್ರೆಸ್ ಪಕ್ಷ ಯಾವ ರೀತಿಯ ಮಾತನ್ನು ನೀಡಿದೆ, ಪ್ರಣಾಳಿಕೆಯಲ್ಲಿರುವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸುವಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಯಾವ ರೀತಿ ಆದ್ಯತೆ ನೀಡಿದೆಯೋ ಆ ಆದ್ಯತೆಗೆ ಅನುಗುಣವಾಗಿ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಸ್ಪಂದಿಸಿದ್ದಾರೆ ಎನ್ನುವುದು 2000-2001ರ ಆಯವ್ಯಯದ ಒಟ್ಟು ಸಾರಾಂಶ ಎನ್ನುವ ಮಾತಿನೊಂದಿಗೆ, ಇದರಲ್ಲಿನ ಕೆಲವು ಲೋಪದೋಷಗಳ ಬಗ್ಗೆ ನಾನು ಹೇಳಿದ್ದೇನೆ. ಅದರಲ್ಲಿ ಒಂದು, ಪರಿಸರ ಇಲಾಖೆ ಬಗ್ಗೆ ನಾನು ಮಂಡಿಸಲಿಲ್ಲ. ಆ ಇಲಾಖೆ ಬಗ್ಗೆ ಈ ಮುಂಗಡಪತ್ರದಲ್ಲಿ ಹೆಚ್ಚು ಒತ್ತನ್ನು ಕೊಡಬೇಕಾಗಿತ್ತು. ಇವತ್ತು ಪರಿಸರ ಇಲಾಖೆ ಪ್ರಾಮಾಣಿಕವಾಗಿ ದಿಟ್ಟತನದಲ್ಲಿ ಕೆಲಸ ಮಾಡುವಂತಹ ಪರಿಸ್ಥಿತಿಯ ನಿರ್ಮಾಣ ಸರ್ಕಾರದಿಂದ ಆಗಬೇಕಾಗಿದೆ. ನಾವು ಬಹುರಾಷ್ಟ್ರೀಯ ಕಂಪನಿಗಳನ್ನು ಸ್ವಾಗತಿಸಿಯಾಗಿದೆ. ಅವು ಬಂದಾಗ ನಾವು ಸಾವಿರ ಸಾವಿರ ಎಕರೆ ಪ್ರದೇಶಗಳನ್ನು ಕೊಡಲಿಕ್ಕೆ ಮುಂದೆ ಹೋಗುತ್ತೇವೆ. ಯಾಕೆ? ನಮಗೆ ವಿದ್ಯುತ್ ಬೇಕು, ಉದ್ಯೋಗ ಬೇಕು ಅಂತ. ಆದರೆ ಬೃಹತ್ ಕೈಗಾರಿಕೆಗಳು, ಬಹು ರಾಷ್ಟ್ರೀಯ ಕಂಪನಿಗಳು ನಮ್ಮ ರಾಜ್ಯಕ್ಕೆ ಬಂದು ನಮ್ಮ ರಾಜ್ಯದಲ್ಲಿನ ಮೂಲಭೂತ ಕೈಗಾರಿಕೆಗಳಿಗೆ ಧಕ್ಕೆ ತರುವುದಾದರೆ ಅದರಿಂದ ಸರ್ವಥಾ ಅಭಿವೃದ್ಧಿಯಾಗುವುದಿಲ್ಲ. ಈ ದೃಷ್ಟಿಯಲ್ಲಿ ಇವತ್ತು ಎಲ್ಲಿ ಗೃಹಕೈಗಾರಿಕೆಗಳು ಸ್ಥಾಪಿತವಾಗಿವೆಯೋ ಅಲ್ಲಲ್ಲಿ ಅವುಗಳಿಂದ ಪರಿಸರಕ್ಕೆ ಆಗುವ ಕೊಡಲಿ ಏಟಿನ ಬಗ್ಗೆ ನಿರ್ದಾಕ್ಷಿಣ್ಯವಾದ ಕಟ್ಟುನಿಟ್ಟಿನ ಕ್ರಮ ತರುವಲ್ಲಿ ಪರಿಸರ ಇಲಾಖೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಅನ್ನುವುದು ನನ್ನ ವಾದ. ಅದು ಜನಮಾಲಿನ್ಯ ಇರಬಹುದು, ವಾಯುಮಾಲಿನ್ಯ ಇರಬಹುದು ಇವತ್ತು ಕರಾವಳಿಯುದ್ದಕ್ಕೂ ಮೂರುಲಕ್ಷ ಜನ ಉದ್ದಿಮೆಯಲ್ಲಿರುವ ಈ ಮೀನುಗಾರಿಕೆ ಉದ್ದಿಮೆಗೆ ಬೃಹತ್ ಕೈಗಾರಿಕೆಗಳು ಬಂದು ಎಷ್ಟು ದೊಡ್ಡ ಪೆಟ್ಟು ಆಘಾತ ನೀಡಿವೆ. ಈ ಬೃಹತ್ ಕೈಗಾರಿಕೆ ಮತ್ತು ಮೀನುಗಾರಿಕೆ ಉದ್ದಿಮೆ ಇವುಗಳ ಮಧ್ಯೆ ಇರುವ ಪರಿಸರ ಇಲಾಖೆ ಏನು ಮಾಡುತ್ತಿದೆ? ಅಂಥ ಇಲಾಖೆಗೆ ಎಂಥ ಒತ್ತು ನಾವು ಕೊಡಬೇಕಾಗಿದೆಯೋ ಅದನ್ನು ಯಾವ ಸರ್ಕಾರವೂ ಇದುವರೆಗೆ ಕೊಟ್ಟಿಲ್ಲ.

ಆದರಿಂದಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ವಿನಂತಿಸುವುದೇನೆಂದರೆ ಪರಿಸರ ಇಲಾಖೆಗೆ ಹೆಚ್ಚು ಅನುದಾನ ನೀಡಿ ಆ ಮೂಲಕ ಕಟ್ಟುನಿಟ್ಟಿನ ಕ್ರಮ ತರುವಲ್ಲಿ ಪರಿಣಾಮ ಬೀರಬೇಕೆಂಬ ಮಾತಿನೊಂದಿಗೆ, ಒಟ್ಟಿನಲ್ಲಿ 2000-2001ರ ಯಾವ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ ಇದರಲ್ಲಿ ಒಂದು ನಿರ್ದಿಷ್ಟ ಧೋರಣೆ, ಹೊಸ ಶತಮಾನದ ಸಂದೇಶ, ಹೊಸ ಸಹಸ್ರಮಾನದಲ್ಲಿ ಈ ರಾಜ್ಯದ ಜನತೆಗೆ 50 ವರ್ಷಗಳ ದೂರದೃಷ್ಟಿಯಿಟ್ಟುಕೊಂಡು ಯಾವ ಕಾಯಕಲ್ಪ ಆರಂಭಿಸಬೇಕೆಂದು ಮುಖ್ಯಮಂತ್ರಿಗಳು ಹೊರಟಿದ್ದಾರೆ ಎಂದು ಹೇಳುತ್ತಾ ಆಯವ್ಯಯವನ್ನು ಬೆಂಬಲಿಸಿ ನನಗೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ಕೃತಜ್ಞತೆ ಸಲ್ಲಿಸುತ್ತ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಮಂಡಿಸಿರುವ ಬಜೆಟ್ ಪ್ರಸ್ತಾವನೆಯನ್ನು ನಾನು ಸ್ವಾಗತಿಸುತ್ತಾ ಯಾವುದೇ ಬಜೆಟ್ ಮಾಡುವ ಸಂದರ್ಭದಲ್ಲಿ ......

whether this budget is need based or resource based? ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ. ಇವತ್ತು ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ಕೃಷ್ಣ ಅವರು ಇದು ಕೇವಲ ನೀಡ್ ಬೇಸ್ಡ್ ಅಲ್ಲ, ಕೇವಲ ರಿಸೋರ್ಸಸ್ ಬೇಸ್ಡಲ್ಲ - ಎರಡನ್ನೂ ಕಾಂಬಿನೇಷನ್ ಮಾಡಿ ಬಜೆಟನ್ನು ಎಕ್ಸ್‌ಸೈಜ್ ಮಾಡಿ ಇಲ್ಲಿ ಇಟ್ಟಿದ್ದಾರೆ. ಕನ್ನಡದಲ್ಲಿ ಒಂದು ಗಾದೆ ಇದೆ, ಹಾಸಿಗೆ ಇದ್ದಷ್ಟು ಕಾಲು ಚಾಚು ಅಂತ. ವಿರೋಧ ಪಕ್ಷದ ಅನೇಕ ಸ್ನೇಹಿತರು ಅವರು ಕೂಡ ಒಂದು ಕಾಲದಲ್ಲಿ ಈ ಬಡ್ಜೆಟ್ ಎಕ್ಸ್‌ಸೈಜ್ ಮಾಡಿದ್ದಾರೆ. ಹಾಗೆ ಮಾಡಬೇಕಾದಾಗ ಅವರಿಗೂ ಕೆಲವು ಅನುಭವಗಳಾಗಿವೆ. ಏನು ಅದು ಎಂಬ ಮಾತು ಬಜೆಟ್‌ನಲ್ಲಿ ಅಡಕವಾಗುವಂಥ ಅಂಶಗಳು ಬೇಸಿಕಾಗಿ, ರೂಲಿಂಗ್ ಪಾರ್ಟಿ ಇರಬಹುದು, ಅಪೋಜಿಶನ್ ಇರಬಹುದು - ಒಂದೇನೇ ಅದು. ನಮ್ಮ ಬಜೆಟ್‌ನಲ್ಲಿರುವ ಅಂಕಿಗಳನ್ನು ತಾವು ನೋಡಿದರೆ ಗೊತ್ತಾಗುತ್ತದೆ ನಮಗಿರುವ ಆದಾಯದಲ್ಲಿ ಸುಮಾರು 60 ರಿಂದ 70 ಭಾಗ ಅನ್‌ಪ್ರೊಡಕ್ಟೀವ್ ಸರ್ಕಾರ ನೌಕರರ ಸಂಬಳವನ್ನು ಕೊಟ್ಟೇ ಕೊಡಬೇಕು. ವಿರೋಧ ಪಕ್ಷ ಇದ್ದಾಗಲೂ ಕೊಟ್ಟಿದ್ದಾರೆ ನಾವಿದ್ದಾಗಲೂ ಕೂಡಲೇಬೇಕು. ಪೆನ್‌ಶನ್ ಕೊಡಬೇಕು. ಇದೆಲ್ಲ ಕಮಿಟ್‌ಮೆಂಟ್ಸ್ ಇದೆ. ಇನ್ನು ಕೆಲವು ಯೋಜನೇತರ ವೆಚ್ಚಗಳಿವೆ. ಇವನ್ನೆಲ್ಲ ತಪ್ಪಿಸಲು ಬರುವುದೇ ಇಲ್ಲ. ಬೇಸಿಕಾಗಿ ಇನ್‌ವಾಲ್ವ್ ಮಾಡಲೇಬೇಕಾಗುತ್ತದೆ. ಇದೆಲ್ಲದರ ಮಧ್ಯೆ ಎಷ್ಟರಮಟ್ಟಿಗೆ ಇದನ್ನು ಬ್ಯಾಲೆನ್ಸ್ ಮಾಡುತ್ತೇವೆ ಎಂಬ ಬಗ್ಗೆ ನಾವು ಪ್ರಶ್ನೆ ಹಾಕಿಕೊಳ್ಳಬೇಕಾಗುತ್ತದೆ. ಹಾಗೆ ನೋಡಿದಾಗ ಈ ಬಜೆಟ್, it involves two principles - need based and resource based, ಎಂಬುದು ಈ ಅಂಕಿ ನೋಡಿದರೆ ಯಾರಿಗಾದರೂ ಗೊತ್ತಾಗುತ್ತದೆ ಎಂಬುದನ್ನು ನಾನಾದರೂ ಮನವರಿಕೆ ಮಾಡಿಕೊಡಲಿಕ್ಕೆ ಇಚ್ಛೆಪಡುತ್ತೇನೆ.

3.10 ಪಿ.ಎಂ.

21ನೇ ಶತಮಾನದ ಪ್ರಥಮ ಬಜೆಟನ್ನು ಏನು ಪ್ರೆಸೆಂಟ್ ಮಾಡಿದ್ದಾರೆ, ಬಹುಶಃ ಈ ಶತಮಾನದ ಕಾಂಗ್ರೆಸ್‌ನ ಪ್ರಥಮ ಬಜೆಟ್. ಮುಂದಿನ ಶತಮಾನ ಕೂಡ ಆಶಾದಾಯಕವಾಗಿರಲಿ

ಎಂದು ಒಂದು ಭಾವನೆಯಿಂದ ಇವತ್ತು ನಾವು ಅದನ್ನು ಸ್ವಾಗತ ಮಾಡುತ್ತಾ ಅನೇಕ ಸಾಮಾಜಿಕವಾದ ಬದಲಾವಣೆಗಳನ್ನು ತರಲಿಕ್ಕೆ ಹಳತು ಮತ್ತು ಹೊಸದು ಎರಡನ್ನು ಸೇರಿಸಿ ಬಜೆಟನ್ನು ಇಲ್ಲಿ ಮಂಡನೆ ಮಾಡಲಾಗಿದೆ. ಪೂರ್ಣವಾಗಿ ಹಳೆದ ಪ್ರಿನ್ಸಿಪಲನ್ನೇ ಇಟ್ಟುಕೊಂಡಿಲ್ಲ ಇಲ್ಲಿ. ಪೂರ್ಣ ಹೊಸ ಪ್ರಿನ್ಸಿಪಲ್ಸನ್ನೇ ಇನ್‌ವಾಲ್ವ್ ಮಾಡಿಕೊಂಡಿಲ್ಲ. ಎರಡು ವರ್ಗದ ಈ ಒಂದು ಸ್ಟೇಜ್‌ನಲ್ಲಿ ಇನ್‌ವಾಲ್ವ್ ಆಗಿರುವ ಒಂದು ಬಜೆಟ್ ಎಂದರೆ ನಮ್ಮ ಬಜೆಟ್. ಈ ಬಜೆಟನ್ನು ಮಂಡನೆ ಮಾಡಿದ ಸಂದರ್ಭದಲ್ಲಿ ಆಗಾಗ ಕೆಲವು ಜನ ನನ್ನ ವಿರೋಧಿ ಪಕ್ಷದ ಸ್ನೇಹಿತರು ಪ್ರೆಸ್‌ನಲ್ಲಿ ಅವರು ಕೊಟ್ಟಂತಹ ರೀ-ಆಕ್ಷನ್ಸನ್ನು ನಾನು ನೋಡಿದೆ. ಆ ರೀತಿ ನೋಡಿದಾಗ ಅನೇಕ ವಿಚಾರಗಳನ್ನು ಅವರು ರೀ-ಆ್ಯಕ್ಟ್ ಮಾಡಿದ್ದಾರೆ. ಏನೆಂದರೆ ಪ್ರಥಮವಾಗಿ ಈ ಟ್ಯಾಕ್ಸೇಷನ್ ಜಾಸ್ತಿಯಾಯಿತು, ಕೊರತೆ ಜಾಸ್ತಿಯಾಯಿತು, ಬಾರೋಯಿಂಗ್ ಜಾಸ್ತಿ ಆಯಿತು ಎಂದು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನನ್ನದು ಒಂದು ಬೇಸಿಕ್ ಕ್ವೆಶ್ಚನ್ ಇದೆ. Can we dispense with taxation in any budget? Can we dispense with plan? Can we dispense with the borrowings? ಈ ಮೂರು ಪ್ರಿನ್ಸಿಪಲ್‌ಗಳನ್ನು ಯಾವುದೇ ಬಜೆಟ್ ಇರಲಿ, ಇದನ್ನು ಇನ್‌ವಾಲ್ವ್ ಮಾಡಲೇಬೇಕಾಗುತ್ತದೆ. But the question is, it should be wisely planned and it should be a wise borrowing. Borrowing should not be too much. You take any country, any State. This taxation, planning and borrowing has to be done wisely, which our Hon'ble Chief Minister has done it. ಇರುವ ರಿಸೋರ್ಸಸ್‌ನಲ್ಲಿ ನಮಗೆ ಇರುವ ಕನ್‌ಸ್ಟ್ರೆಂಟ್ಸ್ ಮಧ್ಯೆ ಎಲ್ಲವನ್ನೂ ಒಗ್ಗೂಡಿಸಿ ವೈಸ್ ಆಗಿ ಇದನ್ನು ಮಾಡಿದ್ದಾರೆ ಎಂದು ಹೇಳಬೇಕಾದಾಗ ನಾನಾದರೂ ಕೂಡ ಸಂತೋಷಪಡುತ್ತೇನೆ. ಮತ್ತು ಈ ಟ್ಯಾಕ್ಸೇಷನ್ ಕೂಡ ಹಾಕುವ ಸಂದರ್ಭದಲ್ಲಿ ಅವರು ಬಹಳ ಎಚ್ಚರಿಕೆಯನ್ನು ವಹಿಸಿದ್ದಾರೆ. ಈ ಕೆಳವರ್ಗದ ಜನ ಮತ್ತು ಮಧ್ಯಮ ವರ್ಗದ ಜನರು ಏನು ಇದ್ದಾರೆ ಇವರು ಯಾರಿಗೂ ಹೆಚ್ಚಿನ ರೀತಿ ಹೊರೆಯಾಗಬಾರದು ಎಂದು ಹೇಳಿ he has tapped the rich and helped the poor ಎನ್ನುವ ಒಂದು ವಿಚಾರವನ್ನು ನಾನು ಇಲ್ಲಿ ನೋಡಬಹುದು. ಈ ಬಜೆಟ್ ಮಂಡನೆಯ ಸಂದರ್ಭದಲ್ಲಿ ನಾನಾದರೂ ಕೂಡ ಇದನ್ನು ಓದಿದಾಗ ನನ್ನ ಗಮನಕ್ಕೆ ಬರುವಂಥದ್ದು ಮತ್ತು ಯಾರೇ ಆಗಲಿ ಅದನ್ನು ನೋಡುವ ವಿಚಾರ ಏನೆಂದರೆ ಈ ಟ್ಯಾಕ್ಸೇಷನ್ ಪಾಲಿಸಿಯನ್ನು ಫಾಲೊ ಮಾಡುವ ಸಂದರ್ಭದಲ್ಲಿ ಮೂರು ಅಂಶಗಳನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡಿದ್ದಾರೆ. ಏನೆಂದರೆ ಈ ಟ್ಯಾಕ್ಸೇಷನ್ ಪಾಲಿಸಿಯಿಂದ ಸೇವಿಂಗ್ಸ್ ಸಾಕಷ್ಟು ಆಗಬೇಕು, ಈ ಸೇವಿಂಗ್ಸ್ ಕ್ಯಾಪಿಟಲ್ ಫಾರ್ಮೇಷನ್ ಆಗಬೇಕು. ಈ ಕ್ಯಾಪಿಟಲ್ ಫಾರ್ಮೇಷನ್‌ನಿಂದ ಅಸೆಟ್ ಆಗಬೇಕು. ಈ ಮೂರು ಪ್ರಿನ್ಸಿಪಲ್‌ಗಳು ಅಡಕವಾಗಿರುವುದನ್ನು ಅವರು ಸ್ಕೀಮ್‌ಗಳನ್ನು ಏನು ಅನೌನ್ಸ್ ಮಾಡಿದ್ದಾರೆ, ಅದರಲ್ಲಿ ನಾವು ಕಾಣುತ್ತಿದ್ದೇವೆ. ಉದಾಹರಣೆಗೆ 'ಸೇವಾಮಿತ್ರ' ಎನ್ನುವ ಸ್ವತಂತ್ರವಾದ ಒಂದು ಇನ್ಸ್‌ಟಿಟ್ಯೂಷನ್ ಮತ್ತು ಸರ್ಕಾರದ ಆಡಳಿತವನ್ನು ಪಾರದರ್ಶಕವಾಗಿ ಮಾಡಿಕೊಂಡು ಇದನ್ನು ಮಾಡುವ ಸಂದರ್ಭದಲ್ಲಿ ಮತ್ತು ಪಬ್ಲಿಕ್

ಇನ್‌ಸ್ಟಿಟ್ಯೂಷನನ್ನು ರನ್ ಮಾಡಬೇಕಾದಂಥ ವಿಚಾರದಲ್ಲಿ ಕೂಡ ಅವರು ಒಂದು ಸಪರೇಟ್ ಇನ್‌ಸ್ಟಿಟ್ಯೂಷನ್ ಆಗಿ ರೈಸ್ ಮಾಡಿ ಅದನ್ನು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಇಲ್ಲಿ ಬಂದಿರುವ ಕನ್‌ಸ್ಟ್ರೈಂಟ್ಸ್ ಏನೆಂದು ನೋಡಿದಾಗ ನನ್ನ ಗಮನಕ್ಕೆ ಬರುವುದೇನೆಂದರೆ ನಮ್ಮ ಸ್ನೇಹಿತರುಗಳು ಮಾತನಾಡುವ ಸಂದರ್ಭದಲ್ಲಿ ಎರಡು ಮೂರು ಅಂಶಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದುದು ಬಹಳ ಅತ್ಯವಶ್ಯಕ ಎನ್ನುವುದನ್ನು ನಾನು ಅಧ್ಯಕ್ಷರ ಮುಂದೆ ಮಂಡಿಸುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸಿಸ್ಟಂ ಆಫ್ ಸ್ಟೇಟ್ ಅಡ್ಮಿನಿಸ್ಟ್ರೇಷನ್ ಏನಿದೆ, ಇದು ಪೂರ್ಣವಾಗಿ ಅಟಾನಮಸ್ ಅಲ್ಲ. ನಮಗೆ ಕೇಂದ್ರದವರು ಬಹಳಷ್ಟು ಅನೇಕ ವಿಚಾರದಲ್ಲಿ ಹಿಡಿತವನ್ನು ಇಟ್ಟುಕೊಂಡಿದ್ದಾರೆ. ಅದಕ್ಕೆ ಅನೇಕ ಸಲ ಪೆಟ್ರೋಲಿಯಂ ಪಾಲಿಸಿ ಏನು ಇದೆ, ಸ್ಟೇಟ್ ಟು ಸೆಂಟ್ರಲ್ ಗೌರ್ನಮೆಂಟ್ ರಿಲೇಷನ್‌ಷಿಪ್ ಏನಿದೆ, ಅದನ್ನು ರೆವ್ಯೂ ಮಾಡಿದಾಗ ಈ ಅಟಾನಮಿಕ್ ಬಜೆಟ್ ಬಗ್ಗೆ ಬಹಳಷ್ಟು ಅರ್ಥ ಬರುತ್ತದೆ. ಆದರೆ ಈಗ ಅನೇಕ ಬಜೆಟ್‌ಗಳು ಬಹಳ ಸರ್ಕಸ್ ಮಾಡುವಂತಹ ಪ್ರಮೇಯ ಬಂದಿದೆ. ಏಕೆಂದರೆ ನಮಗೆ ಅನೇಕ ವಿಚಾರದಲ್ಲಿ ಅವರ ಅಡಚಣೆಗಳು ನಮಗೆ ಮುಂದೆ ಬರುತ್ತವೆ. ಉದಾಹರಣೆಗೆ 'ರೇಷ್ಮೆ ಸಂಪತ್ತು' ಎನ್ನುವ ಒಂದು ಕಾರ್ಯಕ್ರಮವನ್ನು ಇಲ್ಲಿ ಅಳವಡಿಸಿಕೊಂಡಿದ್ದಾರೆ. ಇದನ್ನು ಜಾರಿಗೊಳಿಸಬೇಕೆಂದು ಉತ್ಸಾಹದಿಂದ ಸರ್ಕಾರ ಮುಂದೆ ಬಂದಿದೆ. ಆದರೆ ಈ ರೇಷ್ಮೆ ಇಂಪೋರ್ಟ್ ಮಾಡುವಂಥಾದ್ದು, ಈ ಕಾರ್ಯಕ್ರಮದಲ್ಲಿ ಪೂರ್ಣವಾದಂಥ ರೇಷ್ಮೆ ಬೆಳೆಗಾರರಿಗೆ ಹಕ್ಕನ್ನು ಕೊಡುವುದು, ಬೆಲೆಯನ್ನು ಕೊಡುವಂಥಾದ್ದನ್ನು .....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಮೊನ್ನೆ ರೈತರ ಸಮಸ್ಯೆ ಬಂದಾಗ ಒಂದು ತೆಂಗಿನಕಾಯಿ ತಂದು ತೋರಿಸಿದರೆ ಅದನ್ನು ತರಲಿಕ್ಕೆ ಬರುವುದಿಲ್ಲ ಎಂದು ಇಲ್ಲಿ ಬಹಳ ಗೊಂದಲವಾಯಿತು. ಮೊಬೈಲ್ ಫೋನ್ ತರಬಾರದು ಎಂದು ಹೇಳಿ ಆದೇಶ ಮಾಡಿದ್ದರೂ ಎಲ್ಲರೂ ತಂದಿರುತ್ತಾರೆ. ಅದಕ್ಕೆ ಎಲ್ಲರನ್ನೂ ಚೆಕ್ ಮಾಡಿ ಬಿಡಿ.

ಉಪಾಧ್ಯಕ್ಷರು : ಮೊಬೈಲ್ ಫೋನನ್ನು ಸದನಕ್ಕೆ ತರಬಾರದು, ಅದನ್ನು ಆನ್ ಮಾಡಿ ಇಡಬಾರದು ಎಂದು ಇದ್ದರೂ ಕೂಡ ಈ ರೀತಿ ಮೊಬೈಲ್ ಫೋನ್‌ಗಳನ್ನು ತಂದು ಈ ರೀತಿ ಪದೇ ಪದೇ ಪ್ರದರ್ಶನ ಮಾಡುತ್ತಿದ್ದೀರಿ. ದಯವಿಟ್ಟು ಮುಂದೆ ಈ ರೀತಿ ಮಾಡಬಾರದು.

ಶ್ರೀ ಎ.ಎಸ್. ಗುರುಸ್ವಾಮಿ : ಸಾರಿ ಸಾರ್.

ಶ್ರೀ ಎಸ್.ಎಸ್. ಪಾಟೀಲ್ : ತೆಂಗಿನಕಾರಿಯನ್ನು ನುಸಿ ರೋಗ ಬಂದ ಕಾರಣಕ್ಕಾಗಿ ತಂದು ಅದನ್ನು ಪ್ರದರ್ಶನ ಮಾಡಿದರೆ ಅದೇ ದೊಡ್ಡ ರಾಮಾಯಣವಾಯಿತು. ಅದನ್ನು ಹೇಗೆ ತರುವುದಕ್ಕೆ ಬರುತ್ತದೆ? ನಮ್ಮ ಮಾನ್ಯ ಕಾನೂನು ಸಚಿವರು ಇಲ್ಲ. ಅವರು ಕಾಯ್ದೆ ಬುಕ್ಕನ್ನೇ ತೆಗೆದುಬಿಡುತ್ತಾರೆ.

ಉಪಾಧ್ಯಕ್ಷರು : ಅದೆಲ್ಲಾ ಸದನದಲ್ಲಿ ಪ್ರದರ್ಶನ ಮಾಡಬಾರದು ಎಂದು ಇದೆ. ಮಾಡಬೇಕು ಎಂದು ಮಾಡಿದರೆ ಅದು ಸರಿಯಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಸದನದಲ್ಲಿ ಯಾವುದು ತರಬೇಕು, ಯಾವುದು ತರಬಾರದು ಎಂದು ಇದೆ. ನಾವು ತೆಗೆದು ನೋಡಿದ್ದೇವೆ. ಬೇಕಾದರೆ ಇವತ್ತು ಹೇಳಿಬಿಡಿ. ಇಂಥದ್ದು ತಂದಿದ್ದು ತಪ್ಪು ಎಂದು ಅದರಲ್ಲಿ ಇಲ್ಲ. ಎಂಥದ್ದು ತರಬಾರದು ಎಂದು ಅದರಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಬೇಕಾದರೆ ಒಂದು ದಿವಸ ಚರ್ಚೆಯಾಗಲಿ.

ಉಪಾಧ್ಯಕ್ಷರು : ತೆಂಗಿನಕಾಯಿ ಗೊತ್ತಿಲ್ಲ ಎನ್ನುವ ಹಾಗೆ ಇಲ್ಲ, ತೆಂಗಿನ ಕಾಯಿಯನ್ನು ಎಲ್ಲರೂ ನೋಡಿರುತ್ತಾರೆ. ಎಲ್ಲರೂ ರೈತರುಗಳೇ ಇರುವುದರಿಂದ ಅದನ್ನು ಪ್ರದರ್ಶನ ಮಾಡುವ ಅಗತ್ಯವಿರಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಎಂಥ ಪದಾರ್ಥಗಳನ್ನು ತರಬಾರದು ಎಂದು ಹೇಳಿ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) : ಯಾವುದನ್ನು ತರಬಾರದು ಎಂದು ನಮೂದಿಸಿದರೆ ಒಂದು ದೊಡ್ಡ ಕೋಷ್ಟಕವನ್ನೇ ನಿರ್ಮಾಣ ಮಾಡಬೇಕಾಗುತ್ತದೆ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಏನು ಇವತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ, ಈ ಜಲಸಂವರ್ಧನ ಎಂದು ಕೆರೆಗಳ ಅಭಿವೃದ್ಧಿ ಯೋಜನೆ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಯಾವ ವಸ್ತುಗಳನ್ನು ತರಬಾರದು ಎಂದು ಏನೋ ಆದೇಶ ಮಾಡಿದರು, ನಿಜ, ನಾನು ಒಪ್ಪಿಕೊಳ್ಳುತ್ತೇನೆ. ನಮಗೆ ಬಂದಿರುವ ಸಮಸ್ಯೆ ಏನೆಂದರೆ ತಮ್ಮ ಕಛೇರಿಯಿಂದ ಇಂಥಿಂಥ ಶಬ್ದಗಳನ್ನು ಉಪಯೋಗಿಸಬಾರದು ಎಂದು ನಮಗೆ ಆರ್ಡರ್ ಬಂದಿದೆ. ಆ ಆರ್ಡರನ್ನು ನೋಡಿದರೆ ಇಲ್ಲಿ ಭಾಷಣ ಮಾಡುವುದು ಹೇಗೆ ಎಂದು ನಮಗೆ ದೊಡ್ಡ ಸಮಸ್ಯೆಯಾಗಿದೆ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ನಾವು ಅನೇಕಸಲ ಬೋರ್‌ವೆಲ್‌ನಲ್ಲಿ ನೀರು ಇಲ್ಲ, ಕುಡಿಯಲಿಕ್ಕೆ ನೀರಿಲ್ಲ, ನಮಗೆ ಬೋರ್ ಹಾಕಿಸಿಕೊಡಿ ಎನ್ನುವುದನ್ನು ನಾವು ಅನೇಕ ಕಡೆ ಕೇಳುತ್ತಿದ್ದೇವೆ. ಇದಕ್ಕೆ ಪೂರಕವಾಗಿ ಗ್ರೌಂಡ್ ವಾಟರ್ ಲೆವೆಲ್ ಏನು ಇದೆ, ಇದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೋಸ್ಕರ ಕುಡಿಯುವ ನೀರನ್ನು ಸಮೃದ್ಧಿ ಮಾಡುವುದಕ್ಕೋಸ್ಕರ ಈ ಕೆರೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು ಹಾಕಿಕೊಂಡು ಮತ್ತು ಇವತ್ತು ಗೊಬ್ಬರದ ಬೆಲೆ ಏನು ಜಾಸ್ತಿಯಾಗಿದೆ ಈ ರೀತಿ ಬೆಲೆ ಜಾಸ್ತಿಯಾಗಿರುವುದರಿಂದ ಜನರು ಗೊಬ್ಬರ ಕೊಂಡುಕೊಳ್ಳುವುದಕ್ಕೆ ಬಹಳ ತೊಂದರೆಯಾಗುತ್ತಿದೆ, ಈ ಒಂದು ಸಂದರ್ಭದಲ್ಲಿ ಅಲ್ಲಿರುವ ಗೋಡೌನ್ ಸಹಾ ಉಳಿಸಿಕೊಡುವುದಕ್ಕೆ ಸರ್ಕಾರ ಒಂದು ಕಾರ್ಯಕ್ರಮವನ್ನು ಇವತ್ತು ಮಾಡಿಕೊಂಡು 'ಜಲಸಂವರ್ಧನ' ಎನ್ನುವ ಕೆರೆಗಳ ಅಭಿವೃದ್ಧಿ ಯೋಜನೆ ಮಾಡಿರುವುದು ನಿಜಕ್ಕೂ ಕೂಡ ಬಹಳ ಪ್ರಶಂಸನೀಯವಾದುದು ಎಂದು ಹೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಉಪಾಧ್ಯಕ್ಷರೇ, ಕೇಂದ್ರ ಸರ್ಕಾರದವರು ಸಬ್ಸಿಡಿ ಏನಾದರೂ ಕೊಡಬೇಕಾಗಿರುವುದು ಇದೆ. ರಾಜ್ಯ ಸರ್ಕಾರದವರು ಅದನ್ನು ಕೊಡುತ್ತಾರೆ

ಎಂದರೆ ನಿಜವಾಗಲೂ ಇದು ಸಂತೋಷದ ವಿಷಯ. ಏಕೆಂದರೆ ಬಜೆಟ್‌ನಲ್ಲಿ ಇದನ್ನು ನಾವು ಹೇಳಿದ್ದೇವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ರಾಜ್ಯ ಸರ್ಕಾರದಿಂದ ಕೊಡುವುದಿದ್ದರೆ ಬಹಳ ಸಂತೋಷ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರವರೆ, ಈ ಕೆರೆಗಳ ಯೋಜನೆಯಂತೂ ಈ ಕುಡಿಯುವ ನೀರಿನ ಯೋಜನೆಯಲ್ಲಿ ಬಹಳಷ್ಟು ಪಾತ್ರವನ್ನು ವಹಿಸುತ್ತದೆ. ಇದು ನಿಜಕ್ಕೂ ಕೂಡ ಸಾಮಾನ್ಯ ಮನುಷ್ಯನಿಗೆ ಅನುಕೂಲವಾಗುವ ವಿಚಾರವನ್ನು ನಾವಂತೂ ಮರೆಯುವ ಹಾಗೆಯೇ ಇಲ್ಲ. ಮತ್ತು ನಮ್ಮ 'ರೈತ ಮಿತ್ರ' ಇತ್ತೀಚೆಗೆ ಅಗ್ರಿಕಲ್ಚರಲ್ ಯೂನಿವರ್ಸಿಟಿ ಕಾನ್‌ವೊಕೇಷನ್‌ಗೆ ನಾನು ಹೋದಾಗ ಅಲ್ಲಿ ಅಗಾಧವಾದ ಈ ವ್ಯವಸಾಯಕ್ಕೆ ಸಂಬಂಧಪಟ್ಟ ಅಭಿವೃದ್ಧಿ ಕೆಲಸಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ, ಅಲ್ಲಿ ಇರುವ ಕಾರ್ಯಕ್ರಮಗಳು ನಮ್ಮ ಹಳ್ಳಿಗಾಡಿಗೆ ಇನ್ನೂ ತಲುಪಿಲ್ಲವಲ್ಲ ಎಂದು ಒಂದು ಕೊರಗು ನನ್ನಲ್ಲಿತ್ತು. ಅದು ಹೇಗೆ ಈ ಅಗ್ರಿಕಲ್ಚರಲ್ ಪ್ರೊಗ್ರಾಮ್ ಚೆನ್ನಾಗಿ ಡೆವಲಪ್ ಆಗಿದೆ, ಅದು ಹಳ್ಳಿಗಾಡಿಗೆ ತಲುಪಿಸುವುದು ಹೇಗೆ ಎನ್ನುವ ಒಂದು ವಿಚಾರವಿದ್ದಾಗ ಈ ಬಜೆಟ್ ನೋಡಿದಾಗ, ಈ ಬಜೆಟ್‌ನಲ್ಲಿ ಈ 'ರೈತಮಿತ್ರ' ಎನ್ನುವ ಒಂದು ಕೇಂದ್ರವನ್ನು ಪ್ರತಿಯೊಂದು ಪಂಚಾಯಿತಿ ಹೆಡ್ ಕ್ವಾರ್ಟರ್ಸ್ ಮತ್ತೆ ಹುಬ್ಬಳ್ಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಕೂಡ ತೆರೆದು ರೈತರಿಗೆ ಅತ್ಯಾಧುನಿಕವಾದಂತಹ ಈ ಕೃಷಿ ವಿಜ್ಞಾನವನ್ನು ವಹಿಸಲಿಕ್ಕೆ ಇವತ್ತು ಪ್ರಯತ್ನ ಮಾಡಿರುವುದು ನಿಜಕ್ಕೂ ಕೂಡ ಈ ಕೃಷಿಕರ ಬಗ್ಗೆ ಮತ್ತು ಕೃಷಿಯ ಅಭಿವೃದ್ಧಿ ಬಗ್ಗೆ ಮತ್ತು ಆಹಾರ ಉತ್ಪಾದನೆಯಲ್ಲಿ ನಾವೆಷ್ಟು ಮನಸ್ಸನ್ನು ಇಟ್ಟು ಕೆಲಸ ಮಾಡುತ್ತಿದ್ದೇವೆ ಎಂದು ನಾವಾದರೂ ಕೂಡ ಇಲ್ಲಿ ನೋಡಬಹುದು. ನಮ್ಮ ಸಮಾಜದಲ್ಲಿ 50ರಷ್ಟು ಭಾಗ ಹೆಚ್ಚುಮಕ್ಕಳಿರುವ ಈ ಸಮಾಜದಲ್ಲಿ ಅವರಿಗೆ ಅತ್ಯುತ್ತಮವಾದ ಅವಕಾಶಗಳನ್ನು ನಮ್ಮ ಈ ಸರ್ಕಾರ ಕಲ್ಪಿಸಿಕೊಟ್ಟಿರುವುದನ್ನು ನಾವಿಲ್ಲಿ ನೋಡುತ್ತಿದ್ದೇವೆ. ಮಹಿಳೆಯರ ಕಲ್ಯಾಣಕ್ಕಾಗಿ ಸ್ತ್ರೀಶಕ್ತಿ ಕಾರ್ಯಕ್ರಮವನ್ನು ಅಳವಡಿಸಿಕೊಂಡಿರುವುದು ಮತ್ತು ಸುರಕ್ಷಾ ಹೆರಿಗೆ ಕಾರ್ಯಕ್ರಮದ ಬಗ್ಗೆ ವಿರೋಧಪಕ್ಷದ ಮಿತ್ರರು ಕೆಲವು ಜನ ಹೇಳುತ್ತಿದ್ದರು, ನಾವು ಕೂಡ ತಾಳಿಭಾಗ್ಯ ಕಾರ್ಯಕ್ರಮ ಇಟ್ಟಿದ್ದೆವು ಎಂದು ಅವರು ಹೇಳಿದರು. ಈ ಸುರಕ್ಷಾ ಹೆರಿಗೆ ಕಾರ್ಯಕ್ರಮವೆಂದಾಗ ನನಗೆ ಸಣ್ಣ ಘಟನೆ ಜ್ಞಾಪಕಕ್ಕೆ ಬರುತ್ತದೆ. ಮೊನ್ನೆ ಮೈಸೂರಿನಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳ ಇಂಟರ್‌ವ್ಯೂ ಮಾಡುವ ಸಂದರ್ಭದಲ್ಲಿ ಒಂದು ಘಟನೆ ನಡೆಯಿತು. 45 ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಮೂರು ಸಾವಿರ ಜನ ಅಭ್ಯರ್ಥಿಗಳನ್ನು ಇಂಟರ್‌ವ್ಯೂ ಮಾಡಿದರು. ಆ ಇಂಟರ್‌ವ್ಯೂ ಮಾಡಿದಂತಹ ಸಂದರ್ಭದಲ್ಲಿ ಕನ್‌ಸರ್ನ್ಡ್ ಆಫೀಸರ್ಸ್ ಡಾಕ್ಟರ್ ಅನ್ನು ಕೇಳಿದಾಗ, ಏನ್ರಿ, ಮೂರು ಸಾವಿರ ಜನರಲ್ಲಿ 45 ಜನ ಸಿಗಲಿಲ್ಲವಾ' ಎಂದಾಗ ಅವರು 'ಇವತ್ತು ಪೋಲೀಸ್ ಕಾನ್‌ಸ್ಟೇಬಲ್ ಆಗಲಿಕ್ಕೆ ನಮ್ಮಲ್ಲಿ ಆರೋಗ್ಯಕರವಾಗಿರತಕ್ಕ ಜನ ಸಿಗುತ್ತಲೇ ಇಲ್ಲ' ಎನ್ನುವ ವಿಚಾರವನ್ನು ಹೇಳುತ್ತಿದ್ದರು. ನನಗೆ ಜ್ಞಾಪಕಕ್ಕೆ ಬಂತು. ಬಹುಶಃ ಇಂತಹ ಒಂದು ಕಾರ್ಯಕ್ರಮ ಮುಂದಿನ ಪೀಳಿಗೆಗೆ ಅನುಕೂಲ ಆಗುತ್ತದೆ. ಒಂದು ಎಕ್ಸಾಂಪಲ್ ಆಗುತ್ತದೆ ಎನ್ನತಕ್ಕ ಒಂದು ಮನವರಿಕೆ ನನ್ನಲ್ಲಿ ಕೂಡ ಬಂದಿದೆ. ಹಾಗೆಯೇ ಮಹಿಳೆಯರಿಗೋಸ್ಕರವಾಗಿ ಇರತಕ್ಕ ವಿಶೇಷವಾದ ಸ್ಕೀಮ್ ಬಗ್ಗೆ ಕೂಡ ನಾನು ಹೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುದುವನಹಳ್ಳಿ : ಹೆರಿಗೆ ಬಗ್ಗೆ ಹಳ್ಳಿಗಾಡಿನಲ್ಲಿ ಎಎನ್‌ಎಂಗಳನ್ನು ಎಲ್ಲಾ ಸರ್ಕಾರ ಅಪಾಯಿಂಟ್‌ಮೆಂಟ್ ಮಾಡಿದೆ. ಆದರೆ ಬಹಳಷ್ಟು ಹಳ್ಳಿಗಳಲ್ಲಿ ಇತ್ತೀಚೆಗೆ ಎಎನ್‌ಎಂಗಳು ಆ ಕ್ವಾರ್ಟರ್ಸ್‌ನಲ್ಲಿರುವಂತಹ ಪರಿಸ್ಥಿತಿ ಇಲ್ಲ. ಎಲ್ಲರೂ ಕೂಡ ಪಟ್ಟಣಗಳಲ್ಲಿ ಬಂದು ನೆಲೆಸುವಂತಹ ಕೆಲಸವನ್ನು ಮಾಡಿದ್ದಾರೆ. ಇದಕ್ಕೆ ಕಟ್ಟುನಿಟ್ಟಾದ ಕ್ರಮ ಜರುಗಿಸಬೇಕು. ಏಕೆಂದರೆ ಕನಿಷ್ಟ ಹೆರಿಗೆ ಆಗುವಾಗ, ಆ ಹಳ್ಳಿಯಲ್ಲಿ ಎಎನ್‌ಎಂಗಳು ಇದ್ದರೆ ಅವರು ಹೋಗಿ ಮುತುವರ್ಜಿ ವಹಿಸಿ ಹೆರಿಗೆ ಮಾಡಿಸಬಹುದು. ಆದರೆ ಆ ಎಎನ್‌ಎಂಗಳೆಲ್ಲಾ ಪಟ್ಟಣಗಳನ್ನು ಸೇರುವಂತಹ ಪ್ರವೃತ್ತಿ ಬೆಳೆದಿದೆ. ಆ ಎಎನ್‌ಎಂಗಳಿಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕ್ವಾರ್ಟರ್ಸ್ ಅನ್ನು ಕಟ್ಟಿದ್ದರೂ ಕೂಡ ಅದನ್ನು ಉಪಯೋಗಿಸುವಂತಹ ಪರಿಸ್ಥಿತಿ ಇವತ್ತು ಇಲ್ಲ. ಅದಕ್ಕಾಗಿ ಸರ್ಕಾರ ಇವತ್ತು ಈ ಬಗ್ಗೆ ಹೆಚ್ಚಿಗೆ ಗಮನ ಹರಿಸಬೇಕು ಎಂದು ನಾನು ಕೇಳಿಕೊಳ್ಳುತ್ತದ್ದೇನೆ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವಂತಹ ಸಂದರ್ಭದಲ್ಲಿ ಹೇಳುತ್ತಿದ್ದೆ, ನಮ್ಮ ಜನಸಂಖ್ಯೆಯ ಅರ್ಧ ಭಾಗದಷ್ಟು ಇರುವ ಹೆಣ್ಣು ಮಕ್ಕಳ ಬಗ್ಗೆ ನಮ್ಮ ಸರ್ಕಾರ ಬಹಳಷ್ಟು ಕಾಳಜಿ ವಹಿಸಿದೆ ಎಂದು ಹೇಳುವುದಕ್ಕೆ ನಮ್ಮಲ್ಲಿ ಮೂರ್‍ನಾಲ್ಕು ಕಾರ್ಯಕ್ರಮಗಳನ್ನು ಈಗ ಅವರೇನು ಪ್ರಕಟಣೆ ಮಾಡಿದ್ದಾರೆ ಅದು ನಿಜಕ್ಕೂ ಕೂಡ ಆ ವರ್ಗದವರನ್ನು ಮೇಲೆ ತರಲು ಸರ್ವ ಶ್ರೇಷ್ಠವಾಗಿ ಕೆಲಸ ಮಾಡುತ್ತದೆ ಎನ್ನತಕ್ಕದ್ದು ನನಗಾದರೂ ಕೂಡ ಮನವರಿಕೆ ಆಗುತ್ತದೆ. ಹಾಗೆಯೇ ತಾವು ಪರಿಶೀಲನೆ ಮಾಡಿದಾಗ ಈ "ಆಶ್ರಯ ಸ್ಕೀಮ್‌ನಲ್ಲಿ" ಮನೆಗಳನ್ನು ಕೊಡಬೇಕಾದಂತಹ ಸಂದರ್ಭದಲ್ಲಿ ಗಂಡಸರಿಗೆ ಕೊಟ್ಟಾಗ ಮಾರಿಕೊಳ್ಳುವಂತಹ ಸಂದರ್ಭ ಬರುತ್ತದೆ. ಹೆಣ್ಣು ಮಕ್ಕಳ ಹೆಸರಿನಲ್ಲಿ ಕೊಟ್ಟಾಗ ಅದನ್ನು ಮಾರಾಟ ಮಾಡುವುದಕ್ಕೆ ಬರುವುದಿಲ್ಲ ಎಂದು ಯೋಚನೆ ಮಾಡಿ ಹೆಣ್ಣು ಮಕ್ಕಳ ಹೆಸರಿನಲ್ಲಿ ಇವತ್ತು ಆಶ್ರಯ ಸ್ಕೀಮ್‌ನಲ್ಲಿ ಮನೆಗಳನ್ನು ಕೊಡಬೇಕು ಎನ್ನತಕ್ಕ ತೀರ್ಮಾನಕ್ಕೆ ಬಂದಿರತಕ್ಕದ್ದು ನಿಜಕ್ಕೂ ಕೂಡ ಹೆಣ್ಣು ಮಕ್ಕಳ ಬಗ್ಗೆ ನಾವು ಇಟ್ಟಿರತಕ್ಕ ಕಾಳಜಿ ಮತ್ತು ನಂಬಿಕೆಯನ್ನು ತೋರಿಸುತ್ತದೆ. ಹಾಗೆಯೇ ಹೈಸ್ಕೂಲ್‌ವರೆಗೆ ಹೆಣ್ಣು ಮಕ್ಕಳಿಗೆ ಮುಫತ್ತಾಗಿ ಶಿಕ್ಷಣವನ್ನು ಕೊಡಬೇಕು ಎನ್ನತಕ್ಕದ್ದು ಕೂಡ ಸರ್ಕಾರದ ಪಾಲಿಸಿ ಆಗಿರತಕ್ಕದ್ದು ನಿಜವಾಗಿಯೂ ಕೂಡ ಅದು ಒಂದು ಉತ್ತಮ ಬೆಳವಣಿಗೆ ಒಬ್ಬ ಗಂಡಸು ವಿದ್ಯಾವಂತನಾಗುವ ಬದಲು ಮನೆಯಲ್ಲಿ ಒಬ್ಬ ಹೆಂಗಸು ವಿದ್ಯಾವಂತಳಾದರೆ ಇಡೀ ಕುಟುಂಬವೇ ವಿದ್ಯಾವಂತ ಕುಟುಂಬ ಆಗುತ್ತದೆ ಎನ್ನುವಂತಹ ಮಾತನ್ನು ನಾವು ಕೇಳುತ್ತಿದ್ದೇವೆ. ಇವತ್ತು ಆ ಧಾಟಿಯಲ್ಲಿ ನಮ್ಮ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದೆ ಬಂದು ಹೆಣ್ಣು ಮಕ್ಕಳಿಗೋಸ್ಕರ ಕೆಲವು ಕಾರ್ಯಕ್ರಮಗಳನ್ನು ಹಂಚಿಕೊಂಡಿರುವುದು ಬಹಳ ಮೆಚ್ಚುವಂತಹ ವಿಚಾರ. ಮತ್ತೆ ಹಾಗೆಯೇ ನಾನು ಒಮ್ಮೆ ಪಂಜಾಬಿಗೆ ಹೋಗಿದ್ದಾಗ, ಹರ್‍ಯಾಣ-ಪಂಜಾಬ್‌ನಲ್ಲಿ ಈ ಹಳ್ಳಿಗಾಡಿನ ಪ್ರದೇಶವನ್ನು ನೋಡಿದಾಗ ಅಲ್ಲಿ ಹಳ್ಳಿಗೂ ಆ ನಗರಕ್ಕೂ ಕಡಿಮೆ ವ್ಯತ್ಯಾಸವನ್ನು ಕಂಡೆ. ನಮ್ಮಲ್ಲಿನ ಹಳ್ಳಿಗಳಷ್ಟು ಅವು ಬ್ಯಾಕ್‌ವರ್ಡ್ ಅಲ್ಲ. ನಗರದಲ್ಲಿ ಏನೇನು ಸೌಲಭ್ಯಗಳು ಸಿಗುತ್ತವೆ, ಅಷ್ಟೂ ಸೌಲಭ್ಯಗಳನ್ನು ನಾವು ಪಂಜಾಬ್-ಹರ್‍ಯಾಣದ ಗ್ರಾಮಗಳಲ್ಲಿ ನೋಡುತ್ತೇವೆ. ಇದು ಹೇಗೆ ಸಾಧ್ಯವಾಯಿತು ಎನ್ನತಕ್ಕ

ವಿಚಾರದ ಬಗ್ಗೆ ನಾನು ಅಲ್ಲಿನ ಕೆಲವು ಮಿತ್ರರನ್ನು ಕೇಳಿದಾಗ ಅವರು ಒಂದು ವಿಚಾರ ಹೇಳಿದರು. ಅವರಲ್ಲಿ 'ಬ್ಯೂಟಿಫಿಕೇಶನ್ ಆಫ್ ವಿಲೇಜಸ್' ಎನ್ನತಕ್ಕ ಒಂದು ಕಾರ್ಯಕ್ರಮವನ್ನು ಸರ್ಕಾರದವರೇ ಹಂಚಿಕೊಂಡು ಆ ಗ್ರಾಮದಲ್ಲಿ ಬರತಕ್ಕಂತಹ ಚರಂಡಿ, ರಸ್ತೆ ಮೋರಿ, ಗಿಡಗಳು ಮತ್ತೊಂದನ್ನು ಏನು ಸೌಂದರೀಕರಣ ಮಾಡಲಿಕ್ಕೆ ಬರುತ್ತದೆ, ನಗರದಲ್ಲಿರತಕ್ಕ ಏನು ಸೌಲಭ್ಯಗಳು ಹಳ್ಳಿಗಳಲ್ಲಿ ಕೊಡುವುದಕ್ಕೆ ಬರುತ್ತದೆ, ಡಸ್ಟ್ ಬಿನ್ ಆದಿಯಾಗಿ ಕೂಡ ಅಲ್ಲಿ ಇಟ್ಟಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅದಕ್ಕೆ ಬಹುಶಃ ಮಾಡೆಲ್ ಆಗಿ ನಮ್ಮ ಸರ್ಕಾರದವರು, ನಮ್ಮ ಘನತೆವೆತ್ತ ಮಾನ್ಯ ಮುಖ್ಯಮಂತ್ರಿಗಳು ಈ ಸ್ವಚ್ಛ ಗ್ರಾಮ ಯೋಜನೆಗಳನ್ನು ಹಳ್ಳಿಗಾಡಿಗೆ ತೆಗೆದುಕೊಂಡು ಹೋಗಲಿಕ್ಕೆ ಇವತ್ತು ಒಂದು ಪ್ರಯತ್ನವನ್ನು ಮಾಡಿರತಕ್ಕದ್ದು ನಿಜಕ್ಕೂ ಕೂಡ ಶ್ಲಾಘನೀಯವಾದಂತಹ ಮಾತು ಇದು. ಈ ಕಾರ್ಯಕ್ರಮದ ಅಡಿಯಲ್ಲಿ ನನಗೆ ಅನಿಸುತ್ತದೆ, ಇದು ಪೂರ್ಣವಾಗಿ ನಮ್ಮ ಈ ಕಾರ್ಯಕ್ರಮ ಅನುಷ್ಠಾನಗೊಂಡಾಗ ನಮ್ಮ ಹಳ್ಳಿಗಳು ನಗರಕ್ಕಿಂತ ಏನೂ ಕಡಿಮೆ ಆಗಿ ಕಾಣುವುದಿಲ್ಲ ಎನ್ನತಕ್ಕದ್ದು ನನಗಾದರೂ ಕೂಡ ಮನವರಿಕೆ ಆಗುತ್ತಿದೆ. 'ಯುವ, ಕಾಮ್' ಯೋಜನೆ ಏನು ಇದೆ, ಇದು ನಮ್ಮ ಅನ್-ಎಜುಕೇಟೆಡ್, ಎಜುಕೇಟೆಡ್ ಯೂತ್ಸ್‌ಗೆ ಈ ಎರಡೂ ವರ್ಗದ ಜನರಿಗೆ ಬಹಳಷ್ಟು ಅನುಕೂಲ ಆಗುವಂತಹ ವಿಚಾರಗಳು ಇದರಲ್ಲಿ ಅಡಗಿಕೊಂಡಿದೆ. ಏನು ಅನ್-ಎಂಪ್ಲಾಯ್ಡ್ ಯೂತ್ಸ್ ಇದ್ದಾರೆ ಇವರನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಒಳ್ಳೆಯ ಮಾಹಿತಿ ತಂತ್ರಜ್ಞಾನವನ್ನು ಇವತ್ತು ಅವರಿಗೆ ಒದಗಿಸಿ ಉತ್ತಮ ಪ್ರಜೆಗಳನ್ನಾಗಿ ಮಾಡಲು ಒಂದು ಸರ್ವ ಪ್ರಯತ್ನ ಮಾಡಲಾಗಿದೆ. ನಾವು ಪಂಚಾಯತ್ ರಾಜ್ ಪ್ರಶ್ನೆ ಬಂದಾಗಲೂ ಸಹಿತ ಹಿಂದಿನ ಸರ್ಕಾರಕ್ಕಿಂತ ಅತಿ ಹೆಚ್ಚು ಹಣವನ್ನು ಕೊಡುತ್ತಿರುವಂತಹ ಸರ್ಕಾರ ಅಂದರೆ ನಮ್ಮ ಸರ್ಕಾರವೇ. ಜಿಲ್ಲಾ ಪಂಚಾಯಿತಿ ಆಗಿರಬಹುದು, ಅಥವಾ ತಾಲ್ಲೂಕು ಪಂಚಾಯಿತಿ ಆಗಿರಬಹುದು ಅಥವಾ ಗ್ರಾಮ ಪಂಚಾಯಿತಿ ಆಗಿರಬಹುದು. ಇಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಪ್ರತಿ ಒಂದು ಗ್ರಾಮ ಪಂಚಾಯಿತಿಗೆ ಕೊಡಬೇಕು ಎನ್ನತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿರತಕ್ಕದ್ದು ಬಹಳ ಮೆಚ್ಚುಗಾರಿಕೆಯ ವಿಚಾರ ಎನ್ನತಕ್ಕದ್ದನ್ನು ನಾವಂತೂ ಮರೆಯುವ ಹಾಗೆ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಮದ್ರಾಸ್‌ನಲ್ಲಿ ನಾವು ಪಂಚಾಯಿತಿಗಳನ್ನು ವಿಶ್ಲೇಷಣೆ ಮಾಡಬೇಕು ಎನ್ನತಕ್ಕ ಒಂದು ಸಂದರ್ಭದಲ್ಲಿ ಹೋದಾಗ ಅಲ್ಲಿ ಒಂದು ಆಕ್ಟ್ ಇದೆ. Right to Information Act .... ಎಂದು ಹೇಳಿ ಇದೆ. ಅದರ ಪ್ರಕಾರ anybody is entitled to have any free information from Government whichever is not secret under Indian Oaths Act. ಅದು ಇಲ್ಲಿ ಆಕ್ಟ್ ಜಾರಿಯಲ್ಲಿ ಇದೆಯೋ ಗೊತ್ತಿಲ್ಲ. ಆದರೆ ನಮ್ಮ ಸರ್ಕಾರ Right to Information ಎನ್ನುವುದನ್ನು ಒಪ್ಪಿಕೊಂಡಿರತಕ್ಕದ್ದು ಬಹಳ ಶ್ಲಾಘನೀಯ. ಪಾರದರ್ಶಕವಾಗಿ ಸರ್ಕಾರವನ್ನು ನಡೆಸುತ್ತೇವೆ. ನಾವೇನು ಕೆಲಸ ಮಾಡುತ್ತೇವೆ ಅದು ಸಾರ್ವಜನಿಕವಾಗಿ ಮುಟ್ಟುವ ರೀತಿಯಲ್ಲಿ ನಮ್ಮ ತೀರ್ಮಾನಗಳು ಆಗುತ್ತವೆ ಎನ್ನತಕ್ಕ ಮಾತನ್ನು ಹೇಳುತ್ತಿರತಕ್ಕದ್ದು ನಿಜಕ್ಕೂ ಕೂಡ ಈ ಪ್ರಜಾಪ್ರಭುತ್ವದ ಅಡಿಯಲ್ಲಿ ನಾವು ಸಫಲರಾಗಿದ್ದೇವೆ ಎನ್ನುವ ಮಾತನ್ನು ಹೇಳಲು ಇಚ್ಛೆಪಡುತ್ತೇನೆ. ಹಾಗೆಯೇ ಕರ್ನಾಟಕ ರೈಲು ಅಭಿವೃದ್ಧಿ ನಿಗಮವನ್ನು ಸರ್ಕಾರದವರು ಹಮ್ಮಿಕೊಂಡಿರತಕ್ಕದ್ದು, ಇದು ಕೂಡ

ಸ್ವಾಗತಾರ್ಹವಾಗಿರತಕ್ಕದ್ದು. ಅನೇಕ ಸರ್ಕಾರಗಳು ಅಧಿಕಾರಕ್ಕೆ ಬಂದು, ರೈಲು ಬಿಟ್ಟಿರು, ಹೋದರು! ಆದರೆ ನಮ್ಮದೇನೂ ರೈಲು ಬಿಡುಪಂತಹ ಸರ್ಕಾರವಲ್ಲ. ಕಾರ್ಯಗತ ಮಾಡುವಂತಹ ಸರ್ಕಾರ ಇದು. ನಾವು ಖಂಡಿತವಾಗಿಯೂ ಅದನ್ನು ಮಾಡೇ ಮಾಡುತ್ತೇವೆ. ರಿಸೋರ್ಸಸ್ ಏನು ಬೇಕೋ ಅದನ್ನೆಲ್ಲಾ ಒದಗಿಸುವುದಕ್ಕೆ ಮತ್ತು ಅದಕ್ಕೆ ಬೇಕಾದಂತಹ ಸಪೋರ್ಟಿಂಗ್ ಅವಶ್ಯಕತೆಗಳನ್ನು ಕೊಡಲಿಕ್ಕೆ ಈ ರೈಲು ನಿಗಮವನ್ನು ಮಾಡಿರತಕ್ಕದ್ದು ನಿಜಕ್ಕೂ ಕೂಡ ಬಹಳ ಸ್ವಾಗತಾರ್ಹ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಮತ್ತೆ ಎಲ್ಲಕ್ಕಿಂತ ಮತ್ತೊಂದು ವಿಚಾರ ಈ ಡೆಮಾಕ್ರಟಿಕ್ ಸಿಸ್ಟಂನಲ್ಲಿ ನಾವು ಅಪ್ರಿಷಿಯೇಟ್ ಮಾಡುವಂಥದ್ದು ಏನು ಎಂದರೆ, ಈ ಇಂಡಿಪೆಂಡೆಂಟ್ ಆಗಿ ಇರತಕ್ಕ ಇನ್‌ಸ್ಟಿಟ್ಯೂಷನ್ಸ್ ಏನು ಇದ್ದಾವೆ, ಇಂಡಿಪೆಂಡೆಂಟ್ ಬಾಡಿಗಳು ಏನು ಇವೆ ಅದಕ್ಕೆ ಸ್ವತಂತ್ರವಾಗಿ ಆಡಿಟ್ ಮಾಡುವಂತಹ ಒಂದು ಅಧಿಕಾರವನ್ನು ಕೊಡಲು ನಮ್ಮ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಎಂದರೆ ನಿಜಕ್ಕೂ ಕೂಡ ಅಡ್ಮಿನಿಸ್ಟ್ರೇಷನ್‌ನಲ್ಲಿ ಇಂಪಾರ್ಷಿಯಲ್ ಆಗಿರುತ್ತೇವೆ ಎನ್ನುವುದನ್ನು ತಾವು ನೋಡಬಹುದು. ಬಹುಶಃ ಯಾವ ಸರ್ಕಾರವೂ ಕೂಡ ಇದುವರೆಗೂ ಇಂಡಿಪೆಂಡೆಂಟ್ ಆಗಿ ಆಡಿಟ್ ಮಾಡಿಸುತ್ತೇನೆ ಎನ್ನತಕ್ಕ ಮಾತನ್ನು ಎಲ್ಲೂ ಅವರು ಹೇಳಿಲ್ಲ. ಅವರದೇ ಆದಂತಹ ಆಡಿಟ್ ಸಿಸ್ಟಂನಲ್ಲಿ ಮಾಡುತ್ತಿದ್ದರು. ಆದರೆ ಇಲ್ಲಿ ಸ್ವತಂತ್ರವಾದಂತಹ ಆಡಿಟ್ ಸಿಸ್ಟಂ ಅನ್ನು ಇಂಟ್ರಡ್ಯೂಸ್ ಮಾಡಿರತಕ್ಕದನ್ನು ನಿಜಕ್ಕೂ ನಾನು ಸ್ವಾಗತ ಮಾಡುತ್ತೇನೆ. ಈ ಒಂದು ಆಡಳಿತದಲ್ಲಿ ಹೊಸ ಟೈಪ್ ಅಡ್ಮಿನಿಸ್ಟ್ರೇಷನ್ ತರಬೇಕು ಎನ್ನುವ ಇಚ್ಚೆಯಿಂದ ಸರ್ಕಾರ ಇವತ್ತು ಮುನ್ನುಗ್ಗುತ್ತಿದೆ. ನಮಗೆ ಏನೊಂದು ಶಾಪ ಬಂದಿದೆ ಎಂದರೆ 50 ವರ್ಷಗಳಲ್ಲಿ ಬ್ರಿಟೀಷ್‌ನವರು ಏನು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಇಟ್ಟಿದ್ದರೋ ಹೆಚ್ಚು ಕಡಿಮೆ 40-45 ವರ್ಷಗಳಲ್ಲಿ ಅದೇ ಸಿಸ್ಟಂನಲ್ಲಿ ನಾವು ಕಾಲ ಕಳೆದು ಬಿಟ್ಟಿದ್ದೇವೆ. ಅದೇ ಒಂದು ಗುಂಗಿನಲ್ಲಿ ಇವತ್ತು ನಮ್ಮ ಆಡಳಿತ ಇದೆ. ಅದನ್ನು ಬದಲಾಯಿಸಿ ಅದಕ್ಕೆ ಒಂದು ಹೊಸ ಆಡಳಿತದ ಮೆರಗನ್ನು ಕೊಡಬೇಕೆಂದು ಒಂದು ಇಂಡಿಪೆಂಡೆಂಟ್ ಬಾಡಿಯನ್ನು ಕೂಡ ರಚನೆ ಮಾಡಿ, ಇದರ ಬಗ್ಗೆ ಸಲಹೆಗಳನ್ನು ಕೊಡಲು ಕೂಡ ಒಂದು ಉತ್ತಮವಾದ ಪರಿಜ್ಞಾನವನ್ನು ಅವರಿಗೆ ಒದಗಿಸಬೇಕೆಂದು ಇವತ್ತು ಮುನ್ನುಗ್ಗಿದ್ದಾರೆ. ನಾನು ಮೊನ್ನೆ ಕೂಡ ಪತ್ರಿಕೆಯಲ್ಲಿ ಓದಿದ್ದೇನೆ. ಈ ಒಂದು ತಾಲ್ಲೂಕ್ ಅಡ್ಮಿನಿಸ್ಟ್ರೇಷನ್, ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಸರ್ಕಾರಿ ನೌಕರರು ಸರಿಯಾದ ಸಮಯಕ್ಕೆ ಬರಲಿಕ್ಕೋಸ್ಕರ ಒಂದು ಅಟೆಂಡೆನ್ಸ್ ಮಾಡುವಂತಹದು, ಮತ್ತು ಅವರು ಎಷ್ಟು ಗಂಟೆಗೆ ಹಾಜರು ಆಗುತ್ತಾರೆ? ಎಷ್ಟು ಗಂಟೆಗೆ ಹೊರಗೆ ಹೋಗುತ್ತಾರೆ ಎಂದು ಒಂದು 'ಪಂಚಿಂಗ್ ಸಿಸ್ಟಂ'ಅನ್ನು ಇಂಟ್ರಡ್ಯೂಸ್ ಮಾಡಬೇಕು ಎನ್ನತಕ್ಕ ಧೈರ್ಯವನ್ನು ಕೂಡ ನಮ್ಮ ಸರ್ಕಾರ ಮಾಡಿದೆ ಎನ್ನತಕ್ಕ ಮಾತನ್ನು ಹೇಳಲಿಕ್ಕೆ ನಾನು ಇಚ್ಚೆ ಪಡುತ್ತೇನೆ. ಈಗ ನೀವು ಕೇಳಬಹುದು. ಹಿಂದೆ ಯಾವ ಸರ್ಕಾರ ಮಾಡಿತ್ತು ಎಂದು ಕೇಳಬಹುದು. ಯಾರು ಮಾಡಬಾರದು ಎಂದು ಇತ್ತು ಅವರ ಕೈಯಲ್ಲಿ ಆಡಳಿತ ಐದು ವರ್ಷ ಇತ್ತು. ಅವರು ನಡೆಸಬಹುದಾಗಿತ್ತು ಆದರೆ ಅವರು ಮಾಡಿಲಲ್ಲ. ಆದರೆ ನಮ್ಮ ಸರ್ಕಾರ ಅದನ್ನು ಮಾಡಿದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಹೆಮ್ಮೆ ಆಗಿದೆ. ಇದನ್ನು ನಾನು ಹೆಮ್ಮೆಯಿಂದ ಹೇಳುತ್ತೇನೆ. ನಮ್ಮ ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಅತಿ

ಹೆಚ್ಚಿನ ವಸತಿ ಯೋಜನೆಗಳನ್ನು ಮಾಡಿ ರಾಜೀವ್ ಗಾಂಧಿ ನಿಗಮ ಮತ್ತು ಲ್ಯಾಂಡ್ ಆರ್ಮಿ ಮುಖಾಂತರ ಹೆಚ್ಚಿನ ಮನೆಗಳನ್ನು ಕೊಡುವುದು ಏನಿದೆ ಇದರಲ್ಲಿ ಎರಡು ಲಕ್ಷ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಕೂಡ ಸರ್ಕಾರ ಮುನ್ನುಗ್ಗಿರತಕ್ಕದ್ದು, ಇದು ನಿಜಕ್ಕೂ ಶ್ಲಾಘನೀಯವಾದಂತಹ ಮಾತು ಎಂದು ಹೇಳುತ್ತೇನೆ. ಇನ್ನು ಕೃಷಿ ಬಗ್ಗೆ ಪತ್ರಿಕೆಯಲ್ಲಿ ಒಂದೆರಡು ಟೀಕೆಗಳು ಬಂದಿವೆ. ಕೃಷಿ ಬಗ್ಗೆ ಸ್ವಲ್ಪ ಅಷ್ಟಾಗಿ ಒತ್ತನ್ನು ಕೊಟ್ಟಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಆದರೆ ನಾನು ಈ ಸಭೆಯಲ್ಲಿ ಹೇಳುತ್ತೇನೆ. ಈ ಕೃಷಿಗಾಗಿ ವಿಶ್ವ ಬ್ಯಾಂಕಿನಿಂದ 12 ಸಾವಿರ ಕೋಟಿ ರೂಪಾಯಿಗಳ ಸಾಲ ತಂದು ಅದರ ಬೆಳವಣಿಗೆಗೆ ಕೊಡಬೇಕು ಎಂಬ ವಿಚಾರ ನಡೆದಿದೆ. ಕೃಷಿಗೆ ವಿಮೆಯನ್ನು ಮಾಡಿಸಲಿಕ್ಕೆ ಪ್ರಯತ್ನ ಮಾಡಲಾಗಿದೆ. ಕೃಷಿಗೆ ಇನ್‌ಕಂ ಟ್ಯಾಕ್ಸ್ ಹಾಕಬೇಡಿ ಎನ್ನತಕ್ಕ ತೀರ್ಮಾನಕ್ಕೆ ಬಂದಿದ್ದೇವೆ. ಇಷ್ಟಾದರೂ ಕೂಡ ಕೃಷಿಗೆ ಇವತ್ತು ಒತ್ತನ್ನು ಕೊಟ್ಟಿಲ್ಲ ಎನ್ನತಕ್ಕ ಮಾತನ್ನು ಏನು ಹೇಳುತ್ತಾರೆ ಇದು ನಿಜಕ್ಕೂ ಸತ್ಯಕ್ಕೆ ದೂರವಾದ ಮಾತು ಎಂದು ನಾನು ಹೇಳಬೇಕಾಗುತ್ತದೆ. ಮತ್ತೆ ಹಾಗೆಯೇ ಈ ರಿಯಾಯಿತಿ ವಿಚಾರದಲ್ಲಿ ಸುಮಾರು 77 ಕೋಟಿ ರೂಪಾಯಿಗಳ ರಿಯಾಯಿತಿ ಕೊಟ್ಟಿರುವುದನ್ನು ನೋಡಬಹುದು ಈ ಬಡ ಜನತೆ ಮತ್ತು ಕೆಳವರ್ಗದ ಜನಕ್ಕೆ ತೊಂದರೆ ಆಗಬಾರದು ಎನ್ನುವ ದೃಷ್ಟಿಯಲ್ಲಿ ನಮ್ಮ ಸರ್ಕಾರ ಮುಂದೆ ಬಂದಿದ. ಇದನ್ನು ಕೂಡ ಸ್ವಾಗತಿಸುತ್ತೇನೆ. ಮತ್ತು ಎಲ್ಲಕ್ಕಿಂತ ನಮ್ಮ ಶಾಸಕರ 'ಅಭಿವೃದ್ಧಿ ಫಂಡ್' ಎನ್ನತಕ್ಕ ಒಂದು ಕಾರ್ಯಕ್ರಮವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಿದ್ದಾರೆ. ಇದುವರೆವಿಗೂ ನಮ್ಮ ಎಂ.ಪಿ.ಗಳಿಗೆ ಮಾತ್ರ ಆ ಹಕ್ಕು ಇದ್ದು, ಅವರುಗಳು ತಮ್ಮ ಕ್ಷೇತ್ರದಲ್ಲಿ ಯಾವುದೇ ಕೆಲಸವನ್ನು ಬೇಕಾದರೂ ಮಾಡಿಸುವುದಕ್ಕೆ ಡಿಸ್ಕ್ರಿಷನರಿ ಪವರ್ ಇದ್ದುದನ್ನು ಈಗ ನಮಗೆ ಕೊಡುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಮುಂದೆ ಬಂದು ತೀರ್ಮಾನ ತೆಗೆದುಕೊಂಡು ಸಾಧ್ಯವಾದಷ್ಟು ಹೆಚ್ಚಿನ ರೀತಿಯಲ್ಲಿ ಹಣಕಾಸಿನ ಸಹಾಯವನ್ನು ಎಲ್ಲಾ ಶಾಸಕರಿಗೂ ಒದಗಿಸಿಕೊಡುತ್ತೇನೆ ಎನ್ನವಂಥ ಮಾತನ್ನು ಅವರು ಹೇಳಿದ್ದಾರೆ. ನಾವು ಇದನ್ನು ಸ್ವಾಗತಿಸುತ್ತೇವೆ. ಬಹುಶಃ ನಮ್ಮ ವಿರೋಧ ಪಕ್ಷದ ಮಿತ್ರರೂ ಕೂಡ ಇದನ್ನು ಸ್ವಾಗತಿಸುತ್ತಾರೆಂದು ನಾನು ನಂಬಿದ್ದೇನೆ. ಏಕೆಂದರೆ ಒಬ್ಬರಿಗಷ್ಟೇ ಹಣ ಕೊಡುವಂತಿಲ್ಲ, ಎಲ್ಲರಿಗೂ ಸಮಾನವಾಗಿ ಕೊಡಬೇಕಾಗುತ್ತದೆ. ಆ ರೀತಿ ಹಣವನ್ನು ಹಂಚಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳುವಂಥಾದ್ದು ಉತ್ತಮವಾದ ಕೆಲಸವಾಗಿದೆ. ಇನ್ನು ಶಾಸಕರಾಗಿ ಆಯ್ಕೆಯಾಗಿ ರಾಜ್ಯದ ನಾನಾ ಮೂಲೆಗಳಿಂದ ಬೆಂಗಳೂರಿಗೆ ಬಂದ ನಮಗೆ ಇಲ್ಲೊಂದು ಅಭಾವ ಕಾಡಿದ್ದು ಏನೆಂದರೆ, ಬೆಂಗಳೂರಿನಲ್ಲಿ ಉತ್ತಮ ಗಾಳಿ ಸಿಗುತ್ತಿಲ್ಲ. ಮಾಲಿನ್ಯರಹಿತವಾದ ಉತ್ತಮವಾದ ಗಾಳಿಯನ್ನು ನಾವು ಇಲ್ಲಿ ಸೇವಿಸುತ್ತಿಲ್ಲ. ನಾವು ಹಳ್ಳಿಗಾಡಿನಲ್ಲಿದ್ದಾಗ ನಮ್ಮ ಊರು ಎಷ್ಟು ಚೆನ್ನಾಗಿತ್ತೆಂಬ ಭಾವನೆ ನಮಗೆ ಬರುತ್ತಿತ್ತು. ಆದರೆ, ಇವೊತ್ತು ಆ ಒಂದು ಅಭಾವವನ್ನು ನಾವು ಬೆಂಗಳೂರಿನಲ್ಲಿ ಕಾಣುತ್ತಿದ್ದೇವೆ. ಇದಕ್ಕುತ್ತರವಾಗಿ ನಮ್ಮ ಸರ್ಕಾರ ಇವೊತ್ತು ರೇಸ್ ಕೋರ್ಸ್ ಮತ್ತು ಕೇಂದ್ರ ಕಾರಾಗೃಹದ ಪ್ರದೇಶವನ್ನು ಗ್ರೀನ್ ಬೆಲ್ಟ್ ಆಗಿ ಪರಿವರ್ತಿಸಿ ವಿಧಾನಸೌಧದ ಮುಂದಿರುವ ದೊಡ್ಡ ಪಾರ್ಕ್‌ನ ರೀತಿಯಲ್ಲಿ ಅದನ್ನೂ ಪಾರ್ಕ್ ತರಹ ಅಭಿವೃದ್ಧಿಪಡಿಸಿ ಮಾಲಿನ್ಯ ವಾತಾವರಣವೇನಿದೆ, ಅದನ್ನು ಸುಧಾರಿಸುವ ಪ್ರಯತ್ನವನ್ನು ಸರ್ಕಾರ ಮಾಡಿರುವುದಕ್ಕೆ ಖಂಡಿತವಾಗಿ

ಸ್ವಾಗತಿಸಬೇಕು. ಈ ಒಂದು ವಿಚಾರವನ್ನು ತಮ್ಮ ಮುಂದೆ ಪ್ರಸ್ತಾಪಿಸುತ್ತಾ, ಸರ್ಕಾರದ ಮುಂದೆ ನಾನು 2-3 ಸಲಹೆಗಳನ್ನು ಮಂಡಿಸುವುದಕ್ಕೆ ತಮ್ಮ ಅನುಮತಿ ಬೇಡುತ್ತೇನೆ. ಏನೆಂದರೆ it is an accepted rule in budget making that there should be less governance and more freedom. ಆ ಒಂದು ಪ್ರಿನ್ಸಿಪಲ್ ಅನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಳವಡಿಸಿಕೊಂಡು ಹೋಗುವುದು ಬಹಳ ಒಳ್ಳೆಯದೆಂಬ ಭಾವನೆ ನನಗಾದರೂ ಕೂಡ ಬರುತ್ತಿದೆ. ಈ ಬಜೆಟ್‌ನಲ್ಲಿ ಅಟೆಂಪ್ಟ್ ಮಾಡಿದ್ದರೂ, ಇನ್ನು ಹೆಚ್ಚಿನ ರೀತಿಯಲ್ಲಿ ಆಗಬಹುದೆಂಬ ಆಶಾಕಿರಣವನ್ನು ನಾನು ಇಟ್ಟುಕೊಂಡಿದ್ದೇನೆ. ಮತ್ತು ಸರ್ಕಾರಿ ಕೆಲಸದ ಬಗ್ಗೆ ಕೂಡ ಬಹಳ ಚೆನ್ನಾಗಿ ರಿಸಲ್ಟ್ ಓರಿಯೆಂಟೆಡ್ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಎಲ್ಲಾ ವಿಚಾರದಲ್ಲೂ ಕೂಡ ನಮ್ಮ ಸರ್ಕಾರ ಪ್ರೋಗ್ರೆಸಿವ್ ಆಗಿ ಯೋಚನೆ ಮಾಡಿ 'ಸರ್ವೆ ಜನ ಸುಖಿನೋ ಭವಂತು" ಎನ್ನುವ ರೀತಿಯಲ್ಲಿ ಇವೊತ್ತು ರಾಜ್ಯದ ಎಲ್ಲಾ ಜನತೆಯ ಕಲ್ಯಾಣ ಬಯಸಿ ಅವರಿಗೆ ಉತ್ತಮವಾದ ಕಾರ್ಯಕ್ರಮಗಳನ್ನು ತಲುಪಿಸುವುದಕ್ಕೆ ಈ ಸರ್ಕಾರ ಮುಂದಾಗಿರುವುದನ್ನು ಸ್ವಾಗತಿಸುತ್ತೇನೆ ಮತ್ತು ಈ ಬಜೆಟ್ ಸಹ ಬಹಳ ಪ್ರೋಗ್ರೆಸಿವ್ ಆಗಿದೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಈ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತಾ, ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಉಪಾಧ್ಯಕ್ಷರೆ, ಈ ವರ್ಷದ ಆಯವ್ಯಯ ಮುಂಗಡ ಪತ್ರವನ್ನು ನಮ್ಮ ಸಭಾ ನಾಯಕರಾದ ಶ್ರೀ ಎಸ್.ಎಂ. ಕೃಷ್ಣರವರು ಇಲ್ಲಿ ಮಂಡಿಸಿದ್ದಾರೆ. ಅದರಲ್ಲಿ 'ರೈತರಿಂದ, ರೈತರಿಗಾಗಿ ಮತ್ತು ರೈತರಿಗೋಸ್ಕರ ನಡೆಸುವಂಥ ಸರ್ಕಾರ' ಎಂಬ ವಿಚಾರವನ್ನು ಮುಖ್ಯವಾಗಿ ಉಲ್ಲೇಖಿಸಿದ್ದಾರೆ. ನಮಗೆಲ್ಲರಿಗೂ ತಿಳಿದಿರುವಂತೆ ನಮಗೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಕೂಡ ರೈತನೇ ಸ್ವತಂತ್ರವಾಗಿ ತಾನು ಬೆಳೆದಂಥ ಕೃಷಿ ಉತ್ಪನ್ನಗಳಿಗೆ ತಾನೇ ಸ್ವತಃ ಬೆಲೆ ನಿಗದಿಪಡಿಸಿಕೊಂಡು ಮಾರಾಟ ಮಾಡುವಂಥ ಪರಿಸ್ಥಿತಿಗೆ ಇನ್ನೂ ಬಂದು ಮುಟ್ಟಿಲ್ಲ. ರೈತರ ಉದ್ಧಾರವಾಗಬೇಕಿದ್ದರೆ ಆತ ಬೆಳೆದಂಥ ಬೆಳೆಗೆ ಎಷ್ಟು ಖರ್ಚಾಗಿರುತ್ತದೋ, ಅದನ್ನು ಭರಿಸಿ, ಲಾಭಾಂಶ ತೆಗೆದುಕೊಂಡು ಜೀವನ ನಿರ್ವಹಿಸುವಂಥ ವ್ಯವಸ್ಥೆ ಇರಬೇಕಾಗುತ್ತದೆ. ತಮಗೆ ಗೊತ್ತಿರುವಂತೆ ಕೈಗಾರಿಕೆಗಳು ಯಾವ ರೀತಿ ಉತ್ಪನ್ನಗಳನ್ನು ತಯಾರಿಸುತ್ತವೋ, ಉತ್ಪನ್ನವಾದಂಥ ಮಾಲಿಗೆ ಒಟ್ಟು ಎಷ್ಟು ಖರ್ಚಾಗಿರುತ್ತದೋ, ಖರ್ಚಾದ ಹಣ ಹಾಗೂ ಲಾಭಾಂಶದ ಹಣವನ್ನು ತೆಗಿದಿಟ್ಟು ಮಾಲನ್ನು ಮಾರಾಟ ಮಾಡುವಂಥ ಅವಕಾಶ ಕೈಗಾರಿಕೆಗಳಿಗೆ ಇರುವಂತೆ ಕೃಷಿಯನ್ನು ಸಹ ತಾವು ಕೈಗಾರಿಕೆಯೆಂದು ಪರಿಗಣಿಸಿ ಘೋಷಿಸಬೇಕು. ರೈತನಿಗೆ ಉತ್ತೇಜನ ಸಿಗುವ ರೀತಿಯಲ್ಲಿ ತಾನು ಉತ್ಪಾದಿಸಿದ ಉತ್ಪನ್ನಗಳನ್ನು ಕೂಡ ವ್ಯವಸ್ಥಿತವಾದ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಮಾರುವುದಕ್ಕೆ ಸರ್ಕಾರ ಸೂಕ್ತ ವ್ಯವಸ್ಥೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳು ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿದೆ. ಇವು ವ್ಯವಸ್ಥಿತ ರೀತಿಯಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ? ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿದೆಯೇ? ರೈತರು ಉತ್ಪಾದಿಸಿದಂಥ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ತಾಲ್ಲೂಕು

ಕೇಂದ್ರಗಳಲ್ಲಿ ಅದನ್ನು ದಾಸ್ತಾನು ಇಡುವುದಕ್ಕೆ ಗೋದಾಮಿನ ವ್ಯವಸ್ಥೆ ಇದೆಯೇ ಎಂದು ಕೇಳುತ್ತಿದ್ದೇನೆ. ಶೈತ್ಯಾಗಾರದ ವ್ಯವಸ್ಥೆ ಇದ್ದಲ್ಲಿ ತೋಟಗಾರಿಕೆಯಲ್ಲಿ ರೈತ ಬೆಳೆದಂಥ ಬೆಳೆಗಳನ್ನು ಅದರಲ್ಲಿ ಸಂಗ್ರಹಿಸಿಟ್ಟು ಆ ಬೆಳೆಗೆ ಉತ್ತಮವಾದ ಬೆಲೆ ಬಂದಾಗ ಉತ್ಪನ್ನಗಳು ಮಾರಾಟವಾಗಿ ರೈತನಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ರಾಜ್ಯದ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಗೋದಾಮು ಹಾಗೂ ಶೈತ್ಯಾಗಾರದ ವ್ಯವಸ್ಥೆ ಮಾಡುವ ಉದ್ದೇಶ ಹೊಂದಿದೆಯೇ ಎಂದು ಕೇಳುತ್ತಿದ್ದೇನೆ. ಇನ್ನು ರೈತ ಇವೊತ್ತು ಸರ್ಕಾರದಿಂದ ಅಥವಾ ಬ್ಯಾಂಕುಗಳಿಂದ ಹಣಕಾಸಿನ ಸಹಾಯ ಪಡೆಯುತ್ತಿದ್ದು, ನಬಾರ್ಡ್‌ನಿಂದ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲ ಸಿಗುತ್ತಿದ್ದರೆ ಆತ ಪಡೆದುಕೊಳ್ಳುವ ಸ್ಥಿತಿಗೆ ಬಂದಾಗ ಶೇಕಡ 15ರಷ್ಟು ಬಡ್ಡಿ ಬೀಳುತ್ತದೆ. ಆದಕಾರಣ, ತ್ರಿ ಟೈರ್ ಮತ್ತು ಫೋರ್ ಟೈರ್ ಸಿಸ್ಟಂ ಅನ್ನು ಬದಲಾಯಿಸಿ ನಬಾರ್ಡ್‌ನಿಂದ ನೇರವಾಗಿ ಅಪೆಕ್ಸ್ ಬ್ಯಾಂಕ್‌ಗೆ ಬಂದು, ಅಪೆಕ್ಸ್ ಬ್ಯಾಂಕ್‌ನಿಂದ ನೇರವಾಗಿ ಪ್ರಾಥಮಿಕ ಸಹಕಾರಿ ಸಂಘಗಳಿಗೆ ಬಂದರೆ ರೈತನಿಗೆ ಕಡಿಮೆ ದರದಲ್ಲಿ ಸಾಲ ಸಿಗುತ್ತದೆ ಮತ್ತು ಸಾಲ ತೆಗೆದುಕೊಂಡ ಬಳಿಕ ಅದನ್ನು ಮರುಪಾವತಿ ಮಾಡುವುದಕ್ಕೂ ಸಾಧ್ಯವಾಗುತ್ತದೆ. ಶೇಕಡ 4ರ ಬಡ್ಡಿದಗದಲ್ಲಿ ಬರುವಂಥ ನಬಾರ್ಡ್ ಸಾಲ ಆತನಿಗೆ ತಲುಪುವಷ್ಟರಲ್ಲಿ ಶೇಕಡ 15ರಷ್ಟಾದರೆ ಆತ ಮರುಪಾವತಿ ಮಾಡುವ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಆದುದರಿಂದ, ಈ ಸಿಸ್ಟಂ ಅನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ? ಎಂದು ಕೇಳಬಯಸುತ್ತೇನೆ. ಅಪೆಕ್ಸ್ ಬ್ಯಾಂಕ್‌ನಿಂದ ಡಿ.ಸಿ.ಸಿ. ಬ್ಯಾಂಕ್ ಮೂಲಕ ಸಂಪರ್ಕವಿಟ್ಟುಕೊಳ್ಳದೇ ನೇರವಾಗಿ ಅಥವಾ ಡಿ.ಸಿ.ಸಿ. ಬ್ಯಾಂಕನ್ನೇ ಅಪೆಕ್ಸ್ ಬ್ಯಾಂಕಿನ ಒಂದು ಶಾಖೆಯನ್ನಾಗಿ ಮಾಡಿಕೊಂಡು ಸಾಲ ವಿತರಿಸುವಂಥ ವ್ಯವಸ್ಥೆ ಮಾಡಿದಲ್ಲಿ ಸಾಲ ಪಡೆಯುವಾಗ ಕಮೀಷನ್ ಹಣವೆಂದು ಏನು ಹಿಡಿದುಕೊಳ್ಳುತ್ತಾರೆ ಅದು ತಪ್ಪಿದಂತಾಗುತ್ತದೆ ಮತ್ತು ಅಲ್ಲಿಯ ಸಿಬ್ಬಂದಿ ವೆಚ್ಚ ಕೂಡ ತಪ್ಪಿ ಹೋಗಿ ಶೇಕಡಾ 4ರ ಬಡ್ಡಿ ದರದಲ್ಲಿ ರೈತನಿಗೆ ಸಾಲ ಸಿಗುವಂಥ ಉತ್ತಮ ಯೋಜನೆ ಇದಾಗುತ್ತದೆ. ರೈತನಿಗೆ ತಾನು ಬೆಳೆದಂಥ ಬೆಳೆಯ ಬೆಲೆ ಹಠಾತ್ತನೆ ಕುಸಿದಾಗ ಆತನಿಗೆ ನಿಜವಾಗಿಯೂ ತೊಂದರೆಯುಂಟಾಗುವುದರಿಂದ, ಬೆಲೆಯ ಸ್ಥಿರತೆ ಕಾಪಾಡುವುದಕ್ಕೆ ಸರ್ಕಾರ ಏನಾದರೊಂದು ಯೋಜನೆ ತಯಾರಿಸಿದೆಯೇ? ಹಾಗೆ ಯೋಜನೆ ತಯಾರಿಸಿದಲ್ಲಿ ರೈತ ತಾನು ಬೆಳೆದಂಥ ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಬಂದಾಗ ಮಾರಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ. ರೈತರು ಈ ದೇಶದ ಬೆನ್ನೆಲುಬು ಎಂದು ನಾವು ಹೇಳುತ್ತೇವೆ. ಆದರೆ ರೈತರು ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರ ಅಥವಾ ರಾಜಧಾನಿಗೆ ಬಂದಂಥ ಸಂದರ್ಭದಲ್ಲಿ ಉಳಿದುಕೊಳ್ಳುವುದಕ್ಕೆ 'ರೈತ ಭವನ'ದ ವ್ಯವಸ್ಥೆ ಇದೆಯೇ? ಇದರ ಕುರಿತು ಸರ್ಕಾರ ಯೋಚಿಸುವಂಥ ಅಗತ್ಯವಿದೆ. ಇದನ್ನು ಬಜೆಟ್‌ನಲ್ಲಿ ಕೂಡ ಪ್ರಸ್ತಾಪ ಮಾಡಿಲ್ಲ. ಇನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯದಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರ ಯೋಚಿಸಿದ್ದು, ಬಡ ರೈತ ತಾನು ಬೆಳೆದಂಥ ಬೆಳೆಗೆ ವಿಮೆ ಮಾಡಲು ಗೊತ್ತಿರುವುದಿಲ್ಲವಾದ್ದರಿಂದ ಆತ ಬೆಳೆದಂಥ ಕೃಷಿ ಉತ್ಪನ್ನಗಳು ಏನಿವೆ ಅವಕ್ಕೆ ಬೆಂಕಿಬಿದ್ದು ನಾಶವಾದಂಥ ಸಂದರ್ಭದಲ್ಲಿ ಸರ್ಕಾರ ಈ ಯೋಜನೆ ಮುಖಾಂತರ ಆತನಿಗೆ ವಿಮೆ ಕೊಡಲು ಮುಂದಾಗಬೇಕೆಂದು ತಮ್ಮ ಮುಲಕ ನಾನು ಸರ್ಕಾಗದಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಈ ರೀತಿ ರೈತ ಬೆಳೆದಂಥ ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡುವ ದಿಕ್ಕಿನಲ್ಲಿ ಚಿಂತನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಇನ್ನು ವಿದ್ಯುತ್ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ತಿನ ಕೊರತೆಯಿದ್ದು, ನಮಗೆಲ್ಲರಿಗೂ ತಿಳಿದಿರುವಂತೆ ನಗರ ಪ್ರದೇಶಕ್ಕೂ ಮತ್ತು ಗ್ರಾಮೀಣ ಪ್ರದೇಶಕ್ಕೂ ವಿದ್ಯುತ್ತಿನ ಸರಬರಾಜಿನಲ್ಲಿ ತಾರತಮ್ಯವೆಸಗಲಾಗುತ್ತಿದೆ. ನಿಜವಾಗಿಯೂ ರೈತನಿಗೆ 24 ಗಂಟೆಗಳ ಕಾಲ ವಿದ್ಯುತ್ ಬೇಕಾಗುತ್ತದೆ. ನಗರ ಪ್ರದೇಶಗಳಲ್ಲಿ 24 ಗಂಟೆಗಳ ಕಾಲ ವಿದ್ಯುತ್ ಸೌಕರ್ಯ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ದಿನದಲ್ಲಿ 6-8 ಗಂಟೆಗಳ ಕಾಲವೂ ವಿದ್ಯುತ್ ಕೊಡದೇ ಅಘೋಷಿತವಾಗಿ ಆಗಿಂದಾಗ್ಗೆ ಕಡಿತ ಮಾಡಲಾಗುತ್ತದೆ. ನಾನು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುವುದಿಷ್ಟೆ. ಇಷ್ಟು ವರ್ಷಗಳ ಕಾಲ ಸರ್ಕಾರ ನಡೆದುಕೊಂಡು ಬಂದಿದ್ದು ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಎಷ್ಟು ಸ್ಥಾಪನೆ ಮಾಡಿದೆ? ಈ ಕ್ಷೇತ್ರದಲ್ಲಿ ಕರ್ನಾಟಕವು ಸ್ವಾವಲಂಬಿಯಾಗಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆಯೇ? ಎಂಬ ಬಗ್ಗೆ ಯೋಚಿಸಿದರೆ ಕಿರು ಜಲ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯುತ್ ಕೊರತೆಯನ್ನು ನಿವಾರಿಸಬಹುದಾಗಿದೆ. ಉದಾಹರಣೆಗೆ, ಬೆಳ್ತಂಗಡಿ ತಾಲ್ಲೂಕು ಒಂದರಲ್ಲಿಯೇ ಅಂತಹ ಹತ್ತು ವಿದ್ಯುತ್ ಸ್ಥಾವರಗಳಿಗೆ ಉಪಯೋಗವಾಗುವಂಥ ಕೇಂದ್ರವನ್ನು ಗುರ್ತಿಸಿದ್ದು ಅದರಲ್ಲಿ ಮುಖ್ಯವಾಗಿ ಹೇಳುವುದಾದರೆ, ಬೆಳ್ತಂಗಡಿ ತಾಲ್ಲೂಕಿನ ದೊಂಡೋಳೆ, ಪಾಶಿಕಲ್, ಪಾರ್ಟಿಕಲ್ ಮುಂದಾಜೆ, ಬಳ್ಳೆ, ಚಾರ್ಮಾಡಿ, ಅನಡ್ಕ, ಎಳನೀರು, ಸೆರಿಯಾ ಈ ಹತ್ತು ಕೇಂದ್ರಗಳಲ್ಲಿ 80 ಮೆಗಾವಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆಂದು ಗುರುತಿಸಿದ್ದಾರೆ.

3.40 ಪಿ.ಎಂ

ಹಾಗೆ ಗುರುತಿಸಿರುವಂತಹ ಕೇಂದ್ರಗಳಲ್ಲಿ ತಾವು ಯಾವಾಗ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭ ಮಾಡುತ್ತೀರಿ? ಆ ಮೂಲಕವಾಗಿ ಆ ಜಿಲ್ಲೆಗೆ, ದಕ್ಷಿಣ ಕನ್ನಡ ಜಿಲ್ಲೆಗೆ ಬೇಕಾಗುವಷ್ಟು ವಿದ್ಯುತ್ತನ್ನು ಅಲ್ಲಿಂದ ಪೂರೈಕೆ ಮಾಡಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಕೂಡ ಸರ್ಕಾರ ಯಾವ ಯೋಜನೆಗಳನ್ನು ಹಾಕಿಕೊಂಡಿದೆ ಎಂಬುದರ ಬಗ್ಗೆ ಹೇಳಬೇಕಾಗುತ್ತದೆ. ಅದೇ ರೀತಿ ವಿದ್ಯುತ್ತಿನಲ್ಲಿ ಕೆಲವೊಂದು ತೊಂದರೆಗಳು ಇವೆ, ಲೋ-ವೋಲ್ಟೇಜಿನ ಸಮಸ್ಯೆ ಇದೆ. ಅದರ ಜೊತೆಗೆ ಅಲ್ಲಿಗೆ ಬೇಕಾಗಿರುವಂತಹ ಸೌಕರ್ಯಗಳ ಕೊರತೆ ಇದೆ. ಅದೇ ರೀತಿ ಪರಿಶಿಷ್ಟ ಪಂಗಡದವರು ವಾಸಿಸುತ್ತಿರುವಂತಹ ಕಡೆ ಕಾಲೋನಿಯಲ್ಲಿ ಆ ವರ್ಗದವರಿಗೆ ವಿದ್ಯುತ್ತಿನ ಅವಶ್ಯಕತೆ ಇದೆ. ಅದು ಕುಗ್ರಾಮ ಆಗಿರುವುದರಿಂದ ಅವರಿಗೆ ವಿದ್ಯುತ್ ಹೋಗದೇ ಇರುವಂತಹದು ಇದೆ. ಆ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯವರಿಂದ ಮಾನ್ಯ ಮಂತ್ರಿಗಳಿಗೆ ನನ್ನ ಕೋರಿಕೆ ಇದೆ, ವಿದ್ಯುತ್ತನ್ನು ಸರಬರಾಜು ಮಾಡಲಿಕ್ಕೆ ಕಷ್ಟ ಆಗುವುದಿದ್ದರೆ ಬದಲಿ ಇಂಧನದ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯ ಉಂಟೇ? ಬದಲಿ ಇಂಧನದ ಬಗ್ಗೆ ನಾವು ಕೇಳುತ್ತಿರುವುದು, ಹಾಗೆ ಸಾಧ್ಯವಿದ್ದರೆ ಬದಲಿ ಇಂಧನದ ವ್ಯವಸ್ಥೆಯನ್ನು ಮಾಡಬೇಕಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ. ಅದರ ಜೊತೆಗೆ ಈಗ ಪರಿಶಿಷ್ಟ ಜಾತಿ

ಹಾಗೂ ಪರಿಶಿಷ್ಟ ಪಂಗಡಗಳ ಕುಟುಂಬಗಳು ಹಳ್ಳಿಯಲ್ಲಿ ತುಂಬಾ ಇವೆ. ಅಲ್ಲಿ ಕೂಡ ಸಾರಿಗೆಯ ವ್ಯವಸ್ಥೆಯ ಯೋಜನೆಗಳನ್ನು ಮಾಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಸರ್ಕಾರ ಏನಾದರೂ ಕ್ರಮವನ್ನು ಕೈಗೊಳ್ಳುತ್ತದೆಯೇ ಆ ಬಗ್ಗೆ ಕೂಡ ತಿಳಿಸಬೇಕಾಗಿದೆ. ಅದರ ಜೊತೆಗೆ ನಾನು ಸರ್ಕಾರವನ್ನು ವಿನಂತಿ ಮಾಡುವುದು ಇಷ್ಟೇ, ವಿದ್ಯುತ್ ಉಪಕರಣಗಳಿಗೆ ಬೇಕಾಗುವಂತಹ ಉಗ್ರಾಣಗಳನ್ನು ಪ್ರತಿ ತಾಲ್ಲೂಕಿಗೆ ಹೊಂದಿರುವಂತಹ ಉಗ್ರಾಣವನ್ನು ಮೂರು, ನಾಲ್ಕು ತಾಲ್ಲೂಕುಗಳಿಗೆ ಒಂದರಂತೆ ಮಾಡಿಕೊಂಡು ಅಲ್ಲಿ ಸಲಕರಣೆಗಳು ಸರಿಯಾಗಿ ಸಿಗುತ್ತಾ ಇಲ್ಲ, ಮೀಟರ್‌ಗಳು ಸಿಗುತ್ತಾ ಇಲ್ಲ. ಕೇಳಿದ ವಸ್ತುಗಳು ಸಿಗದೇ ಇರುವಂತಹ ಸಂದರ್ಭಗಳು ಜಾಸ್ತಿ ಇವೆ. ನಾನು ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುವುದು ಇಷ್ಟೆ, ಪ್ರತಿ ಒಂದು ವಿದ್ಯುತ್ತಿನ ಉಪಕರಣ ಕೂಡ ಬೇಕಾದ ನಿಟ್ಟಿನಲ್ಲಿ ಅದು ತಾಲ್ಲೂಕಿನ ಕೇಂದ್ರಗಳಲ್ಲಿ ಸಿಗುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತಿದ್ದೇನೆ. ಅದರ ಜೊತೆಗೆ ವಿದ್ಯುತ್ತಿನಲ್ಲಿ ಕೆಲವೊಂದು ತೊಂದರೆಗಳು ಇವೆ. ವಿದ್ಯುತನ್ನು ಬಳಸುವಾಗ ಕೆಲವು ಸಲ ನದಿ ನೀರಿನಿಂದ ತೆಗೆಯಬೇಕಾಗುತ್ತದೆ. ನದಿ ನೀರಿನಿಂದ ವಿದ್ಯುತ್ತನ್ನು ಬಳಸಿ ತೆಗೆದಾಗ ಕೆಲವು ಸಲ ಸರ್ಕಾರದವರು ಜನವರಿಯಿಂದ ಮೇ ತಿಂಗಳವರೆಗೆ ನೀರನ್ನು ತೆಗೆಯಬಾರದು ಎಂಬ ಒಂದು ಆದೇಶವನ್ನು ಹೊರಡಿಸುತ್ತಾರೆ. ರೈತ ತುಂಬಾ ಕಂಗಾಲು ಆಗುತ್ತಾನೆ. ಆ ಬಗ್ಗೆ ಕೂಡ ಸರ್ಕಾರ ಯೋಚನೆ ಮಾಡಬೇಕಾಗಿದೆ. ಈ ರೀತಿ ವಿದ್ಯುತ್ತಿನಲ್ಲಿ ಕೂಡ ನಾವು ಸ್ವಾವಲಂಬಿಗಳಾಗಲಿಕ್ಕೆ ಬೇಕಾಗುವಂತಹ ಯೋಜನೆಗಳನ್ನು ಮಾಡುವುದರ ಬಗ್ಗೆ ಕೂಡ ಸರ್ಕಾರ ಗಮನವನ್ನು ಹರಿಸಬೇಕಾಗುತ್ತದೆ. ಇದರ ಜೊತೆಗೆ ಮಹಿಳೆಯರಿಗೆ ಕಾರ್ಯಕ್ರಮವನ್ನು ಹಾಕಿದ್ದಾರೆ. ಈ ಸ್ವಸಹಾಯ ಗುಂಪು ಯೋಜನೆ, ಈಗಾಗಲೇ ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ. ಗ್ರಾಮಾಂತರ ಪ್ರದೇಶದಲ್ಲಿ ನಾನು ಉದಾಹರಣೆಗೆ ಹೇಳುವುದಿದ್ದರೆ ಬೆಳ್ತಂಗಡಿ ತಾಲ್ಲೂಕಿನಲ್ಲಿ 'ಪ್ರಗತಿ ಬಂಧು' ಯೋಜನೆ, ಧರ್ಮಪ್ಪನವರ ಗ್ರಾಮಾಭಿವೃದ್ಧಿ ಯೋಜನೆ ಮೂಲಕವಾಗಿ ಮಾಡುತ್ತಿದ್ದಾರೆ. ಅಲ್ಲಿ ಸ್ವಸಹಾಯ ಗುಂಪಿನ ಯೋಜನೆ ತಯಾರಾಗಿದೆ. ಆ ಮೂಲಕವಾಗಿ ಅಲ್ಲಿನ ಗ್ರಾಮೀಣ ಜನರು ಅದರ ಉಪಯೋಗವನ್ನು ಪಡೆಯುತ್ತಿದ್ದಾರೆ. ಅದರ ಜೊತೆಗೆ ಕೇಂದ್ರ ಸಹಕಾರಿ ಬ್ಯಾಂಕ್ ಏನಿದೆ ಅದೂ ಕೂಡ ಸ್ವಸಹಾಯ ಗುಂಪಿನ ಯೋಜನೆಯನ್ನು ಮಾಡುವುದರ ಮೂಲಕ ಮಹಿಳೆಯರಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟಿದ್ದಾರೆ ಅದರ ಜೊತೆಯಲ್ಲಿ ಸರ್ಕಾರ ಕೂಡ ಮಹಿಳೆಯರಿಗೆ ಕೊಟ್ಟಿರುವಂತಹ ಯೋಜನೆ ಬಗ್ಗೆ ನಾವು ಕೂಡ ಸ್ವಾಗತವನ್ನು ಮಾಡಲೇಬೇಕಾಗಿದೆ. ಆ ನಿಟ್ಟಿನಲ್ಲಿ ಅಲ್ಲಿ ಕೂಡ ಅದು ಕೇಂದ್ರದಿಂದ ಬಂದಿರುವಂತಹ, ಸಹಾಯ ಏನು ಇದೆ ಅವರಿಂದ ತಮ್ಮ ಯೋಜನೆಗೆ ಬೇಕಾಗಿರುವಂತಹ ಎಲ್ಲಾ ಅವಶ್ಯಕತೆಗಳನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತದೆ. ಅದನ್ನು ಮಾಡಿರುವಂತಹದು ಕೂಡ ಒಳ್ಳೆಯ ಕಾರ್ಯಕ್ರಮವಾಗಿದೆ, ಒಳ್ಳೆಯ ಕಾರ್ಯಕ್ರಮ ಯಾವುದೇ ಸರ್ಕಾರ ಮಾಡಲಿ, ಅದನ್ನು ಹೇಳುವಂತಹದು, ಅಭಿನಂದನೆ ಮಾಡುವುಂತಹದು ನಮ್ಮ ಕರ್ತವ್ಯ ಕೂಡ ಆಗಿದೆ. ಅದರ ಜೊತೆಗೆ ಶಿಕ್ಷಣ ಕ್ಷೇತ್ರದ ಬಗ್ಗೆ ನಾವು ಹೇಳುತ್ತೇವೆ, ಶಿಕ್ಷಣದಲ್ಲಿ ಬದಲಾವಣೆ ಆಗಬೇಕು ಎಂದು, ಮೊದಲಿನ ಶಿಕ್ಷಣ ಪದ್ಧತಿಯಿಂದ ಲಾಭ ಆಗುವುದಿಲ್ಲ. ಶಿಕ್ಷಣ ಪಡೆದ ತಕ್ಷಣ ಅವನಿಗೆ ಉದ್ಯೋಗ ಸಿಗುವುದಿಲ್ಲ. ಉದ್ಯೋಗಕ್ಕಾಗಿ ಮಾತ್ರ ಶಿಕ್ಷಣ ಅಲ್ಲ. ಆ ನಿಟ್ಟಿನಲ್ಲಿ ಕೂಡ ಶಿಕ್ಷಣದಲ್ಲಿ ಬದಲಾವಣೆ ಆಗಬೇಕಾಗಿದೆ. ನಾವೆಲ್ಲ

ತಿಳಿದಹಾಗೆ ನಗರ ಪ್ರದೇಶದಲ್ಲಿ ಆಂಗ್ಲ ಮಾಧ್ಯಮದ ಶಾಲೆಗಳು ಇವೆ. ವಿದ್ಯಾರ್ಥಿಗಳಿಗೆ ಪುಸ್ತಕದ ಹೊರೆ ಜಾಸ್ತಿ ಆಗಿದೆ. ಅದೇ ರೀತಿ ಗ್ರಾಮಾಂತರ ಪ್ರದೇಶದಲ್ಲಿ ಕನ್ನಡ ಮಾಧ್ಯಮದ ಶಾಲೆಗಳು ಇವೆ. ಅಲ್ಲಿಯೂ ಕೂಡ, ಗ್ರಾಮಾಂತರ ಪ್ರದೇಶದ ಜನರಿಗೆ ಕೂಡ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಹೋಗಬೇಕು ಎಂಬ ವಿಚಾರ ಇರುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡಬೇಕಾಗಿದೆ. ಈ ಪಠ್ಯ ಪುಸ್ತಕದಲ್ಲಿ ಪ್ರಾಥಮಿಕ ಹಂತದ ಒಂದನೇ ಕ್ಲಾಸಿನಲ್ಲಿ ಕನ್ನಡ ಮಾಧ್ಯಮದಲ್ಲಿ ಇಂಗ್ಲೀಷ್ ಪಾಠವನ್ನು ಅಳವಡಿಸಿಕೊಂಡು ಆ ಮೂಲಕ ಬದಲಾವಣೆಯನ್ನು ತರಲಿಕ್ಕೆ ಸಾಧ್ಯ ಇದೆ. ಅದರ ಬಗ್ಗೆ ಕೂಡ ಇವತ್ತು ನಮ್ಮ ಯೋಜನೆ ತಯಾರು ಮಾಡಬೇಕಾಗಿದೆ. ಅದರ ಜೊತೆಗೆ ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಶಿಕ್ಷಣದಲ್ಲಿ ಶೇಕಡಾ 15ರಷ್ಟು ಹಣ ಕಡಿತವನ್ನು ಮಾಡಿದ್ದಾರೆ. ಇದು ಸರಿಯಲ್ಲ. ಈ ಕಡಿತ ಮಾಡಿರುವಂತಹ ಅನುದಾನಿತ ಶಾಲೆಗಳಿಗೆ ಶೇಕಡ 15ರಷ್ಟು ಹಣ, ಮತ್ತೆ ಹೆತ್ತವರ ಮೇಲೆ ದುಬಾರಿ ಹೊರೆ ಬೀಳುತ್ತದೆ. ಅನುದಾನ ಇಲ್ಲ ಎಂದು ಹೇಳಿಕೊಂಡು ಸರ್ಕಾರಿ ಅನುದಾನಿತ ಶಾಲೆಗಳವರು ವ್ಯಾಪಾರವನ್ನು ಮಾಡಲಿಕ್ಕೆ ಪ್ರಾರಂಭ ಮಾಡುತ್ತಾರೆ. ಅದರಿಂದ ಸರಿಯಾದಂತಹ ಶಿಕ್ಷಣ ವಿದ್ಯಾರ್ಥಿಗಳಿಗೆ ಸಿಗುವುದಿಲ್ಲ, ಆದ್ದರಿಂದ ಅದರ ಬಗ್ಗೆ ಕೂಡ ಯೋಚನೆಯನ್ನು ಮಾಡಬೇಕಾದ ಅವಶ್ಯಕತೆ ಇದೆ. ಅದರ ಜೊತೆಗೆ ನಾವು ಮೊನ್ನೆ ಮಾನ್ಯ ಶಿಕ್ಷಣ ಮಂತ್ರಿಗಳಾದ ಮಾನ್ಯ ವಿಶ್ವನಾಥ್ ಅವರು ನಮ್ಮ ಬೆಳ್ತಂಗಡಿ ತಾಲ್ಲೂಕಿನ ಉಜಿರೆಗೆ ಬಂದಿದ್ದರು. ಒಂದು ಯೋಗ ಶಿಕ್ಷಣದ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಲ್ಲಿ ಕೂಡ ಅವರಿಗೆ ಮನವರಿಕೆ ಆಗುವ ದೃಷ್ಟಿಯಿಂದ ಆ ಎರಡು ದಿನದ ಕಾರ್ಯಕ್ರಮದಲ್ಲಿ ಕೊನೆಯ ಸಮಾರೋಪ ಸಮಾರಂಭದಲ್ಲಿ ಅವರು ಭಾಗವಹಿಸಿದ್ದರು. ಶಿಕ್ಷಣದಲ್ಲಿ ಬದಲಾವಣೆ ಆಗಬೇಕು. ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ಆಧ್ಯಾತ್ಮಿಕವಾಗಿ, ದೈಹಿಕವಾಗಿ ಅವರ ಮನ ಪರಿವರ್ತನೆ ಆಗಿ ಆ ಮೂಲಕವಾಗಿ ಶಿಕ್ಷಣದಲ್ಲಿ ಬದಲಾವಣೆಯನ್ನು ನಿರೀಕ್ಷಿಸುವಂತಹ ಒಂದು ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಎಲ್ಲಾ ಶಾಲೆಗಳಲ್ಲಿ ಆ ಯೋಗ ಶಿಕ್ಷಣವನ್ನು ಪ್ರಾರಂಭ ಮಾಡಿದ್ದಾರೆ. ಆ ಶಿಕ್ಷಣವನ್ನು ರಾಜ್ಯದ ಉದ್ದಗಲಕ್ಕೂ ತಂದು, ಆ ಮೂಲಕ ಶಿಕ್ಷಣದಲ್ಲಿ ಬದಲಾವಣೆ ತರಲಿಕ್ಕೆ ಸಾಧ್ಯ ಇದೆ. ಮಾನ್ಯ ಶಿಕ್ಷಣ ಮಂತ್ರಿಗಳೂ ಕೂಡ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನು ಹಂತಹಂತವಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈ ಒಂದು ವಿಚಾರದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಆಗಲೀ ಅಥವಾ ಈ ಬಜೆಟ್‌ನಲ್ಲಿ ಆಗಲೀ ಯಾವುದೇ ಒಂದು ವ್ಯವಸ್ಥೆಯನ್ನು ಮಾಡದಿರುವುದು ಕಂಡು ಬರುತ್ತದೆ. ನಾನು ಈ ಸದನದ ಮೂಲಕ, ತಮ್ಮ ಮೂಲಕ ವಿನಂತಿ ಮಾಡುವುದು ಇಷ್ಟೇ, ಮಾನ್ಯ ಮಂತ್ರಿಗಳು ಅಥವಾ ಸರ್ಕಾರ ಈ ಬಗ್ಗೆ ಚಿಂತನೆಯನ್ನು ಮಾಡುವಂತಹ ಅವಶ್ಯಕತೆ ಇದೆ ಎಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಅದರ ಜೊತೆಗೆ ಶಿಕ್ಷಣದಲ್ಲಿ ಮಹಿಳೆಯರಿಗೆ ಪಿಯುಸಿವರೆಗೆ ಶಿಕ್ಷಣವನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಅದು ಸ್ವಾಗತರ್ಹವಾದ ವಿಚಾರ. ಆದರೆ ಕೇಂದ್ರ ಸರ್ಕಾರದವರು ಇದರ ಮೊದಲೇ ಪದವಿಯವರೆಗೆ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಉಚಿತವಾಗಿ ಕೊಡುತ್ತೇವೆಂದು ಘೋಷಣೆ ಮಾಡಿ ಹೇಳಿದ್ದಾರೆ. ಅದರ ಅನುಷ್ಠಾನವನ್ನು ರಾಜ್ಯ ಸರ್ಕಾರ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ರಾಜ್ಯ

ಸರ್ಕಾರ ಇದನ್ನು ಪ್ರಸ್ತಾವನೆ ಮಾಡಿಲ್ಲ. ಆದ್ದರಿಂದ ನಾನು ಸದನದ ಮೂಲಕ, ತಮ್ಮ ಮೂಲಕ ವಿನಂತಿ ಮಾಡುವುದು ಇಷ್ಟೇ, ಆ ಯೋಜನೆಯನ್ನು ಕೂಡ ಜಾರಿ ಮಾಡಿ, ಪದವಿಯವರೆಗೆ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣವನ್ನು ಕೊಡುವಂತಹ ಒಂದು ಯೋಜನೆಯನ್ನು ಸರ್ಕಾರ ಮಾಡಬೇಕು ಎಂಬ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಆರೋಗ್ಯ ಕ್ಷೇತ್ರದಲ್ಲಿ ನೋಡಿದರೆ ಈಗಾಗಲೇ ತಮಗೆಲ್ಲಾ ಗೊತ್ತಿದ್ದಹಾಗೆ, ಮಾನ್ಯ ಶ್ರೀನಿವಾಸಗೌಡ ಅವರು ಒಂದು ಪ್ರಸ್ತಾಪವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಪ್ರತಿ ಒಂದು ತಾಲ್ಲೂಕು ಕೇಂದ್ರಗಳಲ್ಲಿ ಕೂಡ ಆರೋಗ್ಯ ಕೇಂದ್ರಗಳು ಇವೆ. ಆದರೆ ಆ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯಕತೆಗೆ ಬೇಕಾಗುವಂತಹ ವೈದ್ಯರು ಇದ್ದಾರೆಯೇ? ದಾದಿಯರು ಇದ್ದಾರೆಯೇ? ಅಲ್ಲಿ ಜನರಿಗೆ ಬೇಕಾಗುವಂತಹ ಔಷಧಿಗಳು ಸಿಗುತ್ತವೆಯೇ? ಅದರ ಬಗ್ಗೆ ಸರ್ಕಾರ ಒಂದು ಕಿಂಚಿತ್ತೂ ಯೋಚನೆ ಮಾಡಿಲ್ಲ. ಸರ್ಕಾರಿ ಆಸ್ಪತ್ರೆಗಳನ್ನು ನೋಡಿದಾಗ, ಅದರ ನೈರ್ಮಲ್ಯವನ್ನು ನೋಡಿದಾಗ ಅದನ್ನು ನೋಡುವುದೇ ಬೇಡ ಎಂದು ಅನ್ನಿಸುವಂತಹ ಪರಿಸ್ಥಿತಿ ಇದೆ. ಅದು ನಮ್ಮ ಜಿಲ್ಲೆಯೊಳಗೆ ಇರಬಹುದು, ನಮ್ಮ ತಾಲ್ಲೂಕಿನಲ್ಲಿ ಇರಬಹುದು, ಆ ರೀತಿಯ ವ್ಯವಸ್ಥೆ ಇದೆ. ಅಲ್ಲಿರುವಂತಹ ಬಟ್ಟೆಗಳನ್ನು ಶುಚಿಯಾಗಿಡುವಂತಹ ವಿಚಾರಕ್ಕೆ ಯಾರೂ ಬರುತ್ತಿಲ್ಲ ಎಂಬ ವಿಚಾರವನ್ನು ತಿಳಿಸುತ್ತಿದ್ದಾರೆ. ಅಲ್ಲಿ ಗ್ರೂಪ್ - ಡಿ ನೌಕರರೂ ಸಹ ಇಲ್ಲ. ಅದರ ಬಗ್ಗೆ ಕೇಳಿದಾಗ ಸರ್ಕಾರದವರು ಅವರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸುವ ಯೋಚನೆ ಮಾಡುತ್ತಿದ್ದಾರೆಂದು ತಿಳಿದು ಬಂದಿತು. ಆದರೆ ಈ ಸದನದ ಎಲ್ಲಾ ಸದಸ್ಯರ ಗಮನವನ್ನು ನಾನು ಸೆಳೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅಲ್ಲಿ ಹೆರಿಗೆಗೆ ಬರುವಂತಹ ಹೆಂಗಸರಿಗೆ ಸರಿಯಾದ ಹೆರಿಗೆಯ ವ್ಯವಸ್ಥೆ ಅಲ್ಲಿ ಇರುವುದಿಲ್ಲ. ಹಾಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬಡ ರೋಗಿಗಳಿಗೆ ಸರಿಯಾದ ಔಷಧಿಗಳು ಅಲ್ಲಿ ಸಿಗುವುದಿಲ್ಲ. ಇಲ್ಲಿ ಕೂಡ ಸರ್ಕಾರ ಸರಿಯಾದ ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಅದರ ಜೊತೆಗೆ ಕುಟುಂಬ ಕಲ್ಯಾಣ ಯೋಜನೆಯ ಬಗ್ಗೆ ಕೂಡ ಸರ್ಕಾರ ಯೋಚಿಸಬೇಕು. ಎಲ್ಲಾ ಕಡೆ ಅದರ ಬಗ್ಗೆ ಪ್ರಚಾರ ಇದೆ. ಆದರೆ ಜನಸಂಖ್ಯಾ ಸ್ಫೋಟ ಆಗುತ್ತಲೇ ಇದೆ. ನಮ್ಮಲ್ಲಿರುವ ಜಾಗ, ಪರಿಸರವನ್ನು ಮೀರಿ ಜನಸಂಖ್ಯೆ ಬೆಳವಣಿಗೆಯಾಗುತ್ತಿದೆ ಎಂಬ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕಾಗಿದೆ. ಪಕ್ಷಬೇಧ, ಲಿಂಗಬೇಧ ಮರೆತು ಎಲ್ಲರೂ ಸಮಾನವಾಗಿ ಮನಃಪರಿವರ್ತನೆ ಮಾಡಿಕೊಂಡು ಕುಟುಂಬ ಕಲ್ಯಾಣ ಯೋಜನೆಯಲ್ಲಿ ಭಾಗವಹಿಸುವಂತೆ ಮಾಡುವ ಕಾರ್ಯಕ್ರಮಗಳನ್ನು ಇವತ್ತು ಸರ್ಕಾರ ಹಮ್ಮಿಕೊಳ್ಳಬೇಕಾಗಿದೆ. ಅದನ್ನೂ ಕೂಡ ಇವತ್ತು ಸರ್ಕಾರ ಮಾಡುವಂತಹ ಅವಶ್ಯಕತೆ ಇದೆ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಶೇಕಡ 18ರಷ್ಟು ಮೀಸಲಾತಿ ಇದೆ ಅಥವಾ ಶೇಕಡ 18ರಷ್ಟು ಹಣ ವಿನಿಯೋಗ ಮಾಡಬೇಕೆಂದಿದೆ. ಆದರೆ ಶೇಕಡ 18ರಷ್ಟು ಹಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮುಟ್ಟುತ್ತಿದ್ದೆಯೇ? ಅದನ್ನು ಓವರ್-ಆಲ್ ಆಗಿ ಯಾವುದಾದರೂ ಇಲಾಖೆ ಸರಿಯಾಗಿ ಸೂಪರ್ ವೈಸ್ ಮಾಡುತ್ತಿದ್ದೆಯೇ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿಗಮಗಳಾದರೂ ಜಿಲ್ಲೆಗಳಿಗೆ ಬಂದು ಆ ಯೋಜನೆಗಳ ಅನುಷ್ಠಾನವನ್ನು ರಿವ್ಯೂ ಮಾಡುವಂತಹ

ಪರಿಪಾಠವಾದರೂ ಇದೆಯೇ? ಯಾರೂ ಕೂಡ ಯೋಜನೆ ಅನುಷ್ಠಾನದ ಬಗ್ಗೆ ಕೇಳುವಂತಹ ಯೋಚನೆ ಮಾಡುತ್ತಿಲ್ಲ. ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ಇನ್ನೂ 10 ವರ್ಷಗಳವರೆಗೆ ಅವರಿಗೆ ಬಡ್ತಿಯಲ್ಲಿ ಮೀಸಲಾತಿ ಕೊಟ್ಟಿದೆ, ಇದು ಬಹಳ ಸಂತೋಷದ ವಿಚಾರ. ಆದರೆ ಆ ಜನರಿಗೆ ಮುಟ್ಟಬೇಕಾದ ಕಾರ್ಯಕ್ರಮಗಳ ಉಸ್ತುವಾರಿಯನ್ನು ಸರ್ಕಾರ ಸರಿಯಾಗಿ ಮಾಡುತ್ತಿಲ್ಲ. ಆ ಇಲಾಖೆಯಲ್ಲಿ ಭ್ರಷ್ಟಾಚಾರ 'ತಾಂಡವವಾಡುತ್ತಿದೆ. ಆ ಇಲಾಖೆಯಲ್ಲಿ ಭ್ರಷ್ಟಾಚಾರನಿರತ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಂಡಿದೆ? ಅವರು ಇನ್ನೂ ಇಲಾಖೆಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸುತ್ತಲೇ ಇದ್ದಾರೆ. ಅವರು ಜನ ಪ್ರತಿನಿಧಿಗಳನ್ನೂ ಕೂಡ ತಿರಸ್ಕಾರದಿಂದ ನೋಡುವಂತಹ ಮಟ್ಟಕ್ಕೆ ಬಂದಿದ್ದಾರೆ. ಈ ರೀತಿಯಾಗಿ ಅಧಿಕಾರಿಗಳ ವರ್ತನೆ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಒದಗಿಸಿರುವ ಸವಲತ್ತುಗಳು ನೂರಕ್ಕೆ ನೂರರಷ್ಟು ಅವರಿಗೇ ಮುಟ್ಟಬೇಕು. ಆ ಜನಾಂಗಗಳವರ ಕಲ್ಯಾಣವಾಗಬೇಕು ಎಂಬುದೇ ನಮ್ಮೆಲ್ಲರ ಉದ್ದೇಶವಾಗಿದೆ. ಕೃಷಿ ಭೂಮಿ ಖರೀದಿ ಯೋಜನೆಯಡಿ ಎಸ್‌ಸಿ/ಎಸ್‌ಟಿ ನಿಗಮಕ್ಕೆ ಸರ್ಕಾರ ಪ್ರತಿ ಫಲಾನುಭವಿಗೆ ನೀಡುತ್ತಿದ್ದ ಸಹಾಯಧನದ ಮಿತಿಯನ್ನು 50,000 ರೂ.ಗಳಿಂದ 60,000 ರೂ.ಗಳಿಗೆ ಹೆಚ್ಚಿಸಿದೆ ಎಂದು ಆಯವ್ಯಯದಲ್ಲಿ ತಿಳಿಸಲಾಗಿದೆ. ಇದು ಬಹಳ ಸಂತೋಷದ ವಿಚಾರ. ಗಂಗಾ ಕಲ್ಯಾಣ ಯೋಜನೆಯಡಿ, ಅದು ವೈಯಕ್ತಿಕವಾಗಿ ಇರಬಹುದು ಅಥವಾ ಗುಂಪಿನಲ್ಲಿ ಇರಬಹುದು, ಫಲಾನುಭವಿಗಳು ಭೂಮಿಯಲ್ಲಿ ಕೃಷಿ ಮಾಡಿದ್ದಾರೆಯೇ? ಅದರಲ್ಲಿ ಅವರು ಉತ್ಪಾದನೆಯನ್ನು ಮಾಡುತ್ತಿದ್ದಾರೆಯೇ? ಎಂದು ನೋಡುವಂತಹ ಸೂಪರ್‌ವಿಷನ್ ಈಗ ಇಲ್ಲ. ಸರ್ಕಾರದಿಂದ ಕೊಟ್ಟಂತಹ ಹಣ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ ಎಂದು ನೋಡುವ ಗೋಜಿಗೆ ಹೋಗದಿದ್ದರೆ ಹೇಗೆ? ಫಲಾನುಭವಿಗಳು ಕೃಷಿ ಮಾಡುತ್ತಿಲ್ಲ, ಭೂಮಿ ಪಾಳು ಬಿದ್ದಿರುವುದನ್ನು ಅನೇಕ ಕಡೆ ನಾವು ನೋಡಬಹುದು. ಯಾವುದೇ ಯೋಜನೆಯ ಅಡಿಯಲ್ಲಾದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಸರ್ಕಾರ ಕೊಟ್ಟಂತಹ ಸಹಾಯ ಧನ ಅವರಿಗೆ ಮುಟ್ಟಬೇಕು, ಅದರ ಸದುಪಯೋಗವಾಗಿದೆಯೇ ಎಂದು ಸೂಪರ್‌ವಿಷನ್ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತೇನೆ.

ಕೊನೆಯಾದಾಗಿ ನಾನು ಈ ಅಬಕಾರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಅಬಕಾರಿ ಬಗ್ಗೆ ಆಗಲೇ ಒಮ್ಮೆ ಪ್ರಸ್ತಾಪವಾಯಿತು. ಅಬಕಾರಿಯ ಇಲಾಖೆಯಲ್ಲಿ ಹಣ ಸೋರಿ ಹೋಗುವುದು ಎಲ್ಲರಿಗೂ ಗೊತ್ತೇ ಇದೆ. ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಅಬಕಾರಿ ದೊರೆಗಳಿಂದ ಹಣವನ್ನು ಸ್ವೀಕಾರ ಮಾಡುತ್ತಾರೆ ಎಂಬ ವಿಚಾರ ಕೂಡ ಆಗಲೇ ಪ್ರಸ್ತಾಪಕ್ಕೆ ಬಂದಿತು. ಅಬಕಾರಿ ಇಲಾಖೆಯಲ್ಲಿ ಹಣ ಸೋರಿ ಹೋಗುವುದನ್ನು ಸರ್ಕಾರ ತಡೆಗಟ್ಟಲಿಕ್ಕೆ ಯಾವುದೇ ಕಟ್ಟುನಿಟ್ಟಿನ ಕ್ರಮವನ್ನೂ ಮಾಡಿಲ್ಲ. ಡಿಸ್ಟಿಲರಿಗಳ ಮೂಲಕ ಯಾವುದೇ ಮದ್ಯ ಹೊರಬರಬೇಕಾದರೆ ಅದು ಅಲ್ಲಿರುವಂತಹ ಸರ್ಕಾರಿ ಅಧಿಕಾರಿಯ ಗಮನಕ್ಕೆ ಬಾರದೇ ಹೊರ ಬರುವಂತಿಲ್ಲ. ಆದರೆ ಅಲ್ಲಿನ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಿಲ್ಲ. ಯಾವ ರೀತಿ 300 ಲೀಟರ್ ಮದ್ಯಕ್ಕೆ ಮಾತ್ರ ಟ್ಯಾಕ್ಸ್ ಕಟ್ಟಿ 900 ಲೀಟರ್ ಮದ್ಯ ಡಿಸ್ಟಿಲರಿಗಳಿಂದ

ಹೊರಬರುತ್ತದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರಾದ ಸಭಾಪತಿಯವರು ಆಗಲೇ ಮಾತನಾಡುತ್ತಾ ಪ್ರಸ್ತಾಪ ಮಾಡಿದರು. ಕರ ನೀಡದೇ ಹೊರ ಬರುವಂತಹ 'ಸೆಕೆಂಡ್ಸ್ ಮದ್ಯ ಏನಿದೆ, ಅದನ್ನು ಅಲ್ಲಿಯೇ ಮಟ್ಟ ಹಾಕಬೇಕು. ಕರ ನೀಡದೇ ಮದ್ಯ ಹೊರ ಬರದಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಸರ್ಕಾರ ಕಟ್ಟುನಿಟ್ಟಾಗಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು 1946ರ ಮೊದಲೇ ಗುತ್ತಿಗೆದಾರರಿಂದ ಅಬಕಾರಿ ಇಲಾಖೆಗೆ 306 ಕೋಟಿ ರೂಪಾಯಿಗಳ ಬಾಕಿ ಬರುವುದು ಇತ್ತು ಎಂದು ಹೇಳಿದ್ದಾರೆ. ಆ ಬಾಕಿ ಹಣದ ಮೇಲಿನ ಬಡ್ಡಿಯು ವರ್ಷದಿಂದ ವರ್ಷಕ್ಕೆ ಏರುತ್ತಿದ್ದು ಪ್ರಸ್ತುತ 142 ಕೋಟಿ ರೂಪಾಯಿಗಳ ಅಸಲು ಮತ್ತು ಅದರ ಮೇಲಿನ ಬಡ್ಡಿಯು 164 ಕೋಟಿ ರೂಪಾಯಿಗಳಾಗಿದೆ ಎಂದೂ ಸಹಾ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದೂ ಇದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಮೊನ್ನೆ ಸದನದಲ್ಲಿ ಈ ಬಗ್ಗೆ ಪ್ರಶ್ನೆಯೊಂದನ್ನು ಕೇಳಿದ್ದಾಗ ಅದಕ್ಕೆ ಸರಿಯಾದ ಉತ್ತರವನ್ನು ನೀಡಲಾಗಿತ್ತು. ಕೆಲವಾರು ವರ್ಷಗಳಿಂದ ಅಬಕಾರಿ ಗುತ್ತಿಗೆದಾರರಿಂದ ಬಾಕಿ ಇರುವಂತಹ ಹಣವನ್ನು ಮನ್ನಾ ಮಾಡುವುದರಿಂದ ಅವರಿಗೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ರೈತರ ಕೃಷಿ ಸಾಲ ಮನ್ನಾ ಮಾಡಬೇಕೆಂಬ ವಿಚಾರ ಬಂದಾಗ ಸರ್ಕಾರದಲ್ಲಿ ಹಣ ಇಲ್ಲ ಎಂದು ಹೇಳಲಾಗುತ್ತದೆ. ಆದರೆ ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಹಣದ ಮೇಲಿನ ಬಡ್ಡಿಯನ್ನು ಯಾವುದೇ ತೊಂದರೆಯಿಲ್ಲದೇ ಮನ್ನಾ ಮಾಡಲಾಗುತ್ತದೆ. ಇದು ಸರಿಯಾದ ಕ್ರಮವಲ್ಲ. ಅಬಕಾರಿ ಗುತ್ತಿಗೆದಾರರಿಂದ ಬಾಕಿ ಇರುವಂತಹ ಹಣವನ್ನು ಕಟ್ಟುನಿಟ್ಟಾಗಿ ವಸೂಲು ಮಾಡಲು ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಡಿಸ್ಟಿಲರಿಯಿಂದ ಹೊರಬರುವಂತಹ ಮಾಲುಗಳಿಗೆ ಒಂದೇ ಕಡೆಯಲ್ಲಿ ಎಲ್ಲಾ ರೀತಿಯ ತೆರಿಗೆಗಳನ್ನು ವಿಧಿಸುವಂತಹ ವ್ಯವಸ್ಥೆಯನ್ನು ಜಾರಿಗೆ ತಂದರೆ ಒಳ್ಳೆಯದು. ಸರ್ಕಾರ ಈ ಶರಾಬು ಅಂಗಡಿಗಳನ್ನು ಗುತ್ತಿಗೆ ಆಧಾರದಲ್ಲಿ ಹರಾಜು ಮಾಡುವುದರ ಬದಲು ಬ್ರಾಂದಿ ಮತ್ತು ಐ.ಎಂ.ಎಲ್. ಮದ್ಯದ ಅಂಗಡಿಗಳಿಗೆ ನೀಡುವಂತೆ ಲೈಸೆನ್ಸ್ ಶುಲ್ಕ ತೆಗೆದುಕೊಂಡು ಅನುಮತಿ ನೀಡುವುದು ಒಳ್ಳೆಯದು. ಹೀಗಾದಲ್ಲಿ ಸರ್ಕಾರಕ್ಕೆ ಕಟ್ಟುವಂತಹ ಹಣ ಯಾವುದೇ ತೊಂದರೆ ಇಲ್ಲದೇ ಬರುತ್ತದೆ. ಅದೇ ರೀತಿಯಲ್ಲಿ ಆ ಶರಾಬು ದೊರೆಗಳೇ ಸರ್ಕಾರವನ್ನು ನಡೆಸುತ್ತಿದ್ದಾರೆ ಎಂಬು ದೂರುಗಳೂ ಕೂಡ ಆಗ ಬರಲಿಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಶರಾಬು ಗುತ್ತಿಗೆಗಳನ್ನು ಟೆಂಡರ್‌ಗಳ ಮೂಲಕ ವಿತರಣೆ ಮಾಡದೇ, ಅದನ್ನು ಬ್ರಾಂದಿ ಅಥವಾ ಮದ್ಯದ ಅಂಗಡಿಗಳ ರೀತಿಯಲ್ಲಿ ವಿತರಿಸಿದರೆ ಗ್ರಾಮಾಂತರ ಪ್ರದೇಶದ ಜನರಿಗೂ ಕೂಡ ಉದ್ಯೋಗ ಸಿಕ್ಕಿದಂತಾಗುತ್ತದೆ. ಇದರಿಂದಾಗಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಅಪವಿತ್ರ ಮೈತ್ರಿಯನ್ನೂ ಕೂಡ ತಪ್ಪಿಸುವಂತಹ ವ್ಯವಸ್ಥೆಯನ್ನು ನಾವು ಮಾಡಬಹುದಾಗಿದೆ.

ಇನ್ನು ಮೀನುಗಾರಿಕೆಯ ಬಗ್ಗೆ ಮಾನ್ಯ ಸದಸ್ಯರಾದ ಸಭಾಪತಿಯವರು ಆಗಲೇ ಮಾತನಾಡುತ್ತಾ ಹೇಳಿದರು. ಆ ಪ್ರದೇಶದಿಂದಲೇ ಬಂದವರಾದ ಮಾನ್ಯ ಯೋಗೀಶ್ ಭಟ್‌ರವರೂ ಕೂಡ ಅದರ ಬಗ್ಗೆ ಇನ್ನೂ ಮಾತನಾಡುವವರಿದ್ದಾರೆ. ಈಗಾಗಲೇ ಕೋರಿರುವಂತೆ ಮೀನುಗಾರರಿಗೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಬೇಕೆಂದು ಈ ಮೂಲಕ ಆಗ್ರಹಿಸುತ್ತಾ ಈ ಬಜೆಟಿನ ವಿಚಾರದಲ್ಲಿ ಹೇಳುವುದ್ದಾದರೆ, ಕೆಲವೊಂದು ವಿಚಾರಗಳನ್ನು ಮಾತ್ರ ಸ್ವಾಗತಿಸುತ್ತಾ, ಈ ಬಜೆಟ್

ಒಟ್ಟಿನಲ್ಲಿ ನಿರಾಶದಾಯಕವಾಗಿದೆ ಎಂದು ಹೇಳುತ್ತಾ, ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೇ, 2000-2001ನೇ ಇಸವಿಯ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದಿಟ್ಟಿದ್ದಾರೆ. ಈ ಒಂದು ಆಯವ್ಯಯದ ಪುಸ್ತಕದಲ್ಲಿ ಅವರು ಕೆಲವು ಒಳ್ಳೆಯ ಶಬ್ದಗಳನ್ನು ಬಳಸಿದ್ದಾರೆ ಮತ್ತು ಕೆಲವು ಯೋಜನೆಗಳ ಬಗ್ಗೆ ಘೋಷಣೆಗಳನ್ನೂ ಸಹಾ ಮಾಡಿದ್ದಾರೆ. ನಾನು ಎಲ್ಲವನ್ನೂ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದರಲ್ಲಿ ಒಳ ಹೊಕ್ಕಿ ನೋಡಿದಾಗ ಕೆಲವು ಯೋಜನೆಗಳಿಗೆ ನಮ್ಮ ಹಿಂದಿನ ಸರ್ಕಾರ ಮಾಡಿದ್ದ ಯೋಜನೆಗಳಿಗೆ ಸ್ವಲ್ಪ ಸ್ನೋ-ಪೌಡರ್ ಹಾಕಿ ಹೇಳಿರತಕ್ಕಂಥಾದ್ದು ನಮ್ಮ ಗಮನಕ್ಕೆ ಬರುತ್ತದೆ. ಇನ್ನೊಂದು ಸಗಣಿ ಹಾಕಿರುವುದು ನಮ್ಮ ಗಮನಕ್ಕೆ ಬರುತ್ತಿದೆ. ಇದನ್ನು ಬಹಳ ಸೂಕ್ಷ್ಮವಾಗಿ ನೋಡಿದಾಗ, ಈ ರಾಜ್ಯದ ಜನತೆಗೆ ಒಳ್ಳೆಯದಾಗುವುದಾದರೆ ಅನ್ಯ ಪಕ್ಷಗಳ ನಾಯಕರೂ ಸೇರಿದಂತೆ ಬೇರೆಯವರ ಆಲೋಚನೆಗಳನ್ನು ಅಳವಡಿಸಿಕೊಳ್ಳಲು ನನಗೆ ಯಾವ ಸಂಕೋಚವೂ ಇಲ್ಲವೆಂದು ಹೇಳಿದ್ದಾರೆ. ಇದನ್ನು ನೋಡಿದ ತಕ್ಷಣ ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಒಳ್ಳೆ ಸ್ಟೇಟ್ಸ್‌ಮನ್ ಇದ್ದಾರೆ. ಒಳ್ಳೆಯದನ್ನು ಮುಂದುವರಿಸಿಕೊಂಡು ಹೋಗಿದ್ದಾರೆಂದು ಗಮನಕ್ಕೆ ಬಂದಾಗ, ಮತ್ತೊಂದು ಕಡೆ ಅನುಬಂಧ 9ರಲ್ಲಿ ನೋಡಿದಾಗ ಹಿಂದಿನ ಸರ್ಕಾರ ಸ್ಟ್ಯಾಂಪ್ ಆಕ್ಟ್‌ಗೆ ತಿದ್ದುಪಡಿ ತಂದು ರಾಷ್ಟ್ರಪತಿಯವರಿಗೆ ಹೋಗಿ ಅಂಗೀಕಾರವಾಗಿ ಬಂದಿದೆ. ಅದರಲ್ಲಿ ಪ್ರಮುಖವಾದ ಎರಡು ತಿದ್ದುಪಡಿಗಳನ್ನು ನಾವು ತಂದಿದ್ದೇವೆ. ಇದು ಇಡೀ ರಾಜ್ಯದಲ್ಲಿ ಅಲ್ಲ, ಬೇರೆ ರಾಜ್ಯಗಳಲ್ಲಿ ಸಹ ಮೆಚ್ಚತಕ್ಕಂತಹ ಈ ಒಂದು ಕಾಯಿದೆಗೆ ತಿದ್ದುಪಡಿ ತಂದಿದ್ದೆವು. ಅದು ಏನು? ವಿಭಾಗದ ಪತ್ರಗಳಿಗೆ ಮತ್ತು ದಾನ ಪತ್ರಗಳಿಗೆ ಸ್ಟ್ಯಾಂಪ್ ಡ್ಯೂಟಿ ಏನಿತ್ತು, ಅದನ್ನು ಸಂಪೂರ್ಣವಾಗಿ ತೆಗೆದು, ಸಿಟಿ ಒಳಗೆ ಕೇವಲ ಒಂದು ಸಾವಿರ ರೂಪಾಯಿಗಳ ರಿಜಿಸ್ಟ್ರೇಷನ್‌ಗೆ ಸ್ಟ್ಯಾಂಪ್ ಡ್ಯೂಟಿ, ಹಳ್ಳಿಗಳಲ್ಲಿ 250 ರೂಪಾಯಿಗಳು ಮತ್ತು ಪಟ್ಟಣಗಳಲ್ಲಿ 500 ರೂಪಾಯಿಗಳು ಎಂದು ಒಂದು ಕಾನೂನು ತಿದ್ದುಪಡಿ ತಂದಿದ್ದೆವು. ಇದರಿಂದ ಎಷ್ಟೋ ಜನ ತಮ್ಮ ವಿಭಾಗದ ಪತ್ರಗಳಿಗೆ ರಿಜಿಸ್ಟ್ರೇಷನ್ ಮಾಡದೆ ಇದ್ದವರು ಸಹಸ್ರಾರು ಜನರು ರಿಜಿಸ್ಟ್ರೇಷನ್ ಮಾಡುವುದಕ್ಕೆ ಪ್ರಾರಂಭ ಮಾಡಿದರು. ದಾನ ಕೊಡಡತಕ್ಕಂಥಾದ್ದನ್ನು ರಿಜಿಸ್ಟ್ರೇಷನ್ ಮಾಡುವುದು ನಮ್ಮ ರಾಜ್ಯದ ಇತಿಹಾಸದಲ್ಲಿ ಇರಲಿಲ್ಲ. ದಾನವನ್ನು ರಿಜಿಸ್ಟರ್ ಮಾಡುತ್ತಿದ್ದೆವು. ಹೀಗಾಗಿ ಒಂದೇ ಕುಟುಂಬದ ಒಳಗೆ ಕದನಗಳು ಆಗುತ್ತಿರಲಿಲ್ಲ. ಸುಮಾರು 40-50 ವರ್ಷಗಳಿಂದ ಆಗುತ್ತಿದ್ದ ಕದನಗಳು ನಿಂತು ಹೋಗಿವೆ. ಏಕೆಂದರೆ, ತಂದೆಯಿಂದ ತನ್ನ ಮಗನಿಗೆ ಆಸ್ತಿ ಸಿಗುವಾಗ ಅದು ರಿಜಿಸ್ಟರ್ ಆದಾಗ ಅವರಿಬ್ಬರ ಖಾತೆ ಆಗುತ್ತದೆ. ಆಗ ಅವರಿಗೆ ಸಂಪೂರ್ಣವಾದಂತಹ ಹಕ್ಕು ಸಿಗುತ್ತದೆ. ಅದು ಯಾರಿಗೂ ಸಿಗುತ್ತಿರಲಿಲ್ಲ. ಹೀಗಾಗಿ ಸಹಸ್ರಾರು ದಾಖಲೆಗಳು, ಕೇಸ್‌ಗಳು ಆಗಿವೆ, ಅಣ್ಣ ತಮ್ಮಂದಿರಲ್ಲಿ ಹೊಡೆದಾಟ, ಅಕ್ಕತಂಗಿಯರಲ್ಲಿ ಹೊಡೆದಾಟ, ಅಪ್ಪನಿಗೂ ಮಕ್ಕಳಿಗೂ ಹೊಡೆದಾಟದ ಕೇಸ್‌ಗಳೂ 20-25 ವರ್ಷಗಳಿಂದ ನಡೆಯುತ್ತಿದ್ದವು, ಅದೆಲ್ಲಾ ಒಂದೇ ಸಾರಿ ತಪ್ಪಿ

ಹೋದವು. ಅದನ್ನು ಇಡೀ ರಾಜ್ಯದಲ್ಲೆಲ್ಲಾ ಸ್ವಾಗತ ಮಾಡಿದರು. ಆದರೆ ಇವತ್ತು ನಾವು ನೋಡುವುದಾದರೆ, ನಮ್ಮ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವಂತೆ ದಾನ ಪತ್ರಗಳಿಗೆ 50000 ರೂಪಾಯಿಗಳಿಂದ 10 ಲಕ್ಷ ರೂಪಾಯಿಗಳವರೆಗೆ ಎರಡು ಪರ್ಸೆಂಟ್ ಸ್ಟಾಂಪ್ ಡ್ಯೂಟಿ ಹಾಕಿದ್ದಾರೆ. ಅಂದರೆ, ಸುಮಾರು 10 ಲಕ್ಷ ರೂಪಾಯಿಗಳು ಬೆಲೆ ಬಾಳುವ ಒಂದು ದಾನವನ್ನು ತಂದೆ ತನ್ನ ಮಗಳಿಗೆ ಮಾಡುತ್ತಾನೆಂದು ಇಟ್ಟುಕೊಂಡು, 10 ಲಕ್ಷ ರೂಪಾಯಿಗಳಲ್ಲಿ 20,000 ರೂ. ಸ್ಟಾಂಪ್ ಡ್ಯೂಟಿ ಮತ್ತು 20,000 ಅಡಿಷನಲ್ ಡ್ಯೂಟಿ. ಒಟ್ಟು 40,000 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಹಾಗೆಯೇ 10 ಲಕ್ಷ ರೂಪಾಯಿಗಳಿಂದ 30 ಲಕ್ಷ ರೂಪಾಯಿಗಳವರೆಗೆ ಮೂರು ಪರ್ಸೆಂಟ್ ಸ್ಟಾಂಪ್ ಡ್ಯೂಟಿ ಹಾಕಿದ್ದಾರೆ. 60,000 ರೂಪಾಯಿಗಳಿಗೆ ಗಿಫ್ಟ್ ಡೀಡ್ ಆದರೆ 60 + 60,000 ರೂ. ಎಂದರೆ 1.20 ರೂಪಾಯಿಗಳಾಗುತ್ತದೆ. 20 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ಗಿಫ್ಟ್ ಕೊಟ್ಟರೆ ಐದು ಪರ್ಸಂಟ್ ಹಾಕಿ ಒಂದೂವರೆ ಲಕ್ಷ ರೂಪಾಯಿಗಳು ಬರುತ್ತದೆ. ಹೀಗಾಗಿ ಎರಡು ಲಕ್ಷ 40,000 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಇದರಿಂದ ಹಿಂದೆ ರಿಜಿಸ್ಟರ್ ಆಗುತ್ತಿರಲಿಲ್ಲ, ಈಗ ಮತ್ತೆ ಅದೇ ಸ್ಥಾನಕ್ಕೆ ಬಂದು ಬಿಡುತ್ತದೆ. ಇವತ್ತು ರಾಜ್ಯದಲ್ಲಿ ಎಷ್ಟೋ ಗಿಫ್ಟ್ ಡೀಡ್‌ಗಳು ರಿಜಿಸ್ಟರ್ ಆಗುತ್ತಿದ್ದವು. ಬಹಳ ನೆಮ್ಮದಿಯಿಂದ ಜನ ಉಸಿರು ಬಿಡುತ್ತಿದ್ದರು. ತಂದೆ ಮಕ್ಕಳಿಗೆ ಗಿಫ್ಟ್ ಕೊಡಬೇಕಾದರೆ ಒಳ್ಳೆಯ ಕಾಯಿದೆ ಇದೆ ಎಂದು ಹೇಳುತ್ತಿದ್ದರು. ಇವತ್ತು ಯಾವುದೇ ವರ್ಗದಲ್ಲಾಗಲಿ, ಯಾವುದೇ ಊರಿನಲ್ಲಾಗಲಿ, ಇದು ಒಂದು ಜಾತಿಗೆ ಸೀಮಿತವಾದುದಲ್ಲ, ಪ್ರದೇಶಕ್ಕೆ ಸೀಮಿತವಾದುದಲ್ಲ, ಒಬ್ಬ ಐಶ್ವರ್ಯವಂತನಾಗಲಿ, ಬಡವನಾಗಲಿ ತನ್ನ ಯೋಗ್ಯತೆಗನುಸಾರವಾಗಿ ತನ್ನ ಮಗಳಿಗೆ ಅಥವಾ ತನ್ನ ಹೆಂಡತಿಗೆ ದಾನ ಬರೆಯುವುದಾದರೆ ಸುಲಭವಾಗಿ ರಿಜಿಸ್ಟರ್ ಮಾಡಬಹುದು ಎಂದು ಇತ್ತು. ಇವತ್ತು ಇದ್ದಕಿದ್ದ ಹಾಗೆ ಎರಡು ಪರ್ಸೆಂಟ್, ಮೂರು ಪರ್ಸೆಂಟ್, ಐದು ಪರ್ಸೆಂಟ್ ಎಂದು ತಂದು ಲಕ್ಷಾಂತರ ರೂಪಾಯಿಗಳ ಸ್ಟಾಂಪ್ ಡ್ಯೂಟಿ ಕಟ್ಟತಕ್ಕಂತಹ ಪರಿಸ್ಥಿತಿಗೆ ತಂದು ಬಿಟ್ಟಿದ್ದೀರಿ. ಇದು ರೆಟ್ರಾಗ್ರೇಡ್ ಸ್ಟೆಪ್. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದು ಇದನ್ನು ಮಾಡಿದ್ದಾರೆಯೋ ಅಥವಾ ಮಾನ್ಯ ಕಂದಾಯ ಮಂತ್ರಿಗಳು ಈ ಬಗ್ಗೆ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸಿ ಮಾಡಿದ್ದಾರೆಯೋ ನನಗಂತೂ ಗೊತ್ತಿಲ್ಲ. ಬಹುಶಃ ಇದನ್ನು ಮಾಡಿದ್ದರೆ ಇಡೀ ರಾಜ್ಯದ ಜನತೆ ಇದಕ್ಕೆ ಶಾಪ ಹಾಕುತ್ತಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ನಾವು ತಂದಿರುವುದು ಬಹಳ ಪ್ರೋಗ್ರೆಸೀವ್ ಮೆಷರ್, ವಿಭಾಗದ ಪತ್ರಗಳಿಗೆ ಏನೂ ಮುಟ್ಟಿಲ್ಲ. ಆದರೆ ದಾನ ಪತ್ರಗಳಿಗೆ, ತಮ್ಮ ಮಕ್ಕಳಿಗೂ ತಾವು ದಾನ ಕೊಡುತ್ತೀರಿ. ಆದರೆ ದಾನ ಕೊಟ್ಟಿದ್ದು ಹಿಂದೆ ರಿಜಿಸ್ಟರ್ ಆಗುತ್ತಿರಲಿಲ್ಲ. ಸ್ಟಾಂಪ್ ಡ್ಯೂಟಿ ತೆಗೆದಿದ್ದರಿಂದ ಈಗ ರಿಜಿಸ್ಟರ್ ಆಗುತ್ತಿತ್ತು. ಆದರೆ ಇವತ್ತು ನೀವು ಏನು ಮತ್ತೆ ಐದು ಪರ್ಸೆಂಟ್, ಮೂರು ಪರ್ಸೆಂಟ್ ಎಂದು ಸ್ಲಾಬ್ ಹಾಕಿದ್ದೀರಿ, ಇದರಿಂದ ರಿಜಿಸ್ಟರ್ ಆಗದೆ ಇರತಕ್ಕಂತಹ ಸಂದರ್ಭಗಳು ಬರುತ್ತವೆ. ಇದರಿಂದ ಮತ್ತೆ ಹೊಡೆದಾಟ-ಬಡಿದಾಟ ಪ್ರಾರಂಭವಾಗುತ್ತದೆ. ಆದ್ದರಿಂದ ಇದನ್ನು ದಯವಿಟ್ಟು ಹಿಂತೆಗೆದುಕೊಳ್ಳಬೇಕೆಂದು ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಅವರವರ ಹೇಳಿಕೆಗಳಲ್ಲಿ ಕಾಂಟ್ರಡಿಕ್ಷನ್ ಬರುತ್ತದೆ. ಒಂದು ಕಡೆ ಸ್ವಲ್ಪವೂ ಸಂಕೋಚ ಇಲ್ಲದೆ ಹಿಂದಿನದನ್ನು

ಮುಂದುವರೆಸಿಕೊಂಡು ಹೋಗುತ್ತೇನೆಂದು ಹೇಳುತ್ತಾರೆ. ಮತ್ತೊಂದು ಕಡೆ, ಈ ಸಾರಿ ಆಯವ್ಯಯ ಮಂಡನೆ ಮಾಡುವಾಗ ಸುಮಾರು 7,274 ಕೋಟಿ ರೂಪಾಯಿಗಳ ಯೋಜನಾ ವೆಚ್ಚವನ್ನು 2000-2001ನೇ ವಾರ್ಷಿಕ ವೆಚ್ಚದಲ್ಲಿ ಮಂಡನೆ ಮಾಡುತ್ತಿದ್ದೇವೆ. 1999-2000ನೇ ಸಾಲಿನ ವಾರ್ಷಿಕ ವೆಚ್ಚ 5,131 ಕೋಟಿ ರೂಪಾಯಿಗಳು ಇತ್ತು. ಇದನ್ನು ಹೋಲಿಸಿದಾಗ ಶೇಕಡ 40ರಷ್ಟು ಬೆಳವಣಿಗೆಯಾಗಿದೆ. ಇದು ಹಿಂದೆಂದೂ ಆಗದೆ ಇರುವಂತಹ ಒಂದು ವಿಚಾರವನ್ನು ಎತ್ತಿದ್ದಾರೆ. ಮತ್ತೆ ಇನ್ನೊಂದು ಕಡೆ ಕರ್ನಾಟಕದ ಬಗೆಗಿರುವ ನಮ್ಮ ಕಾಳಜಿ ಮತ್ತು ಪದ್ಧತಿಯನ್ನು ಪ್ರತಿನಿಧಿಸುತ್ತದೆ. ನೀರಾವರಿ, ಗ್ರಾಮೀಣಾಭಿವೃದ್ಧಿ, ಸಾಮಾನ್ಯ ಶಿಕ್ಷಣ, ಆರೋಗ್ಯ, ನೀರು ಪೂರೈಕೆ ಮತ್ತು ನೈರ್ಮಲ್ಯ ಹಾಗೂ ಸಮಾಜ ಕಲ್ಯಾಣ ಕ್ಷೇತ್ರಗಳಿಗೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದನ್ನು ಅನುಬಂಧದಲ್ಲಿ ನಾವು ಗಮನಿಸಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಲೋನ್ ತೆಗೆದುಕೊಂಡು ಹೊಸ ಹೊಸ ಯೋಜನೆಗಳನ್ನು ಹಾಕುತ್ತಿದ್ದಾರೆ, ಮತ್ತು ಬೇರೆ ಬೇರೆ ಆರ್ಥಿಕ ಸಂಸ್ಥೆಗಳಿಂದ ಬಂದಿದ್ದು ಇದರಲ್ಲಿ ಸೇರಿಸಿ ಬಜೆಟ್ ಹೆಚ್ಚಿಗೆ ಮಾಡಿರುವುದನ್ನು ನಾವು ಇಲ್ಲಿ ಕಾಣಬಹುದು. ಸಮಾಜ ಕಲ್ಯಾಣ ಇಲಾಖೆ ಬಡವರಿಗೆ, ಹಿಂದುಳಿದವರಿಗೆ, ಪರಿಶಿಷ್ಟ ಜಾತಿಯವರಿಗೆ ಹೆಚ್ಚು ಒತ್ತು ಕೊಡತಕ್ಕಂತಹ ತೀರ್ಮಾನವನ್ನು ಸರ್ಕಾರ ಮಾಡಿದೆ ಎಂದು ಹೇಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ತೆಗೆದುಕೊಂಡರೆ, ಹೋದ ವರ್ಷ 180 ಕೋಟಿ ರೂಪಾಯಿಗಳು ಇತ್ತು. 1999-2000ನೇ ಇಸವಿಯಲ್ಲಿ ಸ್ಟೇಟ್ ಸೆಕ್ಟಾರ್‌ನಲ್ಲಿ 74 ಕೋಟಿ ರೂಪಾಯಿಗಳು ಅಂಬೇಡ್ಕರ್ ಯೋಜನೆಯಡಿಯಲ್ಲಿ ಆ ಮನೆಗಳಿಗೆ ನಿಗದಿಯಾದುದು. ಈ ಸಾರಿ 72 ಕೋಟಿ ರೂಪಾಯಿಗಳ ಪೂಲ್ಡ್ ಫಂಡ್ಸ್ ಇತ್ತು. ಅದನ್ನು ಈ ವರ್ಷ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಹೆಚ್ಚಿಗೆ ಮಾಡಿದ್ದಾರೆ. ಅದರಲ್ಲಿ ಗಂಗಾ ಕಲ್ಯಾಣ, ಹಾಸ್ಟೆಲ್ ಕಟ್ಟಡ ಮತ್ತು ಸ್ಕಾಲರ್ ಶಿಫ್ ಇದು ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಹಣ. ಇದರಲ್ಲಿ ಯಾವುದೇ ರೀತಿಯ ಹೆಚ್ಚಳವನ್ನು ನಾವು ಕಾಣುತ್ತಿಲ್ಲ. 17 ಕೋಟಿ ರೂಪಾಯಿಗಳನ್ನು ಎಸ್‌ಟಿಯವರ ಅಭಿವೃದ್ಧಿಗೋಸ್ಕರ ಈ ಸಾರಿ ಇಟ್ಟಿದ್ದಾರೆ. ಅದರಲ್ಲಿ ಕೇವಲ 12ವರೆ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ, ಇನ್ನು ಐದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿಲ್ಲ. 153 ಕೋಟಿ ರೂಪಾಯಿಗಳನ್ನು ಈ ಸಾರಿ ಬಿಡುಗಡೆ ಮಾಡಿದ್ದಾರೆ.

4.10 ಪಿ.ಎಂ.

ಅದರಲ್ಲೂ ಕೂಡ ಇನ್ನೂ 28 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಒಟ್ಟಿನಲ್ಲಿ ಈ ಅಂಬ್ಡೇಕರ್ ಯೋಜನೆಯಡಿಯಲ್ಲಿ ಮನೆಗಳಿಗೆ ಕೊಟ್ಟಿರುವ ಹಣದಲ್ಲಿ 46 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಇನ್ನೂ 28 ಕೋಟಿ ರೂಪಾಯಿಗಳನ್ನು ಮಾರ್ಚ್ ಅಂತ್ಯದವರೆಗೆ ಬಿಡುಗಡೆ ಮಾಡಬೇಕಾಗಿದೆ. ಈ ಅಂಬೇಡ್ಕರ್ ಮನೆಗಳನ್ನು ಕೊಡುವ ಯೋಜನೆಯಲ್ಲಿ ಸರ್ಕಾರ ಇಲ್ಲಿಯವರೆಗೆ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ.

ಇನ್ನು ಶಿಕ್ಷಣ ಕ್ಷೇತ್ರವನ್ನು ತೆಗೆದುಕೊಂಡರೆ, ಈ ಬಾರಿ ಉನ್ನತ ಶಿಕ್ಷಣಕ್ಕೆ ಬಹಳ ಕೊಡಲಿ ಪೆಟ್ಟು ಬಿದ್ದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಉನ್ನತ ಶಿಕ್ಷಣಕ್ಕೆ ಕಳೆದ ಬಾರಿ 34 ಕೋಟಿ

ರೂಪಾಯಿಗಳನ್ನು ಕೊಡಲಾಗಿತ್ತು. ವಿಶ್ವವಿದ್ಯಾಲಯಗಳಿಗೆ ಕೊಡುವ ಅನುದಾನವೂ ಸೇರಿದಂತೆ ಕಳೆದ 1999-2000 ಇಸವಿಗೆ 34 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು. ಪ್ರತಿ ವರ್ಷ 15 ರಿಂದ 20 ಪರ್ಸೆಂಟ್ ಜಾಸ್ತಿಯಾಗಬೇಕು. ಆದರೆ ಈ ವರ್ಷ 15 ಪರ್ಸೆಂಟ್ ಕಡಿಮೆ ಮಾಡಿದ್ದಾರೆ. 1996ಕ್ಕೆ ಯು.ಜಿ.ಸಿ. ಸ್ಕೇಲ್ ಶಿಕ್ಷಕರಿಗೆ ಕೊಡಲಾಗುವುದೆಂದು ಘೋಷಣೆ ಮಾಡಿದ ಮೇಲೆ ಇದಕ್ಕಾಗಿ 80 ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ಬಿಡುಗಡೆ ಮಾಡಿ ಅದರಲ್ಲಿ ನಮ್ಮ ಸರ್ಕಾರ 15 ಪರ್ಸೆಂಟ್ ಕಡಿಮೆ ಮಾಡಿದೆ. ಇದರಿಂದಾಗಿ ಯಾವುದೇ ಒಂದು ಅಭಿವೃದ್ಧಿ ಕೆಲಸಗಳನ್ನು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾಹಿತಿ ತಂತ್ರಜ್ಞಾನದ ವಿಷಯದಲ್ಲಿ ಸರ್ಕಾರ ಹೆಚ್ಚು ಒತ್ತನ್ನು ಕೊಡಲಾಗುತ್ತದಲ್ಲದೇ ರಾಜ್ಯ ಪರಿಷತ್ ಒಂದನ್ನು ಸ್ಥಾಪನೆ ಮಾಡುತ್ತೇವೆಂದು ಮಾಹಿತಿ ತಂತ್ರಜ್ಞಾನಕ್ಕೆ ಬೇಕಾದ ಸವಲತ್ತುಗಳನ್ನು 9620 ವಿದ್ಯಾರ್ಥಿಗಳಿಂದ 20 ಸಾವಿರ ವಿದ್ಯಾರ್ಥಿಗಳಿಗೆ ನೀಡಲಾಗುವುದೆಂದು ಹೇಳಿದ್ದಾರೆ. ಆದರೆ ಯಾವ ವಿದ್ಯಾರ್ಥಿಗಳಿಗೆ ಹಾಗೂ ಯಾವ ರೀತಿಯಲ್ಲಿ ಸವಲತ್ತುಗಳನ್ನು ಒದಗಿಸುತ್ತಾರೆ ಎಂಬುದನ್ನು ಅವರು ಹೇಳಿಲ್ಲ. ಇದು ಕೇವಲ ಪಟ್ಟಣಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಯೋ ಅಥವಾ ಹಳ್ಳಿಗಾಡಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆಯೋ ಎನ್ನುವ ಬಗ್ಗೆ ಅವರು ಹೇಳಬೇಕಾಗುತ್ತದೆ. ನನಗೆ ತಿಳಿದಿರುವಂತೆ ಪ್ರಾಥಮಿಕ ಶಾಲೆಗೆ ಸೇರಿದವರಲ್ಲಿ 7ನೇ ತರಗತಿಗೆ ಬರುವುದರೊಳಗೆ 35 ಪರ್ಸೆಂಟ್ ವಿದ್ಯಾರ್ಥಿಗಳು ಬಿಟ್ಟುಬಿಡುತ್ತಾರೆ. ಪಿ.ಯು.ಸಿ.ಗೆ ಬರುವುದರೊಳಗೆ ಇನ್ನೂ 35 ಪರ್ಸೆಂಟ್ ವಿದ್ಯಾರ್ಥಿಗಳು ಬಿಟ್ಟುಬಿಡುತ್ತಾರೆ. ಪ್ಲಸ್ ಟು ಎಜುಕೇಷನ್‌ನಿಂದ ಮುಂದೆ ವಿದ್ಯಾಭ್ಯಾಸ ಮಾಡಲು 100ಕ್ಕೆ 35 ವಿದ್ಯಾರ್ಥಿಗಳು ಮಾತ್ರ ಬರುತ್ತಾರೆ. ಇದರಲ್ಲಿ 10 ಪರ್ಸೆಂಟ್ ವಿದ್ಯಾರ್ಥಿಗಳು ಡಿಪ್ಲೊಮೋ ಮತ್ತು ಐ.ಟಿ.ಐ.ಗಳಿಗೆ ಹೋಗುತ್ತಾರೆ. ಇನ್ನು ಪಿ.ಯು.ಸಿಗೆ ಹಳ್ಳಿಗಾಡಿನ ಮಕ್ಕಳು ಶೇಕಡ 10ರಷ್ಟು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಂಥ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ತಲುಪಿಸಲು ಏನು ಏರ್ಪಾಡು ಮಾಡಿದ್ದೀರಿ ಎಂಬ ಬಗ್ಗೆ ಹೇಳಬೇಕು. ಇವೊತ್ತು ಈ ಮಾಹಿತಿ ತಂತ್ರಜ್ಞಾನದ ಸವಲತ್ತು ಕೇವಲ ಪಟ್ಟಣಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಿಕ್ಕರೆ ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿರುವ 80 ಪರ್ಸೆಂಟ್ ವಿದ್ಯಾರ್ಥಿಗಳು ಮಾಹಿತಿ ತಂತ್ರಜ್ಞಾನದ ಸವಲತ್ತನ್ನು ಪಡೆಯಲು ವಂಚಿತರಾಗುತ್ತಾರೆ. ಇದಕ್ಕೆ ಸರ್ಕಾರ ಏನಾದರೂ ಒಂದು ಏರ್ಪಾಡು ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ರಿಸೋರ್ಸಸ್ ಮೊಬಿಲೈಸೇಶನ್ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಡಲಾಗುವುದೆಂದು ಹೇಳಿದ್ದಾರೆ. ಆದರೆ ಕಾರ್ಪೊರೇಶನ್‌ಗಳಲ್ಲಾಗಬಹುದು, ಪುರಸಭೆಗಳಲ್ಲಾಗಬಹುದು ಅಥವಾ ಕಂದಾಯ ಇಲಾಖೆಯಲ್ಲಾಗಬಹುದು, ಇಲ್ಲಿ ಯಾವ ರೀತಿಯಲ್ಲಿ ಇದನ್ನು ಹೆಚ್ಚಿಗೆ ಮಾಡಿದ್ದಾರೆ ಎಂಬ ಬಗ್ಗೆ ಹೇಳಿರುವುದನ್ನು ನಾನು ಕಾಣುತ್ತಿಲ್ಲ. ಒಂದು ಮಾಹಿತಿಯನ್ನು ನಾನು ಓದಿದೆ. ``Hyderabad set

to score over Bangalore", ಎಂದು ಪತ್ರಿಕೆಯಲ್ಲಿ ಇತ್ತು. ಇದರಲ್ಲಿ ಹಾಲೆಂಡ್ ಬೇಸ್ಡ್ ಕಂಪನಿಯವರು ಕಾರ್ಪೊರೇಷನ್‌ನ ಒಂದು ಯೋಜನೆಯನ್ನು ಹೆಚ್ಚಿಸಬೇಕು ಎಂಬ ಬಗ್ಗೆ ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಈ ಯೋಜನೆಯನ್ನು ತೆಗೆದುಕೊಳ್ಳಲು ಅನುಮತಿಯನ್ನು ಕೇಳಿದ್ದಾರೆ ಎನ್ನುವ ಮಾಹಿತಿಯನ್ನು ನಾನು ಪತ್ರಿಕೆಯಲ್ಲಿ ಓದಿದ್ದೆ. ಅದರಲ್ಲಿ ಈ ಹಾಲೆಂಡ್ ಬೇಸ್ಡ್ ಕಂಪನಿಯವರು ತಮ್ಮ ಅನುಭವದಲ್ಲಿ 200 ಕಾರ್ಪೊರೇಷನ್‌ಗಳಲ್ಲಿ ತಮ್ಮ ಯೋಜನೆಯನ್ನು ಜಾರಿಗೊಳಿಸಿ ಯುರೋಪ್ ಒಂದರಲ್ಲಿಯೇ ಸುಮಾರು 80 ಸಿಟಿಗಳಲ್ಲಿ ಯೋಜನೆಯನ್ನು ಜಾರಿಗೊಳಿಸಿ ಶೇಕಡ 500ರಿಂದ 600ರಷ್ಟು ಹಣವನ್ನು ಹೆಚ್ಚಿಗೆ ಮಾಡಿರುವುದಾಗಿಯೂ ಅದೇ ರೀತಿಯಲ್ಲಿ ಬೆಂಗಳೂರು ನಗರದಲ್ಲೂ ಮಾಡಲು ಅನುಮತಿ ಕೊಡಬೇಕೆಂದು ಕೇಳಿ ಇದಕ್ಕಾಗಿ ಒಂದು ರೂ.ವನ್ನು ಕೂಡ ಕರ್ನಾಟಕ ಸರ್ಕಾರ ಖರ್ಚು ಮಾಡಬೇಕಾಗಿಲ್ಲವೆಂದು, ಇದಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನು ನಾವೇ ಒದಗಿಸಿಕೊಳ್ಳುತ್ತೇವೆಂದು ಕೇವಲ ಅನುಮತಿಗಾಗಿ ಕೇಳಲು ಬಂದಿದ್ದರು. ಆದರೆ ನಮ್ಮ ಸರ್ಕಾರ ಯಾವುದೇ ರೀತಿಯ ಸಹಕಾರವನ್ನು ಕೊಡದೇ ಇದ್ದಾಗ ಅವರು ನಿರಾಶರಾಗಿ ವಾಪಸ್ಸು ಹೋಗಿದ್ದಾರೆ. ಸರ್ಕಾರ ಅನಾವಶ್ಯಕವಾಗಿ ಈ ಯೋಜನೆಯನ್ನು ಕೈಬಿಟ್ಟಿದೆ ಎಂದು ನನ್ನ ತಿಳುವಳಿಕೆ. ಇನ್ನು ಹೊರದೇಶದ ಹಣವನ್ನು ನಾವು ಹೆಚ್ಚು ತೆಗೆದುಕೊಂಡು ಅಭಿವೃದ್ಧಿಯನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮತ್ತೊಂದು ದುಃಖಕರವಾದ ಸಂಗತಿಯನ್ನು ನಾನು ಇನ್ನೊಂದು ಕಡೆ ಓದಿದೆ. ಏನೆಂದರೆ ಡೋನಾಲ್ಡ್ ಸಮ್ಮರ್ಸ್ ಎಂಬ ಯುನೈಟೆಡ್ ಸ್ಟೇಟ್ಸ್‌ನ ಹೈಟೆಕ್ಕಿಂಗ್ ಡೈರೆಕ್ಟರ್ ಒಬ್ಬರು ಬೆಂಗಳೂರಿಗೆ ಬಂದಿದ್ದರು. ನನಗೆ ಸಿಕ್ಕ ಮಾಹಿತಿ ಪ್ರಕಾರ ಇವರು ಅಮೇರಿಕಾದ ಅಧ್ಯಕ್ಷ ಕ್ಲಿಂಟನ್‌ರವರಿಗೆ ನಿಕಟವರ್ತಿ ಉದ್ಯಮಿಗಳು. ಇವರು ನಮ್ಮ ಬೆಂಗಳೂರಿಗೆ ಬಂದು ಇಲ್ಲಿ ಮೆಗಾ ಪ್ರಾಜೆಕ್ಟ್ ಒಂದನ್ನು ಕೈಗೆತ್ತಿಕೊಳ್ಳುವುದಾಗಿ ಇದಕ್ಕೆ ಮುಳಬಾಗಿಲಿನಲ್ಲಿ ಜಮೀನು ಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಬಂದಿದ್ದರು. ಇವರು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 12.45ಗಂಟೆಯವರೆಗೆ ಕಾದು ಕುಳಿತರೂ ಕೂಡ ಮುಖ್ಯಮಂತ್ರಿಗಳ ಭೇಟಿಯಾಗಲು ಸಿಗದಿದ್ದಾಗ ನಿರಾಶರಾಗಿ ತಕ್ಷಣ ಹೈದರಾಬಾದಿಗೆ ದೂರವಾಣಿಯನ್ನು ಮಾಡಿ ಪ್ರಾಜೆಕ್ಟ ವಿಷಯ ಹೇಳಿದಾಗ ಆಂಧ್ರದ ಮುಖ್ಯಮಂತ್ರಿಗಳ ಪ್ರೈವೇಟ್ ಸೆಕ್ರೆಟರಿ ತಕ್ಷಣ ಮುಖ್ಯಮಂತ್ರಿಗಳಿಂದ ಫೋನ್ ಮಾಡಿಸುವುದಾಗಿ ಹೇಳಿದರು. ಆ ರೀತಿ ಹೇಳಿದ ಸ್ವಲ್ಪ ಹೊತ್ತಿನಲ್ಲಿಯೇ ಆಂಧ್ರದ ಮುಖ್ಯಮಂತ್ರಿಗಳಾದ ಮಾನ್ಯ ಚಂದ್ರಬಾಬುನಾಯ್ಡುರವರು ಇವರಿಗೆ ಫೋನ್ ಮಾಡಿ, 'ನಿಮಗೆ ಬೇಕಾದ 100 ಎಕರೆಯಲ್ಲಿ 40 ಎಕರೆಯನ್ನು ಈಗಾಗಲೇ ಮಂಜೂರು ಮಾಡಿರುವುದಾಗಿ ಮತ್ತು ಡೋನಾಲ್ಡ್ ಸಮ್ಮರ್ಸ್‌ರವರು ಇಳಿದುಕೊಂಡಿರುವ ಹೋಟೆಲ್‌ನ ಹತ್ತಿರ ಒಂದು ಕಾರನ್ನು ಕಳುಹಿಸುವುದಾಗಿ ಆ ಕಾರಿನಲ್ಲಿ ಹೊರಟು ಜಮೀನನ್ನು ನೋಡಬೇಕೆಂದು ತಿಳಿಸಿದರಲ್ಲದೇ ಅಲ್ಲಿಗೇ ಒಂದು ಹೆಲಿಕಾಪ್ಟರ್ ಬರುವುದಾಗಿ ಅದರಲ್ಲಿ ಹೈದರಬಾದ್‌ಗೆ ಬಂದು ನನ್ನ ಜೊತೆ ಡಿನ್ನರ್ ತೆಗೆದುಕೊಳ್ಳಬೇಕೆಂದು ಮಾನ್ಯ ಚಂದ್ರಬಾಬುನಾಯ್ಡುರವರು ಅವರಿಗೆ ತಿಳಿಸುತ್ತಾರೆ. ಡೊನಾಲ್ಡ್ ಸಮ್ಮರ್ಸ್‌ರವರು ಅಲ್ಲಿಗೆ ಹೋಗಿದ್ದಾರೆ. ``Summers cell phone rings. I am Marilinge Gowda speaking, CM is busy with Rajya Sabha elections. But you

may be able to meet him just for a couple of minutes day after tomorrow. But I will confirm it tomorrow." ಅಂತ ಇವರು ಹೇಳಿದಾಗ, Summers said, ``No thanks, I have already clinched the deal". ಎಂದು ಹೇಳಿದ್ದಾರೆ. ಇದನ್ನು ನೋಡಿದಾಗ ಒಂದು ಕಡೆ ನಮ್ಮ ಸರ್ಕಾರ ಫಾರಿನ್ ಇನ್‌ವೆಸ್ಟ್‌ಮೆಂಟಿಗೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತದೆ, ಇದಕ್ಕಾಗಿ ನಾವು ಹಾಸಿಗೆ ಹಾಸಿ ಸ್ವಾಗತ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಇನ್ನೊಂದು ಕಡೆ ಸ್ವಾಗತವನ್ನು ಕೊಡುತ್ತಿಲ್ಲ. ನನಗೆ ಗೊತ್ತಾದ ಮಾಹಿತಿಯ ಪ್ರಕಾರ ಇವರು ಮಾನ್ಯ ಕ್ಲಿಂಟನ್‌ರವರಿಗೆ ಬಹಳ ನಿಕಟವರ್ತಿಗಳಾಗಿದ್ದಾರೆ. ನನಗೆ ಏನು ಅನುಮಾನ ಬರುತ್ತಿದೆ ಎಂದರೆ ಎರಡು ಮೂರು ವಿಚಾರಗಳನ್ನು ನೋಡಿದಾಗ Karnataka is not an investment-friendly state ಎಂಬ ಭಾವನೆ ನನಗೆ ಬಂದಿದೆ. ಅವರು ಕ್ಲಿಂಟನ್‌ರವರನ್ನು ಕೇಳಿದಾಗ, ಬೆಂಗಳೂರು ಪ್ರವಾಸವನ್ನು ರದ್ದು ಮಾಡಿದ್ದಾರೆಂದು ನನ್ನ ಅನುಮಾನವಾಗಿದೆ. ಅದಕ್ಕೆ ತಾವು ಕ್ಲಾರಿಫಿಕೇಶನ್ ಕೊಡಬೇಕು. ಅವರಿಗೆ ಇಲ್ಲಿ ಇಷ್ಟು ಸಹಕಾರ ಸಿಗದೇ ಇದ್ದಾಗ ಅವರು ಏನು ಮಾಡುತ್ತಾರೆ? ಆದುದರಿಂದ ಅವರು ಪ್ರತಿಯೊಂದು ಸಂದರ್ಭದಲ್ಲೂ ಹೈದರಬಾದ್‌ಗೆ ಹೋಗುತ್ತಿದ್ದಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಎಲ್ಲಾ ರೀತಿಯಲ್ಲೂ ಎಷ್ಟು ಅನುಕೂಲಗಳು ಇದೆ ಎಂದರೆ ಇವತ್ತು ನಾವು ಎರಡು ಸಾವಿರ ಮೂರು ಸಾವಿರ ಕೋಟಿ ರೂಪಾಯಿಗಳ ಸಾಫ್ಟ್‌ವೇರ್ ಅನ್ನು ರಫ್ತು ಮಾಡುತ್ತೇವೆ. ಹೈದರಬಾದ್‌ನವರು ಎರಡು ನೂರು, ಮೂರು ನೂರು ಕೋಟಿ ರೂಪಾಯಿಗಳಷ್ಟು ಕೂಡ ಮಾಡುತ್ತಾ ಇಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ವಿಚಾರವನ್ನು ತೆಗೆದುಕೊಳ್ಳಿ, ಜನರ ಸಂಸ್ಕಾರ ವಿಚಾರವನ್ನು ತೆಗೆದುಕೊಳ್ಳಿ, ಎಲ್ಲಾ ರೀತಿಯಿಂದಲೂ ಉತ್ತಮವಾದಂತಹ ರಾಜ್ಯವಾಗಿದೆ. ಆದರೆ ಇಂತಹ ಅವಕಾಶಗಳು ತಪ್ಪಿಹೋಗುತ್ತಿವೆ. ಮಾನ್ಯ ಮುಖ್ಯಮಂತ್ರಿಯವರು ಇನ್‌ವೆಸ್ಟ್‌ಮೆಂಟಿಗೆ ಸ್ವಾಗತ ಮಾಡುತ್ತಿದ್ದಾರೆ, ಉತ್ತೇಜನ ಕೊಡುತ್ತಿದ್ದಾರೆನ್ನುವುದನ್ನು ಕೇಳಿ ಪತ್ರಿಕೆಗಳಲ್ಲಿ ಬರುವಂತಹ ಸ್ಟೇಟ್‌ಮೆಂಟ್‌ಗಳನ್ನು ನೋಡಿದಾಗ ನಿರಾಶೆಯಾಗುತ್ತದೆ. ತಾವು ಇದಕ್ಕೆ ಸ್ಪಷ್ಟೀಕರಣವನ್ನು ನೀಡಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಗ್ಯಾರಿ ಸೋಮರ್ಸ್‌ರವರು ನನ್ನ ಬಳಿ ಬಂದಿದ್ದರು.

ಶ್ರೀ ಬಿ. ಸೋಮಶೇಖರ್ : ಇದರಲ್ಲಿ ಏನು ಆಗಿದೆ ಎಂಬುದನ್ನು ತಾವು ಹೇಳಬೇಕು. ಇನ್ನು ಆರೋಗ್ಯ ಇಲಾಖೆಯಿಂದ ಹೊಸ ಯೋಜನೆಯನ್ನು ತಯಾರು ಮಾಡಿದ್ದಾರೆ. 'ಹೆಲ್ತ್ ಕಿಟ್' ಎಂದು ಹೇಳಿ ಅದಕ್ಕೆ ಹದಿನೆಂಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಸ್ಪತ್ರೆಗಳು ಇವೆ. ಯಾವ ಆಸ್ಪತ್ರೆಗಳಿಗೆ ಸರ್ಕಾರದಿಂದ ಕೊಡುವಂತಹ ಔಷಧಿಗಳು ತಲುಪುತ್ತಿವೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಒಂದು ಇಂಜೆಕ್ಷನ್, ಟ್ಯಾಬ್ಲೆಟ್, ರೋಗಿಗಳಿಗೆ ಹೋಗುತ್ತಿಲ್ಲ. ನಾವು ಇವತ್ತಿನ ವಾಸ್ತವಾಂಶವನ್ನು ನೋಡಿದಾಗ ಹಳ್ಳಿಗಳಿಗೆ ರಸ್ತೆಗಳು ಮಾಡಬೇಕು, ಒಳ್ಳೆಯ ಶುದ್ಧವಾದಂತಹ ನೀರನ್ನು ಕೊಡಬೇಕು. ಹೆಣ್ಣು ಮಕ್ಕಳಿಗೆ ಶೌಚಾಲಯವನ್ನು ಕಟ್ಟಿಸಿಕೊಡಬೇಕು. ಇನ್ನು 'ನಿರ್ಮಲ ಕರ್ನಾಟಕ' ಎನ್ನುವ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುವುದಕ್ಕೆ

ಆಗಿಲ್ಲ. ಇವತ್ತು ಸರಿಯಾದಂತಹ ಶೌಚಾಲಯವಿಲ್ಲ, ನಾವು ಕಿಟ್ ಕೊಡುತ್ತೇವೆ. ಇಲ್ಲಿ ಹಳ್ಳಿಗಳ ಬಗ್ಗೆ ಬಿಡಿ, ನಮ್ಮ ಪಟ್ಟಣ ಪ್ರದೇಶಗಳಲ್ಲೇ ಆಗಲಿ ವಿದ್ಯಾವಂತ ಮಹಿಳೆಯರಲ್ಲಿ ಎಷ್ಟು ಜನರು ಇಂತಹ ಸವಲತ್ತುಗಳನ್ನು ಪಡೆಯುತ್ತಿದ್ದಾರೆಂಬುದು ನನಗೆ ಗೊತ್ತಿಲ್ಲ. ಇದ್ದನ್ನು ನಾವು ಮುಕ್ತವಾಗಿ ಯೋಚನೆ ಮಾಡೋಣ. ಇವರು ಶುದ್ಧವಾದಂತಹ ಬಟ್ಟೆಗಳನ್ನು ಉಪಯೋಗ ಮಾಡುತ್ತಿಲ್ಲ. ಇದು ನಿಜವಾಗಿಯೂ ಹೆಣ್ಣು ಮಕ್ಕಳಿಗೆ ತಲುಪುತ್ತಿದೆಯೋ ಅಥವಾ ಇಲ್ಲವೋ ಎಂಬ ಅನುಮಾನ ನನಗೆ ಉಂಟಾಗಿದೆ. ತಾವು ಹಳ್ಳಿಗಳಿಗೆ ಇದರ ಬದಲಾಗಿ ಶೌಚಾಲಯಗಳನ್ನು ಕಟ್ಟಿಸಿ ಕೊಡಿ. ಮತ್ತೆ ಒಳಚರಂಡಿ ವ್ಯವಸ್ಥೆಯನ್ನು ಸರಿಯಾಗಿ ಮಾಡಿಸಿ, ಅಲ್ಲಿ ಸ್ವಚ್ಛವಾದಂತಹ ವಾತಾವರಣವನ್ನು ನಿರ್ಮಾಣ ಮಾಡಿ, ಅವರಿಗೆ ಸ್ನಾನಕ್ಕೆ ಅವಕಾಶ ಮಾಡಿಕೊಡಿ, ಒಳ್ಳೆಯ ನೀರನ್ನು ಕೊಡಿ. ಇನ್ನು ಇಲ್ಲೇ ಅಫಿಶಿಯಲ್ ಆಗಿ ಉಪಯೋಗ ಮಾಡುತ್ತಿಲ್ಲ, ಆದುದರಿಂದ ಇದು ಏನು ಯಶಸ್ವಿಯಾಗುತ್ತದೆ ಎಂಬುದು ನನಗೆ ಅನುಮಾನವಿದೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗಿದೆ.

ಇನ್ನು ವಿದ್ಯುತ್ ವಿತರಣೆಯ ಬಗ್ಗೆ ಹೇಳಿದ್ದಾರೆ, ವಿದ್ಯುತ್ ಬಗ್ಗೆ ನನಗನಿಸುವುದೇನೆಂದರೆ, ಐದಾರು ತಿಂಗಳುಗಳಿಂದ ಸರ್ಕಾರ ಯಾವುದೇ ರೀತಿಯಾದಂತಹ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂಬ ಆಪಾದನೆ ಇದೆ, ಹೋದ ಸಾರಿ ನಮ್ಮ ಸರ್ಕಾರವಿದ್ದಾಗ ಸುಮಾರು ಆರು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಾವು ಟೆಂಡರ್ ಅನ್ನು ಕರೆದಿದ್ದೆವು. ನಾವು ಹೊಸ ಸ್ಟೇಷನ್ ಮಾಡುವಂಥಾದ್ದು, ಹೊಸ ಸಂಪರ್ಕವನ್ನು ಕೊಡುವಂಥಾದ್ದು, ಇದಕ್ಕೆ ಟೆಂಡರ್ ಕರೆಯುವಂತಹ ತೀರ್ಮಾನವನ್ನು ತೆಗೆದುಕೊಂಡೆವು, ಈಗ ಐದು ತಿಂಗಳುಗಳು ಕಳೆದಿದೆ. ಒಂದು ಕಡೆ ವೋಲ್ಟೇಜ್ ಇಲ್ಲ, ಓವರ್ ಲೋಡ್ ಆಗಿದೆ, ಇಂಟ್ರಪ್ಷನ್ ಆಗುತ್ತಿದೆ, ಟಿ.ಸಿಗಳಿಲ್ಲ, ಅವು ಸುಟ್ಟು ಹೋಗುತ್ತಿವೆ, ಎನ್ನುವಂತಹ ದೂರಗಳು ಬರುತ್ತಿವೆ. ಆದರೆ ನಾವು ತೆಗೆದುಕೊಂಡ ತೀರ್ಮಾನಗಳಲ್ಲಿ ಒಂದು ಟೆಂಡರ್ ಅನ್ನು ಸಹ ಜಾರಿಗೊಳಿಸಿಲ್ಲ. ನಾವು ಸುಮಾರು 700, 800 ಮೆಗಾ ವಾಟ್ಸ್ ಅನ್ನು ನಿಮ್ಮ ಗ್ರಿಡ್‌ಗೆ ಕೊಟ್ಟಿದ್ದೇವೆ. ಇವತ್ತು ನಾವು ಅದನ್ನು ಸೇರಿಸದೆ ಇದ್ದಿದ್ದರೆ ಏನಾಗುತ್ತಿತ್ತು ಎಂಬುದನ್ನು ಯೋಚನೆ ಮಾಡಬೇಕು. ಇನ್ನು ಹುಡ್ಕೋದಿಂದ ಸುಮಾರು 160 ಕೋಟಿ ರೂಪಾಯಿಗಳ ಬಂಡವಾಳ ಬಂದಿದೆ ಎಂಬ ಸಂಗತಿಯನ್ನು ನಾವು ಲೆಜಿಸ್ಲೇಚರ್ ಕಮಿಟಿಯಿಂದ ತಿಳಿದುಕೊಂಡು ಬಂದೆವು. ಈ 160 ಕೋಟಿ ರೂಪಾಯಿಗಳು ಎಲ್ಲಿಗೆ ಹೋಯಿತು? ಅದರಲ್ಲಿ ಎಷ್ಟು ಹಣ ಖರ್ಚಾಯಿತು ಅದೆಲ್ಲಾ ಏನಾಯಿತು ಎಂಬುದನ್ನು ನಮ್ಮ ಗಮನಕ್ಕೆ ತರಬೇಕಾಗುತ್ತದೆ.

ಇನ್ನು ತಾವು ಆಡಳಿತದಲ್ಲಿ ಪಾರದರ್ಶಕತೆ ಬಗ್ಗೆ ಹೇಳುತ್ತೀರಿ, ಎಷ್ಟು ಹಣವನ್ನು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೀರಿ, ಯಾವ ತಿಂಗಳಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ತಿಳಿಸಬೇಕು. ಇನ್ನು ಬೇರೆ ಬೇರೆ ವಿಚಾರಗಳಲ್ಲಿ ಕಮಿಟಿಗಳನ್ನು, ತಜ್ಞರ ಕಮಿಟಿಗಳನ್ನು ಮಾಡುತ್ತಿದ್ದೀರಿ. ನಾನು ತಮಗೆ ಸೂಚನೆಯನ್ನು ಕೊಡುವುದೇನೆಂದರೆ ಈ ಹಣ ಖರ್ಚಾಗುವಂಥಾದ್ದಕ್ಕೆ ಒಂದು ಸಮಿತಿಯನ್ನು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಇವತ್ತು ಸಮಾಜ ಕಲ್ಯಾಣ ಇಲಾಖೆಗೆ ಕೆಲವು ಸಾರಿ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಅದು ರಾಜ್ಯ ಸರ್ಕಾರದಿಂದ ಶೇ. 50ರಷ್ಟು, ಕೇಂದ್ರ

ಸರ್ಕಾರದಿಂದ ಶೇ. 50ರಷ್ಟು ಹಣವನ್ನು ಕೊಡುತ್ತಾರೆ. ಕೇಂದ್ರ ಸರ್ಕಾರದವರು ಹಣವನ್ನು ಕೊಡುವಂಥಾದ್ದು ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಕೊಡುತ್ತಾರೆ, ಅಲ್ಲಿಯವರೆಗೆ ರಾಜ್ಯ ಸರ್ಕಾರದವರು ಒಂದು ರೂಪಾಯಿಯನ್ನು ರಿಲೀಸ್ ಮಾಡುವುದಿಲ್ಲ. ಈ ರೀತಿಯಾಗಿ ಒಂದು ಹಾಸ್ಟೆಲ್ ಕಟ್ಟಡವಾಗಲಿ, ಬೇರೆ ಯಾವ ವಿಚಾರಗಳಿಗೂ ಹಣ ಖರ್ಚಾಗುವುದಿಲ್ಲ. ತಾವು ಬಜೆಟ್‌ನಲ್ಲಿ ಹಣವನ್ನು ಪ್ರೊವೈಡ್ ಮಾಡುತ್ತೀರಿ, ಆದರೆ ಹಣ ರಿಲೀಸ್ ಆಗುವುದಿಲ್ಲ, ಮತ್ತೆ ಎಂ.ಎಂ.ಆರ್.ನಲ್ಲಿ ಪ್ರತಿ ತಿಂಗಳು ಅದನ್ನು ರಿವ್ಯೂ ಮಾಡುತ್ತೀರಾ? ಅದನ್ನು ತಿಂಗಳಿಗೆ ಒಂದು ಸಾರಿ ಅಥವಾ ಮೂರು ತಿಂಗಳಿಗೆ ಒಂದು ಸಾರಿ ಅದನ್ನು ಪರಿಶೀಲನೆ ಮಾಡುತ್ತಿರಾ? ನೀವು ಹಣವನ್ನು ರಿಲೀಸ್ ಮಾಡದೇ ಪ್ರಗತಿ ಪರಿಶೀಲನೆಯನ್ನು ಮಾಡಿದರೆ ಏನು ಪ್ರಯೋಜನ ಆಗುತ್ತದೆ? ಇದರಿಂದ ಏನು ಪ್ರಯೋಜನವಾಗುವುದಿಲ್ಲ. ಆದುದರಿಂದ ನಾನು ಹೇಳುವಂಥಾದ್ದು ಪ್ರತಿ ತಿಂಗಳಿಗೊಮ್ಮೆ, ಅಥವಾ ಮೂರು ತಿಂಗಳಿಗೊಮ್ಮೆ ಅದು ಯಾವುದೇ ಇಲಾಖೆಯಾಗಬಹುದು, ಸಮಾಜ ಕಲ್ಯಾಣ ಇಲಾಖೆ ಆಗಬಹುದು, ವಿದ್ಯುತ್ ಇಲಾಖೆ ಆಗಬಹುದು, ಗ್ರಾಮೀಣಾಭಿವೃದ್ಧಿ ಇಲಾಖೆ ಆಗಬಹುದು, ಯಾವುದೇ ಇಲಾಖೆಯಾಗಲೀ, ಅದನ್ನು ಪ್ರತೀ ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೊಮ್ಮೆ ಒಂದು ಸಾರಿ ಹಣವನ್ನು ಬಿಡುಗಡೆ ಮಾಡಿ ಅದು ಖರ್ಚು ಆಗಿದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಒಂದು ಕಮಿಟಿಯನ್ನು ಮಾಡುವಂತಹ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನು 'ರೈತ ಮಿತ್ರ' ಯೋಜನೆಯನ್ನು ನಾವು ತಯಾರು ಮಾಡಿದ್ದೇವೆ. ನಮ್ಮ ಸರ್ಕಾರ ಸಹ ಇಂತಹ ಒಂದು ಯೋಜನೆಯನ್ನು ತಂದಿತ್ತು. ನಾನು ಅದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತಂದಿದ್ದೇನೆ. ಪ್ರತಿಯೊಬ್ಬ ರೈತನು ಸಾಲವನ್ನು ಪಡೆಯಲು, ಸರ್ಕಾರದ ಯೋಜನೆಗಳ ಫಲವನ್ನು ಪಡೆಯಲು ಅವನಿಗೆ ಸಂಪೂರ್ಣವಾದಂತಹ ಮಾಹಿತಿಗಳು ಒಂದು ಕಡೆ ದೊರಕುವಂತೆ ಇರಬೇಕು. ಅದಕ್ಕಾಗಿ ನಮ್ಮ ಸರ್ಕಾರ 1986ರಲ್ಲಿ 'ಕೃಷಿ ಪಾಸ್ ಪುಸ್ತಕ' ಯೋಜನೆಯನ್ನು ತಂದಿತು. ಇದನ್ನು ಇನ್ನೂ ಉತ್ತಮ ಪಡಿಸಿ, ಕೇರಳ ರಾಜ್ಯದಿಂದ, ಪಂಜಾಬ್ ರಾಜ್ಯದಿಂದ, ಉತ್ತರ ಪ್ರದೇಶದಿಂದ ಇದು ಯಾವ್ಯಾವ ಮಾಹಿತಿಗಳನ್ನು ಒಳಗೊಂಡಿದೆ ಎಂಬ ಮಾಹಿತಿಗಳನ್ನು ತರಿಸಿ. ಈ ಕಾನೂನಿಗೆ ತಿದ್ದುಪಡಿಯನ್ನು ಮಾಡಿ ಒಂದು ಸಮಗ್ರವಾದಂತಹ ಒಂದು ಪುಸ್ತಕವನ್ನು ತಯಾರು ಮಾಡಿ. ನಮ್ಮ ಸರ್ಕಾರ ಹೋದ ವರ್ಷ ಒಂದು ಕ್ಯಾಬಿನೆಟ್ ತೀರ್ಮಾನ ಮಾಡಿತ್ತು. ಅದರಲ್ಲಿ ಪ್ರಾಯೋಗಿಕವಾಗಿ ನಾಲ್ಕು ಜಿಲ್ಲೆಗಳನ್ನು ತೆಗೆದುಕೊಳ್ಳಬೇಕೆಂದು, 4 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಬೇಕೆಂದು ಕ್ಯಾಬಿನೆಟ್ ತೀರ್ಮಾನವಾಗಿತ್ತು. ನೀವು ಇದನ್ನು ನಿಜವಾಗಿಯೂ 'ರೈತ ಮಿತ್ರ' ಎಂದು ಹೇಳಿದ್ದರೆ ಸಂತೋಷವಾಗುತ್ತಿತ್ತು. ಪ್ರತಿಯೊಬ್ಬ ಖಾತೆದಾರರು ಪಾಸ್ ಪುಸ್ತಕವನ್ನು ಇಟ್ಟುಕೊಂಡು ಸಬ್ ರಿಜಿಸ್ಟ್ರಾರ್ ಆಫೀಸ್‌ಗೆ, ಪಿ.ಎಲ್.ಡಿ. ಬ್ಯಾಂಕ್‌ಗೆ, ಇನ್ಯಾವ ಬ್ಯಾಂಕ್‌ಗೆ ಹೋಗಬೇಕಾದರೂ ಈ ಪುಸ್ತಕವನ್ನು ತೆಗೆದುಕೊಂಡು ಹೋಗಬಹುದು,ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಇದಕ್ಕೆ 15 ಕೋಟಿ ರೂಪಾಯಿಗಳಿಂದ 17 ಕೋಟಿ ರೂಪಾಯಿಗಳು ಆಗುತ್ತಿತ್ತು. ಇದನ್ನು ನೀವು 'ರೈತ ಮಿತ್ರ' ಎಂದು ಹೇಳಿದರೆ ಯಶಸ್ವಿಯಾಗುತ್ತಿತ್ತು. ನೀವು ಇದಕ್ಕೆ

ಹಣವನ್ನು ರಿಲೀಸ್ ಮಾಡಿ, ನಾನು ಹೋದ ಸಭೆಯಲ್ಲಿ ಕೂಡ ಮಾತನಾಡಿದ್ದೇನೆ. ಇನ್ನು ಹಣ ರಿಲೀಸ್ ಆಗಿಲ್ಲ.

ಇನ್ನು 'ನೆಟ್ ವರ್ಕಿಂಗ್' ಎಂದು ಆ ಬಗ್ಗೆ ನಮ್ಮ ಸ್ನೇಹಿತರಾದಂತಹ ಶ್ರೀ ಯು.ಆರ್. ಸಭಾಪತಿಯವರು ಹೇಳಿದ್ದಾರೆ. ಇದರಿಂದ ಜಿಲ್ಲೆಗಳಿಗೂ, ರಾಜ್ಯಕ್ಕೂ ಸಂಪರ್ಕವನ್ನು ಕಲ್ಪಿಸಬೇಕೆಂದು ನಮ್ಮ ಸರ್ಕಾರ ಕ್ಯಾಬಿನೆಟ್ ತೀರ್ಮಾನ ಮಾಡಿತು. ಇದಕ್ಕೆ ಕೇವಲ ಎರಡೂವರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ, ಜಿಲ್ಲಾಧಿಕಾರಿಗಳಿಗೂ ಮತ್ತು ನಮ್ಮ ಸೆಕ್ರೆಟರಿಯವರಿಗೂ ಸಂಪರ್ಕವನ್ನು ಕಲ್ಪಿಸಿಕೊಡವಂತಹ ಇ-ಮೇಲ್ ಕಳುಹಿಸಿ ಕೊಡುವಂತಹ ಪದ್ಧತಿ ಬೇಕು. ಇದಕ್ಕೆ ನಮ್ಮ ಟೆಲಿ ಕಮ್ಯುನಿಕೇಶನ್ ಇಲಾಖೆ ಸಂಪರ್ಕ ಮಾಡಿ ಎರಡೂವರೆ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿ ಎರಡೂವರೆ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿ ಅಪ್ರೂವ್ ಮಾಡಿದೆವು. ಇದಕ್ಕೆ ಇನ್ನೂ ಒಂದು ರೂಪಾಯಿ ಕೂಡ ರಿಲೀಸ್ ಆಗಿಲ್ಲ. ಎಲ್ಲಾ ತಾಲ್ಲೂಕುಗಳಲ್ಲೂ ಕಂಪ್ಯೂಟರೈಸ್ ಮಾಡಿದ್ದೇವೆ. ಪ್ರತಿ ಕಚೇರಿಗಳಿಗೂ ಕಂಪ್ಯೂಟರ್ಸ್ ಕೊಡಬೇಕೆಂದು ಮಾಡಿದ್ದೆವು. ಅದಕ್ಕೆ ಇನ್ನು ಹಣ ರಿಲೀಸ್ ಆಗಿಲ್ಲ. ನೀವು ನಮ್ಮ ಸರ್ಕಾರದಿಂದ ಒಳ್ಳೆಯ ಕೆಲಸವಾಗಿದೆ ಎಂದು ಹೇಳಿದ್ದೀರಿ, ಅದಕ್ಕೆ ನನ್ನ ಕೃತಜ್ಞತೆಯನ್ನು ಹೇಳುತ್ತೇನೆ. ಪ್ರತಿಯೊಂದು ಸೆಕ್ಷನ್‌ನಲ್ಲೂ ಆಫೀಸರ್ಸ್ ಟೇಬಲ್ ಮೇಲೆ ಒಂದೊಂದು ಕಂಪ್ಯೂಟರ್ ಇರಬೇಕು. ಇವತ್ತು ಹದಿನೈದು ಸಾವಿರ ಕಡತಗಳು ಕಂಪ್ಯೂಟರೈಜ್ ಮಾಡಿಸಿದ್ದೇವೆ. ಆ ಕಡತಗಳು ಎಲ್ಲಿ ಹೋಗಿದೆ ಎಂಬುದು ಮೊದಲು ಗೊತ್ತಾಗುತ್ತಿರಲಿಲ್ಲ. ಈ ರೆವಿನ್ಯೂ ಇಲಾಖೆ ದೊಡ್ಡದಾದ ಇಲಾಖೆಯಾಗಿರುವುದರಿಂದ ಈ ರೀತಿಯಾಗುತ್ತಿತ್ತು. ಇವತ್ತು ಯಾವ ಕಡತ ಯಾರ ಟೇಬಲ್ ಮುಂದೆ ಇದೆ ಎಂಬುದನ್ನು ನಾವು ನೋಡಬಹುದು. ಕಂದಾಯ ಕೊಡದಿರುವುದು ಇರಬಹುದು, ಎಕ್ಸೈಸ್ ಡ್ಯೂಸ್ ಕೊಡದಿರುವುದು ನೂರಾರು ಇರಬಹುದು. ಹೀಗೆ ಕೋಟಿ ರೂಪಾಯಿಗಳಿಗೆ ಸಂಬಂಧಿಸಿದ ಪ್ರಕರಣಗಳು ಕೋರ್ಟಿನಲ್ಲಿವೆ. ಅದನ್ನೆಲ್ಲಾ ಫಾರ್ಮೇಟ್ ಮಾಡಿ, ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ, ತಾಲ್ಲೂಕು ಕಛೇರಿಗಳಲ್ಲಿ, ಅಸಿಸ್ಟಂಟ್ ಕಮೀಷನರ್‌ಗಳ ಕಛೇರಿಗಳಲ್ಲಿ ಎಷ್ಟು ಕೇಸ್‌ಗಳು ಯಾವ್ಯಾವ ಹಂತದಲ್ಲಿ ಇವೆ ಎನ್ನುವ ಸುಮಾರು 12 ಸಾವಿರ ಪ್ರಕರಣಗಳನ್ನು ಕಂಪ್ಯೂಟರ್‌ನಲ್ಲಿ ಹಾಕಬೇಕೆಂದು ಮಾಡಿದ್ದೆವು, ಅದು ಇನ್ನೂ ಆಗಿಲ್ಲ ಅವರು ತಹಸೀಲ್ದಾರ್ ಇರಬಹುದು, ರೆವಿನ್ಯೂ ಇನ್‌ಸ್ಪೆಕ್ಟರ್ ಇರಬಹುದು ಅಂತಹವರ ಒಂದು ಫಾರ್ಮೇಟ್ ಮಾಡಿ ಮುಂದಿನ ತಿಂಗಳು ನಿವೃತ್ತಿಯಾಗುತ್ತಾರೆಂದರೆ ಅವರ ಬಯೋಡೆಟ ಕಂಪ್ಯೂಟರ್‌ನಲ್ಲಿ ನೋಡಿ ಪೋಸ್ಟಿಂಗ್ ಮಾಡಬೇಕು, ಎಂಎಲ್‌ಎಗಳು ನನಗೆ ಇಂತಹವರನ್ನು ಪೋಸ್ಟ್ ಮಾಡಿ ಎಂದು ಪತ್ರ ಕೊಡುವುದಲ್ಲ. ಹೀಗೆ ಪ್ರತಿಯೊಂದು ಕಂಪ್ಯೂಟರೈಸ್ ಆಗಬೇಕೆಂದು ನಾವೇನು ಮಾಡಿದ್ದೆವು ಅದು ಇನ್ನು ಆಗಿಲ್ಲ. ಐದು ತಿಂಗಳಿಂದ ನೀವು ಸಹ ಹೇಳುತ್ತಲೇ ಇದ್ದೀರಿ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಕಳಕಳಿಗೆ ನಾನು ಸಂತೋಷಪಡುತ್ತೇನೆ, ಅವರ ವಿಷನ್ ಬಹಳ ದೊಡ್ಡದಿದೆ, ಆದರೆ ಅವರ ಸಹೋದ್ಯೋಗಿಗಳು ಅಥವಾ ಅವರ ಸಿಬ್ಬಂದಿಗಳು ಅವರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ, ವಿಫಲರಾಗಿದ್ದಾರೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಮಂತ್ರಿಗಳ

ಕಛೇರಿಗಳಲ್ಲಿ ಅವರ ಫೈಲ್ ಮೂವ್‌ಮೆಂಟ್ ಅನ್ನು ನೋಡಬಬೇಕು, ಪ್ರತಿಯೊಂದು ಫೈಲ್ ಯುನಿಫಾರಂ ಆಗಿ ಡಿಸ್‌ಪೋಸಲ್ ಆಗಬೇಕು, ಅದು ಮಾಹಿತಿ ತಂತ್ರಜ್ಞಾನ. ನಮ್ಮ ಪ್ರತಿಯೊಬ್ಬ ಶಾಸಕರಿಗೂ ಸಹ ಒಂದು ಕಂಪ್ಯೂಟರ್ ಕೊಡಬೇಕು, ನಮ್ಮ ಶಾಸಕರ ಭವನದಲ್ಲಿ ಒಂದು ವೆಬ್ ಸೈಟ್ ಹಾಕಬೇಕು. ಇವತ್ತು ಅಧಿವೇಶನ ನಡೆಯುತ್ತಿದ್ದರೆ ಶಾಸಕರು ಜಿಲ್ಲಾಧಿಕಾರಿಗಳನ್ನು ಆಗಲಿ, ಎಸ್‌ಪಿಯವರನ್ನಾಗಲಿ ಅವರು ಸಂಪರ್ಕವನ್ನು ಇಲ್ಲಿಂದಲೇ ಮಾಡಬಹುದು. ಇವತ್ತು ಯಾವ್ಯಾವ ಇಲಾಖೆಯಡಿಯಲ್ಲಿ ಯಾವ್ಯಾವ ಆಜ್ಞೆಗಳು, ಸುತ್ತೋಲೆಗಳು, ಆದೇಶಗಳು ಹೊರಡುತ್ತವೆ ಅವೆಲ್ಲವುಗಳ ಸಾಫ್ಟ್‌ವೇರ್ ತಯಾರು ಮಾಡಿ ಶಾಸಕರ ಕಂಪ್ಯೂಟರ್‌ನಲ್ಲಿ ಸಿಗುವಂತಾಗಬಬೇಕು, ಈ ಸುತ್ತೋಲೆಯನ್ನು ಪಡೆದುಕೊಳ್ಳಲು ಕಛೇರಿಗಳಿಗೆ ಓಡಿಹೋಗುವುದಲ್ಲ. ಈ ಎಲ್ಲಾ ವ್ಯವಸ್ಥೆಯನ್ನು ಮಾಡಲು ಸರ್ಕಾರಕ್ಕೆ ಇಚ್ಛಾಶಕ್ತಿಬೇಕು, ನಾವು ಅದನ್ನು ಸುಮ್ಮನೆ ಹೇಳುವುದಲ್ಲ. ಆ ರೀತಿ ಅಧಿಕಾರಿಗಳಿಗೆ ಹಾಗೂ ಮಂತ್ರಿಗಳಿಗೆ ತಾವು ಆ ರೀತಿಯ ನಿರ್ದೇಶನವನ್ನು ಕೊಟ್ಟು ಚಾಚೂ ತಪ್ಪದಂತೆ ಈ ಕೆಲಸಗಳು ಆಗಬೇಕೆಂದು ಹೇಳಬೇಕು. ಇದಕ್ಕೆ ಹೆಚ್ಚಿನ ಹಣ ಖರ್ಚಾಗುವುದಿಲ್ಲ, ಕೇವಲ ರಾಜಕೀಯ ಇಚ್ಛಾಶಕ್ತಿ ಮಾತ್ರ ಬೇಕು. ಹಿಂದೆ ಪ್ರಾರಂಭ ಆಗಿರತಕ್ಕಂಥ ಎಷ್ಟೋ ಕೆಲಸಗಳನ್ನು ಇವತ್ತು ಮುಂದುವರೆಸಿಕೊಂಡು ಹೋಗಬೇಕು ಅಷ್ಟೆ, ಹೊಸದಾಗಿ ತಾವೇನು ಮಾಡಬೇಕಾಗಿಲ್ಲ, ಇದರಿಂದ ಜನರಿಗೆ ನಿಜವಾಗಿಯೂ ಕೂಡ ಅನುಕೂಲ ಆಗುತ್ತದೆಂಬುದು ನನ್ನ ಅನಿಸಿಕೆ. ಇವತ್ತು ಆಡಳಿತದಲ್ಲಿ ಪಾರದರ್ಶಕತೆ ತರುವ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳವಾಗಿ ಹೇಳಿದ್ದಾರೆ, ಅದು ಆಗಲೇ ಬೇಕು. ಇವತ್ತು ಏನಾಗಿದೆ ಎಂದರೆ ಇವತ್ತು ಕಾರ್ಯದರ್ಶಿ ಏನು ಬರೆಯುತ್ತಾನೆ, ಉಪ ಕಾರ್ಯದರ್ಶಿ ಏನು ನೋಟ್ ಹಾಕುತ್ತಾನೆ, ಮಂತ್ರಿಗಳು ಯಾವ ರೀತಿ ಆಜ್ಞೆ ಮಾಡುತ್ತಾರೆಂಬುದು ಸಾರ್ವಜನಿಕರಿಗೆ ಗೊತ್ತಾಗಬೇಕು. ಆಗಲೇ ಈ ಪ್ರಜಾಪ್ರಭುತ್ವದ ಪಾವಿತ್ರತೆ ಏನು ಎಂಬುದು ಗೊತ್ತಾಗುತ್ತದೆ, ಇಲ್ಲದಿದ್ದರೆ ಅಲ್ಲಿ ಏನೋ ಆಗಿರುತ್ತದೆ ಅವರು ಏನೂ ಹೇಳಿ ಕಳುಹಿಸುತ್ತಾರೆ, ಅಲ್ಲಿ ಆಗಿರುವುದೇ ಬೇರೆ, ಆದ್ದರಿಂದ ಪ್ರತಿಯೊಂದು ಮಾಹಿತಿಯನ್ನೂ ಸಾರ್ವಜನಿಕರು ಪಡೆಯುವ ಹಕ್ಕಿರಬೇಕು ಅದಕ್ಕೆ ಒಂದು ಮಸೂದೆ ತರುತ್ತೇವೆಂದು ಏನು ಹೇಳಿದ್ದಾರೆ ಅದನ್ನು ಆದಷ್ಟು ಶೀಘ್ರವಾಗಿ ತಂದು ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿ ತಲಪುವಂತೆ ಮಾಡಬೇಕು. ಇವತ್ತು ಜಮೀನು ಬೆಂಗಳೂರಿನಲ್ಲಿ ಇರಲಿ, ರಾಜ್ಯದ ಯಾವುದೇ ಪ್ರದೇಶದಲ್ಲಿರಲಿ ಅದರ ವ್ಯಾಲುವೇಷನ್ ಆಗಬೇಕು, ಅದನ್ನು ಪ್ರತಿಯೊಂದು ಕಂಪ್ಯೂಟರ್‌ನಲ್ಲಿ ಇಡಬೇಕು. ರಿಜಿಸ್ಟೇಷನ್ ಆಗುವಾಗ ಸಬ್ ರಿಜಿಸ್ಟ್ರಾರ್ ಸ್ವ ಇಚ್ಛೆಯಿಂದ ತೀರ್ಮಾನ ಮಾಡುವುದಲ್ಲ, ಸಾರ್ವಜನಿಕರಿಗೆ ಅದರ ವ್ಯಾಲ್ಯು ಎಷ್ಟೆಂಬುದು ಗೊತ್ತಾಗಬೇಕು. ಅದನ್ನು ಮಾಡುವುದಕ್ಕೆ ಬಾಂಬೆಯಲ್ಲಿರುವ ಒಂದು ಕಂಪನಿಯವರನ್ನು ನಿಗದಿಪಡಿಸಿದ್ದೆವು, ಆ ಕೆಲಸ ಹಾಗೆ ನಿಂತುಹೋಗಿದೆ, ಅದನ್ನು ಜಾರಿಗೆ ತರಬೇಕು. ಇವತ್ತು ಬೆಂಗಳೂರು ನಗರದಲ್ಲಿರಬಹುದು, ಮೈಸೂರಿನಲ್ಲಿರಬಹುದು, ಸರ್ಕಾರದ ಸಾವಿರಾರು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಮೈಸೂರಿನಲ್ಲಿ ನೂರಾರು ಎಕರೆ, ಬೆಂಗಳೂರಿನಲ್ಲಿ ಸುಮಾರು ಎರಡೂವರೆ ಸಾವಿರ ಎಕರೆಯಷ್ಟು ಸರ್ಕಾರಿ ಜಮೀನನ್ನು ಇವತ್ತು ಭೂಕಬಳಿಕೆದಾರರು ಇಟ್ಟುಕೊಂಡಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರ ಬಹಳ ಕಳಕಳಿಯಿಂದ ಆಲೋಚನೆ

ಮಾಡಿತ್ತು, ಎಲ್ಲೆಲ್ಲಿ ಅನಧಿಕೃತ ಕಟ್ಟಡಗಳಿವೆ ಅವನ್ನೆಲ್ಲಾ ಹರಾಜು ಹಾಕಿದರೆ ಸರ್ಕಾರಕ್ಕೆ ಎರಡು ಸಾವಿರ ಕೋಟಿ ರೂಪಾಯಿಗಳು ಆದಾಯ ಬರುತ್ತದೆ, ಆ ಒಂದು ತೀರ್ಮಾನವನ್ನು ತಾವು ಗಟ್ಟಿಯಾಗಿ ತೆಗೆದುಕೊಳ್ಳಿ. ಯಾವುದಾದರೂ ನೆಪ ಒಡ್ಡಿ ಕೋರ್ಟಿಗೆ ಹಾಕುತ್ತಾರೆ, ಇವತ್ತು ಸರ್ಕಾರದ ವೈಫಲ್ಯವೆಲ್ಲಿದೆ ಎಂದರೆ ಸರ್ಕಾರದ ಪರವಾಗಿ ಕೋರ್ಟುಗಳಲ್ಲಿ ಸರಿಯಾಗಿ ವಾದ ಮಾಡುತ್ತಿಲ್ಲ. ಸರ್ಕಾರದ ಪ್ರಕರಣವೆಂದರೆ ಯಾರಿಗೂ ಸಂಬಂಧಿಸಿಲ್ಲದ ಪ್ರಕರಣ, ಸರ್ಕಾರಿ ವಕೀಲರು ಅವರ ಜೊತೆಗೆ ಶಾಮೀಲಾಗಿರುತ್ತಾರೆ. ಗ್ರಾಂಟ್ಸ್ ಕೊಡುವುದಿರಲಿ ಅಥವಾ ಸರ್ಕಾರಿ ಜಮೀನು ಮಂಜೂರಾತಿ ಮಾಡಿರುವುದಿರಲಿ ಸರ್ಕಾರ ಮತ್ತು ಖಾಸಗಿ ವ್ಯಕ್ತಿಯ ನಡುವೆ ಬರುವ ಎಲ್ಲಾ ಪ್ರಕರಣಗಳಲ್ಲಿ ತೀರ್ಪು ಖಾಸಗಿ ವ್ಯಕ್ತಿಯ ಪರವಾಗಿ ಆಗುತ್ತಿದೆ, ಅದರ ಬಗ್ಗೆ ಯಾರು ಚಿಂತನೆ ಮಾಡುತ್ತಿಲ್ಲ, ನಾನು ಇದನ್ನು ಒಬ್ಬ ಸಾಮಾನ್ಯವಾಗಿ ಹೇಳುತ್ತಿದ್ದೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಕೆಲವರು ಹಾಗೆ ಇರಬಹುದು, ಜನರಲೈಸ್ ಮಾಡಿ ಸರ್ಕಾರಿ ವಕೀಲರು ಖಾಸಗಿ ವ್ಯಕ್ತಿಗಳೊಡನೆ ಶಾಮೀಲಾಗಿರುತ್ತಾರೆಂದು ಹೇಳಿದರೆ, it may send a wrong signal. ಕೆಲವರು ಹಾಗೆ ಆಗಿರಬಹುದು, ಜನರಲ್ ಆಗಿ ಹಾಗೆ ಹೇಳುವುದು ಬೇಡ, we have seen some of the Advocates who are doing their job seriously. ಅಂತಹದರಲ್ಲಿ ಎಲ್ಲರೂ ಶಾಮೀಲಾಗಿ ಬಿಡುತ್ತಾರೆಂದು ಹೇಳಿದರೆ, it will reflect on them. That is not in good taste.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಆ ರೀತಿ ಕೆಲವರು ಇರಬಹುದು, ಆದರೆ ಎಲ್ಲರನ್ನೂ ಜನರಲೈಸ್ ಮಾಡಬಾರದು, ಸರ್ಕಾರದಲ್ಲೂ ಒಳ್ಳೆಯ ವಕೀಲರು ಇರುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಸೋಮಶೇಖರ್‌ರವರೆ, ಇವತ್ತು ಬಹಳಷ್ಟು ಸರ್ಕಾರಿ ವಕೀಲರು ಹೈಕೋರ್ಟಿನ ನ್ಯಾಯಾಧೀಶರಾಗಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಸೋಮಶೇಖರ್‌ರವರ ಅನುಭವದಲ್ಲಿ ಒಬ್ಬರೋ ಇಬ್ಬರೋ ಆ ರೀತಿಯಾಗಿ ಸಿಕ್ಕಿರಬಹುದು, ನಾವು ಅದನ್ನೆ ಹೈಲೈಟ್ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಅನುಭವದಲ್ಲಿ ಹಾಗೆ ಇರಬಹುದು, ಎಲ್ಲರನ್ನೂ ಜನರಲೈಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ವಕೀಲರಲ್ಲಿ ಒಳ್ಳೆಯವರಿಲ್ಲವೆಂದಾಗಲೀ, ನ್ಯಾಯಾಧೀಶರಲ್ಲಿ ಒಳ್ಳೆಯವರಿಲ್ಲವೆಂದಾಗಲೀ ನಾನು ಹೇಳುವುದಿಲ್ಲ, ಆದರೆ ಒಳ್ಳೆಯವರನ್ನು ಆ ಸ್ಥಾನಕ್ಕೆ ಕೂರಿಸದೇ ಇರುವಂಥ ವ್ಯವಸ್ಥೆ ಇದೆ. ಈಗ ನನಗೆ ಎಲ್ಲಾ ಈ ರೀತಿಯಾಗಿ ಕಾಣುತ್ತಿದೆ, ನನಗೆ ಗೊತ್ತಿಲ್ಲದೆ ಇರುವುದು ತೀರ್ಮಾನವಾಗಿರಬಹುದು. ಸುಮಾರು 15 ವರ್ಷಗಳ ಕಾಲ ಮಂತ್ರಿಯಾಗಿ ಕೆಲಸ ಮಾಡಿ ಶಿಕ್ಷಣ ಮಂತ್ರಿಯಾಗಿ ಅನೇಕ ಪ್ರಕರಣಗಳಲ್ಲಿ ಸರ್ಕಾರಿ ವಕೀಲರು ಹೇಗೆ ವಾದ ಮಾಡಿದ್ದಾರೆ, ಹೇಗೆ ಶಾಮೀಲಾಗಿದ್ದಾರೆಂಬುದನ್ನು ನೋಡಿದ್ದೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ತಮ್ಮ ಸರ್ಕಾರವಿದ್ದಾಗ ನೇಮಕವಾದ ವಕೀಲರೇ ಇನ್ನು ಅಲ್ಲಿ ಮುಂದುವರೆದಿದ್ದಾರೆ.

ಶ್ರೀ ಬಿ. ಸೋಮಶೇಖರ್ : ನಾವು, ನೀವು ಮಾಡಿದೆವು ಎಂದು ಹೇಳುತ್ತಿಲ್ಲ, ಆದರೆ ಆಯ್ಕೆ ಮಾಡುವ ವಿಧಾನವೇನು ಇದೆ, ಅದರಲ್ಲಿ ಒಳ್ಳೆಯುವರು, ಪ್ರಾಮಾಣಿಕರು ಪಕ್ಷಾತೀತವಾಗಿರುವವರನ್ನು ಆಯ್ಕೆ ಮಾಡುವ ವ್ಯವಸ್ಥೆ ಇಲ್ಲ. ನಾವು ಸರಿ ಮಾಡಿದ್ದೇವೆಂದು ಹೇಳುವುದಿಲ್ಲ, ಈಗಿರುವ ಪದ್ಧತಿಯನ್ನು ಹೇಳುತ್ತಿದ್ದೇನೆ. ಆದುದರಿಂದ ಬಹುತೇಕ ಸರ್ಕಾರದ ಪ್ರಕರಣಗಳು ಇವತ್ತು ವಿಫಲವಾಗುತ್ತಿವೆ, ಇದರಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ಒಂದು ಪ್ರಕರಣವನ್ನು ಹೇಳಿದರೆ, ಇವತ್ತು ಈ ದೇಶದಲ್ಲಿ ಇದರಲ್ಲಿ ಹಣದ ಲೂಟಿ ಮಾಡುತ್ತಿದ್ದಾರಲ್ಲ ಎಂದೆನಿಸುತ್ತದೆ. ಆದುದರಿಂದ ಈ ಪ್ರಕರಣಗಳನ್ನು ಹೇಗೆ ಡಿಸ್‌ಪೋಸ್ ಮಾಡಬೇಕು, ಸರ್ಕಾರದ ಆಸಕ್ತಿಯನ್ನು ಹೇಗೆ ಕಾಪಾಡಬೇಕು ಎನ್ನುವ ಬಗ್ಗೆ ಒಂದು ಚಿಂತನೆ ಮಾಡಿ, ಆಗ ನಮ್ಮ ಸರ್ಕಾರಕ್ಕೆ ಹಣ ತಾನಾಗಿಯೇ ಬರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಕೆ.ಎನ್. ಸುಬ್ಬಾರೆಡ್ಡಿಯವರನ್ನು ಈ ವಿಚಾರವಾಗಿ ಒಂದು ವಿಷಯವನ್ನು ಕೇಳಬಯಸುತ್ತೇನೆ. ತಾವು ವಕೀಲರ ಸಂಘದ ಅಧ್ಯಕ್ಷರಾಗಿದ್ದೀರಿ, ಹಿರಿಯ ವಕೀಲರಾಗಿದ್ದೀರಿ, ನನ್ನದೊಂದು ಉದಾಹರಣೆ ಹೇಳುತ್ತೇನೆ, ಕೋ ಆಪರೇಟಿವ್ ಆಕ್ಟ್‌ನಲ್ಲಿ ಸಿವಿಲ್ ಕೋರ್ಟ್‌ಗೆ ಪವರ್ಸ್ ಇಲ್ಲ. ಒಂದು ಸೊಸೈಟಿಗೆ ಸೂಪರ್‌ಸೀಡ್ ನೋಟೀಸ್ ಕೊಟ್ಟರೆ ಹೈಕೋರ್ಟಿನಲ್ಲೂ ಕೂಡ ಸ್ಟೇ ಕೊಡುವುದಿಲ್ಲ, ಬೆಂಗಳೂರಿನಲ್ಲಿ ಇದೇ ಸಿವಿಲ್ ಕೋರ್ಟಿನವರು ಸ್ಟೇ ಕೊಟ್ಟಿದ್ದಾರೆ. ನಾಲ್ಕು ವರ್ಷಗಳಿಂದ ಅದನ್ನು ಮುಂದ ಮುಂದಕ್ಕೆ ಹಾಕುತ್ತಾ ಬಂದಿದ್ದಾರೆ, ಐದು ಮಂದಿ ವಕೀಲರನ್ನು ಬದಲಾವಣೆ ಮಾಡಿದರು. ಏನು ಮಾಡುವುದು? ಇದನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಕೋರ್ಟ್ ಬಗ್ಗೆ ಮಾತನಾಡಿದರೆ ಟೀಕೆ ಮಾಡಿದರೆಂದು ಆರಂಭವಾಗುತ್ತದೆ, ಆಕ್ಟ್‌ನಲ್ಲಿ ಸಿವಿಲ್ ಕೋರ್ಟ್‌ಗೆ ಪವರ್ ಇಲ್ಲ ಆದರೂ ಸ್ಟೇ ಕೊಟ್ಟಿದ್ದಾರೆ, ತಾವು ಹೋಗಿ ನೋಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಅದು ನ್ಯಾಯಾಧೀಶರ ತಪ್ಪು, ಅದು ವಕೀಲರ ತಪ್ಪಲ್ಲ, ಈಗ ಶಿವಮೊಗ್ಗದಲ್ಲಿ ಕಾಂಗ್ರೆಸ್ ಪಾರ್ಟಿ ಎಲೆಕ್ಷನ್ ಸಂಬಂಧಿಸಿದ್ದು ಸುಪ್ರೀಂ ಕೋರ್ಟ್‌ವರೆವಿಗೂ ಹೋಯಿತು. ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್ : ವಕೀಲರು ಏನು ಮಾಡಿದರೆಂದರೆ, ಒಂದು ಉದಾಹರಣೆ ಹೇಳುತ್ತೇವೆ, ಬೆಂಗಳೂರಿನಲ್ಲಿ ಮಹಾ ಮಹಾ ಹೌಸಿಂಗ್ ಸೊಸೈಟಿ ಒಂದು ಇದೆ, ಅದನ್ನು ಹೇಗೆ ಮ್ಯಾನೇಜ್ ಮಾಡುತ್ತಾರೋ, ಎಲ್ಲಕ್ಕೂ ಸ್ಟೇ ಸಿಗುತ್ತವೆ, ವಕೀಲರು ಕೂಡ ಮುದ್ದತ್ತು (ಗಡವು) ತೆಗೆದುಕೊಳ್ಳುತ್ತಾರೆ, ಇದು ನಡೆಯುವ ವ್ಯವಹಾರ, ಸರ್ಕಾರ ಮೂರು ಜನ ವಕೀಲರನ್ನು ಬದಲಾವಣೆ ಮಾಡಿತು, ಏನು ಮಾಡುವುದಕ್ಕಾಗುತ್ತದೆ? ದೇಶದಲ್ಲಿ ಪ್ರಾಮಾಣಿಕತೆಯೇ ಹೊರಟು ಹೋಗಿದೆ.

4.40 ಪಿ.ಎಂ.

ಶ್ರೀ ಬಿ. ಸೋಮಶೇಖರ್ : ಇವತ್ತು ಏನಾಗಿದೆ ಎಂದರೆ ನಾನು ಪ್ರತಿಯೊಬ್ಬರೂ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ನೋಡುತ್ತೇವೆ. ನಮ್ಮಲ್ಲಿ ಏನು ತಪ್ಪಿದೆ ಎಂದು ನಾವು ಯಾರೂ

ನೋಡುತ್ತಿಲ್ಲ. ರಾಜಕಾರಣಿಗಳನ್ನು ಬಯ್ದ ತಕ್ಷಣ ನಾವೆಲ್ಲರೂ ತಿರುಗಿ ಬೀಳುತ್ತೇವೆ. ಆದರೆ ವ್ಯಾಲ್ಯು ಸಿಸ್ಟಂ ಎಲ್ಲಿ ಹಾಳಾಗಿದೆ ಎಂದು ನಾವು ಆತ್ಮಪರಿಶೋಧನೆ ಮಾಡಿಕೊಂಡು ಹೇಳಬೇಕಾಗಿದೆ. ಇವತ್ತು ರಾಜಕೀಯವಾಗಿ ನಮಗೆ ಸಮಾಜದಲ್ಲಿ ಗೌರವ ಒಂದು ಚೂರೂ ಇಲ್ಲ. ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ನೋಡತಕ್ಕಂಥ ವ್ಯವಸ್ಥೆ ಬಂದಿದೆ. ಅದಕ್ಕೆ ತಾವು ಏನಾದರೊಂದು ಯೋಚನೆ ಮಾಡಬೇಕು. ಅದು ಪಾರದರ್ಶಕತೆ ಇರಬಹುದು ಅಥವಾ ಜ್ಯುಡಿಷಿಯಲ್ ಆಕ್ಟಿವಿಸಂ ನಮ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೆ ಯಾವ ರೀತಿ ಸಹಕಾರಿ ಆಗಬಹುದು ಎನ್ನುವುದನ್ನು ಯೋಚನೆ ಮಾಡಬೇಕು. ರೈತನಿಗೆ ತಾಲ್ಲೂಕು ಕಛೇರಿಗಳಲ್ಲಿ, ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಯಾವ ರೀತಿಯ ತೊಂದರೆಗಳಾಗುತ್ತಿವೆ, ಕಿರುಕುಳವಾಗುತ್ತಿದೆ, ಭ್ರಷ್ಟಾಚಾರವಾಗುತ್ತಿದೆ ಅವನ್ನು ತಡೆಗಟ್ಟುವುದಕ್ಕೆ ನೀವು ಕಾನೂನನ್ನು ಸರಿಪಡಿಸಬೇಕಾಗುತ್ತದೆ, ತಿದ್ದಬೇಕಾಗುತ್ತದೆ. ಅದನ್ನು ನೀವು ಮಾಡಿ ಅಲ್ಲಿ ದುಡ್ಡು ಮಾಡುವುದಕ್ಕೆ ಅವಕಾಶವಿರಬಾರದು. ಆ ರೀತಿಯ ಕಾನೂನುಗಳನ್ನು ನೀವು ತರಬೇಕು. ಕಂಪ್ಯೂಟರೈಸೇಷನ್ ಆಫ್ ಆರ್.ಟಿ.ಸಿ. ಮಾಡಬೇಕು ಎಂದು ಹೊರಟಿದ್ದೀರಿ. ಅದನ್ನು ನಾವು ಮಾಡಿದ್ದೇವೆ. ನಮ್ಮ ಸರ್ಕಾರವಿದ್ದಾಗ ಗುಲ್ಬರ್ಗಾದಲ್ಲಿ, ಚಿತ್ರದುರ್ಗದಲ್ಲಿ ಇನಾಗುರೇಷನ್ ಮಾಡಿದೆವು. ಎಲ್ಲಾ ಜಿಲ್ಲೆಗಳಲ್ಲೂ ಅದನ್ನು ಪ್ರಾರಂಭ ಮಾಡಬೇಕು. ಕಂಪ್ಯೂಟರೈಸ್ಡ್ ಆರ್.ಟಿ.ಸಿ ಕೊಡಬೇಕು ಎಂದು ನಮ್ಮ ಸರ್ಕಾರದಿಂದ ಸಿದ್ಧತೆ ಮಾಡಿದೆವು. ಆದರೆ ಮೂರು ತಿಂಗಳು ಮುಂಚಿತವಾಗಿಯೇ ಎಲೆಕ್ಷನ್ ಬಂತು. ಅದನ್ನು ಮಾಡುತ್ತೇವೆ ಎಂದು ತಾವು ಘೋಷಣೆ ಮಾಡಿದ್ದೀರಿ, ಅದನ್ನು ಮಾಡಿ. ಅಂಥವುಗಳನ್ನು ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥಾದ್ದು ನನ್ನ ಅನಿಸಿಕೆ.

ಇನ್ನು ಶಿಕ್ಷಣ ಕ್ಷೇತ್ರದಲ್ಲಿ ನಾವು ಕೆಲವು ದಿಟ್ಟ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನಾವು ನೂರಾರು ಕೋಟಿ ರೂಪಾಯಿಗಳನ್ನು ಶಿಕ್ಷಕರಿಗೆ ಕೆಲವು ಸಂಸ್ಥೆಗಳ ಮೂಲಕ ಸಂಬಳ ಕೊಡುತ್ತಿದ್ದೇವೆ. ವರ್ಕ್ ಲೋಡ್ ಇಲ್ಲದೇ ಇದ್ದರೂ ಸಹ ಶಿಕ್ಷಕರು ಅಲ್ಲಿ ಇದ್ದಾರೆ. ಅಂಥವರನ್ನು ಬೇರೆ ಕಡೆಗೆ, ವರ್ಕ್ ಲೋಡ್ ಎಲ್ಲಿ ಇದೆ, ಅಂಥ ಕಡೆಗೆ ವರ್ಗಾವಣೆ ಮಾಡತಕ್ಕಂಥ ಅವಶ್ಯಕತೆ ಇದೆ. ಅದನ್ನು ನೀವು ನಿರ್ಭೀತಿಯಿಂದ ಮಾಡಬೇಕಾಗುತ್ತದೆ. ಕೆಲವು ಶಿಕ್ಷಣ ಸಂಸ್ಥೆಗಳು ಅನುದಾನ ಪಡೆಯುತ್ತಿರತಕ್ಕಂಥ ಶಿಕ್ಷಕರನ್ನು ಅನುದಾನರಹಿತ ಕಾಲೇಜುಗಳಿಗೆ ಕಳುಹಿಸಿಕೊಡುತ್ತಿದ್ದಾರೆ. ಆದ್ದರಿಂದ ನಿಜವಾಗಿ ಶಾಲೆಗಳಲ್ಲಿ ಪಾಠ ಮಾಡಬೇಕಾದಂಥ ಶಿಕ್ಷಕರಿಗೆ ಶಾಲೆಗಳಿಲ್ಲ. ಅದನ್ನು ತಾವು ಮಾಡಬೇಕು. ಅದನ್ನು ಮಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಅವರ ಮಂತ್ರಿಗಳನ್ನೇ ಲೆಟ್ ಡೌನ್ ಮಾಡಿದ ಹಾಗೆ ಕಾಣುಸುತ್ತಿತ್ತೋ ಹೇಗೋ ಗೊತ್ತಿಲ್ಲ. ಯಾರೇ ತೀರ್ಮಾನ ತೆಗೆದುಕೊಂಡರೂ ಸರಿ, ನೀವು ಸರ್ಕಾರದವರು ಒಳ್ಳೆಯ ಕೆಲಸವನ್ನು ಮಾಡಿ. ಅದನ್ನು ಮಾಡಬೇಕು ಎನ್ನುವುದು ನನ್ನ ಆಸೆ. ಇನ್ನೊಂದು ವಿಷಯವೆಂದರೆ, ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು ನಮ್ಮ ಮಂತ್ರಿಗಳನ್ನು ಹೊಗಳತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಅದು ಸೈಕೋಫ್ಯಾನ್ಸಿ, ಸಾಮಾನ್ಯವಾದುದು, ಸಹಜವಾದುದು. ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳೇ ದೊರೆಗಳು. ಇಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಪಾತ್ರ ಇದೆ. ನಮಗೆ ನಮ್ಮದೇ ಆದಂಥ ಪಾತ್ರ ಇದೆ. ಅಧಿಕಾರಿಗಳಿಗೆ ಅಧಿಕಾರಿಗಳ

ಪಾತ್ರ ಇದೆ. ಜ್ಯುಡಿಷಿಯರಿಗೆ ಜ್ಯುಡಿಷಿಯರಿ ಪಾತ್ರ ಇದೆ. ಕಾಂಟ್ರಾಕ್ಟರಿಗೆ ಕಾಂಟ್ರಾಕ್ಟರ್ ಪಾತ್ರ ಇದೆ. ಒಂದು ಕೆಟ್ಟ ಪ್ರವೃತ್ತಿ ಏನು ಬಂದಿದೆ ಎಂದರ ಶೇ. 10-20ರಷ್ಟು ಲಾಭ ಮಾಡಿಕೊಂಡು ಬಿಲ್ಡಿಂಗ್ ಕಟ್ಟಿಸಿದಂಥವನಿಗೆ ಹೂವಿನ ಹಾರ ಹಾಕುತ್ತೇವೆ. ಕಾಂಟ್ರಾಕ್ಟರುಗಳಿಗೆ ಹೂವಿನ ಹಾರ ಹಾಕಿ ಸನ್ಮಾನಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ನೀವು ತಪ್ಪು ತಿಳಿದುಕೊಂಡಿದ್ದೀರಿ. ಮಾರಾಯ, ರೊಕ್ಕ ತೆಗೆದುಕೊಳ್ಳುವುದಕ್ಕೆ ಬೀಳದಂಗೆ ಕಟ್ಟಿದೆಯಲ್ಲಪ್ಪಾ ಎಂದು ಹೇಳುವುದಕ್ಕೆ ಹಾರ ಹಾಕುವುದು. ಇಷ್ಟೇ ಅದರಲ್ಲಿ ಇರುವುದು. ಬೆಳಿಗ್ಗೆ ನಡೆದಿತ್ತಲ್ಲ, ನಮ್ಮ ಹನುಮೇಗೌಡರು ತೆಗೆದುಕೊಂಡಿದ್ದರು. ಈಗ ಪಿ.ಡಬ್ಲ್ಯೂ.ಡಿ ಮಿನಿಸ್ಟರ್ ಬಂದಿದ್ದಾರೆ. ನಮ್ಮ ಎಜುಕೇಷನ್ ಮಿನಿಸ್ಟರ್‌ಗೆ ತೆಗೆದುಕೊಂಡುಬಿಟ್ಟಿದ್ದರು. ಕಟ್ಟಿದ 6 ತಿಂಗಳಲ್ಲೇ ಬಿಲ್ಡಿಂಗ್ ಸೋರಲಿಕ್ಕೆ ಹತ್ತಿದೆ. ಯಾವ ಸರ್ಕಾರವೂ ಅದನ್ನು ಏನೂ ಮಾಡಲಿಕ್ಕೆ ಆಗುವುದಿಲ್ಲ. ಇವತ್ತು ಪರಿಸ್ಥಿತಿ ಹಾಗಿದೆ. ಅದಕ್ಕೆ ಕಾಂಟ್ರಾಕ್ಟರಿಗೆ ಚಲೋ ಕಟ್ಟಿದೀಯಲ್ಲಪ್ಪ ಎಂದು ಹಾರ ಹಾಕುವುದು. ಆದರೆ ಅದು ಹೇಗೆ ಇದೆ ಎಂದು ದೇವರಿಗೆ ಗೊತ್ತು.

ಶ್ರೀ ಬಿ. ಸೋಮಶೇಖರ್ : ಹಾಗೆ, ಅವರಿಗೆ ಹೂವಿನ ಹಾರ ಹಾಕುತ್ತೇವೆ. ಅಧಿಕಾರಿಗಳಿಂದ ಪ್ರಿಸೈಡ್ ಮಾಡಿಸುತ್ತೇವೆ, ಸಬ್-ಇನ್ಸ್‌ಪೆಕ್ಟರ್‌ಗಳಿಂದ ಪ್ರಿಸೈಡ್ ಮಾಡಿಸುತ್ತೇವೆ. ನಾವು ಎಲ್ಲಿಯವರೆಗೆ ಕೆಳಮಟ್ಟಕ್ಕೆ ಹೋಗಿದ್ದೇವೆ ಎಂದರೆ ಎಲ್ಲಿಗೆ ಇಳಿದಿದ್ದೇವೆ ಎಂದರೆ, ಸುಮಾರು 30-40 ವರ್ಷಗಳ ಹಿಂದೆ ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದರು, ಈಗ ನಾವು ಯಾವ ರೀತಿ ಮಾಡುತ್ತಿದ್ದೇವೆ ಎಂದು ನಾವು ನಾವೇ ನೋಡಿಕೊಳ್ಳೋಣ. ಇವತ್ತು ಸಬ್-ಇನ್ಸ್‌ಪೆಕ್ಟರ್‌ಗಳನ್ನು ಕರೆದು ಅವರಿಂದ ಪ್ರಿಸೈಡ್ ಮಾಡಿಸುತ್ತೇವೆ ಎಂದರೆ ಏನು? ಮಾನ್ಯ ಮುಖ್ಯಮಂತ್ರಿಗಳು ಹೊಸ ಒಂದು ಪದ್ಧತಿಯನ್ನು, ಹೊಸದಾದ ಒಂದು ಕೆಟ್ಟ ಸಂಪ್ರದಾಯವನ್ನು ಹಾಕಿದರು. ಅದು ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಇತಿಹಾಸದಲ್ಲಿ ಯಾವೊಬ್ಬ ಅಧಿಕಾರಿಯನ್ನಾಗಲೀ ಬಜೆಟ್ ಸ್ಪೀಚ್‌ನಲ್ಲಿ ಅಭಿನಂದಿಸಿರಲಿಲ್ಲ. ಹಣಕಾಸು ಆಯುಕ್ತರಾದ ಶ್ರೀ ಗೋಪಾಲ ರೆಡ್ಡಿಯವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಬುದ್ಧಿವಂತರು, ಒಳ್ಳೆಯ ಕೆಲಸ ಮಾಡಿದ್ದಾರೆ. ಬಜೆಟ್ ಸ್ಪೀಚ್‌ನಲ್ಲಿ ಅವರನ್ನು ಅಭಿನಂದಿಸುತ್ತೇನೆ ಎಂದು ಹೇಳಿ ಪ್ರಥಮ ಬಾರಿಗೆ ಇವತ್ತು ಇತಿಹಾಸ ಸೃಷ್ಟಿ ಮಾಡಿದ್ದಾರಲ್ಲ, ಇದು ಸರಿಯೇ ಎಂದು ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಹಾಗೆ ಶುರು ಮಾಡಿದರೆ ಬೇರೆಯವರಿಗೂ ಅನ್ನಿಸುತ್ತದೆ, ಈ ಇಲಾಖೆಯಲ್ಲಿ ನಾನು ಒಳ್ಳೆಯ ಕೆಲಸ ಮಾಡಲಿಲ್ಲವೇ, ನನ್ನ ಹೆಸರು ಸೇರಿಸಬಹುದಲ್ಲವೇ ಎಂದು. ಆ ಇಲಾಖೆಯ ಡಾಕ್ಯುಮೆಂಟ್‌ಗೆ ಸೇರುತ್ತಾರೆ. ಆಗ ಆ ಪ್ರಭಾಪ್ರಭುತ್ವ ವ್ಯವಸ್ಥೆ ಎಲ್ಲಿಯವರೆಗೆ ಹೋಗುತ್ತದೆ? ಒಳ್ಳೆಯವರನ್ನು ಬೇರೆ ರೀತಿ ಅಭಿನಂದನೆ ಮಾಡಿ. ಆದರೆ ಇದು ಕೆಟ್ಟ ಸಂಪ್ರದಾಯವಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಅದಕ್ಕೆ ತಾವು ಅವಕಾಶ ಕೊಡಬಾರದಿತ್ತು, ಕೊಟ್ಟಿದ್ದೀರಿ. It is going to be a bad precedent now. It can be amended even now. You think over it. ಸಿಸ್ಟಂ ಏನಿದೆ, ಆ ಸಿಸ್ಟಂ ಅನ್ನು ಯಾರೂ ಸಹ ಬ್ರೇಕ್ ಮಾಡಬಾರದು. An individual is not important here. It is the system which is important. Unfortunately, we have changed the

system to suit the individuals. That is very bad. ಮುಖ್ಯಮಂತ್ರಿಗಳಾದ ನೀವು ಇಷ್ಟು ಬುದ್ಧಿವಂತರಿದ್ದೀರಿ, ಹೊಸದೇಶದಲ್ಲಿ ವಿದ್ಯಾಭ್ಯಾಸ ಮಾಡಿ ಬಂದಿದ್ದೀರಿ. ನಾವು ನಿಮ್ಮನ್ನು ಒಬ್ಬ ಸ್ಟೇಟ್ಸ್‌ಮೆನ್ ಮುಖ್ಯಮಂತ್ರಿ ಎಂದು ತಿಳಿದುಕೊಂಡಿದ್ದೇವೆ. ಎಲ್ಲರೂ ಹೊಗಳುತ್ತಿದ್ದಾರೆ. ತಾವು ಸ್ಪೀಕರ್ ಆಗಿದ್ದಿರಿ, ಇದರ ಮಹತ್ವ ಗೊತ್ತಿದೆ, ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾಗಿದ್ದಿರಿ, ಹಿರಿಯ ರಾಜಕಾರಣಿಗಳು ತಾವು. ನನಗನ್ನಿಸುತ್ತದೆ, ನಾವು ಅಧಿಕಾರಿಗಳನ್ನು ಹೊಗಳತಕ್ಕಂಥ ಪ್ರಮೇಯ ಬರುವುದಿಲ್ಲ. We are doing our duty they are doing their duty. ಇವತ್ತು ರಿವರ್ಸ್ ಆಗುತ್ತಿದೆ. ಇದು ಏನನ್ನು ತೋರಿಸುತ್ತದೆ ಎಂದರೆ ನಾವೇನೋ ಅವರ ಹತ್ತಿರ ಫೇವರ್ ಮಾಡಿಸಿಕೊಳ್ಳುವ ರೀತಿಯಲ್ಲಿ ಜನಗಳಿಗೆ ಅಭಿಪ್ರಾಯ ಬರುತ್ತದೆ, ನಮಗಲ್ಲ, ಅದಕ್ಕೆ ಅವಕಾಶ ಕೊಡಬೇಡಿ. ಅದನ್ನು ತಿದ್ದಿಕೊಳ್ಳಿ ಎಂದು ಹೇಳಿ ಮತ್ತೊಮ್ಮೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ SRI SYED YASIN (Raichur) : Sir, thank you for giving me an opportunity. I am thankful to our Hon'ble Chief Minister who has given an excellent economic agenda which is going to be very practical and result oriented. It certainly leads to socio-economic development.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ವಿಧಾನಸಭೆಯಲ್ಲಿ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕು, ಅವರಿಗೆ ಕನ್ನಡದಲ್ಲಿ ಮಾತನಾಡಲು ಹೇಳಿ.

ಶ್ರೀ ಎಸ್.ಎಂ. ಕೃಷ್ಣ : ಅವರಿಗೆ ಕನ್ನಡ ಬರುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಹಾಗೆ ಹೇಳಿದರೆ, ಮರಾಠಿಯಲ್ಲೂ ಮಾತನಾಡುತ್ತಾರೆ.

SRI SYED YASIN : Sir, expecially this budget will give a fair fiscal system in the larger interests of the poor people and poverty alleviation programmes. The Hon'ble Chief Minister has given more priority to various sectors like agriculture, horticulture, animal husbandry, health, education, social welfare, forestry, fisheries, decentralisation of administration through administrative reforms, rural development, infrastructure, transport, textile tourism and os many other things. Ultimately, there are so many sectors which need lot of money to be invested. Without discrimination and disparity, our Hon'ble Chief Minister has distributed the budgetary support to all the sectors. I must congratulate our Hon'ble Chief Minister that our Government is in a position to give priority to our basic charter of poverty alleviation programmes, social welfare, agricultural development, rural development,

industrial development and urban development.

Sir, many thanks to our Hon'ble Chief Minister for providing budgetary support to the 7th stage of Raichur Thermal Power Station. Now we are having 6 stages producing 1260 MW of power. After completion of the 7th stage, it will become 1470 MWs, which is a boost to our government, boost to our Chief Minister and it will certainly contribute 40% of the total requirement of power of our State. At the same time it is mentioned in the budget that private industries and power stations will be encouraged. There are certain areas in Raichur, particularly adjacent to Raichur Thermal Power Station about 2000 acres of land acquired by the Industries Departmnet is available and KSIIDC is looking after it. You can put up a power project there encourage private investment there to enhance production of electricity in the State. I feel, Raichur, is the most suitable place for thermal power generation because of its proximity to Singareni Collieries, broad-guage railway line and presence of Krishna River which can provide perennial water source, and also there is uninterrupted power supply, we can also push through agro based industries in that particular area.

With regard to agricultural development, our Hon'ble Chief Minister has managed so well, I must congratulate him for the new concept which we should not take lightly. Every member in every constituency should check and find out water resources available. We can develop ``Water-shed" which increases water table, helps recharging of borewells and open-wells and lead to agriculture development. Now, silt has become a nuisance to the dams and tanks. By watershed development, silt can also be controlled. If you invest more money in watershed, priority should go to the backward and dryland areas.

Another novel idea which I have seen in the budget is private investment for the development of agriculture by way of developing barren lands or degraded lands involving local communities. This will bring in on economic change in the villages and also increase the area of agriculture. They can contribute by providing their own fertiliser, pesticides, they can develop their own source of water, create lift irrigation facilities etc. Without much

investment from the Government we can have development of agriculture land. So we msut concentrate on this.

With regard to Agricultural Commission, it will help to eliminate disparity and will also meet any contingency in different areas of agriculture. ``Ryot Mitra" scheme is certainly a means of communication between technical experts and our farmers.

Another important scheme announced in the budget is "Jala Samvardhana Yojane" for desilting of tanks, Minor irrigation is very important which we have taken very lightly. We should give more priority and importance because in every area of Karnataka we cannot give or bring UKP or Tungabhadra canals. Desilting of tanks is a must. Alongwith it lift irrigation should also be taken up and the agreement period under the Bachawat Award which is going to expire by 2000 A.D. should be extended. With regard to major irrigation, about 2 lakh hectares will be irrigated from the Upper Krishna Project. As most part of Raichur is unirrigated, I request irrigation facility should come to Raichur, Upper Krishna Canal must extend upto Chandenabanda and villages of Raichur.

With regard to Rural Development and rural drinking water, our Chief Minister has given excellent support in the budget. He has doubled the grant to grama Panchayats which number about 5,675. The grant has been increased from Rs. 1 lakh to Rs. 2 lakh as a result of which socio-economic development, develoment of agriculture, education, will become double in the villages. Setting up of Rajiv Gandhi Rural Housing Corporation and `Seva Mitra' scheme will help construction of houses and providing sanitation and drainage systems in rural areas.

For Rural Health our Chief Minister has given a very good sentimental budget particularly for the health of mothers and sisters. About infant mortality, nobody has thought about it so far. The percentage of infant mortality is very high in rural areas. Under the Karnataka Health System Development Project, about 100 secondary Grade Hospitals are being started. Also 1000 PHCs are being improved and laboratory technicians are provided

with Suraksha Herige Programmes. This will certainly help in reducing the infant mortality.

The sources of finance which our Hon'ble Chief Minister has created from World Bank, HUDCO and Japanese Government's assistance and Mou for Power Reforms, are all novel ideas. At the same time, he has mentioned that he is going to give more priority to watershed development, agriculture, irrigation, power, roads, water supply and primary education.

About Municipalities, in the whole state they are suffering for want of finance. Most of them are bankrupt. In order to raise a loan they have to contribute at least 30%. Our Hon'ble Chief Minister has given a very good idea by which 70% loan can be obtained with 30% grant. With this more civic amenities can be provided. Solid waste management in municipalities is very important. If it is not managed properly, it will create pollution, nuisance in towns and cities. So this should be taken care of.

Regarding enrolment of membership SC/ST to weaker sections and minorities, in the co-operative societies. Our Hon'ble Chief Minister has opened avenues for enrolment of membership of these sections. More funds have been provided for the economic growth of the poor people. The percentage of loans which are given through SC/ST Development Corporation, Backward Classes Development Corporation and Minorities Development Corporation, is very poor. On the other side, RBI direction is there that we should fix the target. But it is not reaching to them. I request, more priority to be given for skill development programmes and more funds should be given for this purpose. Skill development improves the quality of the person and ultimately it will contribute to our State as well as our country.

Another novel idea which our Hon'ble Chief Minister has envisaged in the budget is, establishment of a Karnataka Rail Development Corporation. I must congratulate him for that, we have got pending railway lines. This Corporation will help in terms of technical, planning, financial and equity participation and also take decisions on the railway lines which are economically viable for the socio-economic development of our state.

The Karnataka Rail Development Corporation can take care of not only trade and commerce, but also passenger amenities.

Sir, we should give more funds to the areas according to priorities such as urban development and rural development. Particularly in backward areas and border areas which have been neglected badly need basic infrastructure. There are no employment opportunities, no irrigation facilities, no proper means of transport and communication and there are less number of schools. So, we must give priority to border areas especially districts like Raichur and Kolar etc, and more funds should be released for these districts.

Regarding Calamity relief, the funds under calamity scheme should be released immediately to meet the demands of calamity. Especially in my constituency i.e. Raichur, with the Construction of Jurala Project by Andhra Pradesh, nearly 5 to 6 villages are going to be submerged. We cannot invest 4 or 5 crores as calamity fund. But we should release the money immediately and that can be reimbursed by the Andhra Pradesh Government and it has been sanctioned long back.

In conclusion, the main charter of our Government being alleviation of poverty, socio-economic development and education, my request to our Hon'ble Ministers, Hon'ble Members and opposition Leaders that we should make up our mind to give result oriented programmes and we should discuss on relevant issues/subjects without wasting the time. We should build up a fair tradition for our future and request the Hon'ble Members, to make use of this precious opportunity of being MLAs for which the mandate has come from the people, to place the honour of our State in the map of our country. Thank you.

+ ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಆದರೂ, ಈ ವಿಷಯವನ್ನು ಅವರ ಗಮನಕ್ಕೆ ತಂದಿದ್ದರೆ ಚೆನ್ನಾಗಿರುತ್ತಿತ್ತು. On page 35 it is stated;

``In addition to what the Task Force has already unveiled and which are being pursued aggressively, I am now proposing two initiatives to decongest the city".

ಮಾನ್ಯ ಮುಖ್ಯಮಂತ್ರಿಗಳು, ಟರ್ಫ್ ಕ್ಲಬ್ ಅನ್ನು ಶಿಫ್ಟ್ ಮಾಡುವ ಪ್ರಪೋಸಲ್ ಕೊಟ್ಟಿದ್ದಾರೆ. ಅವರು ಬಹಳ ಒಳ್ಳೆಯ ಸ್ಕೀಂ ಅನ್ನು ಕೊಟ್ಟಿದ್ದಾರೆ. ಟರ್ಫ್ ಕ್ಲಬ್ ಅನ್ನು ಹೊರಗಡೆ ಹಾಕಬೇಕಾದುದು ಮುಖ್ಯವೇ. ಆದರೆ, ಈಗ ಅದಕ್ಕಾಗಿ ಬೆಂಗಳೂರಿನಲ್ಲಿರುವ ಪರಿಸ್ಥಿತಿಯನ್ನು ಯಾವ ರೀತಿ ಸುಧಾರಿಸಬೇಕೆನ್ನುವುದೂ ಬಹಳ ಮುಖ್ಯ ಎನ್ನುವುದನ್ನು ಹೇಳಿಲ್ಲ. Acquisition of buildings, roads must be widened, pollution must be eliminated and flow of traffic must be easy.

5.10 ಪಿ.ಎಂ

ಇಲ್ಲದಿದ್ದಲ್ಲಿ ಬಹಳ ಕಷ್ಟವಾಗುತ್ತದೆ. ಇವತ್ತು ಬೆಂಗಳೂರಿನಲ್ಲಿ ಒಂದು ಏರಿಯಾದಿಂದ ಮತ್ತೊಂದು ಏರಿಯಾಕ್ಕೆ ಹೋಗಬೇಕಾದರೆ, ಉದಾಹರಣೆಗೆ ವಿಲ್ಸನ್ ಗಾರ್ಡನ್‌ನಿಂದ ವಿಧಾನ ಸೌಧಕ್ಕೆ ಅಥವಾ ಹೈ ಕೋರ್ಟಿಗೆ ಬರಬೇಕಾದರೆ ಒಂದು ಗಂಟೆ ಬೇಕಾಗುತ್ತದೆ. ಹಿಂದೆ ಸುಮಾರು 10-15 ನಿಮಿಷಗಳಲ್ಲಿ ಬರುತ್ತಿದ್ದೆವು. ಬೆಂಗಳೂರಿನಲ್ಲಿ ಇವತ್ತು ಸುಮಾರು 14-15 ಲಕ್ಷ ವೆಹಿಕಲ್ಸ್ ಇವೆ. ಇದೇ ತರಹದ ರಸ್ತೆಗಳಿದ್ದರೆ, ಇದೇ ರೀತಿಯಾಗಿ ನಾವು ಹೋದರೆ ಮುಂದಿನ ಹತ್ತು ವರ್ಷಗಳ ನಂತರ ನಾವು ರಸ್ತೆಗಳಲ್ಲಿ ವೆಹಿಕಲ್‌ಗಳನ್ನು ಓಡಾಡಿಸುವುದಕ್ಕೆ ಕಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದರೆ ಅವರಿಗೆ ಒಂದು ವಿಚಾರವನ್ನು ಹೇಳುತ್ತಿದ್ದೆ. ಏಕೆಂದರೆ ಈ ವಿಚಾರವಾಗಿ ಬೆಂಗಳೂರು ನಗರದಲ್ಲಿ ಏನೊಂದು ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿತ್ತೋ ಆ ತರಹ ಯಾವ ಕಾರ್ಯಕ್ರಮಗಳು ಈ ಬಜೆಟ್‌ನಲ್ಲಿ ಇಲ್ಲ. ಒಂದೇ ಒಂದು ವಿಷಯ ಏನೆಂದರೆ, ಬೆಂಗಳೂರು ಮಹಾನಗರ ಪಾಲಿಕೆಯವರು "ಸೆಲ್ಫ್ ಅಸೆಸ್‌ಮೆಂಟ್" ಬಗ್ಗೆ ಮಾತ್ರ ಹೇಳಿದ್ದಾರೆ. ಈ ವಿಚಾರವಾಗಿ ಸಾರ್ವಜನಿಕರಿಗೆ ಈಗಾಗಲೇ ಸಾಕಷ್ಟು ವಿಷಯ ಗೊತ್ತಾಗುತ್ತಿದೆ. ಸೆಲ್ಫ್ ಅಸೆಸ್‌ಮೆಂಟ್ ಮಾಡುವ ಮುನ್ನ ಸಾರ್ವಜನಿಕರಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ಕೊಡಬೇಕಾಗುತ್ತದೆ. ಸೆಲ್ಫ್ ಅಸೆಸ್‌ಮೆಂಟ್ ಎಂದರೇನು? ಇದನ್ನು ಯಾವ ರೀತಿ ಮಾಡುತ್ತಾರೆ? ಎನ್ನುವ ವಿಚಾರವಾಗಿ ಈ ಮೊದಲು ಜನಗಳಿಗೆ ಹೇಳಬೇಕಾಗುತ್ತದೆ. ಏಕೆಂದರೆ, ಬೆಂಗಳೂರಿನಲ್ಲಿ ವಾಸಿಸುತ್ತಿರುವವರು ತಮ್ಮ ತಮ್ಮ ಮನೆಗಳ ಬಗ್ಗೆ ನಗರ ಪಾಲಿಕೆಯವರಿಗೆ ಬರೆದು ಕೊಡಬೇಕಾಗುತ್ತದೆ. ಇದು ಸಾಮಾನ್ಯವಾಗಿ ದಾಖಾಲಾತಿ ಹಾಗೂ ಏರಿಯಾದಲ್ಲಿ ಎಷ್ಟೆಷ್ಟು ಇರಬೇಕು ಎನ್ನುವುದರ ಬಗ್ಗೆ ನಿಗದಿಪಡಿಸಲಾಗುತ್ತದೆ. ಇಡೀ ಭಾರತದಲ್ಲಿ ಒಂದೇ ಒಂದು ಸಿಟಿಯಲ್ಲಿ ಬಿಟ್ಟರೆ ಬೇರೆ ಯಾವ ನಗರದಲ್ಲಿ ಕೂಡ ಈ ಸ್ಕೀಮ್ ಪ್ರಗತಿಯಲ್ಲಿಲ್ಲ. ಪುಟ 122ರಲ್ಲಿ ಏನು ಹೇಳುತ್ತಾರೆಂದರೆ, ``These steps include, self assessment of property tax, instituting Zonal level aministration; massive slum development programme".

ಈ ಸ್ಲಂ ಡೆವಲಪ್ ಆಗಬೇಕಾಗಿರುವುದು ಸ್ಲಂ ಬೋರ್ಡ್‌ನಿಂದ. ಅದನ್ನು ನಗರ ಪಾಲಿಕೆಯವರು ಮಾಡುವುದಿಲ್ಲ, ಬಹುಶಃ ಇದು ಮಿಸ್ಟೇಕ್ ಆಗಿರಬೇಕು. ನಂತರ ಪುಟ 124ರಲ್ಲಿ ಸರ್ಕಾರಿ ಕಛೇರಿಗಳು ನಗರದಾದ್ಯಂತ ಹಂಚಿ ಹೋಗಿದ್ದು ಸರ್ಕಾರವು ಇವುಗಳಿಗಾಗಿ ವಾರ್ಷಿಕ

5.5 ಕೋಟಿ ರೂಪಾಯಿಗಳ ಬಾಡಿಗೆಯನ್ನು ತೆರುತ್ತಿದೆ. ಈ ಎಲ್ಲಾ ಕಛೇರಿಗಳನ್ನು ಒಂದೇ ಕಟ್ಟಡದಡಿಯಲ್ಲಿ ತರುವ ಸಲುವಾಗಿ ವಿಧಾನ ಸೌಧ - ದಕ್ಷಿಣ ಬ್ಲಾಕನ್ನು ನಿರ್ಮಿಸಲು ಉದ್ದೇಶಿಸಿದ್ದೇವೆ. ಎನ್ನುವಂತಹ ಮಾತನ್ನು ಹೇಳಿದ್ದಾರೆ, ಇದೊಂದು ಒಳ್ಳೆಯ ಕಾರ್ಯಕ್ರಮ. ಆದರೆ ಕೇವಲ ಸರ್ಕಾರಿ ಕಛೇರಿಗಳಲ್ಲದೇ ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆ ಕೋರ್ಟ್ ಕಛೇರಿಗಳು ಇವೆ. ತಮಗೆ ಗೊತ್ತಿರುವಂತೆ, ಪೀಣ್ಯದಲ್ಲಿ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಇದೆ, ಇಂದಿರಾ ನಗರದಲ್ಲಿ ಅಡ್ಮಿನಿಸ್ಟ್ರಷನ್ ಟ್ರಿಬ್ಯೂನಲ್ ಇದೆ, ಗಾಂಧಿನಗರದಲ್ಲಿ ಲೇಬರ್ ಕೋರ್ಟ್ ಇದೆ, ಇವುಗಳಿಗಾಗಿ ಲಕ್ಷಾಂತರ ರೂಪಾಯಿಗಳ ಬಾಡಿಗೆಯನ್ನು ಕೊಡುತ್ತಿದ್ದಾರೆ. ಅದರಂತೆ ಕೆ.ಎ.ಟಿ.ಗೆ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಕೇವಲ ಮೈಂಟೆನೆನ್ಸ್‌ಗಾಗಿ ಕೊಡುತ್ತಿದ್ದೇವೆ. ತಮಗೆ ಗೊತ್ತಿರುವಂತೆ ಇಲ್ಲಿ ಒಂದು ವರ್ಷದಿಂದ ನ್ಯಾಯಾಧೀಶರು ಇಲ್ಲದೇ ಕೆಲಸ ಕೂಡ ಸ್ಥಗಿತವಾಗಿದೆ. ಒಂದು ಕಡತವನ್ನು ಅಲ್ಲಿಗೆ ಹಾಕಿದರೆ ಅದು ಹೈಕೋರ್ಟಿಗೆ ಬರುತ್ತದೆ. ಈ ರೀತಿಯಾದರೆ ಹೇಗೆ? ಹಿಂದಿನ ಸರ್ಕಾರದವರು ಈ ಬಗ್ಗೆ ಗಮನ ನೀಡಲಿಲ್ಲ, ಈಗಿನ ಸರ್ಕಾರ ಅಧಿಕಾರಕ್ಕೆ ಬಂದು ಈಗಾಗಲೇ ಐದಾರು ತಿಂಗಳು ಆಯಿತು, ಇದರ ಬಗ್ಗೆ ಏನು ಯೋಚನೆ ಮಾಡಲಿಲ್ಲ. ಏಕೆ ಮಾಡಲಿಲ್ಲ ಎನ್ನತಕ್ಕಂಥಾದ್ದು ಬಹಳ ಮುಖ್ಯ. ಮಾನ್ಯ ಮುಖ್ಯಮಂತ್ರಿಗಳು ಏನು ಮಿನಿ ವಿಧಾನ ಸೌಧವನ್ನು ಕಟ್ಟುವ ಪ್ರಸ್ತಾವನೆ ಇದೆ, ಇದಕ್ಕೆ ಸರಿಯಾದ ಜಾಗದ ಬಗ್ಗೆ ಸೆಂಟ್ರಲ್ ಜೈಲ್ ಷಿಫ್ಟ್ ಆಗುತ್ತದೆ ಎನ್ನತಕ್ಕಂಥ ವಿಚಾರವನ್ನು ಹೇಳುತ್ತಾರೆ. A part of Central Jail has already been shifted to Hosur Road .... Open Jail .... already slowly they are shifting from this place to that place. ಅಲ್ಲಿ ಜಾಗ ಖಾಲಿಯಾದ ಮೇಲೆ ಬೆಂಗಳೂರಿನಲ್ಲಿ ಅನೇಕ ಕಡೆ ಇರುವ ಕೋರ್ಟಿನ ಕಛೇರಿಗಳನ್ನು ಇಲ್ಲಿಗೆ ವರ್ಗಾಯಿಸಬಹುದು. ಅಥವಾ ನಮ್ಮ ವಿಧಾನ ಮಂಡಲ ಏನು ಇದೆ ಅದನ್ನಾದರೂ ಮಾಡಬಹುದು. ಏಕೆಂದರೆ ನಾವು ಬೇರೆ ಕಡೆಗೆ ಹೋಗಿ ನೋಡಿದಾಗ ಉದಾಹರಣೆಗೆ ಕೇರಳದಲ್ಲಿ ನಾವು ನೋಡಿದ್ದೇವೆ, ಅಲ್ಲಿ ಏನಾಗಿದೆ ಎಂದರೆ, ಕಂಪ್ಯೂಟರ್, ಗ್ರಂಥಾಲಯ, ಎಲ್ಲಾ ವ್ಯವಸ್ಥೆಯಿಂದ ಕೂಡಿದೆ. ಆದರೆ ನಮ್ಮಲ್ಲಿ ಏನಾಗಿದೆ ಎಂದರೆ, ಈಗಿರುವ ನಮ್ಮ ಗ್ರಂಥಾಲಯದಲ್ಲಿ ಕೆಲವೇ ಕೆಲವು ಪುಸ್ತಕಗಳನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಇದ್ದರೂ ಕೂಡ ಕುಳಿತುಕೊಂಡು ಓದುವುದಕ್ಕೆ ಜಾಗ ಇಲ್ಲ. ಆದ್ದರಿಂದ ಬೇರೆ ವಿಧಾನ ಮಂಡಲದಲ್ಲಿ ಯಾವ ರೀತಿ ಗ್ರಂಥಾಲಯದ ಸೌಲಭ್ಯ ಇದೆಯೋ ಅದೇ ರೀತಿಯಲ್ಲಿ ನಮ್ಮ ವಿಧಾನ ಮಂಡಲದಲ್ಲಿ ಕೂಡ ಗ್ರಂಥಾಲಯದ ವ್ಯವಸ್ಥೆಯಾಗಬೇಕು. ಇದರ ಜೊತೆಗೆ ಮಾನ್ಯ ಸದಸ್ಯರಿಗಳಿಗೆಲ್ಲಾ ತರಬೇತಿ ಕೊಡುವಂತಹ ವ್ಯವಸ್ಥೆಯಾಗಬೇಕು. ಈ ನಿಟ್ಟಿನಲ್ಲಿ ಸೆಂಟ್ರಲ್ ಜೈಲ್ ಸ್ಥಳಾಂತರ ಆದ ತಕ್ಷಣ ಅಲ್ಲಿಯಾದರೂ ಈ ವ್ಯವಸ್ಥೆಗಳನ್ನು ಮಾಡುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು ಎಂದು ನಾನು ಹೇಳಬಯಸುತ್ತೇನೆ. ಪುಟ 37ರ ಪ್ಯಾರ 125ರಲ್ಲಿ "A typical file in Vidhana Soudha may have to be seen by 15 to 25 layers" ಎಂದು ಹೇಳುತ್ತಾರೆ. ನಾನು ಶಾಸಕನಾಗಿ ಬಂದ ಮೇಲೆ, ನಮ್ಮ ನಗರಸಭಾ ಸದಸ್ಯರೊಬ್ಬರು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಕೊಡಿ ಎಂದು ಹೇಳಿ ನನ್ನ ಕೈಗೆ ಕೊಟ್ಟಂಥ ಒಂದು ಪತ್ರವನ್ನು

ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ. ಅವರು ಕೂಡಲೇ ಅದರ ಮೇಲೆ ಬರೆದರು. ನಾನು ಕೆಲಸವಾಯಿತು ಎಂದು ಸುಮ್ಮನಾದೆ. ಪತ್ರವನ್ನು ಕಳುಹಿಸಬೇಕಾದ ಕಾರ್ಯದರ್ಶಿಯವರಿಗೆ ಕಳುಹಿಸುವ ಬದಲಾಗಿ ಬೇರೆಯೊಬ್ಬ ಕಾರ್ಯದರ್ಶಿಯವರಿಗೆ ಮಾನ್ಯ ಮುಖ್ಯಮಂತ್ರಿಗಳು ಕಳುಹಿಸಿ ಬಿಟ್ಟಿದ್ದಾರೆ. ಆ ಪತ್ರ ಎಲ್ಲಿ ಹೋಯಿತು ಎನ್ನುವುದೇ ಗೊತ್ತಾಗಲಿಲ್ಲ. ಕೊನೆಗೆ ನಾನು ಸುಮಾರು 15 ದಿವಸಗಳ ಕಾಲ ಓಡಾಡಿ ಆ ಪತ್ರವನ್ನು ಹುಡುಕಿಸಿದೆ. ಅದು ಯಾವುದೋ ಹಂತದಲ್ಲಿ ತಪ್ಪಾಗಿ ಶ್ರೀ ಕೃಷ್ಣಕುಮಾರ್ ರವರಿಗೆ ಹೋಗಬೇಕಾಗಿದ್ದ ಪತ್ರ ಬೇರೆ ಯಾರಿಗೋ ಹೋಗಿ ಬಿಟ್ಟಿತ್ತು. ಹೇಗೋ ಅದನ್ನು ನಾನು ಪತ್ತೆ ಮಾಡಿದೆ. ನಂತರ ಅದು ಹೆಚ್.ಯು.ಡಿ. ಕಾರ್ಯದರ್ಶಿಯವರಿಗೆ ಹೋಯಿತು, ಅಲ್ಲಿಂದ ಅದು ಉಪ ಕಾರ್ಯದರ್ಶಿಯವರಿಗೆ ಹೋಯಿತು, ಅಲ್ಲಿಂದ ಆ ಪತ್ರ ಅಧೀನ ಕಾರ್ಯದರ್ಶಿಯವರ ಬಳಿ ಹೋಯಿತು, ಹೀಗಾಗಿ ಅದು ತುಂಬಾ ಲೇಟಾಯಿತು. ಈ ವಿಳಂಬವನ್ನು ತಪ್ಪಿಸುವುದಕ್ಕಾಗಿಯೇ ಹಿಂದಿನ ಸರ್ಕಾರದಲ್ಲಿ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಸೋಮಶೇಖರ್‌ರವರು ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್ ಹುದ್ದೆಗಳು ಬೇಡ ಎಂದು ಕೆಲವೊಂದು ರಿಫಾರ್ಮ್ಸ್ ತಂದಿದ್ದರು. ಇದೊಂದು ಒಳ್ಳೆಯ ಕಾರ್ಯಕ್ರಮ. ಇದೇ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಸುಮಾರು 15 ರಿಂದ 20 ಹಂತಗಳು ಇವೆ, ಇವುಗಳನ್ನು ತಪ್ಪಿಸುವುದಕ್ಕಾಗಿಯೇ ಆಡಳಿತಾ ಸುಧಾರಣಾ ಆಯೋಗವನ್ನು ಸರ್ಕಾರ ರಚಿಸುತ್ತದೆಂದು ಹೇಳಿದ್ದಾರೆ, ಇದು ಕೂಡ ಸ್ವಾಗತಾರ್ಹ. ಇಲ್ಲದಿದ್ದರೆ ಏನಾಗುತ್ತದೆಂದರೆ, ಒಬ್ಬ ರೈತ ಕಂದಾಯ ಮಂತ್ರಿಗಳಿಗೆ ಒಂದು ಪತ್ರ ಕೊಟ್ಟರೆ, ಅದು ಇಲ್ಲಿಂದ ಕಾರ್ಯದರ್ಶಿ, ಉಪ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಉಪ-ವಿಭಾಗಾಧಿಕಾರಿಗಳು, ನಂತರ ತಹಸೀಲ್ದಾರ್‌ಗೆ ಹೋಗಬೇಕಾಗುತ್ತದೆ. ಈ ರೀತಿಯಾದರೆ ಏನಿದು? ಯಾವ ವ್ಯವಸ್ಥೆ? ನಾವು ಎಲ್ಲಿದ್ದೇವೆ? ಬಹುಶಃ ಇದು ಅಂದಿನ ಬ್ರಿಟೀಷರು ಪಾಲಿಸುತ್ತಿದ್ದ ಪದ್ಧತಿಯನ್ನು ನಾವು ಈಗಲೂ ಕೂಡ ಅನುಸರಿಸುತ್ತಿದ್ದೇವೆ. ಈ ರೀತಿಯಾದರೆ ಹೇಗೆ? ನಾವೇನಾದರೂ ಗೃಹ ಸಚಿವರಿಗೆ ಪತ್ರ ಕೊಟ್ಟರೆ, ಅಲ್ಲಿಂದ ಅದು ಕಾರ್ಯದರ್ಶಿ, ಉಪ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ಈ ಎಲ್ಲಾ ಅಧಿಕಾರಿಗಳಿಗೆ ಹೋಗುತ್ತದೆ. ಏನಿದು ವ್ಯವಸ್ಥೆ? ಇದನ್ನು ಬದಲಾವಣೆ ಮಾಡಬೇಕು. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು "ಆಡಳಿತ ಸುಧಾರಣಾ ಆಯೋಗ" ಒಂದನ್ನು ರಚಿಸಬೇಕು ಎಂದು ಹೇಳಿದ್ದಾರೆ. ಹಿಂದೆ ಮಾನ್ಯ ಹನುಮಂತಯ್ಯನವರು ಕೂಡ ಇದೇ ಮಾದರಿಯಲ್ಲಿ ಮಾಡಿದ್ದ ಸಮಿತಿ ಒಂದು ವರದಿಯನ್ನು ಕೊಟ್ಟಿದೆ. ಅದರಂತೆ ಬದಲಾವಣೆ ಮಾಡಬಹುದು. ಇದರ ಜೊತೆಗೆ ತಮಗೆಲ್ಲರಿಗೂ ಗೊತ್ತಿದ್ದ ಹಾಗೆ, ಬೆಂಗಳೂರಿನಲ್ಲಿ ಒಂದು ಪ್ರವಾಸ ತಾಣ ಆಗಬೇಕು. ನಾನು ನಿನ್ನೆಯ ದಿವಸ ಮಾನ್ಯ ರೋಷನ್ ಬೇಗ್‌ರವರನ್ನು ಕೆಲವು ಸ್ಪಾಟ್‌ಗಳಿಗೆ ಕರೆದುಕೊಂಡು ಹೋಗಿದ್ದೆ. ಈ ಸಂದರ್ಭದಲ್ಲಿ ಅವರು ಕೂಡ ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟರು. ಏನೆಂದರೆ ಮಾನ್ಯ ಕೆಂಪೇಗೌಡರವರು ಕಟ್ಟಿದ್ದಂಥ ಒಂದು ಟ್ಯಾಂಕ್, ಇದು ಒಂದು ಬಹಳ ಮಹತ್ವದ ಟ್ಯಾಂಕ್. ಇದರಲ್ಲಿ ಇವತ್ತು ಏನಾಗಿದೆ ಎಂದರೆ, sewerage water is flowing into the tank .... ಯಾವ ಸರ್ಕಾರವೂ ಕೂಡ ಇದನ್ನು ನೋಡಲಿಲ್ಲ. ಯಾರೂ ಇದರ

ಬಗ್ಗೆ ಗಮನ ನೀಡಿಲಿಲ್ಲ. ನಾನು ಬಂದಾಗಿನಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಮೂರು ಪತ್ರಗಳನ್ನು ಕೊಟ್ಟಿದ್ದೇನೆ. ಅವರು 'ಬರುತ್ತೇನೆ, ಬರುತ್ತೇನೆ' ಎಂದು ಹೇಳುತ್ತಾರೆಯೇ ವಿನಃ ಇದುವರೆವಿಗೂ ಬಂದಿಲ್ಲ. ಬಹುಶಃ ಅವರು ಕಾಮರಾಜ್ ಸ್ಕೀಮ್ ಮಾಡಿದ್ದಾರೋ ಏನೋ ಎಂದು ನನಗನ್ನಿಸುತ್ತದೆ. ಏಕೆಂದರೆ, ಕಾಮರಾಜ್‌ರವರಿಗೆ ಯಾಯರು ಏನು ಹೇಳಿದರೂ ಕೂಡ 'ಪಾರ್ಕಲಾಮ್, ಪಾರ್ಕಲಾಮ್' "ನೋಡೋಣ, ನೋಡೋಣ" ಎಂದು ಹೇಳುತ್ತಿದ್ದರಂತೆ, ಅದೇ ರೀತಿ ಇವರು ಮಾಡುತ್ತಾರೆಂದು ನನಗೆ ಅನ್ನಿಸುತ್ತದೆ. ನಿನ್ನೆಯೂ ಕೂಡ ನಾನು ಒಂದು ಲೆಟರನ್ನು ಅವರಿಗೆ ಕೊಟ್ಟಿದ್ದೆ. ಈ ಬಗ್ಗೆ ಅವರ ಕಾರ್ಯದರ್ಶಿಯವರನ್ನು ವಿಚಾರಿಸಿದಾಗ ಅವರು ಇನಿಷಿಯಲ್ ಹಾಕಿದ್ದಾರೆ, ಡೇಟ್ ಇನ್ನು ಫಿಕ್ಸ್ ಮಾಡಿಲ್ಲವೆಂದು ಹೇಳಿದರು. ಬೆಂಗಳೂರಿನಲ್ಲಿ ಲಾಲ್ ಬಾಗ್ ಎನ್ನುವುದು ಬಹಳ ಮಹತ್ವದ ಜಾಗ, ಅದು ಉತ್ತಮ ಪಾರ್ಕ್ ಕೂಡ. ಆ ಪಾರ್ಕಿಗೆ ಮಾನ್ಯ ಅಲ್ಲಂ ವೀರಭದ್ರಪ್ಪನವರನ್ನು ಕೆರೆದುಕೊಂಡು ಹೋಗಿದ್ದೆ. ಅಲ್ಲಿರತಕ್ಕಂಥ ಲೇಕ್‌ಗೆ (ಜಯನಗರದಿಂದ) ಒಳಚರಂಡಿ ನೀರು ಬರುತ್ತಿರುವುದನ್ನು ಮಾನ್ಯ ಅಲ್ಲಂ ವೀರಭದ್ರಪ್ಪನವರು ನೋಡಿದರು. ತಕ್ಷಣವೇ ಅಲ್ಲಿರತಕ್ಕಂಥ ಅಭಿಯಂತರವರನ್ನು ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಕರೆಸಿ 'ಸರಿಪಡಿಸಿ' ಎಂದು ಸೂಚಿಸಿದರೂ ಸಹ ಇದುವರೆವಿಗೂ ಆ ಲೇಕ್ ಸುಧಾರಣೆಯಾಗಲಿಲ್ಲ. ಈಗಲೂ ಸಹ ಅಲ್ಲಿಗೆ ಒಳಚರಂಡಿ ನೀರು ಬರುತ್ತಿದೆ. ಹಿಂದೆ ಲಾಲಬಾಗ್‌ನಲ್ಲಿ ಜಿಂಕೆಗಳ ವನ ಇತ್ತು, ಮಕ್ಕಳು ಇಲ್ಲಿಗೆ ಬಂದಾಗ ಇದನ್ನು ನೋಡಬಹುದಿತ್ತು. ಆದರೆ ಇವತ್ತಿನ ದಿವಸ ಇದನ್ನು ತೆಗೆದು ಬನ್ನೇರುಘಟ್ಟದಲ್ಲಿರುವ ನ್ಯಾಷನಲ್ ಪಾರ್ಕ್‌ನಲ್ಲಿಟ್ಟಿದ್ದಾರೆ. ಇವತ್ತಿನ ದಿವಸ ಬೆಂಗಳೂರಿನಲ್ಲಿ ನೋಡುವುದಕ್ಕೆ ಯಾವ ಜಾಗವಿದೆ ನೀವೆ ಹೇಳಿ? ಲಾಲ್‌ಬಾಗ್‌ನಲ್ಲಿದ್ದಂಥ ಜಿಂಕಗಳನ್ನು ಸಂರಕ್ಷಣೆ ಮಾಡುವುದಕ್ಕೆ ನಮ್ಮವರಿಗೆ ಸಾಧ್ಯ ಆಗಿಲ್ಲ. ಇವತ್ತಿನ ದಿವಸ ಲಾಲ್‌ಬಾಗ್‌ನಲ್ಲಿ ಹಳೆಯ ಮರಗಳನ್ನು ಬಿಟ್ಟರೆ ಬೇರೇನೂ ಇಲ್ಲ. ದೆಹಲಿಯಲ್ಲಿರತಕ್ಕಂಥ ನೆಹರು ಪಾರ್ಕನ್ನು ಬಹಳ ಚೆನ್ನಾಗಿ ನಿರ್ವಹಣೆ ಮಾಡಿದ್ದಾರೆ. ಅಲ್ಲಿನ ಲಾನ್‌ನನ್ನು ಕೂಡ ಬಹಳ ಸಿಸ್ಟಮ್ ಆಗಿ ಬೆಳೆಸಿದ್ದಾರೆ. ಇವತ್ತಿನ ದಿವಸ ಲಾಲ್‌ಬಾಗ್‌ಗೆ ಟೂರಿಸ್ಟ್‌ಗಳು ಬಂದು ಎರಡು ರೂಪಾಯಿಗಳನ್ನು ಕೊಟ್ಟು ಒಳಗಡೆ ಹೋದರೆ, ಅವರಿಗೆ ಅಲ್ಲಿ ಕಾಣುವುದೇನೆಂದರೆ, ಒಂದು ಗುಡ್ಡ, ಆ ಗುಡ್ಡದ ಮೇಲೆ ಒಂದು ಟವರ್ ಇದೆ, ಇದನ್ನು ಬಿಟ್ಟರೆ ಲಾಲ್‌ಬಾಗ್ ಒಳಗಡೆ ಇನ್ನು ಏನೂ ಇಲ್ಲ. ಇದರ ಬಗ್ಗೆ ಒಂದು ರಿಟ್ ಪಿಟಿಶನ್ ಹಾಕಿದಾಗ ಹೈಕೋರ್ಟ್ ಸರ್ಕಾರಕ್ಕೆ ಡೈರೆಕ್ಷನ್ ಮಾಡಿತು. ಅದೇನೆಂದರೆ, ಲಾಲ್‌ಬಾಗ್ ಒಳಗಡೆ ನಾಲ್ಕು ದಿಕ್ಕುಗಳಲ್ಲಿ ಬಾತ್‌ರೂಂಗಳನ್ನು ಇಟ್ಟು ಸೂಕ್ತವಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕೆಂದು ಹೇಳಲಾಗಿದೆ. ಆದರೆ ಇವತ್ತಿನ ದಿವಸ ಇಲ್ಲಿ ಲಾನ್ ಆಗಲೀ ಅಥವಾ ಮರಗಳಾಗಲೀ ಏನೂ ಇಲ್ಲ. ಬಹಳ ಹಿಂದಿನ, ಮಾಧುರಾವ್ ಕಾಲದ ಕೃಷ್ಣರಾವ್ ಪಾರ್ಕ್ ಇವತ್ತನ ದಿವಸ ಹೇಗಿದೆ ಎಂದರೆ, ಇಲ್ಲಿ ಜನರು ಓಡಾಡುವುದಕ್ಕೆ ಆಗುವುದಿಲ್ಲ. ಇಂಥ ಆ ವ್ಯವಸ್ಥೆಯ ಪಾರ್ಕ್‌ಗಳು ಬೆಂಗಳೂರಿನಲ್ಲಿವೆ. ಬೆಂಗಳೂರಿನಲ್ಲಿರತಕ್ಕಂಥ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಬಜೆಟ್‌ನಲ್ಲಿ ಏನನ್ನು ಸಹ ಹೇಳಿಲ್ಲ. ಇದರ ಜೊತೆಗೆ ಬೆಂಗಳೂರಿನಲ್ಲಿರುವ ರಸ್ತೆಗಳನ್ನು ಅಗಲಿಕರಣ ಮಾಡುವುದರ ಬಗ್ಗೆ ಮತ್ತು ಟ್ರಾಫಿಕ್ ಪೋಲೀಸನ್ನು ಅಭಿವೃದ್ಧಿ ಮಾಡುವುದರ

ಬಗ್ಗೆ ಏನು ಹೇಳಿಲ್ಲ. ಹಾಗೆಯೇ ಪೋಲೀಸರ್‌ಗೆ ಗಾಡ್‌ಗೆಟ್ಸನ್ನು ಕೊಡಬೇಕು. ಏಕೆಂದರೆ ಯಾರಾದರೂ ವಿ.ಐ.ಪಿ.ಗಳು ಬಂದಂಥ ಸಂದರ್ಭದಲ್ಲಿ ಎಲ್ಲಾ ರಸ್ತೆಗಳಲ್ಲಿ ಪೋಲೀಸ್‌ನವರು ಇರುವುದಿಲ್ಲ. ಏಕೆಂದರೆ, ಏರ್‌ಪೋರ್ಟ್‌ನಿಂದ ಹಿಡಿದು ರಾಜ್‌ಭವನದವರೆಗೆ ಪೋಲೀಸ್‌ನವರು ಇರುತ್ತಾರೆ. ನಾವು ಕೇಳಿದರೆ, ಪೋಲೀಸ್ ಸಿಬ್ಬಂದಿ ಇಲ್ಲವೆಂದು ಹೇಳುತ್ತಾರೆ, ಇಂಥ ಸಂದರ್ಭದಲ್ಲಿ ಪೋಲೀಸ್‌ನವರು ಸಹ ಏನು ಮಾಡುವುದಕ್ಕಾಗುವುದಿಲ್ಲ. ಇಂಥ ಒಂದು ಪರಿಸ್ಥಿತಿ ಇವತ್ತಿನ ದಿವಸ ಬೆಂಗಳೂರಿನಲ್ಲಿದೆ. ಬೆಂಗಳೂರು ಬಹುಶಃ 25 ವರ್ಷಗಳ ನಂತರ ಏನಾಗಬಹುದೆಂದು ಯೋಚನೆ ಮಾಡಿದರೆ, ತಾವು ಕಲ್ಕತ್ತದಲ್ಲಿ ನೋಡಿದ್ದರೆ ಅಲ್ಲಿ ಹಾಯ್ ಕಲ್ಕತ್ತ ಎಂದು ಇದೆ. ಈ ಒಂದು ಪರಿಸ್ಥಿತಿ ಇವತ್ತಿನದಿವಸ ಬೆಂಗಳೂರಿಗೆ ಬಂದಿದೆ. ಇನ್ನು ಮುಂದೆ ಬೆಂಗಳೂರಿನಲ್ಲಿ ಟ್ರಾಫಿಕನ್ನು ನಿರ್ವಹಣೆ ಮಾಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದರ ನಿರ್ವಹಣೆಗಾಗಿ ಸರ್ಕಾರ ಏನನ್ನೂ ಸಹ ಹೇಳಿಲ್ಲ. 'ವಕೀಲರ ಭವನ' ಕಟ್ಟಬೇಕೆಂದು ಹೈಕೋರ್ಟಿನಿಂದ ಸರ್ಕಾರಕ್ಕೆ ಡೈರೆಕ್ಷನ್ ಕೊಟ್ಟಿದ್ದಾರೆ. ಇಲ್ಲಿ ವಕೀಲರ ಭವನ ಕಟ್ಟುವುದಕ್ಕೆ ಹಿಂದಿನ ಸರ್ಕಾರದವರು ತೀರ್ಮಾನ ಮಾಡಿ ಇದಕ್ಕೊಂದು ಅಂದಾಜನ್ನು ಸಹ ತಯಾರು ಮಾಡಿದ್ದರು. ಆದರೆ ವಕೀಲರ ಭವನ ಕಟ್ಟುವುದಕ್ಕೆ ಈ ಸರ್ಕಾರ ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಕೋರ್ಟ್ ಕಟ್ಟಡಗಳನ್ನು ಕಟ್ಟುವುದಕ್ಕೆ ಎಷ್ಟು ಹೂಡಿಕೆ ಮಾಡಬೇಕೆಂಬುದರ ಬಗ್ಗೆ ಬಜೆಟ್‌ನಲ್ಲಿ ಏನನ್ನು ಹೇಳಿಲ್ಲ. ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಕೋರ್ಟ್ ಕಟ್ಟಡಗಳಿವೆ ಮತ್ತು ಬಾಡಿಗೆ ಕಟ್ಟಡಗಳಲ್ಲಿ ಎಷ್ಟು ಕೋರ್ಟ್‌ಗಳಿವೆ, ಇವೆಕ್ಕೆಲ್ಲಾ ಏನು ಮಾಡಬೇಕೆಂಬುದರ ಬಗ್ಗೆ ಮಾನ್ಯ ಚಂದ್ರೇಗೌಡರು ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಬಜೆಟ್‌ನಲ್ಲಿ ಯಾವುದೇ ರೀತಿಯ ಅಂದಾಜನ್ನು ಮಾಡಿಲ್ಲ. ಹಾಗೆಯೇ ಕೋರ್ಟ್ ಕಟ್ಟಡಗಳನ್ನು ಕಟ್ಟುವುದಕ್ಕೆ ಮತ್ತು ಬೆಂಗಳೂರಿನಲ್ಲಿ ವಕೀಲರ ಭವನ ಕಟ್ಟುವುದಕ್ಕೆ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. Already it was assured by the previous government that they would pay Rs. 50 lakh at the first instance and continue. ಇದುವರೆಗೂ ಏನೂ ಮಾಡಿಲ್ಲ. ಆದ್ದರಿಂದ ಈ ಮುಖ್ಯವಾದಂಥ ಕಾರ್ಯಕ್ರಮಗಳ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲವೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ನಾನು ಈ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತಿನ ದಿವಸ ಹಳ್ಳಿಗಳ ಪರಿಸ್ಥಿತಿ ಏನಾಗಿದೆ ಎಂದರೆ, ಬೆಂಗಳೂರಿನಲ್ಲಿ ರಾತ್ರಿ ಹೊತ್ತು ಲೈಟ್ ಇರುವುದಿಲ್ಲ, ಆದರೆ ಹಗಲು ಸಮಯದಲ್ಲಿ ಲೈಟ್ ಹಾಕಿರುತ್ತಾರೆ. ಇವತ್ತಿನ ದಿವಸ ಅನೇಕ ಕಡೆ ರಸ್ತೆ ದೀಪದ ಬಗ್ಗೆ ಕೆ.ಇ.ಬಿ. ಯವರಿಗಾಗಲಿ ಅಥವಾ ಕಾರ್ಪೊರೇಷನ್‌ರವರಿಗಾಗಲಿ ಕಮಿಟ್‌ಮೆಂಟ್ ಇರುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ಅನೇಕ ಕಡೆ ರಾತ್ರಿ ಸಮಯದಲ್ಲಿ ಬೀದಿ ದೀಪಗಳು ಉರಿಯುವುದಿಲ್ಲ. ಇವತ್ತಿನ ದಿವಸ ಹಳ್ಳಿಗಳಲ್ಲಿ ರಾತ್ರಿ ಅಥವಾ ಬೆಳಗಿನ ಸಮಯದಲ್ಲಿಯೂ ಬೀದಿ ದೀಪಗಳು ಉರಿಯುವುದಿಲ್ಲ. ಒಂದು ವಾರದ ಹಿಂದೆ ನಮ್ಮ ಊರಿಗೆ ಹೋದಾಗ ಅಲ್ಲಿನ ಪರಿಸ್ಥಿತಿಯನ್ನು ನೋಡಿ ನನಗೆ ಬಹಳ ಬೇಸರವಾಯಿತು. ಹಿಂದಿನ ಕಾಲದಲ್ಲಿ ಲೈಟ್ ಇಲ್ಲದೇ ಇರುವಾಗ ಒಂದು ಸಣ್ಣ ದೀಪವನ್ನು ಇಟ್ಟುಕೊಳ್ಳುತ್ತಿದ್ದರು, ಆಗ ಅದೇ ಎಷ್ಟೋ ಚೆನ್ನಾಗಿ ಇರುತ್ತಿತ್ತು. ಇಂಥ ಒಂದು ಪರಿಸ್ಥಿತಿ

ಹಳ್ಳಿಗಳಲ್ಲಿರುವಾಗ, ಇದನ್ನು ಅಭಿವೃದ್ಧಿ ಪಡಿಸುವುದಕ್ಕೆ ಕೆ.ಇ.ಬಿ.ಏನು ಮಾಡಿದ್ದಾರೆ? ಆದ್ದರಿಂದ, ಹಳ್ಳಿಗಳಿಗೆ ನಿರಂತರವಾಗಿ ವಿದ್ಯುಚ್ಛಕ್ತಿ ಕೊಡುವುದಕ್ಕಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಜೆಟ್‌ನಲ್ಲಿ ಏನನ್ನು ಪ್ರಸ್ತಾಪ ಮಾಡಿಲ್ಲ. ಪೇಜ್ 41ರ ಪ್ಯಾರಾ 137ರಲ್ಲಿ ಬಹಳ ಮುಖ್ಯವಾದ ಅಂಶ ಇದೆ. ಅದೇನೆಂದರೆ, "Honourable members may be surprised to know that almost 75% of our revenues are consumed by committed expenditures". - Salaries and pensions. ಇದಕ್ಕೆ ನಾವೇನು ಹೇಳಬೇಕು? ನಮ್ಮ ಒಟ್ಟು ಆದಾಯದಲ್ಲಿ 75 ಪರ್ಸೆಂಟ್ ಹಣ ನೌಕರರ ಸಂಬಳಕ್ಕೆ ಹೋದರೆ, ಉಳಿದ ಹಣದಲ್ಲಿ ಅಭಿವೃದ್ಧಿ ಕೆಲಸವನ್ನು ಹೇಗೆ ಮಾಡುವುದು? ಮೊನ್ನೆ ದಿವಸ ಫಾರೀನರ್‌ರೊಬ್ಬರು ಹೈಕೋರ್ಟಿನಲ್ಲಿ ಈ ಬಜೆಟ್ ಪುಸ್ತಕವನ್ನು ನೋಡಿ ಬಹಳ ಚೆನ್ನಾಗಿದೆ ಎಂದು ಹೇಳುತ್ತಾ ಪೇಜ್ 41ನ್ನು ತೆಗೆದು ನೋಡಿ What Mr. Reddy? What is this? 75% of the revenue goes to salary. Then what developmental work you can make? It is surprising? ಎಂದು ಹೇಳಿದರು. ನಿಜವಾಗಿಯೂ ಇಂಥ ಒಂದು ಪರಿಸ್ಥಿತಿಯಲ್ಲಿ ಅಭಿವೃದ್ಧಿ ಕೆಲಸವನ್ನು ಮಾಡುವುದು ತುಂಬಾ ಕಷ್ಟವಿದೆ. ಇವತ್ತಿನ ದಿವಸ ಯಾವುದೇ ಹಳ್ಳಿಗಳಲ್ಲಾಗಲೀ ಅಥವಾ ತಾಲ್ಲುಕುಗಳಲ್ಲಾಗಲೀ ಎಲ್ಲಿಯೂ ಸಹ ರಸ್ತೆಗಳು ಸರಿಯಾಗಿಲ್ಲ. ಇದು ಮಾನ್ಯ ಧರ್ಮಸಿಂಗ್‌ರವರಿಗೆ ಗೊತ್ತಿರಬೇಕು. ಮಾನ್ಯ ಘೋರ್ಪಡೆಯವರು ಇಲ್ಲಿ ಇದ್ದಿದ್ದರೆ ಅವರಿಗೂ ಸಹ ಗೊತ್ತಾಗುತ್ತಿತ್ತು. ಚಿಂತಾಮಣಿಯಿಂದ ಕಂಬಾಲಪಲ್ಲಿಗೆ ಹೋಗುವಂತಹ ರಸ್ತೆ ಬಹಳ ಅದ್ವಾನವಾಗಿದೆ. ಬಹುಶಃ ಹಿಂದಿನ ಸರ್ಕಾರದವರು ಅದನ್ನು ಮಾಡಿದರೋ ಅಥವಾ ಇಲ್ಲವೋ, ಅದನ್ನು ಬಿಟ್ಟು ಬಿಡಿ. ಈಗಲಾದರೂ ನೀವು ಮೇ ಅಥವಾ ಜೂನ್ ತಿಂಗಳ ಒಳಗೆ ಆ ರಸ್ತೆಗಳನ್ನು ಸರಿಪಡಿಸಿ. ಇವತ್ತಿನ ದಿವಸ ಯಾವುದೇ ಹಳ್ಳಿಯಲ್ಲಾಗಲೀ ಅಥವಾ ತಾಲ್ಲೂಕು ಮಟ್ಟಗಳಲ್ಲಿಯೂ ಸಹ ರಸ್ತೆಗಳೇ ಇಲ್ಲ. ಆದ್ದರಿಂದ, ಇಂಥ ರಸ್ತೆಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಪಡಿಸಬಹುದೆಂಬುದರ ಬಗ್ಗೆ ಏನಾದರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಇದಕ್ಕಾಗಿ ಮಾನ್ಯ ಧರ್ಮಸಿಂಗ್‌ರವರು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿದ್ದೀರಾ? ಕೇವಲ ಬಜೆಟ್‌ನಲ್ಲಿ ಪ್ರಾವಿಜನ್ ಕೊಟ್ಟರೆ ಸಾಲದು, ಆದಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡಬೇಕು. ಏಕೆಂದರೆ, ಇವತ್ತಿನ ದಿವಸ ಯಾವುದೇ ಹಳ್ಳಿಗಾಗಲಿ ಅಥವಾ ತಾಲ್ಲೂಕು ಕೇಂದ್ರಗಳಿಗೆ ಹೋಗುವುದಕ್ಕೆ ರಸ್ತೆಗಳೇ ಇಲ್ಲದಂತಾಗಿದೆ. ಇವತ್ತಿನ ದಿವಸ ಅಮೇರಿಕಾದಲ್ಲಿ ಒಂದು ಯೋಜನೆ ಇದೆ. ಅದೇನೆಂದರೆ, no tax without repairing the roads. ರಸ್ತೆ ಸರಿ ಇಲ್ಲದೇ ಇದ್ದರೆ ಅಲ್ಲಿನ ಜನರು ರಸ್ತೆ ತೆರಿಗೆಯನ್ನು ಕೊಡುವುದಿಲ್ಲ. ಏಕೆಂದರೆ, you must improve the civic amenity. ಇಂಥ ಸಂದರ್ಭ ಇದ್ದರೆ ಎಲ್ಲಾ ರಸ್ತೆಗಳನ್ನು ಚೆನ್ನಾಗಿ ಮಾಡಬಹುದು. ಬಜೆಟ್ ಪ್ರಾವಿಜನ್‌ನಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಏನನ್ನೂ ಹೇಳಿಲ್ಲ. ನಾನು ಇವತ್ತು ಬೆಂಗಳೂರು ನಗರದ ಬಗ್ಗೆ ಏಕೆ ಪ್ರಸ್ತಾಪ ಮಾಡಿದೆ ಎಂದರೆ, ಇವತ್ತಿನ ದಿವಸ ಬೆಂಗಳೂರಿನಲ್ಲಿರತಕ್ಕಂಥ ಪಾರ್ಕ್‌ಗಳ ಬಗ್ಗೆ ಮತ್ತು ರಸ್ತೆ ಹಾಗೂ ಟ್ರಾಫಿಕ್ ಸಿಸ್ಟಮನ್ನು ಸರಿಪಡಿಸಿ ಬೆಂಗಳೂರು ನಗರವನ್ನು ಅಭಿವೃದ್ಧಿ ಪಡಿಸುವುದಕ್ಕೆ

ಬಜೆಟ್‌ನಲ್ಲಿ ಯಾವುದೇ ರೀತಿಯ ಪ್ರಾವಿಜನ್ ಮಾಡಿಲ್ಲ, ಹಾಗೆಯೇ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದಿಂದ ಕೊಡತಕ್ಕಂಥ ಅನುದಾನವನ್ನು ಸಹ ಕೊಡುತ್ತಿಲ್ಲ. ಹಿಂದಿನ ಸರ್ಕಾರ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡದೇ ಇದ್ದದರಿಂದ ರಸ್ತೆಗಳೆಲ್ಲವೂ ಹಾಳಾಗಿವೆ. ಆದ್ದರಿಂದ, ಈಗಿನ ಸರ್ಕಾರ ಮಹಾನಗರ ಪಾಲಿಕೆಗೆ ಕೊಡಬೇಕಾದ ಅನುದಾನವನ್ನು ಕೊಟ್ಟರೆ ಬೇಕಾದಷ್ಟು ಕೆಲಸವನ್ನು ಮಾಡಬಹುದೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ, ಅನೇಕ ಸನ್ಮಾನ್ಯ ಸದಸ್ಯರುಗಳು ಈ ಒಂದು ಬಜೆಟ್ ಬಗ್ಗೆ ಮಾತನಾಡಿದ್ದಾರೆ. ತಮ್ಮ ಮುಖಾಂತಹ ಸರ್ಕಾರಕ್ಕೆ ಮತ್ತು ಎಲ್ಲ ಮಾನ್ಯ ಸದಸ್ಯರಲ್ಲೊಂದು ನನ್ನ ವಿನಂತಿ ಏನೆಂದರೆ ಪ್ರತಿ ವರ್ಷ ಮಾನ್ಯ ರಾಜ್ಯಪಾಲರ ಭಾಷಣವನ್ನು ಮತ್ತು ಬಜೆಟನ್ನು ಮಂಡನೆ ಮಾಡುತ್ತೇವೆ. ಮಹಿಳೆಯರಿಗೆ, ರೈತರಿಗೆ ಮತ್ತು ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ, ಹೀಗೆ ಹಲವಾರು ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಹಾಕಿಕೊಂಡಿರುತ್ತೇವೆ. ಮುಂದಿನ ಬಜೆಟ್‌ಗೆ ಈ ವರ್ಷದ ಏಪ್ರಿಲ್ - 1ನೇ ತಾರೀಖಿನಿಂದ ಮಾರ್ಚ್ 31ನೇ ತಾರೀಖಿನವರೆಗೆ ಏನು ಮಾಡಿದ್ದೇವೆ ಎನ್ನುವುದನ್ನು ಈ ಸದನಕ್ಕೆ 'ಆಕ್ಷನ್ ಟೇಕನ್' ಕಾರ್ಯಕ್ರಮ ಹಿಂದಿನ ವರ್ಷ ಏನು ಹಾಕಿಕೊಂಡಿದ್ದರೋ ಅದರಲ್ಲಿ ಸಂಕ್ಷಿಪ್ತವಾದ ಅನುಪಾಲನ ವರದಿಯನ್ನು ಹಿಂದಿನ ವರ್ಷದ ಸಾಧನೆಯನ್ನು ಏನೇನು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದನ್ನು, ಎಷ್ಟು ಹಣವನ್ನು ಒದಗಿಸಿರುತ್ತೇವೆ, ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೇವೆ ಅಥವಾ ಏನು ಸಾಧನೆಯನ್ನು ಮಾಡಿದ್ದೇವೆ, ಸಾಧನೆ ಮಾಡದೇ ಏನೇನು ಉಳಿದಿದೆ ಎಂದು ಕೊಟ್ಟರೆ, ಅದರಿಂದ ಈ ಒಂದು ಆಯವ್ಯಯದ ಮಂಡನೆ ಅದರ ವರದಿಯನ್ನು ಪ್ರತಿವರ್ಷ ಕೊಟ್ಟರೆ ಇದರಿಂದ ಸಾರ್ಥಕವಾಗಬಹುದು. ಈ ಜನತೆಗೆ ಹಾಗೂ ಈ ಸದನಕ್ಕೆ ಒಂದು ಒಳ್ಳೆಯ ಮಾರ್ಗದರ್ಶನವಾಗುತ್ತದೆ ಹಾಗೂ ಅದನ್ನು ತಿಳಿದುಕೊಳ್ಳುವುದಕ್ಕಾಗುತ್ತದೆ ಮತ್ತು ಸರ್ಕಾರ ಸಹಿತ ತಾವು ಹಾಕಿಕಂಡಿರತಕ್ಕಂಥ ಕಾರ್ಯಕ್ರಮಗಳನ್ನು ಕಳಕಳಯಿಂದ ಕಾರ್ಯಾಚರಣೆಗೆ ತರುವುದಕ್ಕೆ ಸಾಧ್ಯ ಎನ್ನುವ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ.

ಇನ್ನು ಗ್ರಾಮ ಪಂಚಾಯಿತಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಸರ್ಕಾರ ಕೊಡತಕ್ಕಂಥ ಅನುದಾನವನ್ನು ಒಂದು ಲಕ್ಷ ರೂಪಾಯಿಗಳಿಂದ ಎರಡು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿ ಸ್ವಲ್ಪಮಟ್ಟಿಗೆ ಇದರಿಂದ ಗ್ರಾಮೀಣ ಅಭಿವೃದ್ಧಿ ಸಾಧನೆಯನ್ನು ಮಾಡುವುದಕ್ಕೆ ಅವಕಾಶ ಮಾಡಿದ್ದು, ಸ್ವಾಗತಾರ್ಹವಾದಂಥಾದ್ದು. ಆದರೆ ಗ್ರಾಮೀಣ ಪ್ರದೇಶದ ಜನಜೀವನವನ್ನು ನೋಡಿದರೆ, ಅಲ್ಲಿರತಕ್ಕಂಥ ಕುಡಿಯುವ ನೀರು, ರಸ್ತೆ ಹಾಗೂ ಅಲ್ಲಿನ ಕೃಷಿ ಕಾರ್ಮಿಕರ ಜೀವನವನ್ನು ನೋಡಿದರೆ ಈ ಒಂದು ಗ್ರಾಮೀಣ ಪ್ರದೇಶಕ್ಕೆ ಕೊಟ್ಟಿರತಕ್ಕಂಥ ಈ ಆಯವ್ಯಯದಲ್ಲಿನ ಹಣ ಬಹಳ ಕಡಿಮೆ ಎಂದು ನನ್ನ ಭಾವನೆ. ಇನ್ನೂ ಹೆಚ್ಚಿನ ಹಣವನ್ನು ಅದಕ್ಕೆ ಒದಗಿಸಬೇಕಾಗಿತ್ತು, ಶತಶತಮಾನಗಳಿಂದ ಗ್ರಾಮೀಣ ಪ್ರದೇಶದ ಬಡ ಕೂಲಿಕಾರ ಜನ ಏನಿದ್ದಾರೆ ಅವರಿಗೆ ಸಾರಿಗೆ ಸಂಪರ್ಕವಿಲ್ಲ. ಇನ್ನು

ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಈ ದೃಷ್ಟಿಯಿಂದ ಹೆಚ್ಚಿನ ಅನುದಾನವನ್ನು ಒದಗಿಸುವುದು ಸೂಕ್ತವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನು ಕೃಷಿ ಉತ್ಪನ್ನಗಳ ಬಗ್ಗೆ ರೈತರಿಗೆ ಅವಶ್ಯಕವಾಗಿರತಕ್ಕಂಥ ಬೀಜ, ಗೊಬ್ಬರ, ಕ್ರಿಮಿನಾಶಕಗಳ ಬಗ್ಗೆ ರೈತರಿಗೆ ಅನೇಕ ರೀತಿಯ ಸೌಲಭ್ಯಗಳನ್ನು ಒದಗಿಸಲು ಮತ್ತು ಹೆಚ್ಚಿನ ಉತ್ಪಾದನೆಗಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ, ಹಿಂದಿನಿಂದಲೂ ಕೂಡ ಈ ಒಂದು ಪರಿಪಾಠ ಬೆಳೆದು ಬಂದಿದೆ. ಆದರೆ ಈ ವರ್ಷ ರೈತರ ಬಗ್ಗೆ ಹೆಚ್ಚಿನ ಒಂದು ಕಳಕಳಿಯನ್ನು ವಹಿಸಿ ಉತ್ಪಾದನೆ ಮಾಡುವುದಕ್ಕೆ ಬೇಕಾದಂಥ ಬೀಜ, ಗೊಬ್ಬರ, ಸಾಲ ಅದಕ್ಕೆ ಬೇಕಾದ ಸಬ್ಸಿಡಿ ಇನ್ನೂ ಏನೇನು ಬೇಕೋ ಅದನ್ನು ವ್ಯವಸ್ಥೆ ಮಾಡಲಾಗಿದೆ ಎಂದು ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ದೇಶದಲ್ಲಿ ಆಗಿರತಕ್ಕಂಥ ವ್ಯವಸ್ಥೆ ಏನೆಂದರೆ, ರೈತ ಬೆಳೆ ಬೆಳಯಲಿಕ್ಕೆ ಬೇಕಾದಂಥ ಬೀಜ, ಗೊಬ್ಬರ, ಕ್ರಿಮಿನಾಶಕ, ಔಷಧ ಅವನಿಗೆ ಸಾಕಾಗುವಷ್ಟು ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಹಾಗೂ ಈ ರಾಷ್ಟ್ರದ 100 ಕೋಟಿ ಜನರಿಗೆ ಆಹಾರವನ್ನು ಒದಗಿಸಲಿಕ್ಕೆ, ಮಿಲ್ಲುಗಳಲ್ಲಿ ಹತ್ತಿ ಎಣ್ಣೆಕಾಳುಗಳಂತಹ ಕಚ್ಚಾ ವಸ್ತುಗಳನ್ನು ಉತ್ಪಾದನೆ ಮಾಡಲಿಕ್ಕೆ ಇವತ್ತು ರೈತನಿಗೆ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆ ಮಾತ್ರ ಆಗಿದೆ. ಆದರೆ ಭೂಮಿಯಿಂದ ಕೃಷಿ ಉತ್ಪಾದನೆ ಮಾಡತಕ್ಕಂಥ ರೈತನ ಆರ್ಥಿಕ ವ್ಯವಸ್ಥೆ ಮಾತ್ರ ದಿನದಿನಕ್ಕೆ ಹದಗೆಡುತ್ತಾ ಹೋಗಿದೆ. ಇವತ್ತು ವ್ಯವಸಾಯ ಮಾಡತಕ್ಕಂಥ ರೈತ ಕಟ್ಟಕಡೆಯ ಮನುಷ್ಯನಾಗಿದ್ದಾನೆ. ಇನ್ನು ವ್ಯವಸಾಯ ಸಾಕು ಎಂದು ಹೇಳಿ ಕೈಬಿಡುವಂತಹ ಕೊನೆಯ ಹಂತದಲ್ಲಿದ್ದಾನೆ. ಕಾರಣ, ಇವತ್ತು ನಾವು ಯಾವುದೇ ವಸ್ತುವನ್ನು ಬಜಾರಿಗೆ ಹೋಗಿ ಖರೀದಿ ಮಾಡಿದರೆ, ಸಮಗಾರನ ಚಪ್ಪಲಿಯಿಂದ ಹಿಡಿದು, ಮಿಲ್ಲಿನಲ್ಲಿ ಉತ್ಪಾದನೆಯಾಗತಕ್ಕಂಥ, ತಾನು ಉತ್ಪಾದನೆ ಮಾಡಿದಂಥ ಕಚ್ಚಾವಸ್ತುವಿನ ವೆಚ್ಚ, ಅದನ್ನು ತಯಾರು ಮಾಡಲಿಕ್ಕೆ ಆಗತಕ್ಕಂಥ ವೆಚ್ಚವನ್ನು ಸೇರಿಸಿ, ಅದಕ್ಕೆ ಲಾಭವನ್ನು ಸೇರಿಸಿ ಉತ್ಪಾದಕನು ಅವರ ನಿರ್ದಿಷ್ಟ ಬೆಲೆಯನ್ನು ಹಾಕಿರುತ್ತಾನೆ. ಮಾಲೀಕನು ಅದರ ರೇಟ್ ಹಾಕುತ್ತಾನೆ, ಆದರೆ ರೈತ ಬೆಳದಂಥ ಬೆಳೆಗಳಿಗೆ ಬೆಲೆಯನ್ನು ಹಾಕತಕ್ಕಂಥ ಹಕ್ಕು ರೈತನಿಗೆ ಇಲ್ಲ. ಇದು ಈ ರಾಷ್ಟ್ರದ ರೈತರಿಗೆ ಆಗಿರತಕ್ಕಂಥ ಪ್ರಮುಖವಾದ ಶೋಷಣೆ. 50 ಕೆ.ಜಿ. ಗೊಬ್ಬರ ಚೀಲವನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ಅದರ ಬೆಲೆ 350 ಎಂದು ಸಿಕ್ಕಾವನ್ನು ಹಾಕಿರುತ್ತಾರೆ. ಒಂದು ಕೇಜಿ ಬೀಜಕ್ಕೆ 450 ರೂಪಾಯಿಗಳು ಎಂದು ಹೇಳುತ್ತಾನೆ. ರೈತ ತಾನು ವ್ಯವಸಾಯಕ್ಕೆ ಬಳಸತಕ್ಕಂಥ ಎಲ್ಲಾ ಸಾಮಗ್ರಿಗಳನ್ನು ಉತ್ಪಾದಕನು ಹೇಳಿದ ರೇಟಿಗೆ ಅವನು ಕೊಂಡುಕೊಳ್ಳಬೇಕು. ಸಾಲವನ್ನು ಮಾಡಿ ರೈತ ಉತ್ಪಾದನೆಯನ್ನು ಮಾಡಬೇಕು. ಸಮಗ್ರ ರಾಷ್ಟ್ರದ ಜನತೆಗೆ ಅನ್ನದಾತನಾದ ರೈತ ಕಷ್ಟಪಟ್ಟು ಇವತ್ತು ಬೆಳೆದ ಮಾಲನ್ನು ಮಾರಾಟ ಮಾಡಲಿಕ್ಕೆ ಹೋದರೆ ಅವನ ಅವಸ್ಥೆ ಈ ರಾಷ್ಟ್ರದಲ್ಲಿ, ದೇಶದಲ್ಲಿ ಏನಾಗಿದೆ ಎಂದರೆ, ರೈತನು ಉತ್ಪಾದನೆಗಳಿಗೆ ಅದನ್ನು ಕೊಳ್ಳತಕ್ಕಂಥವನ್ನು ಟೆಂಡರನ್ನು ಹಾಕತಕ್ಕಂಥ ಪದ್ಧತಿ, ರೈತನು ಉತ್ಪಾದನೆ ಮಾಡಿದ್ದನ್ನು ಹರಾಜಿನಲ್ಲಿ ಖರೀದಿಸುವುದಕ್ಕೆ, ರೈತ ಮಾರಾಟ ಮಾಡುವಂಥ ಈ ವ್ಯವಸ್ಥೆ ಈ ರಾಷ್ಟ್ರದ ಸಮಗ್ರ ರೈತರನ್ನು ಸಾಲಗಾರರನ್ನಾಗಿ ಮಾಡತಕ್ಕಂಥ ಅವರ ಆಸ್ತಿಗಳನ್ನು ಹರಾಜು ಮಾಡತಕ್ಕಂಥ ದುರಾದೃಷ್ಟ ಈ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿಯೇ ಇದೆ. ಆದರೆ ಈ ಬಗ್ಗೆ ಎಲ್ಲಿಯಾದರೂ ಚಿಂತನೆ ಇದೆಯೇ? ಅದು ಯಾವುದೇ ಪಕ್ಷ ಇರಬಹುದು, ಕೇಂದ್ರದಲ್ಲಿರತಕ್ಕಂಥ ಬಿಜೆಪಿ ಇರಬಹುದು,

ರಾಜ್ಯದಲ್ಲಿ ಇರತಕ್ಕಂತಹ ನಮ್ಮದೇ ಆದ ಕಾಂಗ್ರೆಸ್ ಇರಬಹುದು. ಬೇರೆ ಬೇರೆ ರಾಜ್ಯದಲ್ಲಿ ಕೂಡ ರೈತರ ಹಿತರಕ್ಷಣೆಯ ಬಗ್ಗೆ ಏನೂ ಕಾರ್ಯಕ್ರಮವಿಲ್ಲ, ಅಷ್ಟೇ ಅಲ್ಲ, ಯಾವ ಯೋಚನೆ ಇಲ್ಲ, ಯೋಜನೆಗಳು ದೂರವೇ ಉಳಿದಿವೆ. ತಮ್ಮ ಮೂಲಕ ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇಂತಹ ಒಂದು ದಿಟ್ಟವಾದಂಥ ಹೆಜ್ಜೆಯನ್ನು ಒಂದೇ ಸಲ ಸಾಧಿಸಲಿಕ್ಕಾಗಲಿಕ್ಕಿಲ್ಲ. ಇದು ಬಹಳ ಕಷ್ಟದ ಕೆಲಸ. ಇವತ್ತು ರೈತ ಉತ್ಪಾದನೆ ಮಾಡಿದಂಥ ಬೆಳೆಯನ್ನು ಕೊಂಡುಕೊಳ್ಳುವುದಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಬೇಕು. ಈ ಹಣವನ್ನು ಎಲ್ಲಿಂದ ತರಬೇಕು, ಅದನ್ನು ಯಾರು ಕೊಡಬೇಕು ಎನ್ನುವ ಸಮಸ್ಯೆ ಇದೆ. ತಾವು ಈಗಾಗಲೇ ಒಂದು ಸಮಿತಿಯನ್ನು ನೇಮಿಸಿರುತ್ತೀರಿ. ಆ ಸಮಿತಿ ಮೂಲಕ ಈ ಬಗ್ಗೆ ಅಧ್ಯಯನವನ್ನು ಮಾಡಿ ಇದಕ್ಕೆ ಒಂದು ರೂಪರೇಷೆಯನ್ನು ಕಂಡು ಹಿಡಿದು ಆರ್ಥಿಕವಾಗಿ ಹಣವನ್ನು ಹೇಗೆ ಸಂಗ್ರಹಣ ಮಾಡಬೇಕು, ಯಾವ ಯಾವ ಸಂಘ ಸಂಸ್ಥೆಗಳಿಂದ ರೈತನು ಬೆಳೆದಂಥ ಮಾಲನ್ನು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ಮಾಡಬೇಕು, ಹಳ್ಳಿಯ ಸಹಕಾರ ಸಂಘಗಳ ಮೂಲಕ ಮಾಡಬೇಕೇ ಅಥವಾ ಇದಕ್ಕಾಗಿ ಒಂದು ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕೇ ಎಂಬುದನ್ನು ನಾವು ಯೋಚಿಸಬೇಕು. ಇದರಿಂದ ರೈತರಿಗೆ ಸರಿಯಾದ ಮಾರ್ಗ ತೋರಿಸಿದಂತೆ ಆಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಹಾಲಿನ ವಿಚಾರವನ್ನು ತೆಗೆದುಕೊಳ್ಳಿ, ರೈತನ ಹಾಲು ಎರಡು-ಮೂರು ರೂಪಾಯಿಗಳಿಗೆ ಒಂದು ಲೀಟರನ್ನು ತೆಗೆದುಕೊಂಡು ಮಧ್ಯವರ್ತಿಗಳು ಅದನ್ನು 8-10 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ, ರೈತನಿಗೆ 3 ರೂಪಾಯಿಗಳು ಒಂದು ಲೀಟರ್‌ಗೆ ಸಿಕ್ಕರೆ ಅದನ್ನು ತೆಗೆದುಕೊಂಡು ಹೋಗಿ ಶಹರದಲ್ಲಿ ಮಾರಿದವನಿಗೆ 5 ರೂಪಾಯಿಗಳ ಲಾಭ ಸಿಗುತ್ತಿತ್ತು. ಈಗ ಸರ್ಕಾರ ಕೆಎಂಎಫ್ ಮೂಲಕ ಗ್ರಾಮಗಳಲ್ಲಿ, ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಸಹಕಾರ ಸಂಘಗಳನ್ನು ಮಾಡಿರುವುದರಿಂದ ರೈತ ಉತ್ಪಾದನೆ ಮಾಡಿದಂಥ ಹಾಲಿಗೆ ಕನಿಷ್ಠ 8-10 ರೂಪಾಯಿಗಳನ್ನು ಇವತ್ತು ಪಡೆಯುತ್ತಿದ್ದಾನೆ. ಮಧ್ಯವರ್ತಿಗಳಿಂದ ಆಗುತ್ತಿರುವ ಶೋಷಣೆ ಇವತ್ತು ನಿಂತಿದೆ. ಇದರಿಂದ ಏನೂ ಹೆಚ್ಚಿನ ಲಾಭವೆಂದು ನಾನು ಹೇಳುವುದಿಲ್ಲ, ಸ್ವಲ್ಪಮಟ್ಟಿಗೆ ಲಾಭವಾಗುತ್ತಿದೆ. ಡಿಸ್ಟಿಲ್ಡ್ ವಾಟರ್ ರೇಟ್ 18 ರೂಪಾಯಿಗಳಾದರೆ ಹಾಲಿನ ರೇಟ್ ಒಂದು ಲೀಟರ್‌ಗೆ 10 ರೂಪಾಯಿಗಳು. 50 ಪೈಸೆ ಹಾಲಿನ ದರವನ್ನು ಜಾಸ್ತಿ ಮಾಡಿದರೆ ನಗರದಲ್ಲಿರುವ ಎಲ್ಲಾ ಜನರು ಸತ್ಯಾಗ್ರಹವನ್ನು ಮಾಡುತ್ತಾರೆ. 18 ರೂಪಾಯಿಗಳಿಗೆ ಒಂದು ಲೀಟರ್ ನೀರನ್ನು ಕೊಂಡುಕೊಳ್ಳುವಂತಹ ಜನ, ಹಾಲಿನ ದರವನ್ನು ಲೀಟರ್‌ಗೆ 10 ರಿಂದ 11 ರೂಪಾಯಿಗಳಿಗೆ ಹೆಚ್ಚು ಮಾಡಿದರೆ ಧರಣಿ ಮಾಡುತ್ತಾರೆ. ಏಕೆಂದರೆ ಈ ಜನ ಸಂಘಟಿತರಾಗಿದ್ದಾರೆ, ನಗರದಲ್ಲಿರುವಂತಹ ಜನ ಸಂಘ ಸಂಸ್ಥೆಗಳ ಮೂಲಕ ಹೋರಾಟ ಮಾಡುತ್ತಿದ್ದಾರೆ. ಆದರೆ ಹಳ್ಳಿಯ ರೈತ ಅವನ ದಿನನಿತ್ಯದ ಕೆಲಸದಲ್ಲಿ ಅವನಿಗೆ ಸಂಘಟನೆ ಮಾಡುವುದಕ್ಕೆ ಅವಕಾಶವಿಲ್ಲ. ರೈತನಿಗೆ ಹೋರಾಟ ಮಾಡಲಿಕ್ಕೆ ಅವಕಾಶವಿಲ್ಲ. ರೈತರು ಹೋರಾಟ ಮಾಡಲಿಕ್ಕೆ ಇವತ್ತು ಸಂಘಟನೆಯಾಗಿದ್ದರೆ, ಇವತ್ತು ರಾಜ್ಯದಲ್ಲಿ ಸಂಘಟನೆಗೆ ಒಂದು ಶಕ್ತಿ ಬರುತ್ತಿತ್ತು.

5.40 ಪಿ.ಎಂ

ಇವತ್ತು ರೈತ ಸಂಘಟನೆಯನ್ನು ಹಾಳು ಮಾಡಿ, ಒಂದಾಗಿದ್ದಂತಹ ರೈತರನ್ನು ಇಬ್ಭಾಗ ಮಾಡಿ ರೈತ ಸಂಘಟನೆಯನ್ನು ನುಚ್ಚುನೂರು ಮಾಡಿದ್ದಾರೆ. ರೈತ ಮುಖಂಡರು ಇವತ್ತು ಈ ಒಂದು ವ್ಯವಸ್ಥೆಗೆ ಅಡ್ಡ ಬಂದಿರಬಹುದು, ರೈತ ಶಕ್ತಿ ಎನ್ನುವಂತದ್ದು, ರೈತರ ಹೋರಾಟವು ನಿರಂತರವಾಗಿ ನಡೆಯುತ್ತಿದೆ. ಅದಕ್ಕಾಗಿ ಈ ಸರ್ಕಾರ ಈ ಒಂದು ಯೋಜನೆಯನ್ನು ಮಾಡಿ ರೈತರ ಉತ್ಪಾದನೆಗಳಿಗೆಲ್ಲಾ ಲಾಭದಾಯಕ ಬೆಲೆಗಳನ್ನು ಕೊಡತಕ್ಕಂತಹ ವ್ಯವಸ್ಥೆಯಾಗಬೇಕು.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ನಮ್ಮ ಸಹಕಾರಿ ಯೂನಿಯನ್‌ನಲ್ಲಿ ಹಾಲಿನ ಬೆಲೆ ಒಂದು ಲೀಟರ್‌ಗೆ 7.30 ರೂಪಾಯಿಯನ್ನು ತೆಗೆದುಕೊಳ್ಳುತ್ತಾರೆ. ಅದೇ 100 ಎಂಎಲ್ ಸಾರಾಯಿ 6.30 ರೂಪಾಯಿಗೆ ತರಿಸಿಕೊಡುತ್ತಾರೆ. ರೈತರು ಪಟ್ಟಂತಹ ಕಷ್ಟಕ್ಕೆ ಜನಗಳಿಗೆ ಬೇಕಾದಂತಹ ಒಂದು ಲೀಟರ್ ಹಾಲಿಗೆ ಕೇವಲ 7-30 ರೂಪಾಯಿಗಳು. 100 ಎಂಎಲ್ ಸಾರಾಯಿಗೆ 6-30 ರೂಪಾಯಿಗಳು ಎಂದು ಸರ್ಕಾರದವರೇ ಬೆಲೆಯನ್ನು ಫಿಕ್ಸ್ ಮಾಡಿದ್ದಾರೆ. ಇದರಲ್ಲಿ ಎಷ್ಟು ನ್ಯಾಯವಿದೆ ಎಂಬುದನ್ನು ವಿಚಾರ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುತ್ತಿದ್ದೇನೆ.

ಉಪಾಧ್ಯಕ್ಷರು : ಅದು ಹಾಲು, ಇದು ಅಲ್ಕೋಹಾಲ್ ಅಷ್ಟೆ!

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸ್ನೇಹಿತರು ಹೇಳಿದ್ದು ಇಷ್ಟೆ, ಹಾಲಿಗೆ 10.00 ರೂಪಾಯಿಗಳು, ಆಲ್ಕೋಹಾಲಿಗೆ ಅದರ ಎರಡುಪಟ್ಟು 20.00 ರೂಪಾಯಿಗಳು. ಈ ರೀತಿ ರೈತರು ಯಾರು ಕಷ್ಟಪಟ್ಟು ಬೆವರು ಸುರಿಸಿ ದುಡಿಯುತ್ತಿದ್ದಾರೆ, ಇವತ್ತು ಅವರ ಪರಿಸ್ಥಿತಿ ದರಿದ್ರ ಪರಿಸ್ಥಿತಿಯಾಗಿದೆ. ದುಡಿಯುವ ವ್ಯಕ್ತಿ ದರಿದ್ರನಾಗಿದ್ದಾನೆ, ದುಡಿಯದೆ ಇದ್ದಂತಹ, ಬೇರೆಯವರನ್ನು ಅವಲಂಬಿಸಿದಂತಹ ಜನರು ಇವತ್ತು ಶ್ರೀಮಂತರಾಗಿದ್ದಾರೆ, ಅಲ್ಲದೆ ಮಧ್ಯವರ್ತಿಗಳೆಲ್ಲರೂ ಇವತ್ತು ಶ್ರೀಮಂತರಾಗಿದ್ದಾರೆ. ಭೂಮಿಯಿಂದ ಉತ್ಪಾದನೆಯನ್ನು ತೆಗೆಯತಕ್ಕಂತಹ ರೈತ ಮಾತ್ರ ಬಡವನಾಗಿದ್ದಾನೆ. ಮನೆಯ ಮೇಲಿನ ಕುಂಬನ್ನು ತೆಗೆದು ಒರೆಸಲಿಕ್ಕೂ ಅವನಿಗೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಬಂದಿದೆ. ಅವನಿಗೆ ಸಾಲಗಾರನಾಗಿರುವ ಪರಿಸ್ಥಿತಿ ಬಂದಿರುವುದಲ್ಲದೆ ರೈತನ ಆಸ್ತಿ ಹರಾಜು ಮಾಡಿಕೊಂಡು ಮರ್ಯಾದೆಯನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದಿದೆ. ಈ ರಾಷ್ಟ್ರದಲ್ಲಿ ಕೃಷಿ ಉತ್ಪಾದನೆಗಳಿಗೆ ಲಾಭದಾಯಕವಾದ ಬೆಲೆಯನ್ನು ನಿರ್ಧಾರ ಮಾಡುವಂತಹ ವ್ಯವಸ್ಥೆ ಇಲ್ಲದೆ ಇರುವುದಾಗಿದೆ. ಅದಕ್ಕೆ ಪ್ರಥಮವಾಗಿ ನಮ್ಮ ರಾಜ್ಯದಿಂದ ಹೊಸ ಚಿಂತನೆಯು ಪ್ರಾರಂಭವಾಗಲಿ, ಈ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಈ ಒಂದು ವಸ್ತುವಿನಿಂದಾದರೂ ಸಹಿತ ಕೆಲವು ಮಟ್ಟಿಗೆ ಲಾಭದಾಯಕವಾದ ಬೆಲೆ ರೈತನಿಗೆ ಸಿಗುವಂತಹ ವ್ಯವಸ್ಥೆ ಮಾಡಬೇಕು. ಇವತ್ತು ನಾವೆಲ್ಲರೂ ರೈತರು ಬೆಳೆದ ಕಬ್ಬಿನ ವಿಚಾರವಾಗಿ ಧರಣಿಯನ್ನು ಮಾಡುತ್ತಿದ್ದೇವೆ, ರೈತರು ಬೆಳದಂತಹ ಕಬ್ಬಿಗೆ ಫ್ಯಾಕ್ಟರಿಯವರು ಇವತ್ತು ಸರಿಯಾಗಿ ಹಣವನ್ನು ಕೊಡುತ್ತಿಲ್ಲ. ಕಾರ್ಖಾನೆಯವರು ಎಲ್ಲಿಂದ ಹಣವನ್ನು ಕೊಡಬೇಕು? ಇವತ್ತು ರೈತ ಮಾರಾಟ ಮಾಡಿದಂತಹ ಕಬ್ಬನ್ನು ಕಾರ್ಖಾನೆಯವರು ತೆಗೆದುಕೊಂಡು, ಅದರಿಂದ ಸಕ್ಕರೆಯನ್ನು ಉತ್ಪಾದನೆಯನ್ನು

ಮಾಡಿ, ಗೋಡೌನ್‌ನಲ್ಲಿ ದಾಸ್ತಾನು ಮಾಡುತ್ತಾರೆ. ಕಾರ್ಖಾನೆಯವರಿಗೆ ಅದನ್ನು ಮಾರಾಟ ಮಾಡುವಂತಹ ಹಕ್ಕಿರುವುದಿಲ್ಲ. ಕೇಂದ್ರ ಸರ್ಕಾರವು ಅನುಮತಿಯನ್ನು ಕೊಟ್ಟಾಗ ಮಾತ್ರ ಪ್ರತಿ ತಿಂಗಳು ಸ್ವಲ್ಪ ಸ್ವಲ್ಪ ಸಕ್ಕರೆಯನ್ನು ಬಿಡುಗಡೆ ಮಾಡುತ್ತಾ ಹೋಗುತ್ತಾರೆ. ಕಾರ್ಖಾನೆಯವರಿಗೆ ಸಕ್ಕರೆ ಮಾರಾಟ ಮಾಡದೆ ಹಣ ಬರುವ ಹಾಗಿಲ್ಲ, ಅವರಿಗೆ ಹಣ ಬರದೆ ಕಬ್ಬು ಬೆಳೆದಂತಹ ರೈತರಿಗೆ ಕಾರ್ಖಾನೆಯವರು ಹಣ ಕೊಡುವಂತಹ ವ್ಯವಸ್ಥೆ ಇಲ್ಲ. ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಸೂಚನೆಯನ್ನು ಕೊಡುವುದೇನೆಂದರೆ, ರೈತರ ಸಂಘಟನೆಯನ್ನು ಮಾಡಿ, ಒಂದು ಸಂಸ್ಥೆಯ ಮೂಲಕ ರೈತನು ಏನು ಕಬ್ಬನ್ನು ಮಾರಾಟ ಮಾಡುತ್ತಾನೋ ಅವನಿಂದ 100ಕ್ಕೆ ಒಂದು ಅಥವಾ ಎರಡು ರೂಪಾಯಿಗಳ ಹಣವನ್ನು ಪಡೆದುಕೊಂಡು ಈ ಒಂದು ನಿಧಿಗೆ ಸಂಗ್ರಹಿಸಿಕೊಂಡು, ನಂತರ ಸರ್ಕಾರ ಅದಕ್ಕೆ ಸರಿಯಾದಂತಹ ವಂತಿಗೆಯನ್ನು ಪ್ರಮೋಷನ್‌ನಲ್ಲಿ ಕೊಟ್ಟು ಕೇಂದ್ರ ಮತ್ತು ರಾಜ್ಯಸರ್ಕಾರಗಳು ರೈತರ ಹಣವನ್ನು ಸೇರಿಸಿ 5 ವರ್ಷಕ್ಕೊ, 10 ವರ್ಷಕ್ಕೋ ಈ ಕಾರ್ಯಕ್ರಮವನ್ನು ಹಾಕಿಕೊಂಡರೆ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ಸಂಗ್ರಹಣೆ ಮಾಡಬಹುದು. ಇವತ್ತು ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರ ಈ ರೈತರು ಬೆಳೆದಂತಹ ವಸ್ತುಗಳನ್ನು ಕೊಂಡುಕೊಳ್ಳಲಿಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಇಂತಹ ಒಂದು ನಿಧಿಯನ್ನು ಮಾಡುವಂತಹ ಯೋಜನೆಯನ್ನು ಹಾಕಿಕೊಂಡರೆ ಒಳ್ಳೆಯದು. ಬಹುತೇಕ ಈ ದಿಸೆಯಲ್ಲಿ ರೈತರ ಎಲ್ಲಾ ವಸ್ತುಗಳನ್ನು ಒಮ್ಮೆಲೇ ನಾವು ಲಾಭದಾಯಕವಾದ ಬೆಲೆಗೆ ಕೊಳ್ಳಲಿಕ್ಕೆ ಆಗುವುದಿಲ್ಲ. ಹತ್ತಿ, ಕಬ್ಬು, ಎಣ್ಣೆಕಾಳುಗಳು ಇರಬಹುದು ಒಂದೊಂದಾಗಿ ಕೊಳ್ಳುವುದಕ್ಕೆ ಇದೊಂದು ಪ್ರಯೋಗವನ್ನು ಯಶಸ್ವಿಯಾಗಿ ಮಾಡಲಿಕ್ಕೆ ಸಾಧ್ಯ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಇನ್ನು ನೀರಾವರಿಯ ವಿಚಾರಕ್ಕೆ ಸಂಬಂಧಪಟ್ಟಂತೆ, ಕಾವೇರಿ ಹಾಗೂ ಕೃಷ್ಣ ನೀರಾವರಿ ಯೋಜನೆಗಳ ಬಗ್ಗೆ ಇದನ್ನು ಸರ್ಕಾರದವರು ಆದಷ್ಟು ಬೇಗನೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಆದರೆ ಈ ಒಂದು ವಿಚಾರದಲ್ಲಿ ನನಗನ್ನಿಸುವುದೇನೆಂದರೆ, ಈ ಸದನದ ಮೂಲಕ ಮಾನ್ಯ ಖರ್ಗೆಯವರಿಗೆ, ನಾನು ಹೇಳುವುದರಲ್ಲಿ ಸರಿಯಿಲ್ಲವೆಂದರೆ ತಾವು ಅದನ್ನು ಸರಿಪಡಿಸಬೇಕು. ಕೃಷ್ಣ ನದಿ ನೀರಿನ ವಿಚಾರವಾಗಿ ಆಂಧ್ರದವರು ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಅನೇಕ ಯೋಜನೆಗಳನ್ನು ರೂಪಿಸಿ, ಇವತ್ತು ಅದನ್ನು ಪೂರ್ಣ ಮಾಡಿ ತಮಗಿರತಕ್ಕಂತಹ ಹಕ್ಕಿನ ನೀರಿಗಿಂತ ಹೆಚ್ಚಿಗೆ ನೀರನ್ನು ಬಳಸಿಕೊಳ್ಳುವಂತಹ ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದಾರೆ. ನಾವು ಇಲ್ಲಿ ಕೋರ್ಟುಗಳು, ಕೇಂದ್ರ ಸರ್ಕಾರ ಎಂದು ಹೇಳುತ್ತಿದ್ದೇವೆ. ಈ ವಿಚಾರದಲ್ಲಿ ನಮಗೆ ಸಾಕಷ್ಟು ಹಣವಿಲ್ಲದಿರುವುದು ನಮಗೆ ಇರುವ ಮೂಲ ತೊಂದರೆ, ಇದರಿಂದಾಗಿ ನಮ್ಮ ಹಕ್ಕಿರುವ ನೀರನ್ನು ನಾವು ಬಳಸಿಕೊಳ್ಳದೇ ಇದ್ದೇವೆ. ಇವತ್ತು ಯಾವುದೇ ಕಾರಣಕ್ಕೂ, ಆಂಧ್ರದವರು ಕಾನೂನನ್ನು ಗಾಳಿಗೆ ತೂರಿ ತಮ್ಮ ಪಾಲಿಗಿಂತ ಹೆಚ್ಚಿಗೆ ನೀರನ್ನು ಬಳಸಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಅದೇ ರೀತಿಯಾಗಿ ಕರ್ನಾಟಕದ ಸಮಗ್ರ ಜನತೆಯು ಸರ್ಕಾರ, ಶಾಸಕರು, ಸಂಸತ್ ಸದಸ್ಯರು ಒಟ್ಟಿಗೆ ಸೇರಿ ರೈತರ ಸಂಘಟನೆಯ ಮೂಲಕ ಇದಕ್ಕೆ ಹಣವು ಎಷ್ಟಾದರೂ ಖರ್ಚಾಗಲಿ, ಮೊದಲು

ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದಕ್ಕೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ. ಹಾಗಾದರೆ ಆಂಧ್ರದವರಿಗೆ ಕಾನೂನು ಇಲ್ಲವೇ? ಅವರ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿ ದೊರಕಿದೆಯೇ? ಈ ದೇಶದಲ್ಲಿ ಕರ್ನಾಟಕಕ್ಕೆ, ಆಂಧ್ರಕ್ಕೆ, ತಮಿಳುನಾಡಿಗೆ ಒಂದೊಂದು ಕಾನೂನು ಇದೆಯೇ? ಇವುಗಳೆಲ್ಲದರ ಬಗ್ಗೆ ನಾವು ಯೋಚನೆಯನ್ನು ಮಾಡಿ, ಈ ರಾಜ್ಯದ ಮುಂದಿನ ಪೀಳಿಗೆಯು ನಮಗೆ ಶಾಪ ಹಾಕುವಂತಹ ಕೊನೆಯ ಹಂತದಲ್ಲಿ ನಾವು ಇದ್ದೇವೆ. ಇವತ್ತು ಏನಾದರೂ ಸಿಗಬಹುದು, ಆದರೆ ನೀರು ಸಿಗಲಿಕ್ಕೆ ಸಾಧ್ಯವಿಲ್ಲ. ಕುಡಿಯಲಿಕ್ಕೆ ನೀರು ಸಿಗದೆ ಸಾಯುವಂತಹ ಕಾಲ ಇನ್ನು ಕೆಲವೇ ದಿವಸಗಳಲ್ಲಿ ಬರುವಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮ ಹಕ್ಕಿನ ನೀರನ್ನು ನಾವು ಬಳಸಿಕೊಳ್ಳದೇ ಹೋದರೆ ಮುಂದಿನ ಪೀಳಿಗೆಯು ನಮ್ಮ ಮೇಲೆ ಶಾಪವನ್ನು ಹಾಕದೆ ಬಿಡುವುದಿಲ್ಲ, ಅದಕ್ಕಾಗಿ ನಾನು ನಮ್ಮ ಕರ್ತವ್ಯವನ್ನು ಮಾಡಬೇಕು. ಸರ್ಕಾರವು ನಿರ್ದಿಷ್ಟ ಅವಧಿಯಲ್ಲಿ ಈ ರಾಜ್ಯದ ಕಾವೇರಿ ಮತ್ತು ಕೃಷ್ಣ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತಹ ನಿರ್ದಿಷ್ಟವಾದ ಕಾರ್ಯಕ್ರಮ ಈ ಒಂದು ಬಜೆಟ್‌ನಲ್ಲಿ ಇಲ್ಲ, ಆದರೆ ಅದನ್ನು ಮಾಡುತ್ತೇವೆಂದು ಮಾತ್ರ ಹೇಳಿದ್ದಾರೆ. ಆದರೆ ಇದನ್ನು ನೀವು ಯಾವ ರೀತಿಯಾಗಿ ಮಾಡುತ್ತೀರಿ? ಇದಕ್ಕಾಗಿ ಎಷ್ಟು ಹಣವನ್ನು ಸಂಗ್ರಹ ಮಾಡುತ್ತೀರಿ, ಯಾವಾಗ ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಜಾರಿಗೆ ತರುತ್ತೀರಿ ಎಂಬ ವಿವರಗಳನ್ನು ಕೊಟ್ಟಿರುವುದಿಲ್ಲ, ಅದಕ್ಕಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಈ ನೀರಾವರಿಯ ಬಗ್ಗೆ ಸರ್ಕಾರವು ಸಮರೋಪಾದಿಯಲ್ಲಿ ಕಾರ್ಯಕ್ರಮವನ್ನು ಜಾರಿಗೆ ತರುವಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇನ್ನು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ಹೇಳುವುದಾದರೆ, ಈ ಯೋಜನೆಯು ಹಾವೇರಿ ಜಿಲ್ಲೆಯ 2 ಲಕ್ಷ 34 ಸಾವಿರ ಎಕರೆಗೆ ನೀರನ್ನು ಕೊಡಬಲ್ಲಂತಹ ಒಂದು ಮಹತ್ವದ ಯೋಜನೆಯಾಗಿದೆ. ಈ ಯೋಜನೆಯು 1906ರಲ್ಲಿ ಬ್ರಿಟೀಷರ ಕಾಲದಲ್ಲಿ ರೂಪುಗೊಂಡಂತಹ ಯೋಜನೆಯಾಗಿದೆ. ಈ ಯೋಜನೆಯು ಇಲ್ಲಿಯವರೆವಿಗೂ ಕಾರ್ಯಗತ ಆಗಿರಲಿಲ್ಲ, ಹಿಂದಿನ ಸರ್ಕಾರವು ಕರ್ನಾಟಕ ನೀರಾವರಿ ನಿಗಮವನ್ನು ಸ್ಥಾಪನೆ ಮಾಡಿ ಈ ಯೋಜನೆಗೆ ಚಾಲನೆಯನ್ನು ಕೊಟ್ಟಿದ್ದರು. ಅಲ್ಲಿ ಹೊಸದಾಗಿ ಒಂದು ಅಣೆಕಟ್ಟನ್ನು ಕಟ್ಟಲಿಕ್ಕೆ 92 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಕೆಲಸವನ್ನು ಪ್ರಾರಂಭಿಸಿದರು. ಈಗಿನ ಸರ್ಕಾರ ಪುನಃ ಈ ವರ್ಷ 200 ಕೋಟಿ ರೂಪಾಯಿಗಳನ್ನು ಕರ್ನಾಟಕ ನೀರಾವರಿ ನಿಗಮದಿಂದ ಒದಗಿಸತಕ್ಕಂತಹ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆದರೆ ಇದಕ್ಕೆ ಬೇಕಾಗಿರುವಂತದ್ದು 900 ಕೋಟಿ ರೂಪಾಯಿಗಳು. ಕರ್ನಾಟಕ ನೀರಾವರಿ ನಿಗಮದಿಂದ ಸಾಲವನ್ನು ಹೆಚ್ಚಿಗೆ ಸಂಗ್ರಹ ಮಾಡಿ ಈ ವರ್ಷ ಕನಿಷ್ಟ 500 ಕೋಟಿ ರೂಪಾಯಿಗಳನ್ನಾದರೂ ಒದಗಿಸಿ ಇದಕ್ಕಾಗಿ ಕಾರ್ಯಕ್ರಮವನ್ನು ಹಾಕಿಕೊಂಡು ಈ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ಯೋಜನೆಯು ಅನೇಕ ದಶಕಗಳಿಂದ ನೆನೆಗುದಿಗೆ ಬಿದ್ದಂತಹ ಯೋಜನೆಯಾಗಿದೆ. ಇದು ಕೃಷ್ಣ ಜಲಾನಯನದಲ್ಲಿ ಬರುವಂತಹ ಯೋಜನೆಯಾಗಿದೆ. ಈ ನೀರಿನ ಸಂಪೂರ್ಣವಾದ ಬಳಕೆ ಈ ಒಂದು ಅವಧಿಯೊಳಗೆ ಆಗತಕ್ಕಂತಹ ಕೆಲಸವಾಗಿರುವುದರಿಂದ ಈ ವರ್ಷ 200 ಕೋಟಿ ರೂಪಾಯಿಗಳ ಬದಲು 500

ಕೋಟಿ ರೂಪಾಯಿಗಳನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ಒದಗಿಸಬೇಕೆಂದು ಸರ್ಕಾರವನ್ನು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ತುಂಗಾ ಮೇಲ್ದಂಡೆ ಯೋಜನೆಯ ವಿಚಾರದಲ್ಲಿ 1989ರಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲಿಕ್ಕೆ ಪತ್ರ ಹೋಗಿದೆ. ಮಾನ್ಯ ಉಪಾಧ್ಯಕ್ಷರೆ, ಸರ್ಕಾರವು ಯಾವ ರೀತಿಯಾಗಿ ಆಡಳಿತವನ್ನು ನಡೆಸುತ್ತಿದೆ ಎನ್ನುವುದನ್ನು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ. 1989ನೇ ಇಸವಿಯಿಂದ ಅಲ್ಲಿ ಕಾಲುವೆಗೆ ಬೇಕಾಗಿರತಕ್ಕಂತಹ ಅರಣ್ಯ ಭೂಮಿಯನ್ನು ಇಲ್ಲಿಯವರೆವಿಗೂ ಪಡೆಯಲಿಕ್ಕೆ ಆಗಲಿಲ್ಲ, ಇದು ನಮ್ಮ ದುರ್ದೈವವಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು, ನೀರಾವರಿ ಇಲಾಖೆಯ ಅಧಿಕಾರಿಗಳು ಇವತ್ತು ಏನು ಮಾಡುತ್ತಿದ್ದಾರೆ ಎಂದರೆ ಇವರು ಇಲ್ಲಿಂದ ಒಂದು ಪತ್ರವನ್ನು ಬರೆದರೆ ಅದು 3 ವರ್ಷದ ನಂತರ ಬರುತ್ತದೆ. ಮತ್ತೊಂದು ಪತ್ರವನ್ನು ಬರೆಯಲಿಕ್ಕೆ ಇವರು 6 ವರ್ಷವನ್ನು ತೆಗೆದುಕೊಳ್ಳುತ್ತಾರೆ. ಇದನ್ನು ತಪ್ಪಿಸಿ, ಸಂಬಂಧಪಟ್ಟಂತಹ ಅರಣ್ಯ ಇಲಾಖೆ, ನೀರಾವರಿ ಇಲಾಖೆಯವರು ಒಟ್ಟಾಗಿ ಈ ಒಂದು ಕಾಲುವೆಗೆ ಮತ್ತು ಒತ್ತುವರಿ ನೀರಾವರಿಗೆ ಬೇಕಾಗಿರತಕ್ಕಂತಹ ಜಮೀನನ್ನು ಆದಷ್ಟು ಬೇಗನೆ ಮಂಜೂರು ಮಾಡಿಸಿಕೊಡಲಿಕ್ಕೆ ಪ್ರಯತ್ನವನ್ನು ಮಾಡಿಕೊಡಬೇಕು. ಅರಣ್ಯ ಇಲಾಖೆಯವರು ಕೇಳಿದಂತಹ ಒಂದು ಕೋಟಿ 50 ಲಕ್ಷ ರೂಪಾಯಿಗಳನ್ನು ನೀರಾವರಿ ಇಲಾಖೆಯವರು ಅರಣ್ಯ ಇಲಾಖೆಗೆ ತುಂಬಿದ್ದಾರೆ. ಸಸಿಗಳನ್ನು ಬೆಳೆಸಲಿಕ್ಕೆ, ಅರಣ್ಯ ನಾಶದಿಂದ ಆಗಿರತಕ್ಕಂತಹ ಸಸಿಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ 75 ಲಕ್ಷ ರೂಪಾಯಿಗಳ ಹಣವನ್ನು ಕೇಳಿದ್ದರು. ಅದನ್ನು ನೀರಾವರಿ ಇಲಾಖೆಯವರು ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ. ಎಷ್ಟು ಅರಣ್ಯವು ಮುಳುಗಡೆಯಾಗುತ್ತದೆ, ಅದರ ಎರಡರಷ್ಟು ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಯವರು ಕೇಳಿದ್ದರು, ಅದನ್ನು ಸಹಿತ ಅವರು ಕೊಟ್ಟಿದ್ದಾರೆ. ಇಷ್ಟಾದರೂ ಕೂಡ ಈ ಒಂದು ಯೋಜನೆಗೆ ಅವಶ್ಯಕವಾಗಿರುವಂತಹ ಭೂಮಿಯನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿಸಿಕೊಳ್ಳುವುದಕ್ಕೆ ಈ ಸರ್ಕಾರದಿಂದ ಸಾಧ್ಯವಾಗಲಿಲ್ಲ. ಇದರ ಬಗ್ಗೆ ಮಾನ್ಯ ಖರ್ಗೆಯವರಲ್ಲಿ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ, ಈ ತುಂಗಾ ಮೇಲ್ದಂಡೆ ಯೋಜನೆಗೆ ಅವಶ್ಯಕವಾಗಿರುವಂತಹ ಅರಣ್ಯ ಭೂಮಿಯನ್ನು ಕಾಲುವೆಯನ್ನು ತೆಗೆಯಲಿಕ್ಕೆ, ಒತ್ತುವರಿ ನೀರಿಗೆ ಸ್ವಲ್ಪ ಬೇಕಾಗಿದೆ. ಇಡೀ ರಾಜ್ಯದಲ್ಲಿಯೇ ಅತಿ ಕಡಿಮೆ ಭೂಮಿಯನ್ನು ಮುಳುಗಡೆ ಮಾಡಿ 2 ಲಕ್ಷದ 34 ಸಾವಿರ ಎಕರೆಗೆ ನೀರಾವರಿಯಾಗುವಂತಹ ಇದೊಂದು ಅತ್ಯಂತ ಮಹತ್ವದ ಯೋಜನೆಗೆ 1906ರಲ್ಲಿ ಬ್ರಿಟೀಷ್ ಇಂಜಿನಿಯರ್‌ರವರು 'ವೈಟ್' ಎಂದು ಬರೆದಿದ್ದಾನೆ. This is one of the economical flow irrigation projects in India. ಈ ಅರಿವು ನಮ್ಮ ತಜ್ಞರಿಗೆ, ನಮಗೆ ಈ ಸರ್ಕಾರಕ್ಕೆ ಇದ್ದಿದ್ದರೆ ಬಹುತೇಕ ಇಲ್ಲಿಯವರೆವಿಗೆ ಇದನ್ನು ಕೈಬಿಡುತ್ತಿರಲಿಲ್ಲ. One of the economical flow irrigation projects in India. ಅತ್ಯಲ್ಪ ಖರ್ಚಿನಿಂದ ಅತಿ ಹೆಚ್ಚಿನ ನೀರು ಪಡೆಯುವ ಸಲುವಾಗಿ ಮಾಡಿದ ಹನಿ ನೀರಾವರಿ ಯೋಜನೆಯು ಇಲ್ಲಿಯವರೆವಿಗೂ ಆಗಲಿಲ್ಲ. ಈಗಲಾದರೂ ಸಹಿತ ನೀರಾವರಿ ಸಲುವಾಗಿ, ಕರ್ನಾಟಕ ನೀರಾವರಿ ನಿಗಮದ ಮೂಲಕ ಸಾಲವನ್ನು ಎತ್ತುವುದಕ್ಕೆ ಕನಿಷ್ಠ 500 ಕೋಟಿ ರೂಪಾಯಿಗಳನ್ನು ಒದಗಿಸಿ ಬೇಗ ಇದನ್ನು ಪೂರ್ಣಗೊಳಿಸಬೇಕೆಂಬ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಬನ್ನಿಕೋಡ್‌ರವರೆ, ಒಂದು ನಿಮಿಷ ಇರಿ. ಈಗಲಾದರೂ ಸರ್ಕಾರ 200 ಕೋಟಿ ರೂಪಾಯಿಗಳನ್ನು ಅಲ್ಲಿ ತೊಡಗಿಸಿ ಕೆಲಸವನ್ನು ತ್ವರಿತಗತಿಯಲ್ಲಿ ಪ್ರಾರಂಭ ಮಾಡಿದ್ದು ತಮಗೆ ಗೊತ್ತಿದೆ. ಆದರೆ ಅರಣ್ಯ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸ ಕೇಂದ್ರ ಸರ್ಕಾರದಿಂದ ಇನ್ನೂ ಆಗಿಲ್ಲ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಆ ಕೆಲಸವನ್ನು ತತ್‌ಕ್ಷಣ ಮಾಡಬೇಕೆಂದು ಈ ಸಂದರ್ಭದಲ್ಲಿ ಒಂದು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಹೇಳಿದೆ, ಒಂದೂವರೆ ಕೋಟಿ ರೂಪಾಯಿಗಳ ಹಣವನ್ನು ಕೊಡಬೇಕೆಂದು ಅರಣ್ಯ ಇಲಾಖೆಯವರು ಕೇಳಿದ್ದನ್ನು ನೀರಾವರಿ ಇಲಾಖೆಯವರು ತುಂಬಿದ್ದಾರೆ. ಸಸಿ ಬೆಳಸಲಿಕ್ಕೆ 75 ಲಕ್ಷ ರೂಪಾಯಿಗಳನ್ನು ಅರಣ್ಯ ಇಲಾಖೆ ಕೇಳಿದ್ದನ್ನು ಸಹ ನೀರಾವರಿ ಇಲಾಖೆ ಕೊಟ್ಟಿದೆ. ಅವರ ಭೂಮಿ ಎಷ್ಟು ಮುಳುಗಡೆಯಾಗುತ್ತದೆ ಅದರ ಎರಡು ಪಟ್ಟು ಭೂಮಿಯನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಯವರು ಕೇಳಿದ್ದರು ಅದನ್ನು ಕೊಟ್ಟು ಆಗಿದೆ. ಇವತ್ತು ಏಕೆ ಬಿಡುಗಡೆಯಾಗಿಲ್ಲ ಭೂಮಿ? 1.7 ಕಿಲೋಮೀಟರ್ ಅಣೆಕಟ್ಟಿನ ಅರಣ್ಯ ಭೂಮಿ ಪ್ರಾರಂಭದಲ್ಲಿ ಇರುವುದರಿಂದ ಅವೊಂದು ಕೆಲಸ ಆಗಿಲ್ಲ. 10 ಕಿಲೋಮೀಟರ್‌ನ ಕೆಲಸ ಈಗಾಗಲೇ ಆಗಿದೆ. 11 ರಿಂದ 39ರವರೆಗೆ ಟೆಂಡರ್ ಕರೆದಿದ್ದಾರೆ. 40 ರಿಂದ 80ರವರೆಗೆ ಇನ್ನೊಂದು ವಾರದಲ್ಲಿ ಟೆಂಡರ್ ಕರೆಯುತ್ತಿದ್ದಾರೆ. ಸರ್ಕಾರ ಕೆಲಸ ಮಾಡುತ್ತಿದೆ, ಇವತ್ತು ಅಧಿಕಾರಿಗಳನ್ನು ಎಚ್ಚರ ಮಾಡಬೇಕಾಗಿದೆ. ಅದಕ್ಕಾಗಿ ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಿ ಅರಣ್ಯಭೂಮಿಯನ್ನು ಬಿಡುಗಡೆ ಮಾಡಿಸಿಕೊಂಡು ಬರಲಿಕ್ಕೆ ಕೇಂದ್ರ ಸರ್ಕಾರದ ಜೊತೆ ಸಂಪರ್ಕವಿಟ್ಟುಕೊಂಡು ಅದನ್ನು ಮಾಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಾವೇನು ಆದೇಶ ಕೊಟ್ಟಿರಿ ಅದರ ಬಗ್ಗೆ ಸರ್ಕಾರದ ಕಡೆಯಿಂದ ಏನೂ ಉತ್ತರವಿಲ್ಲ. ನಾನು ಹೇಳಿದೆ, ತಾವು ಹೇಳಿದಿರಿ, ಸರ್ಕಾರ ಆ ಬಗ್ಗೆ ಏನಾದರೂ ಯೋಚನೆಯನ್ನು ಮಾಡಿ ಬೇಗ ಕಾರ್ಯ ಮಾಡುತ್ತದೆ ಎನ್ನುವುದು ತಮಗೆ ಬಿಟ್ಟಿದ್ದು.

ಕೊನೆಯದಾಗಿ, ಈ ವಿದ್ಯುತ್ತಿನ ವಿಚಾರದಲ್ಲಿ ಹೇಳುವುದಾದರೆ, ನನಗೆ ಗೊತ್ತಿದೆ, ವಿದ್ಯುತ್ತಿನ ಉತ್ಪಾದನೆ ಕಡಿಮೆಯಿದೆ, ಬಳಕೆ ಸಾಕಷ್ಟಿದೆ. ಇವತ್ತು ಇಂಧನ ಇಲಾಖೆಯವರು ವಿದ್ಯುತ್ತನ್ನು ಮೂರು ತಾಸು, ಆರು ತಾಸು ಕೊಡಲಿ ಅಥವಾ ಎಷ್ಟೇ ತಾಸು ಕೊಡಲಿ, ಹಾಗೆ ಕೊಟ್ಟಂತಹ ವಿದ್ಯುತ್ ವೊಲ್ಟೇಜ್ ಇಲ್ಲದೆ ಇವತ್ತು ಶಾಶ್ವತವಾಗಿ ವಿದ್ಯುತ್ ಇಲ್ಲದಂತಾಗಿದೆ. ಅದಕ್ಕೆ ಕಾರಣ ವಿದ್ಯುತ್ ವಿತರಣಾ ವ್ಯವಸ್ಥೆ ಸರಿಯಾಗಿಲ್ಲ. ಸಬ್ ಸ್ಟೇಶನ್‌ಗಳಲ್ಲಿ, ಸ್ಟೇಶನ್‌ಗಳಲ್ಲಿ ಮತ್ತು ಟಿ.ಸಿ.ಗಳಲ್ಲಿ ಎಲ್ಲಾ ಕಡೆಗೆ ಒವರ್‌ಲೋಡ್ ಇರುತ್ತದೆ ಮಾನ್ಯ ಮುಖ್ಯಮಂತ್ರಿಗಳು ಅದಕ್ಕಾಗಿ ಹಣವನ್ನು ಒದಗಿಸುತ್ತೇನೆಂದು ಹೇಳಿದ್ದಾರೆ. ಇದು ಆದಷ್ಟು ಬೇಗ ಆಗಬೇಕು. ಆಯಾಯ ಗ್ರಾಮಗಳಲ್ಲಿ ಟಿ.ಸಿ. ಏನು ಒವರ್ ಲೋಡ್ ಆಗಿವೆ, ನಾನು ಮೊನ್ನೆ ತಾನೇ ಹೇಳಿದ್ದೇನೆ, ತಮಗೆಲ್ಲ ಅದು ಗೊತ್ತಿರಬೇಕು. ಮಾನ್ಯ ಶಿವಣ್ಣನವರಿಗೆ ಹೇಳಿದ್ದೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಹೇಳಿದ್ದಕ್ಕೆ ನನ್ನ ತಾಲ್ಲೂಕಿನಲ್ಲಿ ಒವಲ್ ಲೋಡ್ ಆಗಿ ಕೊಡತಕ್ಕ ವಿದ್ಯುತ್ ಸಹಿತ ಮೇಲಿಂದ ಮೇಲೆ ವೊಲ್ಟೇಜ್ ಇಲ್ಲದೆ ಹೋಗುತ್ತಿದೆ ಎಂದಿದ್ದಕ್ಕೆ 50 ಟಿ.ಸಿ.ಗಳನ್ನು ಎಲ್ಲಿ ಅವಶ್ಯವಿದೆ ಎಲ್ಲಿ ಒವರ್‌ಲೋಡ್ ಇದೆ

ಅಲ್ಲಿ ಮಾಡಲಿಕ್ಕೆ ಆದೇಶ ಕೊಟ್ಟಿದ್ದಾರೆ. ಆ ರೀತಿ ಅಧಿಕಾರಿಗಳು ಸರ್ವೆ ಮಾಡಿ ಸ್ವಲ್ಪಮಟ್ಟಿನ ಬದಲಾವಣೆಯಾಗಿದೆ. ಹೆಚ್ಚಿನ ವೋಲ್ಟೇಜ್ ಕೊಡುವ ರೀತಿಯಲ್ಲಿ ಆಗಿದೆ. ಆ ರೀತಿ ಇಡೀ ರಾಜ್ಯದಲ್ಲಿ ಇಂತಹ ಒಂದು ವ್ಯವಸ್ಥೆ ಬಂದರೆ ವಿದ್ಯುತ್ತಿನ ಕಣ್ಣುಮುಚ್ಚಾಲೆ ವ್ಯವಸ್ಥೆ ಹೋಗಿ ಸ್ವಲ್ಪಮಟ್ಟಿನ ಸುಧಾರಣೆಯಾಗುತ್ತದೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರೈತರ ಪಂಪ್‌ಸೆಟ್‌ಗಳಿಗೆ ಸ್ವಸಾಮರ್ಥ್ಯದ ಸೆಲ್ಫ್ ಸಿಸ್ಟಂ ತಂದರು. ಒಬ್ಬ ರೈತ ತನ್ನ ಪಂಪ್ ಸೆಟ್ಟಿಗೆ ವಿದ್ಯುತ್ ಪಡೆಯಬೇಕಾದರೆ ಒಂದು ಎಸ್ಟಿಮೇಟ್ ಮಾಡುತ್ತಾರೆ. ಎಷ್ಟು ಕಂಬ ಬೇಕು, ಎಷ್ಟು ತಂತಿ ಬೇಕು, ಎಷ್ಟು ಖರ್ಚೆಂದು ಎಸ್ಟಿಮೇಟ್ ಮಾಡುತ್ತಾರೆ. ರೈತನಿಂದಲೇ ಪೂರ್ಣ ಹಣ ತುಂಬಿಸಿಕೊಂಡಿದ್ದಾರೆ. ಇದುವರೆಗೆ ಆ ಕೆಲಸವನ್ನು ಕೆಇಬಿಯವರು ಮಾಡುತ್ತಿದ್ದರು. ಡಿಪಾಸಿಟ್ ಎಂದು 500-600 ರೂಪಾಯಿಗಳನ್ನು ತುಂಬಿಸಿಕೊಂಡು ಆ ಖರ್ಚನ್ನೆಲ್ಲಾ ಕೆಇಬಿಯವರು ಮಾಡುತ್ತಿದ್ದರು. ಈಗ 5, 10, 20, 50 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿ ಅಷ್ಟು ಹಣವನ್ನು ರೈತನಿಂದಲೇ ತುಂಬಿಸಿಕೊಂಡಿದ್ದಾರೆ. 1995ರಿಂದ ಇಲ್ಲಿಯವರೆಗೆ ಒಂದು ಕಂಬವನ್ನೂ ನೆಟ್ಟಿಲ್ಲ, ತಂತಿಯನ್ನೂ ಎಳೆದಿಲ್ಲ. ರೈತರಿಗೆ ನೀವೇ ಮಾಡಿಕೊಳ್ಳಿ ಅಂದರೆ ಅವರು ಕಂಬ, ತಂತಿ ಹಾಕಿ ಅದನ್ನು ಸರಿಯಾಗಿ ಮಾಡಿಲ್ಲ. ಇವತ್ತು ಅವುಗಳೆಲ್ಲ ತಂತಿ ಕೆಳಹಂತದಲ್ಲಿದೆ, ಅಲ್ಲಿ ವಿದ್ಯುತ್ ಹರಿಸಿದ್ದಾರೆ, ಪ್ರಾಣಕ್ಕೆ ಅಪಾಯವಾಗತಕ್ಕದ್ದು ಇದೆ. ಕೆಇಬಿ ಅಧಿಕಾರಿಗಳಿಂದ ರೈತರಿಗೆ ಮೇಲಿಂದ ಮೇಲೆ ಕಿರುಕುಳ ಬೇರೆ ಇದೆ. ಅದಕ್ಕಾಗಿ ರೈತರ ಪಂಪ್‌ಸೆಟ್‌ಗಳಿಗಾಗಿ ವಿದ್ಯುತ್ತನ್ನು ಕೊಡತಕ್ಕ ತೀವ್ರ ವ್ಯವಸ್ಥೆಯಾಗಬೇಕು ಇಲ್ಲದಿದ್ದರೆ ಕೆಇಬಿ ಅಧಿಕಾರಿಗಳಿಂದ ಆಗತಕ್ಕ ಶೋಷಣೆಯನ್ನು ತಪ್ಪಿಸಬೇಕು. ತಮಗೆ ಬೇಕಾದರೆ ಬಿಡುತ್ತಾರೆ ಇಲ್ಲದಿದ್ದರೆ ಕಿತ್ತುಹಾಕುತ್ತಾರೆ. ವಿದ್ಯುತ್ ಸಂಪರ್ಕವನ್ನು ಕಟ್ ಮಾಡುತ್ತಾರೆ. ಇವತ್ತು ಅನ್ನವನ್ನು ಕೊಡತಕ್ಕ ರೈತನಿಗೆ ಏನು ದುರ್ವ್ಯವಸ್ಥೆ ಬಂದಿದೆ ಅದನ್ನು ಕಣ್ಣಾರೆ ಕಂಡು ಕಣ್ಣುಮುಚ್ಚಿ ಕೂಡುವಂತಹ ಕೆಲಸವಾಗಬಾರದು. ರೈತರ ಪಂಪ್‌ಸೆಟ್‌ಗಳಿಗೆ ಆದ್ಯತೆಯ ಮೇರೆಗೆ ಆದಷ್ಟುಬೇಗ ಅವರು ಮಾಡಿಕೊಂಡಿರುವ ಪರ್ಸೆಂಟೇಜ್ ಪ್ರಕಾರ ಕನಿಷ್ಟ ಐದಾರು, ನೂರು ಪಂಪ್‌ಸೆಟ್‌ಗಳಿಗೆ ಅಥವಾ ನಾಲ್ಕಾರು ಐದಾರು ವರ್ಷಗಳಿಂದ ವಿದ್ಯುತ್ ಸಂಪರ್ಕಕ್ಕೆ ಕಾಯುತ್ತಿರುವವರಿಗೆ ವಿದ್ಯುತನ್ನು ಕೊಡತಕ್ಕ ವ್ಯವಸ್ಥೆಯಾಗಬೇಕೆನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಚಾರದಲ್ಲಿ ತಮಗೆಲ್ಲರಿಗೂ ಗೊತ್ತಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು, ಆ ರಸ್ತೆಗಳು ಈ ಬಗ್ಗೆ ಮೊನ್ನೆ ನಾನು ಮಾನ್ಯ ಸಾರಿಗೆ ಸಚಿವರಿಗೆ ಹೇಳಿದ್ದೇನೆ. ಗ್ರಾಮೀಣ ತಾಲ್ಲೂಕುಗಳಿಗೆ ಬಸ್ಸುಗಳನ್ನು ಕೊಡುತ್ತೇವೆಂದು ನಮ್ಮ ತಾಲ್ಲೂಕಿಗೆ ಹತ್ತು ಬಸ್ಸುಗಳನ್ನು ಮಂಜೂರು ಮಾಡಿಕೊಟ್ಟರು. ನಂತರ ಹತ್ತು ಬಸ್ಸುಗಳನ್ನು ಕೊಡುವುದಕ್ಕೆ ಆಗುವುದಿಲ್ಲ, ಆರು ಬಸ್ಸುಗಳನ್ನು ಕೊಡುತ್ತೇವೆಂದು ಹೇಳಿದರು. ಆ ಬಸ್ಸುಗಳು ಬಂದು ನಿಂತಿವೆ. ಅವುಗಳನ್ನು ಏತಕ್ಕೆ ಓಡಿಸುತ್ತಿಲ್ಲವೆಂದು ಕೇಳಿದರೆ ಡ್ರೈವರ್, ಕಂಡಕ್ಟರ್ ಇಲ್ಲವೆಂದು ಹೇಳುತ್ತಾರೆ. ಡ್ರೈವರ್ ಕಂಡಕ್ಟರ್ ಏಕಿಲ್ಲವೆಂದರೆ ಈ ರಿಕ್ರೂಟ್‌ಮೆಂಟ್ ಮಾಡುವ ಹಾಗೆ ಇಲ್ಲಾರಿ ಎಂದು ಹೇಳುತ್ತಾರೆ. ಈ ರೀತಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ಕೊಟ್ಟು ಹೊಸ ಬಸ್ಸುಗಳನ್ನು ಖರೀದಿ ಮಾಡಿರುವಾಗ, ಗ್ರಾಮೀಣಾ ಕೃಪಾಂಕದಲ್ಲಿ ಮತ್ತೇನಾದರೂ ತೊಂದರೆಯಾಗಿದ್ದರೆ, ಹಿಂದೆ

ಹಂಗಾಮಿಯಾಗಿ ಕಂಡಕ್ಟರ್-ಡ್ರೈವರ್ ತೆಗೆದುಕೊಂಡಿದ್ದರು ಆ ರೀತಿ ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನಾದರೂ ಮಾಡಿ ತಾತ್ಕಾಲಿಕವಾಗಿ ಡ್ರೈವರ್-ಕಂಡಕ್ಟರ್ ತೆಗೆದುಕೊಂಡು ಗ್ರಾಮೀಣ ಜನರ ಸಾರಿಗೆಯ ಅವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಉಪಾಧ್ಯಕ್ಷರೆ, 2000-2001ನೇ ಇಸವಿಯ ಆಯವ್ಯಯ ಪಟ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರಾಸರಿ ವಾರ್ಷಿಕ ಪ್ರಮಾಣ, ಶೇಕಡ ಆರ್ಥಿಕ ಬೆಳವಣಿಗೆ 5.8 ಎಂದು ಕೊಟ್ಟಿದ್ದಾರೆ. ಪ್ರಾಯಶಃ ಐಟಿ ಡೆವಲಪ್‌ಮೆಂಟ್ ಆಗುತ್ತಿರಲಿಲ್ಲವೆಂದರೆ ಅದು 5.8 ಆಗುತ್ತಿರಲಿಲ್ಲವೆಂದು ನನ್ನ ಭಾವನೆ. ಈವೊಂದು ಐ.ಟಿ. ಡೆವಲಪ್‌ಮೆಂಟ್‌ನಿಂದಾಗಿ ಆರ್ಥಿಕ ಬೆಳವಣಿಗೆಯಲ್ಲಿ 5.8 ತೋರಿಸಿದ್ದಾರೆ ಇಲ್ಲದಿದ್ದರೆ ಅದು ಕೆಳಗೆ ಹೋಗುತ್ತಿತ್ತು. ಅದರಲ್ಲಿ ಮುಖ್ಯವಾಗಿ ಎಲ್ಲಿಂದ ಪ್ರಾರಂಭ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇನೆ. ಏಕೆಂದರೆ ಇಲ್ಲಿ 24ನೇ ಪ್ಯಾರಾದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಮಾನ್ಯರೆ, ಕಾಂಗ್ರೆಸ್ ಪಕ್ಷವು ಮಹಿಳೆಯರನ್ನು ಸಶಕ್ತಗೊಳಿಸುವುದರಲ್ಲಿ ಸದಾ ನಂಬಿಕೆಯಿಟ್ಟುಕೊಂಡು ಬಂದಿದೆ. ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಮೂರನೆಯ ಒಂದು ಭಾಗದಷ್ಟು ಮೀಸಲಾತಿಯನ್ನು ಜಾರಿಗೊಳಿಸಿದ್ದು ಕಾಂಗ್ರೆಸ್ ಪಕ್ಷವೇ ಎನ್ನುವುದನ್ನು ಇಲ್ಲಿ ನಾನು ನಿಮಗೆ ನೆನಪು ಮಾಡಿ ಕೊಡುತ್ತೇನೆಂದು ಹೇಳಿದ್ದಾರೆ. ಆದರೆ ಇವತ್ತು ನಡೆದ ಘಟನೆಯ ಬಗ್ಗೆ ಮಾನ್ಯ ಗೃಹಸಚಿವರು ಇಲ್ಲಿದ್ದಾರೆ, ಮಾನ್ಯ ಮಂತ್ರಿಗಳು ನಾವು ಹೇಳುವುದನ್ನು ಕೇಳಬೇಕು. ಒಬ್ಬರೂ ನನ್ನ ಭಾಷಣವನ್ನು ಕೇಳುತ್ತಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಇಲ್ಲಿದ್ದಾರೆ. ಪಂಚಾಯತ್ ರಾಜ್ ಸಚಿವರು ಇಲ್ಲಿ ಇದ್ದರೆ ಚೆನ್ನಾಗಿ ಇರುತ್ತಿತ್ತು. ಮಾನ್ಯ ಗೃಹಸಚಿವರಾದರೂ ನಾನು ಏನು ಹೇಳುತ್ತೇನೆ ಎನ್ನುವುದನ್ನು ಕೇಳಬೇಕು. ನಮ್ಮ ಉಡುಪಿ ತಾಲ್ಲೂಕಿನಲ್ಲಿ ಒಂದು ಗ್ರಾಮಪಂಚಾಯಿತಿ ಇದೆ. ಪಂಚಾಯಿತಿ ಮೀಸಲಾತಿ ಪ್ರಕಾರ ಪರಿಶಿಷ್ಟ ಪಂಗಡದ ಮಹಿಳೆಗೆ ಬಂದಿದೆ. ಅಲ್ಲಿ ಮೆಜಾರಿಟಿ ಆ ಗುಂಪಿಗೆ ಇಲ್ಲ. ಆದರೆ ಈ ಮೀಸಲಾತಿಯ ಪ್ರಕಾರ ಒಬ್ಬರೇ ಹೆಂಗಸರು ಇದ್ದುದರಿಂದ ಅವರು ಅವಿರೋಧವಾಗಿ ಆಯ್ಕೆಯಾಗಲು ಕಾನೂನು ಪ್ರಕಾರ ಅವಕಾಶ ಇದೆ. ಆ ಲೇಡಿ 23ನೇ ತಾರೀಖಿಗೆ ನಾಮಿನೇಷನ್ ಅನ್ನು ಹಾಕಿದ್ದಾರೆ. ಅವರ ಮೇಲೆ ಒತ್ತಡವನ್ನು ತಂದಾಗ ಪೋಲೀಸ್ ಪ್ರೊಟೆಕ್ಷನ್ ಕೇಳಿದ್ದಾರೆ, ಎಸ್‌ಪಿಯವರು ಅವರಿಗೆ ಪೋಲೀಸ್ ಪ್ರೊಟೆಕ್ಷನ್ ಅನ್ನು ಕೊಟ್ಟಿದ್ದಾರೆ. ನಂತರ ಅವರ ಬಂಧುಗಳೆಲ್ಲರನ್ನು ಹಿಡಿದುಕೊಂಡು ಬಂದು ಅವರ ಮೇಲೆ ಒತ್ತಡವನ್ನು ಹೇರಿ, ಪುನಃ ಅವರು ನಾಮಿನೇಷನ್ ಅನ್ನು ಇವತ್ತು ಪಡೆಯುವಂತಹ ಪರಿಸ್ಥಿತಿ ಉಂಟಾಗಿದೆ. ನಮ್ಮವರು ಯಾರೂ ಆ ಕೆಲಸ ಮಾಡಲಿಲ್ಲ. ಇದನ್ನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೇ ಮಾಡಿರುವಂಥದ್ದು. ಹಾಗಾದರೆ ಈ ವ್ಯವಸ್ಥೆಯಲ್ಲಿ ಇವರಿಗೆ ಎಷ್ಟು ನಂಬಿಕೆಯಿದೆ ಎಂದು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಇಲ್ಲಿಯೇ ಇದ್ದಾರೆ. ಇದರ ಬಗ್ಗೆ ನನ್ನ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. 23ನೇ ತಾರೀಖಿಗೆ ನಾಮಪತ್ರವನ್ನು ಸಲ್ಲಿಸಿದ ಮೇಲೆ ವಿತ್‌ಡ್ರಾವಲ್ ಟೈಮ್ ಮುಗಿದ ಮೇಲೆ ಸ್ವತಃ ಅಭ್ಯರ್ಥಿಯೇ ನಾಮಪತ್ರವನ್ನು ವಾಪಸ್ಸು ಪಡೆಯಲಿಕ್ಕೆ ಅಧಿಕಾರವಿಲ್ಲ. ಆದರೆ ಇವತ್ತು ರಿಟರ್ನಿಂಗ್ ಆಫೀಸರ್‌ಗೆ ಉಳಿದಿದ್ದು ಕೇವಲ

ಅನೌನ್ಸ್‌ಮೆಂಟ್ ಮಾಡುವಂಥ ಕೆಲಸ, ಇಂತಹ ಅಭ್ಯರ್ಥಿ ಚುನಾವಣೆಯಲ್ಲಿ ಗೆದ್ದಿದ್ದಾರೆಂದು ಅನೌನ್ಸ್ ಮಾಡುವ ಕೆಲಸ. ಇಂಥಿಂಥ ಪಂಚಾಯಿತಿಗಳಲ್ಲಿ ಇಂಥಿಂಥ ಪಕ್ಷಗಳು ಮೆಜಾರಿಟಿಯಲ್ಲಿ ಬಂದಿವೆ ಎಂದು ನೀವೇ ಹೇಳಿಕೊಂಡದ್ದು.

ಶ್ರೀ ಯು.ಆರ್. ಸಭಾಪತಿ : ಎಲ್ಲರೂ ಪಕ್ಷಾತೀತವಾಗಿ ಸ್ಪರ್ಧಿಸಿದ್ದಾರೆ. ಎಲ್ಲೋ ಅಲ್ಲೊಂದು ಇಲ್ಲೊಂದು ಇಂತಹ ಘಟನೆಗಳು ಆಗಿವೆ. ಅದು ಆ ಪಕ್ಷದಲ್ಲಿಯೂ ಆಗಿರಬಹುದು, ಈ ಪಕ್ಷದಲ್ಲಿಯೂ ಆಗಿರಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅವರು ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ನಾನು ಉದಾಹರಣೆಯನ್ನು ಕೊಡುತ್ತಿದ್ದೇನೆ. ಬೇರೇನೂ ಇಲ್ಲ. ಅಭ್ಯರ್ಥಿಯ ಮೇಲೆ ಒತ್ತಡವನ್ನು ಹೇರಿ ಅವರು ನಾಮಿನೇಷನ್ ವಾಪಸ್ಸು ಪಡೆಯುವಂತಹ ಕೆಲಸ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಅಲ್ಲಿನ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆಯಬಹುದು. ನಾನೇನು ಹೇಳುತ್ತೇನೆಂದರೆ, ಒಂದು ಸಾರಿ ಅರ್ಜಿ ಹಾಕಿದಮೇಲೆ ವಾಪಸ್ಸು ಪಡೆಯುವ ಸಮಯದಲ್ಲಿ ವಾಪಸ್ಸು ಪಡೆಯದಿದ್ದಾಗ ನಂತರ ವಾಪಸ್ಸು ಪಡೆಯುತ್ತೇನೆಂದು ಹೇಳಲಿಕ್ಕೆ ಯಾರಿಗೂ ಅಧಿಕಾರ ಇಲ್ಲ. ಅವರು ನಾಮಪತ್ರವನ್ನು 29ನೇ ತಾರೀಖು ವಾಪಸ್ಸು ಪಡೆದಿದ್ದಾರೆ. ಆ ರೀತಿ ಮಾಡಲು ಯಾರಿಗೂ ಅಧಿಕಾರವಿಲ್ಲ. ನಾಮ ಪತ್ರವನ್ನು ವಾಪಸ್ಸು ಪಡೆದಿದ್ದಾರೆಂದು ಹೇಳಲಿಕ್ಕೆ ಸಹ ಯಾರಿಗೂ ಅಧಿಕಾರವಿಲ್ಲ. ಅವರಿಗೆ ಅಧಿಕಾರ ಇರುವುದು 'ಕೇವಲ ಒಂದೇ ಒಂದು ನಾಮಪತ್ರ ಇದೆ, ಆ ಅಭ್ಯರ್ಥಿ ಅವಿರೋಧವಾಗಿ ಗೆದ್ದಿದ್ದಾರೆಂದು' ಘೋಷಣೆ ಮಾಡಬೇಕು. ಅದರ ಬಗ್ಗೆ ವಿಚಾರವನ್ನು ತಾವು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು.

ಇದೇ ರೀತಿಯಾಗಿ ಇನ್ನೊಂದು ಪ್ರಕರಣದಲ್ಲಿ ಉಡುಪಿ ತಾಲ್ಲೂಕಿನಲ್ಲಿ ಎಡತಾಡಿ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಗೆ ರಿಸರ್ವೇಶನ್ ಆದಂಥಾದ್ದು, ಅವರಿಗೆ ನಾಮಪತ್ರ ಹಾಕುವುದಕ್ಕೆ ಬಿಡದೆ ಅವಳ ಹೆಸರಿನಲ್ಲಿ ನಾಮಪತ್ರವನ್ನು ಹಾಕಿಲ್ಲ. ಆದ್ದರಿಂದ ಚುನಾವಣೆಯನ್ನು ಮುಂದೆ ಹಾಕಿದರು. ಇಂತಹ ಸಂದರ್ಭಗಳು ಒದಗಿಬರಬಾರದು. ಏಕೆಂದರೆ ತಾವು ಇದರಲ್ಲಿ ಏನು ಹೇಳಿದ್ದೀರಿ ಅದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಂತಹ ಪರಿಸ್ಥಿತಿ ನನಗೆ ಗೊತ್ತಿರುವುದು ಎರಡು ಮಾತ್ರ. ಇನ್ನೂ ಎಷ್ಟು ಕಡೆ ಹೀಗೆ ಆಗಿದೆಯೆಂದು ನನಗೆ ಮಾಹಿತಿ ಇಲ್ಲ. ಒಂದು ವೇಳೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ನಾಮಪತ್ರ ಹಾಕುವುದಕ್ಕೆ ಬಿಡದೇ ಇದ್ದರೆ ಈ ಮೀಸಲಾತಿ ವ್ಯವಸ್ಥೆಗೇ ಅರ್ಥ ಬರುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಮಾನ್ಯ ಗೃಹಸಚಿವರು ತಮ್ಮ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರಿಂದ ರಿಪೋರ್ಟನ್ನು ತರಿಸಿಕೊಳ್ಳಬಹುದು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸಚಿವರು ಸಹ ಅವರ ಇಲಾಖೆಯ ಮುಖಾಂತರ ಮಾಹಿತಿ ಪಡೆಯಬಹುದು. ಇಂತಹ ವ್ಯವಸ್ಥೆ ಶುರುವಾದರೆ ಮುಂದಿನ ದಿನಗಳಲ್ಲಿ ಯಾರಿಗೂ ನಾಮಪತ್ರವನ್ನು ಸಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನೇ ನಾನು ಮೊನ್ನೆ ದಿವಸ

ಹೇಳಿದಂಥಾದ್ದು. ಚುನಾವಣಾ ಆಯೋಗದಿಂದ ವಾಪಸ್ಸು ಪಡೆದು ಡಿ.ಸಿ. ಅವರಿಗೆ ಅಧಿಕಾರ ಕೊಡುವುದಕ್ಕೆ ಈ ಗ್ರಾಮಪಂಚಾಯಿತಿ ಆಕ್ಟ್‌ನಲ್ಲಿ ತಿದ್ದುಪಡಿ ತರುವುದಕ್ಕೆ ಹೊರಟಿದ್ದಾರೆ. ಆಯಾ ಪಕ್ಷದವರಿಗೇ ಕೊಟ್ಟರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಅವರಿಗೆ ಯಾರು ಬೇಕು ಅವರನ್ನು ನಾಮಕರಣ ಮಾಡಿಕೊಂಡುಬಿಟ್ಟರೆ ನಾವು ಚುನಾವಣೆಗೆ ನಿಲ್ಲುವುದು ಬೇಕಾಗುವುದಿಲ್ಲ, ನಾಮಿನೇಷನ್ ಮಾಡಿಬಿಟ್ಟರೆ ಸಾಕು. ಇದನ್ನು ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಾ ಮುಂದೆ ಬೇರೆ ವಿಷಯಕ್ಕೆ ಬರುತ್ತೇನೆ.

ಇನ್ನು ಮೀನುಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಹಿಂದಿನ ನಮ್ಮ ಸರ್ಕಾರದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಇಲ್ಲಿ ಆಯವ್ಯಯ ಮಂಡಿಸುವಾಗ ಅಂದು ಮೀನುಗಾರರು ಉಪಯೋಗ ಮಾಡುವಂಥ ಡೀಸೆಲ್‌ಗೆ ಸಂಪೂರ್ಣವಾಗಿ ಸೇಲ್ಸ್ ಟ್ಯಾಕ್ಸ್ ಎಕ್ಸೆಂಪ್‌ಷನ್ ಕೊಡುತ್ತೇವೆ ಎಂದು ಹೇಳಿದ್ದರು. ನಂತರ ಅಧಿಕಾರಿಗಳಿಂದಾಗಿ ಅದು 30 ಸಾವಿರ ಕಿಲೋಲೀಟರ್‌ಗೆ ಎಂದು ಆಯಿತು. ಮುಂದೆ ಸಪ್ಲಿಮೆಂಟರಿ ಬಜೆಟ್ ಮಾಡುವಾಗ ಎಷ್ಟು ಜಾಸ್ತಿ ಬೇಕೋ ಅಷ್ಟು ಮಾಡುವುದಕ್ಕೆ ಅವಕಾಶ ಇದೆ. ಈಗ ಐದು ಸಾವಿರ ಕಿಲೋಲೀಟರ್ ಜಾಸ್ತಿ ಮಾಡಿದ್ದಾರೆ. ಅದಕ್ಕೆ ಅವಕಾಶ ಇದೆ. ಆದರೆ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ಮೀನುಗಾರರಿಗೆ ಕೊಟ್ಟಂಥ ಸೇಲ್ಸ್ ಟ್ಯಾಕ್ಸ್ ಎಕ್ಸೆಂಪ್‌ಶನ್‌ನನ್ನು ಸಂಪೂರ್ಣ ರದ್ಧತಿ ಮಾಡಿ ಮೀನುಗಾರಿಕೆ ಇಲಾಖೆಯ ಮುಖಾಂತರ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಮೀನುಗಾರರು ಕೇಳಿದ್ದನ್ನೇ ಅವತ್ತು ನಾವು ಕೊಟ್ಟಿದ್ದು. ಮೀನುಗಾರಿಕಾ ಇಲಾಖೆಯ ಮುಖಾಂತರ ಕೊಟ್ಟರೆ ನಮಗೆ ಕಷ್ಟವಾಗುತ್ತದೆ, ಸೇಲ್ ಪಾಯಿಂಟ್‌ನಲ್ಲಿ ಕೊಡಿ ಎಂದು ಅವರ ಬೇಡಿಕೆ ಇತ್ತು. ಅದನ್ನೇ ನಮ್ಮ ಸರ್ಕಾರ ಮಾಡಿದ್ದು. ಅದನ್ನು ಈಗ ವಾಪಸ್ಸು ತೆಗೆದುಕೊಂಡು ಪುನಃ ಮೀನುಗಾರಿಕಾ ಇಲಾಖೆಯ ಮುಖಾಂತರ ಕೊಡುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅದು ಸಾಧ್ಯವಾಗದ ಕೆಲಸ, ಅದು ಬಹಳ ಕಷ್ಟಕರವಾಗಿದ್ದು, ಅದನ್ನು ಸರಳೀಕರಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪುನಃ ಅವರಿಗೆ ಸೇಲ್ಸ್ ಟ್ಯಾಕ್ಸ್ ವಿನಾಯ್ತಿಯನ್ನು ಸೇಲ್ ಪಾಯಿಂಟ್‌ನಲ್ಲೇ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ಹೌಸಿಂಗ್ ಸ್ಕೀಮ್‌ಗಳ ಬಗ್ಗೆ ಸಮುದ್ರ ತಡೆಗೋಡೆಗಳ ಬಗ್ಗೆ ಹೇಳಿದ್ದಾರೆ. ಸಮುದ್ರ ತಡೆಗೋಡೆಗೆ ನಮ್ಮ ಸರ್ಕಾರ ಇದ್ದಾಗಲೇ ಒಂದು ಪ್ರೋಗ್ರಾಮನ್ನು ಕೇಂದ್ರ ಸರ್ಕಾರಕ್ಕೆ ಕಳಿಸಲಾಗಿತ್ತು. ಮಾನ್ಯ ಸಣ್ಣ ನೀರಾವರಿ ಸಚಿವರು ಉಡುಪಿಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಹಿಂದಿನ ಸರ್ಕಾರ ಕಳಿಸಿದಂಥ ಈ ಪ್ರೋಗ್ರಾಮ್‌ನಲ್ಲಿ 137 ಕೋಟಿ ರೂಪಾಯಿಗಳು ಸ್ಯಾಂಕ್ಷನ್ ಆಗಿ ಬಂದಿದೆ ಎಂದು ಅವರು ಹೇಳಿದ್ದಾರೆ. ಆದರೆ ಇವತ್ತಿನ ಬಜೆಟ್‌ನಲ್ಲಿ ನಾನು ಓದುವಾಗ ನೋಡುತ್ತೇನೆ, ನಾವು ಕಾರ್ಯಕ್ರಮವನ್ನು ಕಳಸಿದ್ದೇವೆ, ಅನುಮೋದನೆಯನ್ನು ಕಾಯುತ್ತಿದ್ದೇವೆ ಎಂದು ಇದೆ. ಪ್ರಾಯಶಃ ಇವತ್ತಿನ ಬಜೆಟ್ ಭಾಷಣಕ್ಕೂ, ಆ ಒಂದು ಮಾನ್ಯ ಸಣ್ಣ ನೀರಾವರಿ ಇಲಾಖೆಯ ಸಚಿವರು ಹೇಳಿರುವ ಹೇಳಿಕೆಗೂ ವ್ಯತ್ಯಾಸ ಇದೆ. ಇದರ ಬಗ್ಗೆ ಸ್ವಲ್ಪ ಕ್ಲಾರಿಫಿಕೇಶನನ್ನು ಸಣ್ಣ ನೀರಾವರಿ ಇಲಾಖೆಯ ಮಾನ್ಯ ಸಚಿವರು ಅಥವಾ ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ಹೇಳುತ್ತಾ, ಮುಖ್ಯವಾಗಿ ಈ ಮಹಿಳೆಯರ ಬಗ್ಗೆ ಒಂದು ಪ್ರಸ್ತಾಪವನ್ನು ಇವತ್ತಿನ ಬಜೆಟ್‌ನಲ್ಲಿ

ಮಾಡಿದ್ದಾರೆ. ಇವತ್ತಿನ ಬಜೆಟ್‌ನಲ್ಲಿ ಒಂದು ಕಡೆಯಲ್ಲಿ ಎಲೆಕ್ಟ್ರಿಕ್ ಸ್ಟವ್‌ಗೆ ಕರವನ್ನು ಜಾಸ್ತಿಮಾಡಿ ಶಾಕ್ ಹೊಡೆದರೆ, ಇನ್ನೊಂದು ಕಡೆ ಸಾಂಬಾರ್ ಇನ್ನೂ ಭಾರೀ ಖಾರವಾಗಿದೆ. ಸಾಂಬಾರ್ ಪುಡಿಯ ಮೇಲೆ, ರಸಂ ಪುಡಿಯ ಮೇಲೆ ಕರವನ್ನು ಹಾಕಿದ್ದಾರೆ. ಇದರಿಂದ ಇಬ್ಬರು ಮಹಿಳಾ ಸಚಿವೆಯರಿಗೆ ತೊಂದರೆಯೇನೂ ಆಗುವುದಿಲ್ಲ. ಏಕೆಂದರೆ ಅವರ ಮನೆಗಳಲ್ಲಿ ಅಡುಗೆಯವರು ಇದ್ದಾರೆ. ಆದರೆ ಅಲ್ಲಿ ಇರುವಂಥ ದುಡಿಯುವ ವರ್ಗದ ಮಹಿಳೆಯರು ಯಾರಿದ್ದಾರೆ, ಅವರಿಗೆ ಬಹಳ ತೊಂದರೆಯಾಗುತ್ತದೆ. ರಸಂ ಪುಡಿ, ಸಾಂಬಾರ್ ಪುಡಿಯನ್ನು ತೆಗೆದುಕೊಂಡು ಹೋಗಿ ಅಡುಗೆ ಮಾಡಿಟ್ಟು ಪುನಃ ಇಲ್ಲಿ ಕೆಲಸಕ್ಕೆ ಅವರು ಹೋಗುವಂಥ ಪರಿಸ್ಥಿತಿ ಇರುವಾಗ, ಈಗ ಒಂದು ಕಡೆ ಅರಾಕ್ ಕಂಟ್ರಾಕ್ಟರುಗಳಿಗೆ ದೊಡ್ಡ ರಿಯಾಯ್ತಿಯನ್ನು ಕೊಡುತ್ತಾರೆ, 164 ಕೋಟಿ ರೂಪಾಯಿಗಳನ್ನು ಬಿಡುತ್ತಾರೆ, ಇನ್ನೊಂದು ಕಡೆ ಮಹಿಳೆಯರಿಗೆ, ಜನಸಾಮಾನ್ಯರಿಗೆ ತೊಂದರೆಯಾಗುವಂತೆ ರಸಂ ಪುಡಿ, ಸಾಂಬಾರ್ ಪುಡಿಗೆ ಕರವನ್ನು ಹೇರುತ್ತೀರಿ. ಇದೊಂದು ವಿಪರ್ಯಾಸ, ಏಕೆಂದರೆ ಈ ಅರಾಕ್ ಕಂಟ್ರಾಕ್ಟರ್ಸ್‌ಗೆ ಹಣ ಇಲ್ಲವೆಂದಲ್ಲ, ಅವರಿಗೆ ಬೇಕಾದಷ್ಟು ಆಸ್ತಿ ಇದೆ. ಸರ್ಕಾರಕ್ಕೆ ರೆವಿನ್ಯೂ ರಿಕವರಿ ಮಾಡುತ್ತೇವೆ ಎಂದು ಮಾನ್ಯ ಸಚಿವರು ಮೊನ್ನೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಒಂದು ವೇಳೆ ರೆವಿನ್ಯೂ ರಿಕವರಿ ಮಾಡುವುದಾದರೆ ಇದನ್ನು ಸಂಪೂರ್ಣವಾಗಿ ಹಣವನ್ನು ರಿಕವರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಒಂದು ಕಡೆಯಲ್ಲಿ ಜನರ ಮೇಲೆ ಕರವನ್ನು ಹೇರುವುದಕ್ಕಿಂತ ಅಥವಾ ಡೀಸೆಲ್ ಸಬ್ಸಿಡಿ, ಸೇಲ್ಸ್ ಟ್ಯಾಕ್ಸ್ ರಿಯಾಯ್ತಿಯನ್ನು ಕಡಿತ ಮಾಡುವುದಕ್ಕಿಂತ ಈ ಒಂದು 164 ಕೋಟಿ ರೂಪಾಯಿಗಳನ್ನು ರಿಕವರಿ ಮಾಡಿದರೆ ಈ ಎರಡೂ ಸಮಸ್ಯೆಗಳು ಪರಿಹಾರವಾಗುತ್ತವೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಮನಹರಿಸಿ ಮಹಿಳೆಯರೆಗೆ ಕೊಟ್ಟಂಥ ತೊಂದರೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಅವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಐ.ಆರ್.ಡಿ.ಪಿ. ಸ್ಕೀಮನ್ನು ತೆಗೆದು ಸ್ವಸಹಾಯ ಯೋಜನೆಯೊಂದು ಮಾಡಿದ್ದಾರೆ. ಪ್ರಾಯಶಃ ಇದು ಬಹಳ ಕಷ್ಟದ ಕೆಲಸ. ಏಕೆಂದರೆ ಒಬ್ಬೊಬ್ಬರಿಗೆ ವ್ಯವಹಾರ ಮಾಡುವುದಕ್ಕೆ ಕಷ್ಟವಾಗುತ್ತದೆ. ಹತ್ತು ಜನ ಒಟ್ಟು ಸೇರಿ ಸೆಲ್ಫ್ ಹೆಲ್ಪ್ ಗ್ರೂಪ್ ಅಂತ ಮಾಡಿದರೆ ಅದೂ ಸಹ ಬಹಳ ಕಷ್ಟದ ಕೆಲಸ. ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಇದನ್ನು ಪುನಃ ವಾಪಸ್ಸು ಪಡೆದು ಐ.ಆರ್.ಡಿ.ಪಿ. ಸ್ಕೀಮಿಗೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣ ಮಾಡಬೇಕು. ಇನ್ನೊಂದು ಮಾತು ಹೇಳಬೇಕೆಂದರೆ ಈಗ ಅಧಿಕಾರಿವರ್ಗದಲ್ಲಿ ನಾವು ನೋಡಿದ್ದೇವೆ, 75% of the total revenue goes to salary ಎಂದು ಹೇಳಿದ್ದಾರೆ. ಇಲ್ಲಿ ಸೆಕ್ರೆಟೆರಿಯೇಟ್‌ನಲ್ಲಿ ಅಂದಾಜು ಮಾಡಿದರೆ ಕೇಸ್ ವರ್ಕರ್‌ನಿಂದ ಸೆಕ್ಷನ್ ಆಫೀಸರ್‌ಗೆ ಫೈಲು ಹೋಗುತ್ತದೆ. ಮತ್ತೆ ಅದು ಸೆಕ್ಷನ್ ಆಫೀಸರ್‌ನಿಂದ ಅಂಡರ್ ಸೆಕ್ರೆಟರಿಗೆ ಹೋಗುತ್ತದೆ ಮತ್ತು ಅಂಡರ್ ಸೆಕ್ರೆಟರಿಯಿಂದ ಡೆಪ್ಯುಟಿ ಸೆಕ್ರೆಟರಿಗೆ ಹೋಗುತ್ತದೆ. ಡೆಪ್ಯುಟಿ ಸೆಕ್ರೆಟರಿಯಿಂದ ಜಾಯಿಂಟ್ ಸೆಕ್ರೆಟರಿಗೆ ಹೋಗಿ ಅಲ್ಲಿಂದ ಸೆಕ್ರೆಟರಿಗೆ ಅದು ಹೋಗುತ್ತದೆ. ಒಟ್ಟು ಆರು ಹಂತದಲ್ಲಿ ಒಂದು ಫೈಲು ಹೋಗುತ್ತದೆ. ಇಲ್ಲಿ ಎಲ್ಲರೂ ಮಾಡುವುದು ಬರೀ ದಸ್ಕತ್ತು ಹಾಕುವುದು ಅಷ್ಟೇ, ಡಿವಿಜನಲ್ ಕಮೀಷನರಗೆ ಕಳಿಸುವ ಫೈಲಿನ ಮೇಲೆ ಮೊದಲು ನೋಟ್ ಹಾಕುವಂಥಾದ್ದು ಕೇಸ್‌ವರ್ಕರ್. ಅಲ್ಲಿಂದ ಅದು

ಮುಂದಕ್ಕೆ ಹೋಗುತ್ತದೆ. ಅದಕ್ಕಿಂತ ಈಗ ಹೈಟೆಕ್ನಾಲಜಿಯಲ್ಲಿ ಎಲ್ಲ ಕಂಪ್ಯೂಟರೈಸೇಶನ್ ಮಾಡುತ್ತಿದ್ದೀರಿ. ಈ ಎಲ್ಲ ವ್ಯವಸ್ಥೆಯನ್ನು ತೆಗೆಯಬಹುದೆಂದು ನನಗೆ ಕಾಣುತ್ತದೆ. ಕೇವಲ ಕೇಸ್‌ವರ್ಕರ್, ಡೆಪ್ಯುಟಿ ಸೆಕ್ರೆಟರಿ ಅಥವಾ ಸೆಕ್ರೆಟರಿ ಅಷ್ಟೇ ಇರಬೇಕು. ಈ ಒಂದು ವ್ಯವಸ್ಥೆಯನ್ನು ಜಾರಿಯಲ್ಲಿ ತಂದರೆ ಸರ್ಕಾರದ ಹೊಣೆ ಬಹಳಷ್ಟು ಕಡಿಮೆಯಾಗುತ್ತದೆ ಎಂದು ಹೇಳುತ್ತಾ, ಈ ವ್ಯವಸ್ಥೆಯನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ ಎಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು, ಈ ಶಾಸಕರ ನಿಧಿಯನ್ನು ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ, ಅದ್ದನು ನಾನು ಸ್ವಾಗತ ಮಾಡುತ್ತೇನೆ. ಅದರೊಂದಿಗೆ ಸ್ವಲ್ಪ ಹಣವನ್ನು ಹೆಚ್ಚು ಮಾಡಿ ಒಂದು ಕೋಟಿ ರೂಪಾಯಿಗಳಷ್ಟು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಆದರೊಂದಿಗೆ ಇವತ್ತಿನ ವ್ಯವಸ್ಥೆ ಏನಿದೆ, ಎಂ.ಎ.ಡಿ.ಬಿ., ಹೆಚ್.ಕೆ.ಡಿ.ಬಿ. ಅಂತ ಹೇಳಿ ನಾವು ಮಾಡಿದಂತಹ ಒಂದು ಪ್ರಪೋಸಲ್ ಏನಿದೆ ಅದು ಪುನಃ ಅವರ ಮುಖಾಂತರ ಹೋಗಿ ವಾಪಸ್ಸು ಬಂದಿದೆ. ಅದನ್ನೆಲ್ಲ ಅಬಾಲಿಷ್ ಮಾಡಬಹುದು ಎಂದು ನನ್ನ ಅಭಿಪ್ರಾಯ. ನೇರವಾಗಿ ಜಿಲ್ಲೆಯಲ್ಲಿರುವ ಒಂದು ವ್ಯವಸ್ಥೆ ಮುಖಾಂತರವೇ ನಾವು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಕಾರ್ಯಕ್ರಮ ಜಾರಿಗೆ ತರುವುದಕ್ಕೆ ತುಂಬ ತಡವಾಗುತ್ತಿದೆ. ಉದಾಹರಣೆಗೆ ಉಡುಪಿಯಲ್ಲಿ ನಾವು ಕೊಟ್ಟಂಥ ಪ್ರೋಗ್ರಾಮ್ ಸ್ಯಾಂಕ್ಷನ್ ಆಗುವುದಕ್ಕೆ ಉಡುಪಿಯಿಂದ ಶಿವಮೊಗ್ಗಕ್ಕೆ ಬರಬೇಕು. ಶಿವಮೊಗ್ಗದಲ್ಲಿ ಅವರು ಒಂದು ಕ್ವೆರಿ ಹಾಕಿ ವಾಪಸ್ಸು ಕಳಿಸುತ್ತಾರೆ. ಅಲ್ಲಿಂದ ಬಂದ ಮೇಲೆ ಮತ್ತೆ ಎರಡು ಮೂರು ದಿವಸಗಳ ಕಾಲ ತಿರುಗುವುದಕ್ಕಿಂತ ಉಡುಪಿಯಲ್ಲೇ ಈ ವ್ಯವಸ್ಥೆ ಆಗಬೇಕು. ಪ್ರತಿಯೊಂದು ಜಿಲ್ಲೆಯಲ್ಲಿ ಸ್ಯಾಂಕ್ಷನ್ ಕೊಟ್ಟ ಕಾಮಗಾರಿಗಳನ್ನು ಅಲ್ಲಿಯೇ ಕಾರ್ಯರೂಪಕ್ಕೆ ತರಲಿಕ್ಕೆ ಅವಕಾಶ ಮಾಡಿದರೆ ಖಂಡಿತ ನಾವು ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಫಂಡ್ಸ್ ಕೂಡ ಲ್ಯಾಪ್ಸ್ ಆಗುವುದಿಲ್ಲ. ಇಂತಹ ವ್ಯವಸ್ಥೆಯನ್ನು ತರಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ಮುಖ್ಯವಾಗಿ ಪವರ್ ಸೆಕ್ಟರ್‌ನಲ್ಲಿ ಆದಂಥ ಸಮಸ್ಯೆಗಳು. ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಮೊನ್ನೆ ಲಿಖಿತ ಮೂಲಕ ಉತ್ತರ ಕೊಡುವ ಪ್ರಶ್ನೆಗಳ ಪಟ್ಟಿಯಲ್ಲಿ ಅದು ಇತ್ತು. ಆದರೆ ಆ ಬಗ್ಗೆ ನನಗಿನ್ನೂ ಉತ್ತರ ಬಂದಿಲ್ಲ. ಈಗ ಕೊಜೆಂಟ್ರಿಕ್ಸ್ ಜೊತೆ ಸರ್ಕಾರ ಎಂ.ಓ.ಯು (MOU)ಗೆ ಸೈನ್ ಮಾಡಿದಂಥಾದ್ದು ಇದೆ. ಆಮೇಲೆ ಕೊಜೆಂಟ್ರಿಕ್ಸ್ ಜೊತೆಯಲ್ಲಿ ಪವರ್ ಪರ್ಚೇಸ್ ಅಗ್ರಿಮೆಂಟನ್ನು ಮಾಡಿದ್ದು, ಇವತ್ತು ಕೊಜೆಂಟ್ರಿಕ್ಸ್‌ನವರು ನಾನು ಇದನ್ನು ಮಾಡುವುದಿಲ್ಲ ಎಂದು ವಾಪಸ್ಸು ಬಂದಾಗ ಚೈನಾ ಪವರ್ ಅಂಡ್ ಲೈಟ್ ಕಂಪನಿ ಮತ್ತು ಟಾಟಾ ಕಂಪನಿಯವರಿಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದಕ್ಕೆ ಅವಕಾಶ ಇಲ್ಲ. ಒಂದು ಅಗ್ರಿಮೆಂಟನ್ನು ಕೊಜೆಂಟ್ರಿಕ್ಸ್ ಜೊತೆಯಲ್ಲಿ ಸೈನ್ ಮಾಡಿದಾಗ ಅವರು ವಾಪಸ್ಸು ಹೋದಮೇಲೆ it becomes an agreement denovo. ಹೊಸ ಅಗ್ರಿಮೆಂಟನ್ನು ಚೈನಾ ಲೈಟ್ ಅಂಡ್ ಪವರ್ ಕಂಪನಿ ಜೊತೆ ಮಾಡಬೇಕಾಗುತ್ತದೆ. ಒಂದು ವೇಳೆ ಹೊಸ ಅಗ್ರಿಮೆಂಟ್ ಮಾಡಬೇಕಾದರೆ ಹೊಸ ಬಿಡನ್ನು ಕರೆಯಬೇಕಾಗುತ್ತದೆ. ಆದ್ದರಿಂದ ಯಾವ ತಪ್ಪನ್ನು

ಸರ್ಕಾರ ಮಾಡುತ್ತಿದೆ, ಅದರ ಬಗ್ಗೆ ಬೇರೆಯವರು ಕೋರ್ಟಿಗೆ ಹೋಗಿ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಶನ್ ಫೈಲ್ ಮಾಡಿ ಸ್ಟೇ ತಂದರೆ ಇನ್ನೂ ಅನೇಕ ವರ್ಷಗಳ ಕಾಲ ಈ ಒಂದು ಪ್ರಾಜೆಕ್ಟ್ ನೆನೆಗುದಿಗೆ ಬೀಳುತ್ತದೆ. ಆದ್ದರಿಂದ ಇಂಥಾದನ್ನು ಖಂಡಿತ ಮಾಡಬಾರದು. ಇನ್ನೊಂದು, ದೀಪಕ್ ಫಾರೀಕ್ ಕಮಿಟಿ ರಿಪೋರ್ಟ್. Escrow clause ಕೊಡಬಾರದು ಅಂತ ಫಾರೀಖ್ ಕಮಿಟಿ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಹಾಗಿರುವಾಗ ಈಗಾಗಲೇ ಪವರ್ ಪರ್ಚೇಸ್ ಕಮಿಟಿ ಅಗ್ರಿಮೆಂಟ್‌ನಲ್ಲಿ ನಾವು Escrow ಕೊಡುತ್ತೇವೆ ಎಂದು ಹೇಳಿ ತಣ್ಣೀರ್ ಬಾವಿ ಪ್ರಾಜೆಕ್ಟ್‌ಗೆ ಸೈನ್ ಮಾಡಿ ಈಗ ಪುನಃ ವಾಪಸ್ಸು ಹೋದರೆ, ಹಾಗಾದರೆ ಇನ್ನೊಂದು ಸಾವಿರ ಕೋಟಿ ರೂಪಾಯಿಗಳನ್ನು ಅವರು ಹಾಕುವ ದಾವೆಗಳಲ್ಲಿ ಪರಿಹಾರವನ್ನು ಕೊಡುವುದಕ್ಕೆ ತೆಗದಿಟ್ಟಿದ್ದೀರಾ ಎಂದು ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಬಜೆಟ್‌ನಲ್ಲಿ ಅಲ್ಲದೆ ಬೇರೆ ಏನಾದರೂ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಾ? ಏಕೆಂದರೆ ಯಾವುದೇ ಒಂದು ಅಗ್ರಿಮೆಂಟ್‌ಗೆ ಸೈನ್ ಮಾಡಿದಮೇಲೆ ವಾಪಸ್ಸು ಹೋದರೆ ಅವರು ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇದೆ. ಅದಕ್ಕೋಸ್ಕರ ಅದನ್ನು ಮಾಡುವುದಕ್ಕೆ ಮುಂಚೆ ಈ ಎಲ್ಲ ಆಗುಹೋಗುಗಳನ್ನು ನೋಡಬೇಕಾಗುತ್ತದೆ. ಏಕೆಂದರೆ ಎಲ್ಲ ಅಗ್ರಿಮೆಂಟಿಗೂ ಎಂ.ಒ.ಯು (Mou)ಗೆ ಸೈನ್ ಮಾಡಿದ್ದು ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ, ನಮ್ಮ ಸರ್ಕಾರ ಇದ್ದಾಗ ಮಾಡಿರುವಂಥಾದ್ದು ಎಂದರೆ ನಾಲ್ಕು - Barrage mounted Power Projectsಗೆ, ಒಂದು ಪ್ರಾಜೆಕ್ಟ್ ಹಾಸನದ ಪ್ರಾಜೆಕ್ಟ್‌ಗೆ ಸಂಬಂಧ ಪಟ್ಟಿರುವಂಥಾದು,

6.10 ಪಿ.ಎಂ

ಆದರೆ ಒಂದು ಸಾವಿರ ಮೆಗಾವಾಟ್ ಪವರನ್ನು ಗ್ರಿಡ್‌ಗೆ ಕೊಟ್ಟಂಥಾದ್ದು ನಮ್ಮ ಸರ್ಕಾರ ಅದರ ಹಿಂದೆಯೂ ಆಗಲಿಲ್ಲ, ನಂತರವೂ ಆಗುತ್ತಾ ಇಲ್ಲ. ಇವೆಲ್ಲವನ್ನೂ ಪುನಃ ದಾವೆಗಳ ಮುಖೇನ ಕೋರ್ಟಿಗೆ ಕಳುಹಿಸಿದರೆ, ಇನ್ನು ಮುಂದೆ ಅನೇಕ ವರ್ಷಗಳ ಕಾಲ ಪವರ್ ಜನರೇಷನ್ ಮಾಡುವಂಥಾದ್ದು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಸರ್ಕಾರದವರು ಇಂತಹ ತೀರ್ಮಾನವನ್ನು ತೆಗೆದುಕೊಳ್ಳುವಾಗ ಪ್ರಾಯಶಃ ಅಡ್ವೋಕೇಟ್ ಜನರಲ್ ಅಥವಾ ಲಾ ಡಿಪಾರ್ಟ್‌ಮೆಂಟಿನ ಸಂಪರ್ಕ ಮಾಡಿ ಈ ತೀರ್ಮಾನವನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಇಂತಹ ಯಾವುದಾದರೂ ಸಮಸ್ಯೆಗೆ ತಾವೇ ತಾವಾಗಿ ತೀರ್ಮಾನ ತೆಗೆದುಕೊಂಡು ವಾಪಸ್ ಪಡೆದರೆ ಅಥವಾ ಈ ಕಮಿಟಿಗಳ ನಿರ್ಮಾಣ ಮಾಡಿದರೆ ಅದು ಸರಿಯಿಲ್ಲ. ಈ ಕಮಿಟಿ ಯಾವ ರೀತಿ ಇದೆ ಎಂದು ಹೇಳಿದರೆ, ನಾನು ಇ.ಎಲ್.ಆರ್.ಟಿ.ಎಸ್ ಎಂಬ ಬೋರ್ಡನ್ನು ನೋಡಿದೆ. Elevated Rail Road Transport Service ಎಂದು ಇದೆ ಈ ಕಮಿಟಿ Elevated Committee for Rail Road Transport ತರಹ ಇದೆ. ಈಗ ಮಂತ್ರಿಮಂಡಲ ನ್ಯಾರೋಗೇಜ್ ರೈಲ್ ತರಹ ಆಗಿದೆ. ಅವರು ಏನೇನು ಹೇಳುತ್ತಾರೆ ಅದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಮಂತ್ರಿಗಳು ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಮೂರು ಸಮಿತಿಗಳು, ಈ ಇ.ಎಲ್.ಆರ್.ಟಿ.ಎಸ್ ಆಗಿದೆ. ಈ ನ್ಯಾರೋಗೇಜ್ ಸ್ಥಿತಿಯಿಂದಾಗಿ ಪ್ರಾಯಶಃ ಅದಕ್ಕೋಸ್ಕರ ಯಾರೂ ಸದನಕ್ಕೆ ಬರುತ್ತಾ ಇಲ್ಲ.

ಏಕೆಂದರೆ ಅವರಿಗೇನೂ ಕೆಲಸ ಇಲ್ಲ. ಸಮಿತಿಯವರು ತೀರ್ಮಾನವನ್ನು ಕೊಟ್ಟು ಅದನ್ನು ಸಚಿವ ಸಂಪುಟದವರು ಒಪ್ಪಿಕೊಂಡ ಮೇಲೆ ಕೇವಲ ಉಳಿದಂಥಾದ್ದು ಅಧಿಕಾರಿಗಳು ಇಂಪ್ಲಿಮೆಂಟ್ ಮಾಡಲಿಕ್ಕೆ ಬಿಟ್ಟರೆ ಸಚಿವ ಸಂಪುಟದವರಿಗೆ ಬೇರೆ ಏನೂ ಕೆಲಸ ಇದ್ದಹಾಗೆ ಕಾಣುತ್ತಾ ಇಲ್ಲ. ನಾನು ಈ ಸಮಿತಿಯವರ ಸಲಹೆಯನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತಾ ಇಲ್ಲ. ಆದರೆ ಸಚಿವರುಗಳನ್ನು ಸಹ ಅದರಲ್ಲಿ ಸೇರಿಸಿಕೊಳ್ಳುವುದು ನೀವು ಪ್ರತ್ಯೇಕವಾಗಿರದೆ it is going to be parallel. ಒಂದು ಸರ್ಕಾರದ ಮಂತ್ರಿಮಂಡಲ ಇನ್ನೊಂದು ಈ ಸಮಿತಿಗಳು, ಆಮೇಲೆ ಈ ಸಮಿತಿಗಳೇ ಸಲಹೆಗಳನ್ನು ಕೊಡುವುದಾದರೆ ಮಂತ್ರಿಮಂಡಲಕ್ಕೆ ಇಷ್ಟು ಖರ್ಚು ಮಾಡುವುದು ಏಕೆ? ಇದರ ಬಗ್ಗೆ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕಾಗುತ್ತದೆ. ತಮ್ಮ ಪರಿಸ್ಥಿತಿ ಈ ಸರ್ಕಾರದಲ್ಲಿ ಏನಿದೆ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಆರೋಗ್ಯ ಇಲಾಖೆಯ ಬಗ್ಗೆ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಉಡುಪಿಗೆ ಬಂದಿದ್ದಾಗ ನಾವು ಚರ್ಚೆಯನ್ನು ಮಾಡಿದೆವು. ರಾಜ್ಯಮಟ್ಟದಲ್ಲಿ ಔಷಧಿಗಳ ಪರ್ಚೇಸ್ 60 ಪರ್ಸೆಂಟ್ ಜಿಲ್ಲಾಮಟ್ಟದಲ್ಲಿ, ಜಿಲ್ಲಾ ಪಂಚಾಯ್ತಿಯಲ್ಲಿ 40 ಪರ್ಸೆಂಟ್ ಪರ್ಚೇಸ್. ಅದು ಆಗುವುದಿಲ್ಲ. ಹೋಲ್‌ಸೇಲ್‌ನಲ್ಲಿ ಪರ್ಚೇಸ್ ಮಾಡಿದರೆ ಅಲ್ಲಿ ಏನು ಔಷಧಿಗಳು ಬೇಕು ಅಲ್ಲಿ ಏನು ಉಪಕರಣಗಳು ಬೇಕು ಇಲ್ಲಿ ಗೊತ್ತಾಗುವುದಿಲ್ಲ. ಅಲ್ಲಿಯ ಜಿಲ್ಲಾ ಅಧಿಕಾರಿಗಳಿಗೆ ಮತ್ತೆ ಜಿಲ್ಲಾ ಪಂಚಾಯ್ತಿಯವರಿಗೆ ಈ ಪರ್ಚೇಸಿಂಗ್ ಅಧಿಕಾರವನ್ನು ಕೊಟ್ಟಾಗ, ಅಲ್ಲಿ ಕೂಡಲೇ ಏನು ಬೇಕಾಗುತ್ತದೆ. ಅದನ್ನು ಶೀಘ್ರವಾಗಿ ಪರ್ಚೇಸ್ ಮಾಡುವುದಕ್ಕೆ ಬಿಟ್ಟರೆ ಒಳ್ಳೆಯದು. ಆದರೆ ರಾಜ್ಯದಲ್ಲಿ ಪರ್ಚೇಸ್ ಮಾಡುವಂಥಾದ್ದು, ಎಲ್ಲಾ ಜಿಲ್ಲೆಗಳಿಗೆ ಒಂದೇ ರೀತಿಯ ಖಾಯಿಲೆಗಳು ಬರುವಂಥಾದ್ದು ಇಲ್ಲ. ಒಂದು ಜಿಲ್ಲೆಗೂ ಇನ್ನೊಂದು ಜಿಲ್ಲೆಗೂ ಅಲ್ಲಿಯ ವ್ಯವಸ್ಥೆಗೆ ತಕ್ಕಹಾಗೆ ಮತ್ತು ಆರೋಗ್ಯದ ವಿಚಾರದ ಬಗ್ಗೆ ಬೇರೆ ಬೇರೆ ರೀತಿಯ ಖಾಯಿಲೆಗಳು ಬರುತ್ತವೆ. ಅದಕ್ಕೋಸ್ಕರ ಅಲ್ಲಿ ಏನು ಅಗತ್ಯ ಇದೆ ಅದನ್ನು ಅಲ್ಲಿಯೇ ಪರ್ಚೇಸ್ ಮಾಡಬೇಕು, ಅದನ್ನು ಬಿಟ್ಟು, ಇಲ್ಲಿ ಪರ್ಚೇಸ್ ಮಾಡುವ ಅಗತ್ಯ ಇಲ್ಲ. ಇಲ್ಲಿ ಪರ್ಚೇಸ್ ಮಾಡುವ ವ್ಯವಸ್ಥೆಯನ್ನು ಏಕೆ ಇಟ್ಟಿದ್ದಾರೆಂದು ಗೊತ್ತಿಲ್ಲ. ಈ ಪರ್ಚೇಸ್ ಅಧಿಕಾರವನ್ನು ಸಂಪೂರ್ಣವಾಗಿ ಜಿಲ್ಲಾಮಟ್ಟಕ್ಕೆ ಕೊಟ್ಟಾಗ ಅದು ಸಮಂಜಸವಾಗುತ್ತದೆ. ಬೇಕಾದರೆ ಪರ್ಚೇಸ್ ಕಮಿಟಿಯನ್ನೇ ಮಾಡಲಿ. ಜಿಲ್ಲಾ ಪಂಚಾಯ್ತಿಯಲ್ಲಿ ಮಾಡಲಿ ಅಥವಾ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಮಾಡಲಿ. ಜಿಲ್ಲೆಗೆ ಬೇಕಾದ ವಸ್ತುಗಳನ್ನು ಜಿಲ್ಲೆಯಲ್ಲಿಯೇ ಪರ್ಚೇಸ್ ಮಾಡಬೇಕೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಮಾನ್ಯ ಬನ್ನಿಕೋಡ್‌ರವರು ರೈತರ ಸಮಸ್ಯೆಗಳ ಬಗ್ಗೆ ಬಹಳಷ್ಟು ಹೇಳಿದ್ದಾರೆ. ನಾವು ರೈತರ ಸಮಸ್ಯೆಯನ್ನು ಚರ್ಚೆ ಮಾಡುವುದು ಬಿಟ್ಟರೆ ನಿಜವಾಗಿ ಸಮಸ್ಯೆ ಪರಿಹಾರ ಕ್ರಮಗಳು ಬಹಳ ಕಡಿಮೆ ಇದೆ. ಇವತ್ತು ಬಜೆಟ್‌ನಲ್ಲಿ ಕೆಲವು ರಿಯಾಯಿತಿಗಳನ್ನು ಪವರ್ ಟಿಲ್ಲರ್‌ಗೆ, ಟ್ರಾಕ್ಟರುಗಳಿಗೆ ಕೊಟ್ಟಿದ್ದಾರೆ. ಆದರೆ ನಿಜವಾಗಿ ಅವರಿಗೆ ಮಾರುಕಟ್ಟೆಯಲ್ಲಿ ಧಾರಣೆ ಸಿಕ್ಕಲಿಕ್ಕೆ ಪ್ರೊಟೆಕ್ಷನ್ ಪ್ರೈಸ್ ಬಗ್ಗೆ ಏನು ಆಲೋಚನೆಯನ್ನು ಮಾಡಬೇಕಾಗಿದೆ ಅದರ ಬಗ್ಗೆ ಮುಖ್ಯವಾಗಿ ಸರ್ಕಾರ ಗಮನಹರಿಸಬೇಕಾಗಿರುತ್ತದೆ. ಈಗ ಅವರು ಹೇಳಿದರು. ನಾವು ಹಾಲಿಗೆ ಎಷ್ಟು ರೇಟನ್ನು ಕೊಡುತ್ತೇವೆ, ಮಿನರಲ್ ವಾಟರ್‌ಗೆ ಎಷ್ಟು ರೇಟನ್ನು ಕೊಡುತ್ತೇವೆ, ಆಲ್ಕೋಹಾಲ್‌ಗೆ

ಎಷ್ಟು ಕೊಡುತ್ತೇವೆ ಎಂಬುದನ್ನು ಹೇಳಿದರು. ಇಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಯಾರಿಗೇ ಆದರೂ ಅಧಿಕಾರಕ್ಕೆ ಬಂದಕೂಡಲೇ ಎರಡು ರೀತಿಯ ಕಿಕ್ ಇರುತ್ತದೆ. ಒಂದು ಆಲ್ಕೋಹಾಲಿನ ಕಿಕ್, ಇನ್ನೊಂದು ಪವರ್ ಕಿಕ್. ಆಲ್ಕೋಹಾಲಿನ ಕಿಕ್ ವಾಪಸ್ ಹೋಗುವ ಸಾಧ್ಯತೆಗಳಿವೆ. ಆದರೆ, ಪವರ್ ಕಿಕ್ ಇದೆಯಲ್ಲ, ಅದು ವಾಪಸ್ಸೇ ಹೋಗುವುದಿಲ್ಲ. ಆ ಪವರ್ ಕಿಕ್‌ನಲ್ಲೇ ಉಳಿದು ಬಿಡುತ್ತಾರೆ. ಬೇರೆಯವರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದಿರಲಿ, ವಾಪಸ್ ಬರುವುದು ಯಾವಾಗ ಎಂದರೆ ಆ ಅಧಿಕಾರದ ಕಿಕ್ ಹೋದಾಗ ಮಾತ್ರ ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ.

ಡಾ|| ವೈ. ನಾಗಪ್ಪ : ಬಹುಶಃ ಅದು ನಿಮ್ಮ ಸರ್ಕಾರದಲ್ಲಿ ಇತ್ತು. ಹಿಂದಿನ ಸರ್ಕಾರದಲ್ಲಿ ಎರಡೂ ಇತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಎಲ್ಲಾ ಸರ್ಕಾರದಲ್ಲಿಯೂ ಅದು ಇತ್ತು. ನಾನು ಎಲ್ಲಾ ಸರ್ಕಾರಗಳ ಬಗ್ಗೆಯೂ ಹೇಳುತ್ತೇನೆ. ಏಕೆಂದರೆ, ನಾವು ತಪ್ಪನ್ನು ಮಾಡಿ ಇಲ್ಲಿ ಬಂದು ಕುಳಿತಿದ್ದೇವೆ. ನೀವು ಈಗ ವಾಪಸ್ ಇಲ್ಲಿಗೆ ಬರುತ್ತೀರಾ? ಸರ್ಕಾರ ಮಾಡಿದ ತಪ್ಪನ್ನೇ ನಾನು ಹೇಳುತ್ತಿರುವುದು. ಮುಂದೆ ಏನಾಗಬೇಕೆಂಬುದರ ಬಗ್ಗೆ ಆಲೋಚನೆ ಮಾಡಬೇಕು. ಹಾಗಾದರೆ, ನೀವು ಇಲ್ಲಿ ಬಂದು ಕುಳಿತುಕೊಳ್ಳಿ, ನಾವು ಅಲ್ಲಿ ಹೋಗುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅವರು, ಈ ರೀತಿ ಏನಾದರೂ ಮಾಡಿದರೆ ಮಂತ್ರಿಯಾಗಬಹುದು ಎಂದು ಅವರ ಆಲೋಚನೆ.

ಶ್ರೀ ಜಯಪ್ರಕಾಶ್ ಹೆಗಡೆ : ಇನ್ನು ರೈತರಿಗೆ ರೀಪೇಮೆಂಟಿನಲ್ಲಿ ಕೊಡುವ ಪರಿಹಾರದ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಒಂದು ಹೆಕ್ಟೇರಿಗೆ 500 ರೂಪಾಯಿಗಳೂ ಒಂದು ತೆಂಗಿನ ಮರಕ್ಕೆ ಒಂದು ನೂರು ರೂಪಾಯಿಯನ್ನು ಕೊಡುತ್ತಾರೆ. ಮಾನ್ಯ ಕಂದಾಯ ಸಚಿವರು ಇಲ್ಲಿಯೇ ಇದ್ದಾರೆ. ಇದನ್ನು ಅವರು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಏಕೆಂದರೆ, ಪ್ರತಿಸಾರಿ ಮಳೆಗಾಲ ಬಂದಾಗ ನಮ್ಮಲ್ಲಿ ಪ್ರವಾಹ ಮತ್ತೊಂದು ಬರುವಂಥಾದ್ದು ಇದರಿಂದ ಮರ ಬೀಳುವಂಥಾದ್ದು, ರೈತರ ನಾಟಿ ಪೈರು ಹಾಳಾಗತಕ್ಕಂಥಾದ್ದು ಇದೆ. ಆದ್ದರಿಂದ ಇದನ್ನು ಸ್ವಲ್ಪ ಜಾಸ್ತಿ ಮಾಡಬೇಕು. ರೈತರು ಅವುಗಳನ್ನು ನೆಡುವುದಕ್ಕೆ ಏನು ಕಷ್ಟಪಟ್ಟಿದ್ದಾರೆ ಎಷ್ಟು ಖರ್ಚು ಮಾಡಿದ್ದಾರೆ ಅಷ್ಟು ಖರ್ಚನ್ನು ಸರ್ಕಾರದಿಂದ ಕೊಡಲಿಕ್ಕೆ ಆಗುತ್ತಾ ಇಲ್ಲ. ಇದು ನಿಮ್ಮ ಸರ್ಕಾರ ಎಂದಲ್ಲ, ಇದು ಎಷ್ಟೋ ವರ್ಷಗಳ ಹಿಂದೆ ನಿಗದಿ ಮಾಡಿದ ಪ್ರೈಸ್. ಅದನ್ನು ರಿವೈಸ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕಾಗಿದೆ. ಮತ್ತು ಅವರಿಗೆ ಜಾಸ್ತಿ ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಮತ್ತೆ ನಮ್ಮ ಊರಿನವರ, ಉಡುಪಿ ಹೋಟೆಲಿನವರ ಸಮಸ್ಯೆ ಬಗ್ಗೆ ನನ್ನ ಹತ್ತಿರ ಬಂದು ಅವರು ಚರ್ಚೆ ಮಾಡಿದರು. ಇದರ ಬಗ್ಗೆ ಮಾಹಿತಿಯನ್ನು ಮಾನ್ಯ ಸರ್ಕಾರಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ನಮ್ಮ ಸರ್ಕಾರದವರು 8 ಪರ್ಸೆಂಟ್ ಟ್ಯಾಕ್ಸ್ ಇದ್ದುದನ್ನು 2 ಪರ್ಸೆಂಟ್‌ಗೆ ಇಳಿಸಿದ್ದರು. ಆದರೆ ಇದರಲ್ಲಿ ಒಂದು ಡಿಸ್ಪ್ಯಾರಿಟಿ ಎಷ್ಟಾಗಿದೆ ಎಂದರೆ, 2 ಪರ್ಸೆಂಟ್‌ನಿಂದ ಒಂದು ಕೋಟಿ

ದಾಟಿದ ಕೂಡಲೇ ಅಂದರೆ, 99 ಲಕ್ಷದವರೆಗೆ 2 ಪರ್ಸೆಂಟ್, ಒಂದು ಕೋಟಿಯಾದ ಕೂಡಲೇ ಅದು 10 ಪರ್ಸೆಂಟಿಗೆ ಹೋಗುತ್ತದೆ. ಟರ್ನ್ ಓವರ್ ಟ್ಯಾಕ್ಸ್ ಒಂದು ಪರ್ಸೆಂಟ್ ಇದ್ದುದು ಒಂದೂವರೆ ಪರ್ಸೆಂಟ್ ಆಗಿದೆ. ಆದ್ದರಿಂದ ಅಲ್ಲಿ ಸ್ವಲ್ಪ ಭ್ರಷ್ಟಾಚಾರಕ್ಕೆ ಅವಕಾಶ ಇದೆ. ಈ ಡಿಸ್ಪ್ಯಾರಿಟಿಯನ್ನು ಕಡಿಮೆ ಮಾಡಬೇಕೆಂದು ಅವರ ಬೇಡಿಕೆ ಇದೆ. ಏಕೆಂದರೆ 90 ಲಕ್ಷ ಅಥವಾ 99 ಲಕ್ಷ ಆದರೂ ಸಹ ಒಂದು ಕೋಟಿ ಆಗಿದೆ ಎಂದು ಹೇಳುವ ಸಾಧ್ಯತೆ ಇದೆ. ಅಲ್ಲಿ ಒತ್ತಡವನ್ನು ಹೇರುವ ಸಾಧ್ಯತೆ ಇದೆ. ಅದಕ್ಕೋಸ್ಕರ ಈ ಡಿಸ್ಪ್ಯಾರಿಯನ್ನು ಕಡಿಮೆ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ಈ ಚೌಲ್ಟ್ರಿಗಳಿಗೆ ಹಾಕಿದಂಥ ಕರ. ಪ್ರಾಯಶಃ ಕೆಲವೊಂದು ಚೌಲ್ಟ್ರಿಗಳನ್ನು ನೋಡಿದರೆ ದಿನನಿತ್ಯದ ವ್ಯವಹಾರಕ್ಕಾಗಿ ಮಾಡಿದಂಥ ಚೌಲ್ಟ್ರಿಗಳಾಗಿವೆ. ಕೆಲವು ಟ್ರಸ್ಟ್‌ಗಳು ಇವೆ. ಅವರು ಟ್ರಸ್ಟ್ ಮಾಡಿ ಬಾಡಿಗೆಯನ್ನು ಬಹಳ ಕಡಿಮೆ ತೆಗೆದುಕೊಳ್ಳುತ್ತಿದ್ದಾರೆ. 5 ಸಾವಿರ, 6 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. 80 ಸಾವಿರ, 1 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳತಕ್ಕಂತಹ ಚೌಲ್ಟ್ರಿಗಳ ಬಗ್ಗೆ ನಾನು ಮಾತನಾಡುತ್ತಾ ಇಲ್ಲ. ಸಣ್ಣಪುಟ್ಟ ಚೌಲ್ಟ್ರಿಗಳು ಮತ್ತು ಯಾವುದಾದರೂ ಟ್ರಸ್ಟ್ ಮುಖೇನ ನಡೆಸತಕ್ಕಂಥಾದ್ದಕ್ಕೆ ಈ ಕರವನ್ನು ಹೇರಬಾರದು ಮತ್ತು ಅದನ್ನು ಕಡಿಮೆ ಮಾಡಬೇಕು. ಏಕೆಂದರೆ ಇವರು ಬಾಡಿಗೆಯನ್ನೂ ಕಡಿಮೆ ತೆಗೆದುಕೊಂಡು, ನಿಮ್ಮ ಕರ ಜಾಸ್ತಿಯಾದಾಗ ಅವರಿಗೆ ಚೌಲ್ಟ್ರಿಯನ್ನು ನಡೆಸಲಿಕ್ಕೇ ಕಷ್ಟವಾಗುತ್ತದೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಸ್ವಲ್ಪ ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಚಾರ್ಜ್ ಬಗ್ಗೆ ಹೇಳುವುದಾದರೆ, ಒಂದು ಅಪಾರ್ಟ್‌ಮೆಂಟಿಗೆ ಸ್ವಲ್ಪ ಒಂದು ಪರ್ಸೆಂಟ್ ಕಡಿಮೆ ಮಾಡುತ್ತಾ ಹೋಗಿ. ಆದರೆ ಬಡವರಿಗೆ ಭೂಮಿಯನ್ನು ಕೊಳ್ಳಲಿಕ್ಕೂ ಆಗುತ್ತಾ ಇಲ್ಲ. ಆದ್ದರಿಂದ ಭೂಮಿಯನ್ನು ಮಾರಾಟ ಮಾಡುವಾಗ ಇರತಕ್ಕ ಹೆಚ್ಚಳವನ್ನು ಏನಾದರೂ ವ್ಯವಸ್ಥೆ ಮಾಡಿ, ಕಡಿಮೆ ಮಾಡಬೇಕು. ದೊಡ್ಡ ದೊಡ್ಡ ಭೂಮಿಯ ವ್ಯವಹಾರ ಮಾಡುವವರಿಗೆ ಸರ್ಕಾರದ ಯಾವ ಕಾಯಿದೆಯೂ ತಾಗುವುದಿಲ್ಲ. ಕೇವಲ ಪವರ್ ಆಫ್ ಅಟಾರ್ನಿ ಮುಖಾಂತರ ಅವರು ವ್ಯವಹಾರವನ್ನು ಮಾಡುತ್ತಿದ್ದಾರೆ. ಒಬ್ಬರ ಹತ್ತಿರ ಪವರ್ ಆಫ್ ಅಟಾರ್ನಿ ತೆಗೆದುಕೊಂಡು 5-10 ವರ್ಷ ಇಟ್ಟುಕೊಂಡು ಆಮೇಲೆ ಮಾರಾಟ ಮಾಡುವ ವ್ಯವಸ್ಥೆ ಅವರ ಹತ್ತಿರ ಇದೆ. ಆದರೆ ಒಬ್ಬ ಬಡವನಿಗೆ ಅರ್ಜೆಂಟಿಗೆ ಮಗಳ ಮದುವೆ ಮಾಡಬೇಕೆಂದು ಅವನ ಭೂಮಿಯನ್ನು ಮಾರಲಿಕ್ಕೂ ಆಗುವುದಿಲ್ಲ. ಅಥವಾ ಬೇರೆ ಏನಾದರೂ ಅವನಿಗೆ ಅವಕಾಶ ಇದ್ದಾಗ ಖರೀದಿಯನ್ನೂ ಮಾಡುವುದಕ್ಕಾಗುವುದಿಲ್ಲ. ಈ ತಪ್ಪನ್ನು ನಿಮ್ಮ ಸರ್ಕಾರ ಮಾಡಿದ್ದಲ್ಲ, ಹಿಂದೆ ನಮ್ಮ ಸರ್ಕಾರ ಇದ್ದಾಗ ಹೆಚ್ಚಿಸಿರುವಂಥಾದ್ದು. ಇದು ನನಗೆ ನೆನಪಿದೆ. ತಪ್ಪನ್ನು ತಪ್ಪು ಎಂದು ನಾವು ಒಪ್ಪಿಕೊಳ್ಳುತ್ತೇವೆ. ಇದನ್ನು ಯಾವ ರೀತಿ ಬದಲಾವಣೆ ಮಾಡಬಹುದೆಂಬುದನ್ನು ಈ ಸದನದಲ್ಲಿ ಕುಳಿತು ನಾವು ಚರ್ಚೆ ಮಾಡಬೇಕು. ನಾವು ಮಾಡಿದ ತಪ್ಪನ್ನು ನೀವೂ ಮಾಡುವುದಾದರೆ ನೀವೇಕೆ ಅಲ್ಲಿ ಕುಳಿತುಕೊಳಬೇಕು? ಇದನ್ನು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ಹೇಳಲು ಇಚ್ಛಿಸುತ್ತೇನೆ.

ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ ನಾನು ಹಿಂದೆ ರಾಜ್ಯಪಾಲರ ಭಾಷಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ನಾನು ಮಧ್ಯದಲ್ಲಿ ಒಂದು ವಿಷಯವನ್ನು

ವಾರಾಹಿ ಯೋಜನೆಯ ಬಗ್ಗೆ ಕೇಳಿದ್ದೆ. ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದಾರೆ ಎನ್ನತಕ್ಕ ಮಾಹಿತಿಯನ್ನು ಕೊಡಬೇಕೆಂದು ಕೇಳಿದ್ದೆ. ಮತ್ತು ಈ ವರ್ಷ ಕೆಲಸವನ್ನು ಕೈಗೆತ್ತಿಕೊಳ್ಳುತ್ತಾರೆಯೇ ಎಂದು ಕೇಳಿದ್ದೆ. ಇನ್ನೊಂದು ಕರಾವಳಿಯಲ್ಲಿರತಕ್ಕ ಸಮಸ್ಯೆ ಎಂದರೆ, ಅಲ್ಲಿ ಎಷ್ಟು ಜಾಸ್ತಿ ಮಳೆ ಬರುತ್ತದೋ ಅಷ್ಟು ನೀರು ಕೂಡ ಸಮುದ್ರಕ್ಕೆ ಹೋಗುತ್ತದೆ. ಅದನ್ನು ತಡೆಯಲಿಕ್ಕೆ, ಉಪ್ಪು ನೀರನ್ನು ತಡೆಗಟ್ಟಲಿಕ್ಕೆ salt water extrusion ಡ್ಯಾಮನ್ನು ಕಟ್ಟಲಿಕ್ಕೆ ಸರ್ಕಾರ ಹಣವನ್ನು ಕೊಡಬೇಕು. ಏಕೆಂದರೆ ಅಪ್ಪರ್ ಕೃಷ್ಣ ಮತ್ತು ಕಾವೇರಿ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಒದಗಿಸಿ ಕೆಲಸಗಳನ್ನು ಮಾಡುತ್ತಿದ್ದಾರೆ, ಅದನ್ನು ಮಾಡಬಾರದೆಂದು ನಾನು ಹೇಳುವುದಿಲ್ಲ. ಆದರೆ, ಈ ಭಾಗದಲ್ಲಿ ಕೇವಲ 150-200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಾಗ ನಮ್ಮ ಕರಾವಳಿಯಲ್ಲಿ ಈ ನೀರಿನ ವ್ಯವಸ್ಥೆಗೆ, ವಾಟರ್ ಟೇಬಲನ್ನು ಜಾಸ್ತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಿದಂತಾಗುತ್ತದೆ. ಮಾನ್ಯ ಕೃಷಿ ಸಚಿವರೂ ಸಹ ಇಲ್ಲಿಯೇ ಇದ್ದಾರೆ. ಅದಕ್ಕೋಸ್ಕರ ಒಂದು ವಾರಾಹಿ ಯೋಜನೆ ಮತ್ತೊಂದು ಸಾಲ್ಟ್ ವಾಟರ್ ಎಕ್ಸ್‌ಟ್ರೂಷನ್ ಡ್ಯಾಮ್ ಇಡೀ ಕರಾವಳಿಗೆ ಆಗಬೇಕಾಗಿದೆ. ಮಂಗಳೂರಿನಿಂದ ಕಾರವಾರದವರೆಗೂ ಈ ಯೋಜನೆಯನ್ನು ಕಾರ್ಯಗತಗೊಳಿಸುವಾಗ 150-200 ಕೋಟಿಗಿಂತ ಜಾಸ್ತಿ ಖರ್ಚಾಗುವುದಿಲ್ಲ. ಇದಕ್ಕೆ ಒಂದು ಸೂಕ್ತ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಒಳ್ಳೆಯದಾಗುತ್ತದೆ. ಶ್ರೀಮಂತರಿಗೆ ಕೊಡುವ ರಿಯಾಯಿತಿಗಳನ್ನು ತೆಗೆದು, ರೈತರಿಗೆ ಹೆಚ್ಚಿನ ಸಹಕಾರವನ್ನು ಕೊಡಬೇಕೆಂದು ಕೇಳುತ್ತಾ, ಈ ಒಂದು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದ ಜನಸಂಖ್ಯೆ ನಾಲ್ಕೂವರೆ ಕೋಟಿಗೂ ಮೀರಿದೆ. 29,193 ಗ್ರಾಮಗಳು ಹಾಗೂ 306 ನಗರಗಳಲ್ಲಿ ಇದರಲ್ಲಿ ಗ್ರಾಮಗಳಲ್ಲಿ ಜನಸಂಖ್ಯೆ ಒಟ್ಟು 3.11 ಕೋಟಿ ಆಗಿದೆ. ನಗರಗಳಲ್ಲಿ ಜನಸಂಖ್ಯೆ ಒಟ್ಟು 1.40 ಕೋಟಿ ಆಗಿದೆ. ನಮ್ಮ ರಾಜ್ಯದ ಜನರ ಆಶೋತ್ತರಗಳನ್ನು ಪೂರೈಸುವಂತಹ ಒಂದು ಕಾರ್ಯಸೂಚಿ ಅಥವಾ ಆಯವ್ಯಯವನ್ನು ಇಲ್ಲಿ ಮಂಡನೆ ಮಾಡುತ್ತಾರೆಂಬ ವಿಶ್ವಾಸವನ್ನು ನಾನು ಇಟ್ಟಿದ್ದೆ. ಆದರೆ ಅನೇಕ ರೀತಿಯಲ್ಲಿ ನಮಗೆ ಭ್ರಮರನಿರಸನಗಳು ಉಂಟಾಗಿದೆ. ಇದರಲ್ಲಿ ನಾನು ಕೆಲವು ಸ್ಪಷ್ಟೀಕರಣಗಳನ್ನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಸರ್ಕಾರದಲ್ಲಿ ಕೇಳಲಿಕ್ಕೆ ಇಚ್ಛಿಸುತ್ತಿದ್ದೇನೆ. ಮೊದಲನೆಯದಾಗಿ ಸಹಜವಾಗಿ 13 ಮೂಲಗಳಿಂದ ಅದು ಮಾರಾಟ ತೆರಿಗೆಯಿಂದ ಇರಬಹುದು, ಎಕ್ಸೈಜ್‌ನಿಂದ ಇರಬಹುದು, ಬೇರೆ ಬೇರೆ ರೀತಿಯಿಂದ ಬರುವ ಅಂಕಿಅಂಶಗಳನ್ನು ನಾನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. 1996-97ರಲ್ಲಿ 6490.31 ಕೋಟಿ, 1997-98ರಲ್ಲಿ 7539.17 ಕೋಟಿ, 1998-99ರಲ್ಲಿ 7717.10 ಕೋಟಿ, 1999-2000ರಲ್ಲಿ 8977 ಕೋಟಿ, ಇಷ್ಟು ಕರ ವಸೂಲಿಯಾಗಿತ್ತು ಮತ್ತು ಈ 2000-2001ನೇ ಇಸವಿಯಲ್ಲಿ 10,204 ಕೋಟಿ ಹೆಚ್ಚು ಕಡಿಮೆ ಕರ ವಸೂಲಿಯಾಗಬಹುದು. ಈ ಸಂದರ್ಭದಲ್ಲಿ ನಾವು ಎಷ್ಟು ಬಡ್ಡಿಯನ್ನು ಕೊಡುತ್ತಿದ್ದೇವೆ ಎನ್ನುವಂತಹ ಒಂದು ಸಣ್ಣ ಚಿತ್ರಣವನ್ನು ನಾನು ತಮ್ಮ ಮುಂದೆ ಇಡುತ್ತೇನೆ.

1996-97ರಲ್ಲಿ ಆಯವ್ಯಯದಲ್ಲಿ ನಮಗೆ ಬಂದಿರುವಂತಹ ಬಡ್ಡಿ 679.09 ಕೋಟಿ ರೂಪಾಯಿಗಳು. ಕೊಟ್ಟಿರುವಂತಹ ಬಡ್ಡಿ 1331.19 ಕೋಟಿ ರೂಪಾಯಿಗಳು. 1997-98ರಲ್ಲಿ ನಮಗೆ ಬಂದ ಬಡ್ಡಿ 569.96 ಕೋಟಿ ರೂಪಾಯಿಗಳು. ನಾವು ಬಡ್ಡಿ ಕೊಟ್ಟಿದ್ದು 1538.49 ಕೋಟಿ ರೂಪಾಯಿಗಳು 1998-99ರಲ್ಲಿ 676 ಕೋಟಿ ರೂಪಾಯಿಗಳು ಮಾತ್ರ ನಮಗೆ ಬಡ್ಡಿ ಬಂದಿದ್ದು ನಾವು ಬಡ್ಡಿ ಕೊಟ್ಟಿದ್ದು 1783.55 ಕೋಟಿ ರೂಪಾಯಿಗಳು. 1999-2000ದಲ್ಲಿ 670.52 ಕೋಟಿ ರೂಪಾಯಿಗಳು ನಮಗೆ ಬಂದ ಬಡ್ಡಿಯಾದರೆ ನಾವು ಕೊಟ್ಟಿರುವಂತಹ ಬಡ್ಡಿ 2039 ಕೋಟಿ ರೂಪಾಯಿಗಳು. 2000-2001ಕ್ಕೆ ಬರಲಿರುವ ಬಡ್ಡಿ 688.80 ಕೋಟಿ ರೂಪಾಯಿಗಳಾದರೆ ನಾವು ಕೊಡಲಿರುವ ಬಡ್ಡಿ 2392 ಕೋಟಿ ರೂಪಾಯಿಗಳು. ಈ ರೀತಿಯ ಆಯವ್ಯಯದಲ್ಲಿ ಈ ತರಹದ ಬಡ್ಡಿ ವ್ಯವಹಾರದಲ್ಲಿ ನಾವು ಹೇಗೆ ಮೇಲಕ್ಕೆ ಬರುತ್ತೇವೆ ಎನ್ನತಕ್ಕಂಥಾದ್ದು ಕಾಣುತ್ತಿಲ್ಲ. ಅದೇ ರೀತಿಯಲ್ಲಿ ಇನ್ನಿತರೆ ವಿಷಯಗಳನ್ನು ಸಹ ನಾನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ರೆವಿನ್ಯೂ ವೆಚ್ಚ ಯಾವುದು ಇದೆ, ಅದು ಸಾಮಾಜಿಕ, ಆರ್ಥಿಕ ಹಾಗೂ ಇನ್ನಿತರೆ ಸಹಾಯ ಅನುದಾನ ಸೇರಿ ಎಷ್ಟು ನಿಗದಿಗೊಳಿಸಿದ್ದೇವೆಯೋ ಅಷ್ಟು ಖರ್ಚಾಗಿಲ್ಲ ಎನ್ನತಕ್ಕಂಥ ಅಂಶವನ್ನು ಕೂಡ ತಮ್ಮ ಮೂಲಕ ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ. 1996-97ರಲ್ಲಿ 551.02 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. 1997-98ರಲ್ಲಿ 1075 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. 1998-99ರಲ್ಲಿ 1214.85 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. 1999-2000ರಲ್ಲಿ 713.7 ಕೋಟಿ ರೂಪಾಯಿಗಳ ವೆಚ್ಚವನ್ನು ಮಾಡಿಲ್ಲ. ಇದು ಅನೇಕ ಅಭಿವೃದ್ಧಿ ಚಟುವಟಿಕೆಗಳಿಗೋಸ್ಕರ ಇಷ್ಟು ಹಣವನ್ನು ಇಟ್ಟಿದೆ. ಅದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದೆ ಎನ್ನುವಂತಹ ಅಂಶವನ್ನು ಕೂಡ ಉಲ್ಲೇಖಿಸಲು ಇಚ್ಛಿಸುತ್ತೇನೆ. 1996-97ರಲ್ಲಿ 14043 ಕೋಟಿ ರೂಪಾಯಿಗಳ ಸಾಲ ಬಂದಿದೆ. ಇದರಲ್ಲಿ ಒಂದು ಕ್ಲಾರಿಫಿಕೇಶನ್ ಕೊಡುತ್ತಿದ್ದೇನೆ. ಕಲ್ಯಾಣ ಅಭಿವೃದ್ಧಿ ಇನ್ನಿತರೆ ಚಟುವಟಿಕೆಗಳಿಗೋಸ್ಕರವಾಗಿ 1996-97ರಲ್ಲಿ 571.81 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. 1997-98ರಲ್ಲಿ 689.30 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. 1998-99ರಲ್ಲಿ 414.37 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. 1999-2000ರಲ್ಲಿ 252.26 ಕೋಟಿ ರೂಪಾಯಿಗಳು ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಖನಿಜ ಉದ್ಯಮ ಮಲೆನಾಡು ಪ್ರದೇಶಾಭಿವೃದ್ಧಿ ಚಟುವಟಿಕೆಗಳಿಗೋಸ್ಕರ ಯಾವ ಹಣ ವಿನಿಯೋಗವಾಗ ಬೇಕಾಗಿತ್ತೋ, ಯಾವ ಕಲ್ಯಾಣ ಅಭಿವೃದ್ಧಿಗೋಸ್ಕರ ವಿನಿಯೋಗವಾಗಬೇಕಾಗಿತ್ತೋ ಅದು ಆಗಿಲ್ಲ ಎನ್ನತಕ್ಕಂಥ ಅಂಶವನ್ನು ಕೂಡ ತಮ್ಮ ಗಮನಕ್ಕೆ ನೀಡಿ, ಇನ್ನೊಂದು ವಿಚಾರದ ಬಗ್ಗೆ ನಮಗೆ ಸಾಲದ ಹೊರೆ ಹೇಗೆ ಏರುತ್ತಿದೆ ಎನ್ನತಕ್ಕಂಥ ಅಂಶವನ್ನು ಕೂಡ ನಾನು ಉಲ್ಲೇಖಿಸುತ್ತಿದ್ದೇನೆ. 1996-97ರಲ್ಲಿ 1443 ಕೋಟಿ ರೂಪಾಯಿಗಳ ಸಾಲ ನಮಗೆ ಇತ್ತು. ಅದು 1997-98ರಲ್ಲಿ 1569 ಕೋಟಿ ರೂಪಾಯಿಗಳಿಗೆ ಏರಿತ್ತು. 1998-99ರಲ್ಲಿ 18721 ಕೋಟಿ ರೂಪಾಯಿಗಳಿಗೆ ಏರಿದೆ. 1999-2000ರಲ್ಲಿ 21,502 ಕೋಟಿ ರೂಪಾಯಿಗಳಿಗೆ ಏರಿದೆ. ಈ ವರ್ಷ 25,477 ಕೋಟಿ ರೂಪಾಯಿಗಳಿಗೆ ಏರುವ ಸಾಧ್ಯತೆ ಇದೆ. ಇದರಲ್ಲಿ ನಮ್ಮ ಸಾಲದ ಹೊರೆ ಮತ್ತು ಬಡ್ಡಿಯಲ್ಲಿ Debt trapಗೆ ನಾವು ಸಿಕ್ಕಿಬೀಳುತ್ತೇವೆಯೋ

ಎನ್ನುವ ಹೆದರಿಕೆ ನಮಗೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ವಿತ್ತ ಸಚಿವರು ತಮ್ಮ ಆಯವ್ಯಯದಲ್ಲಿ ಉಲ್ಲೇಖ ಮಾಡುತ್ತಾ ಇನ್ನು ಬರುವ 4 ವರ್ಷಗಳಲ್ಲಿ ಕೊರತೆ ಇಲ್ಲದ ಬಜೆಟನ್ನು ಮಂಡಿಸುತ್ತೇನೆಂದು ಹೇಳಿದ್ದಾರೆ. ಅವರು ಹೇಗೆ ಆ ಮಾತನ್ನು ಹೇಳಿದರು ಎನ್ನುವ ಅಂಶವನ್ನು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛಿಸುತ್ತೇನೆ. 1999-2000ದಲ್ಲಿ 1400 ಕೋಟಿ ರೂಪಾಯಿಗಳ ಕೊರತೆಯ ನಿರೀಕ್ಷೆ ಇದ್ದರೆ ಪರಿಷ್ಕೃತ ಅಂದಾಜಿನ ಪ್ರಕಾರ 1573 ಕೋಟಿ ರೂಪಾಯಿಗಳು ಆಯಿತು. ಈ ರೀತಿಯ ಪರಿಸ್ಥಿತಿ ಇರುವಾಗ ಅಂದಾಜು ಮತ್ತು ವಾಸ್ತವಾಂಶ ಬೇರೆ ಆಗಿರುವುದರಿಂದ ಬಹುಶಃ ಮುಂದಿನ ನಾಲ್ಕು ವರ್ಷಗಳಲ್ಲಿ ಅವರು ಯಾವ ರೀತಿಯಲ್ಲಿ ಕೊರತೆ ರಹಿತವಾದ ಬಜೆಟನ್ನು ಕೊಡುತ್ತಾರೆ ಎನ್ನುವ ಅಂಶವನ್ನು ಅವರು ತಿಳಿಸಬೇಕೆಂದು ನಾನು ಕೇಳುತ್ತೇನೆ. ಅಕಸ್ಮಾತ್ ಈ ಬಗ್ಗೆ ಅವರು ಯಾವುದೇ ರೀತಿಯ ಸ್ಪಷ್ಟೀಕರಣವನ್ನು ಕೊಡದಿದ್ದರೆ ಈ ರಾಜ್ಯದ ಜನತೆಗೆ ಮಾಡಿದಂತಹ ವಂಚನೆ ಇದು ಎನ್ನತಕ್ಕಂಥಾ ಮಾತನ್ನು ನಾನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವಂತಹ ಕರಾವಳಿ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ವಿಶೇಷವಾಗಿ ಕರಾವಳಿ ಜಿಲ್ಲಾ ಅಭಿವೃದ್ಧಿ ಮಂಡಲಿಯನ್ನು ಮಾಡಿಕೊಂಡು, ಅಭಿವೃದ್ಧಿ ಚಟುವಟಿಕೆ ಬಗ್ಗೆ ಅಲ್ಲಿರುವಂತಹ ಮೀನುಗಾರಿಕೆಗೆ, ಪ್ರವಾಸೋದ್ಯಮಕ್ಕೆ, ತೋಟಗಾರಿಕೆಗೆ ವಿಶೇಷ ಪ್ರೋತ್ಸಾಹ ಕೊಡುವಂತಹ ಕಾರ್ಯಕ್ರಮಗಳನ್ನು ಏನಾದರೂ ಘೋಷಣೆಯನ್ನು ಮಾಡುತ್ತಾರೆಯೇ ಎನ್ನುವಂತಹ ನಿರೀಕ್ಷೆಯಲ್ಲಿ ನಾನು ಇದ್ದೆ. ಇಡೀ ರಾಜ್ಯದಲ್ಲಿ ಈ ಒಂದು ಕರಾವಳಿ ಪ್ರದೇಶ ಅತ್ಯಂತ ಸಮೃದ್ಧವಾಗಿರುವಂತಹ ಪ್ರದೇಶ, ಎಲ್ಲಾ ರೀತಿಯಲ್ಲೂ ಸಹ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಆದಾಯವನ್ನು ಕೊಡುವಂತಹ ಒಂದು ಪ್ರದೇಶವಾಗಿರುವುದರಿಂದ ಇದರ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸುತ್ತಾರೆನ್ನುವ ಆಸೆ ನನ್ನಲ್ಲಿತ್ತು. ಈಗ ಏನಾಗಿದೆ ಅಂದರೆ ಇದರಲ್ಲಿ ಈ ಕರಾವಳಿ ಜಿಲ್ಲೆ ಬಗ್ಗೆ ಯಾವುದೇ ರೀತಿಯಾದ ಸ್ಪಷ್ಟ ಘೋಷಣೆಗಳನ್ನು ಮಾಡಿಲ್ಲ. ಮೀನುಗಾರಿಕೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗಡೆಯವರು ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ನಾನು ಇಲ್ಲಿ ಕೇಳಬೇಕೆಂದಿರುವುದು ಏನೆಂದರೆ ಮೀನುಗಾರರಿಗೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಕಳೆದ ಬಜೆಟ್‌ನಲ್ಲಿ ಯಾವುದನ್ನು ಮಂಡನೆ ಮಾಡಿದ್ದರೋ, ವಿಶೇಷವಾಗಿ ಮಾರಾಟ ತೆರಿಗೆ ರಹಿತವಾದ ಡೀಸಲನ್ನು ಸಪ್ಲೈ ಮಾಡುತ್ತೇವೆಂದು ಹೇಳಿದ್ದರೋ ಅದು ಆಗಿಲ್ಲ. ಈಗ ಅಲ್ಲಿ 3310 ಬೋಟ್‌ಗಳು ಇವೆ. ಈ ಯಾಂತ್ರೀಕೃತ ಬೋಟ್‌ಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರ ಏನನ್ನೂ ಹೇಳಿಲ್ಲ. ಇಲ್ಲಿ ಸುಮಾರು 70 ಸಾವಿರ ಜನ ನೇರವಾಗಿ ದುಡಿಯುತ್ತಿದ್ದಾರೆ. ಸುಮಾರು ಎರಡು ಲಕ್ಷ ಜನ ಪರೋಕ್ಷವಾಗಿ ಈ ಒಂದು ಕಾಯಕದಲ್ಲಿ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಮಾರಾಟ ತೆರಿಗೆ ರಹಿತವಾದ ಡೀಸಲನ್ನು ನಾವು ಕೊಡುತ್ತೇವೆಂದು ಹೇಳುವಂತಹ ಸ್ಪಷ್ಟವಾದ ಘೋಷಣೆಯನ್ನು ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಅದರ ಬಗ್ಗೆ ಕೂಡ ಸ್ಪಷ್ಟೀಕರಣ ಇಲ್ಲ. ಮೀನುಗಾರಿಕಾ ಇಲಾಖೆಯ ಮೂಲಕ ಅದನ್ನು ಕೊಡುತ್ತೇವೆಂದು ಹೇಳುವುದಕ್ಕೆ ಅದರಲ್ಲಿ ಏನೋ ತೊಡಕು ಇದೆ, ಸರಳೀಕರಣ ಮಾಡಬೇಕಾಗುತ್ತದೆ ಎನ್ನುವಂತಹ ಅಂಶವನ್ನು ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ

ಕೂಡ ನಾನು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ನಮ್ಮ ಕಳಕಳಿಯನ್ನು ಅರ್ಥ ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳು ಖಂಡಿತವಾಗಿ ಇದರ ಬಗ್ಗೆ ನ್ಯಾಯ ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ. ಕರಾವಳಿ ಜಿಲ್ಲೆಯ ಬಗ್ಗೆ ಹೇಳುವಂತಹ ಸಂದರ್ಭದಲ್ಲಿ ಅಲ್ಲಿ ಬೃಹತ್ ಉದ್ದಿಮೆಗಳು ದಾಳಿ ನಡೆಸುತ್ತಿರುವಂಥಾದ್ದು ನಡೆದಿದೆ. ಸಹಜವಾಗಿ ಆ ಜಿಲ್ಲೆಯ ಜನತೆಯ ಆಕಾಂಕ್ಷೆ ಇತ್ತು, ಧಾರಣ ಶಕ್ತಿಯ ಅಧ್ಯಯನ ಮಾಡಿದ ನಂತರವೇ ಖಂಡಿತವಾಗಿ ಬೃಹತ್ ಉದ್ದಿಮೆಗಳನ್ನು ಸ್ಥಾಪನೆ ಮಾಡಲು ಅವಕಾಶ ಕೊಡುತ್ತೀರಿ ಎನ್ನುವಂತಹ ಆಸೆ ನಮಗೆ ಇತ್ತು. ಮೊನ್ನೆ ತಾನೆ ಪ್ರಶ್ನೋತ್ತರ ವೇಳೆಯಲ್ಲಿ ನಡೆದಿರುವಂತಹ ಸಂದರ್ಭದಲ್ಲಿ ಕೂಡ ಕೇವಲ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಲ್ಲಿ ಈ ಒಂದು ಅಧ್ಯಯನವನ್ನು ನಡೆಸಬಹುದು ಅಂತ ಹೇಳುವಂಥಾದ್ದು ಅಷ್ಟು ಮಾತ್ರವಲ್ಲ, ಈ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಯಾವ ತರಹದ ಕೈಗಾರಿಕೆಗಳು ಬರಬೇಕು ಎನ್ನುವಂತಹ ಸ್ಪಷ್ಟ ದಿಕ್ಸೂಚಿಯನ್ನು ಕೊಡುತ್ತಾರೆ ಎನ್ನುವಂತಹ ನಿರೀಕ್ಷೆಯಲ್ಲಿ ನಾವಿದ್ದೆವು. ಆದರೆ ಅಲ್ಲಿ ಕೂಡ ಭ್ರಮನಿರಸನವಾಗಿದೆ. ಯಾವುದೇ ರೀತಿಯ ಹಣವನ್ನು ಕೂಡ ಈ ಒಂದು ಧಾರಣಶಕ್ತಿಯ ಅಧ್ಯಯನಕ್ಕೋಸ್ಕರ ಮಂಜೂರಾತಿ ಮಾಡದೇ ಇದ್ದದ್ದು ನಮಗೆ ಆತಂಕವನ್ನು ತಂದಿದೆ ಎಂದು ಹೇಳುವಂತಹ ಅಂಶವನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕರಾವಳಿ ಪ್ರದೇಶಕ್ಕೆ ಸಂಬಂಧಪಟ್ಟಂತೆ ಇನ್ನಿತರೇ ಸಮಸ್ಯೆಗಳು ಏನೆಂದರೆ ಸಮುದ್ರದ ಕೊರೆತ. ಸಮುದ್ರ ಕೊರೆತಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ 10-20 ಕೋಟಿ ರೂಪಾಯಿಗಳನ್ನಾದರೂ ಈ ಬಜೆಟ್‌ನಲ್ಲಿ ಇಡುತ್ತಾರೆ ಎನ್ನುವಂತಹ ಆಸೆ ನನಗೆ ಇತ್ತು. ಆದರೆ ಈ ಸಾಲಿನ ಬಜೆಟ್‌ನಲ್ಲಿ ಯಾವ ರೀತಿಯಲ್ಲಿ ಪ್ರತಿಪಾದನೆ ಮಾಡಿದ್ದಾರೆಂದರೆ ಇದರ ಬಗ್ಗೆ ಒಂದು ಪ್ರಸ್ತಾಪವನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ ಎನ್ನುವಂತಹ ಒಂದು ಅಂಶವನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಆಶ್ವಾಸನೆ ಇಲ್ಲ. ಯಾವುದೇ ರೀತಿಯಲ್ಲಿ ಹಣ ಇಟ್ಟಿಲ್ಲ ಎನ್ನುವಂತಹ ಅಂಶವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಇದರಿಂದ ನಮ್ಮ ಕರಾವಳಿ ಜಿಲ್ಲೆಗೆ ಒಂದು ದೊಡ್ಡ ಆಘಾತವಾಗಿದೆ, ನಿರಾಸೆಯಾಗಿದೆ, ಇದನ್ನು ಸರಿಪಡಿಸುವಂತಹ ಹೊಣೆಗಾರಿಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ, ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು ಕಾರ್ಯಗತ ಮಾಡುತ್ತದೆ ಎನ್ನುವ ವಿಶ್ವಾಸ ನನಗೆ ಇದೆ. ಮತ್ತು ವಿಶೇಷವಾಗಿ ಹೊಸ ಬಂಡವಾಳ ಹೂಡಿಕೆ ಬಗ್ಗೆ 12 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ತರುವ ಬಗ್ಗೆ ಯೋಚನೆ ಮಾಡುತ್ತಾ ಇದ್ದಾರೆ. ಈ ಸಾಲಕ್ಕೆ ಸಂಬಂಧಪಟ್ಟ 12 ಪರ್ಸೆಂಟ್ ಬಡ್ಡಿಯಲ್ಲಿ ವಿಶೇಷವಾಗಿ ಎಡಿಬಿಯವರಿಗೆ ಸಂಬಂಧಪಟ್ಟ ಮಂಗಳೂರು ಮಹಾನಗರ ಪಾಲಿಕೆಗೆ ಬರುವಂಥ ಸುಮಾರು 285 ಕೋಟಿ ರೂಪಾಯಿಗಳು ಸೇರಿ 18 ಸಾವಿರ ಕೋಟಿ ರೂಪಾಯಿಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರುವಾಗ ಕಟ್ಟುನಿಟ್ಟಾಗಿ ಯಾವುದೇ ರೀತಿಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಾಗದ ರೀತಿಯಲ್ಲಿ ಪಾರದರ್ಶಕತೆಯಲ್ಲಿ ಕಾಮಗಾರಿಗಳು ಆಗುವಂಥ ರೀತಿಯಲ್ಲಿ ಒಂದು ವಿಶೇಷವಾದಂಥ ಕಾರ್ಯಕ್ರಮಗಳನ್ನು ಜೋಡಿಸಬೇಕೆಂಬ ಒಂದು ಒತ್ತಾಯವನ್ನು ನಾನು ಮಾಡುತ್ತಾ ಇದ್ದೇನೆ. ಈ ಸಂದರ್ಭದಲ್ಲಿ ಯಾವುದೇ ಟೆಂಡರ್‌ಗಳನ್ನು ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕರೆದಾಗ ಅದಕ್ಕೆ

ಸಂಬಂಧಪಟ್ಟ ಹಾಗೆ ಗ್ಯಾರಂಟಿ ಪೀರಿಯಡನ್ನು ಇನ್ಸಿಸ್ಟ್ ಮಾಡಬೇಕು. ಈ ಅವಧಿಯಲ್ಲಿ ಯಾವುದೇ ಕಾಮಗಾರಿಗಳು ಹಾಳಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಕೌಂಟೆಬಲ್ ಮತ್ತು ರೆಸ್ಪಾನ್ಸಿಬಲ್ ಆಗಿ ಮಾಡುವಂಥ ಒಂದು ವಿಶೇಷ ಜವಾಬ್ದಾರಿಯನ್ನು ಸರಕಾರವು ವಹಿಸಿಕೊಂಡು ಈ ಬಗ್ಗೆ ಸ್ಪಷ್ಟವಾದ ದಿಕ್ಸೂಚಿಯನ್ನು ಕೊಡುತ್ತದೆ ಎಂಬ ವಿಶ್ವಾಸವು ನನಗೆ ಇದೆ. ನಾವು ಇಂಧನ ವಲಯಕ್ಕೆ ಸಂಬಂಧಪಟ್ಟ ಹಾಗೆ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆವು. ರಾಜ್ಯದಲ್ಲಿ ಕೊರತೆ ಇರುವಂಥ ಸುಮಾರು ಮೂರು ಸಾವಿರ ಮೆಗಾವಾಟ್ ವಿದ್ಯುತ್‌ಗೆ ಸಂಬಂಧಪಟ್ಟಂತೆ ಸರಕಾರವು ಯಾವ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಎಂದು ಕುತೂಹಲದಿಂದ ನಾವು ಕಾಯುತ್ತಾ ಇದ್ದೆವು. ಆದರೆ ಕಳೆದ ವರ್ಷದಲ್ಲಿ 1007.42 ಕೋಟಿ ರೂಪಾಯಿಗಳು ಇದ್ದುದನ್ನು 258 ಕೋಟಿ ರೂಪಾಯಿಗಳಿಗೆ ಇಳಿಸಲಾಗಿದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಗೌರವಾನ್ವಿತ ಸದಸ್ಯರಾದ ಯೋಗೀಶ್ ಭಟ್‌ರವರು ಈಗ ಮಾತನಾಡುತ್ತಾ ಇದ್ದಾರೆ. ಬಿಜೆಪಿ ಪಕ್ಷದಲ್ಲಿ ನನಗೆ ಕಾಣುತ್ತಿರುವ ಇಬ್ಬರು ಮಾತ್ರ ಇದ್ದಾರೆ. ಇದು ಬಹಳ ಅನ್ಯಾಯ. ನಾವು ಆಡಳಿತ ಪಕ್ಷದವರು ಇದ್ದು ತಮ್ಮ ಭಾಷಣವನ್ನು ಕೇಳುತ್ತಾ ಇದ್ದೇವೆ. ತಮ್ಮ ಪಕ್ಷದ ಸದಸ್ಯರಾದರೂ ಕುಳಿತುಕೊಂಡು ತಾವುಗಳು ಏನು ಮಾತನಾಡುತ್ತಾ ಇದ್ದೀರಿ ಎಂಬುದನ್ನು ಕೇಳಬೇಕಾಗಿತ್ತು. ಮಾನ್ಯ ಸದಸ್ಯರು ಸರಕಾರಕ್ಕೆ ಏನು ಸಲಹೆಗಳನ್ನು ಕೊಡುತ್ತಿದ್ದಾರೆ ಎಂಬುದನ್ನು ಅವರು ಕೇಳುವುದು ಬೇಡವೇ?

ಶ್ರೀ ಡಿ.ವಿ. ಸದಾನಂದ ಗೌಡ : ನಾವು ಇವೊತ್ತು ಇಲ್ಲಿರುವಂಥ ಪರಿಸ್ಥಿತಿಯಲ್ಲಿಲ್ಲ. ಈಗಾಗಲೇ ನಮ್ಮ ಬಲವನ್ನು ನಾವು ಹೆಚ್ಚಿಸಿಕೊಂಡಂಥ ಸಂದರ್ಭದಲ್ಲಿ ಸಂತೋಷ ಆಚರಣೆ ಮಾಡುವಂಥ ಕೆಲಸದಲ್ಲಿದ್ದೇವೆ. ನಿಮ್ಮವರು ನಿಮ್ಮನ್ನು ಬಿಟ್ಟು ಈಗಾಗಲೇ ವಲಸೆ ಹೋಗುತ್ತಿರುವುದು ಕಾಣುತ್ತದೆ. ಆ ಸುದ್ದಿಗಳನ್ನು ನಾವು ಕೇಳುತ್ತಿದ್ದೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡರು : ಆ ಬಲದ ಪ್ರಶ್ನೆಯನ್ನು ಜನರ ಮುಂದೆ ಹೇಳಿ. ಈಗ ನಿಮ್ಮ ಪ್ರಶ್ನೆ ಏನಾಗಿದೆ ಎಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಸಂಖ್ಯೆಯಲ್ಲಿ 132 ಇದ್ದವರು 142ರವರೆಗೆ ಬಂದಿದ್ದೇವೆ. ನಮ್ಮ ಸಂಖ್ಯೆ ಕಡಿಮೆ ಆಯಿತೋ ಅಥವಾ ಹೆಚ್ಚು ಆಯಿತೋ?

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಹಿರಿಯ ಸದಸರಾದ ನೀವು ಮಾತನ್ನು ಹೇಳಬಾರದು. ಇವೊತ್ತು ಬೆಳಿಗ್ಗೆ ನಿಮ್ಮ ಸಿಎಲ್‌ಪಿ ಯಲ್ಲಿ ನಾವು ತಿಳಿದ ಪ್ರಕಾರ 151 ಜನರು ಹಾಜರಿದ್ದರು. 50:50:51ರ ಪ್ರಕಾರ ಅಲಾಟ್‌ಮೆಂಟ್ ಮಾಡಲಾಗಿತ್ತು. ಈಗ 11 ಜನರನ್ನು ಇವೊತ್ತು ಕಳೆದುಕೊಂಡಿದ್ದಾರೆ. ಆದ್ದರಿಂದ ನೀವು ಇವೊತ್ತು ದುಖಾಃಚರಣೆ ಮಾಡಬೇಕು, ಸಂತೋಷಾಚರಣೆ ಮಾಡುವ ಹಾಗಿಲ್ಲ. ನಿಮ್ಮ ಪರಿಸ್ಥಿತಿಯು ಹೀಗೆ ಆಗಿದೆ.

ಶ್ರೀ ಯು.ಆರ್. ಸಭಾಪತಿ : 15 ಸೇರಿಕೊಂಡಿದ್ದು 11 ಮೈನಸ್ ಆಗಿರಬೇಕು.

ಶ್ರೀ ಎನ್. ಯೋಗೀಶ್ ಭಟ್ : ರಾಜಕೀಯ ವಿಶ್ಲೇಷಣೆ ಇಲ್ಲಿ ಆರಂಭವಾಗಿದೆ. ಬಹುಶಃ ಹೆಚ್ಚಿನ ಸಂಖ್ಯೆ ಇಲ್ಲಿ ಸೇರಿಸಿದ್ದೇ ಒನ್ ಥರ್ಡ್ ಎಲ್ಲಿಯಾದರೂ ಸ್ಪ್ಲಿಟ್ ಆಗಿ ಹೋಗಬಾರದು ಎಂಬ ಕಾರಣಕ್ಕಾಗಿ ಎಂದು ನನ್ನ ಅನಿಸಿಕೆ. ಒಂದು ತರಹ ಹೆದರಿಕೆ ಇತ್ತು. ಎಲ್ಲಿಯಾದರೂ ಸ್ಪ್ಲಿಟ್ ಆಗಿ 140ರೊಳಗೆ ಅಥವಾ 120 ರೊಳಗೆ ಇದ್ದರೆ 40 ಜನರು ಎಲ್ಲಿಯೋ ಹೋಗುತ್ತಾರೆ ಎಂದು ಹೇಳಿ, ಬಹುಶಃ ಹೆಚ್ಚಿನ ಜನರನ್ನು ಸೇರಿಸಿ 150ರ ಸಂಖ್ಯೆಯನ್ನು ಮಾಡಿ 50 ಜನರು ಹೋದರೆ ಸ್ವಲ್ಪ ಕಷ್ಟ ಆಗುತ್ತದೆ ಎಂಬ ಕಾರಣಕ್ಕಾಗಿ ಈ ಸಂಖ್ಯೆಗಳು ಬಂದಿವೆ ಎಂದು ನನ್ನ ಅನಿಸಿಕೆ. ಇವೊತ್ತು ವಾಸ್ತವವಾಗಿ ಏನು ಎಂಬುದು ಇವೊತ್ತಿನ ರಿಸಲ್ಟ್‌ನಿಂದ ಗೊತ್ತಾಗಿದೆ. ಇದರ ಬಗ್ಗೆ ನಾನು ಘೋಷಣೆ ಮಾಡುತ್ತಾ ಇಲ್ಲ. ನಮ್ಮ ವಿರೋಧಪಕ್ಷದ ಉಪನಾಯಕರು ಕೂಡ ಇರುವುದರಿಂದ ಮಾನ್ಯ ಮಿತ್ರರು ಅದನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

ನಾನು ಇಂಧನ ವಲಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಾ ಇದ್ದೇನೆ. ಇದರಲ್ಲಿ 1007.42 ಕೋಟಿ ರೂಪಾಯಿಗಳು ಇದ್ದುದನ್ನು 258 ಕೋಟಿ ರೂಪಾಯಿಗಳಿಗೆ ಇಳಿಸಿದ್ದುದು ಸರಿಯಲ್ಲ. ಸುಮಾರು 148.80 ಕೋಟಿ ರೂಪಾಯಿಗಳನ್ನು ಕಡಿತಗೊಳಿಸಿ ಬಹುಶಃ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿರುವಂತೆ 6500 ಕೋಟಿ ರೂಪಾಯಿಗಳ ವಿದ್ಯುತ್ ಯೋಜನೆಗಳನ್ನು ಪ್ಲಾನ್ ಮಾಡುತ್ತಾ ಇದ್ದೇನೆ ಎಂದು ಇದೆ. ಇದರ ಬಗ್ಗೆ 248 ಕೋಟಿ ರೂಪಾಯಿಗಳನ್ನು ಕಡಿತಗೊಳಿಸಿ ತಾವು ಹೀಗೆ ಇದನ್ನು ಮಾಡಲು ಹೋಗುತ್ತಾ ಇದ್ದೀರಿ, ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳಲಿಚ್ಛಿಸುತ್ತೇನೆ. ಕೃಷಿಗೆ ಸಂಬಂಧಪಟ್ಟ ಸೇವೆಗೆ ಕಳೆದ ವರ್ಷ 5.23 ಇದ್ದುದು ಈ ವರ್ಷದಲ್ಲಿ 4.31 ಗ್ರಾಮೀಣಾಭಿವೃದ್ಧಿಗೆ 4.25 ಇದ್ದುದು 3.84 ವಿಶೇಷ ಪ್ರದೇಶಾಭಿವೃದ್ಧಿಗೆ 2 ರಿಂದ 1.77, ಶಿಕ್ಷಣ ಮತ್ತು ಇನ್ನಿತರ ಬಾಬಿಗೋಸ್ಕರ 6.27 ಇದ್ದುದು 5.83, ನೀರು ಸರಬರಾಜಿಗೆ 8.13 ಶೇಕಡಾ ಇದ್ದುದು 7.02, ಅದೇ ರೀತಿಯಲ್ಲಿ ಹಿಂದುಳಿದ ವರ್ಗಗಳ ಇನ್ನಿತರರ ಕಲ್ಯಾಣ ಕಾರ್ಯಕ್ರಮಗಳಿಗೋಸ್ಕರ 3.20 ಇದ್ದುದು 2.92 ಶೇಕಡಕ್ಕೆ ಇಳಿಸಿರುವುದು ನಿಜವಾಗಿಯೂ ಸರ್ಕಾರವು ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದೇ ರೀತಿಯಲ್ಲಿ ವಾಸ್ತವಿಕತೆಗೆ ದೂರವಾಗಿರತಕ್ಕಂಥ ವಿಚಾರಗಳನ್ನು ಸರ್ಕಾರವು ಮಂಡನೆ ಮಾಡುತ್ತಾ ಇದೆ. ಕಳೆದ ಹತ್ತು ವರ್ಷಗಳಲ್ಲಿ ನಾಲ್ಕೂವರೆ ಲಕ್ಷ ಮನೆಗಳು ಆಗಿದ್ದರೆ ಈ ವರ್ಷದಲ್ಲಿ ಎರಡು ವರ್ಷಗಳ ಟಾರ್ಗೆಟನ್ನು ಇಟ್ಟಿದ್ದಾರೆ. ಅಂದರೆ ವರ್ಷಕ್ಕೆ 48 ಸಾವಿರ ಮನೆಗಳು ಆವರೇಜ್ ಆಗಿ ಆಗುವುದಿದ್ದರೆ, ಒಂದೇ ವರ್ಷದಲ್ಲಿ ಎರಡು ಲಕ್ಷ ಮನೆಗಳನ್ನು ಹೇಗೆ ಮಾಡುತ್ತಾರೆಂದು ಹೇಳುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಮೂಲಕ ಸ್ಪಷ್ಟೀಕರಣವನ್ನು ತಿಳಿಯಬಯಸುತ್ತೇನೆ. ನಿರುದ್ಯೋಗಕ್ಕೆ ಸಂಬಂಧಪಟ್ಟಂತೆ ಹೇಳುವುದಿದ್ದರೆ, 80 ಪರ್ಸೆಂಟ್‌ನಷ್ಟು ನೇಮಕಾತಿಯನ್ನು ನಾವು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಈ ಉಲ್ಲೇಖದನ್ವಯ ಇನ್ನು ಮುಂದೆ ವಿದ್ಯಾವಂತ ಯುವಕರಿಗೆ ನೇರವಾಗಿ ರಾಜ್ಯದ ಸರ್ಕಾರದ ಯಾವುದೇ ಇಲಾಖೆಗಳಲ್ಲಿ ಕೆಲಸ ಸಿಗದಿರುವಂಥ ಪರಿಸ್ಥಿತಿಯು ಉಂಟಾಗಿದೆ. ಇನ್ನೊಂದು ವಿಚಾರವನ್ನು ನಾನು ಕೇಳುತ್ತಾ ಇದ್ದೇನೆ. 1999ರಲ್ಲಿ 18 ಲಕ್ಷಕ್ಕಿಂತಲೂ ಹೆಚ್ಚು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಆಗಿದೆ. ಹಾಗಿದ್ದರೂ ಕೂಡ ನಿರುದ್ಯೋಗಕ್ಕೆ

ಸಂಬಂಧಪಟ್ಟ ಯಾವುದೇ ರೀತಿಯ ಸ್ಪಷ್ಟವಾದ ಮಾಹಿತಿಗಳನ್ನು ಕೊಡದೇ ಇರುವಂಥಾದ್ದು ನನಗೆ ಆಘಾತವನ್ನು ತಂದಿದೆ.

ಅದೇ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಸಿಎಜಿ ರಿಪೋರ್ಟ್ ಯಾವುದು ಇದೆ, ಅದನ್ನು ಸ್ವಲ್ಪ ಅಧ್ಯಯನ ಮಾಡಿದಾಗ, ವಿವಿಧ ಇಲಾಖೆಗಳಿಂದ, ಬೇರೆ ಬೇರೆ ಸಂಸ್ಥೆಗಳಿಂದ, ಸರ್ಕಾರಕ್ಕೆ ಸಂಬಂಧಪಟ್ಟ ನಿಗಮಗಳಿಂದ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ವಸೂಲು ಮಾಡಲು ಆಗಲಿಲ್ಲ. ಬಹುಶಃ ಇದರಿಂದಾಗಿ ರಾಜ್ಯ ಸರ್ಕಾರದ ಆರ್ಥಿಕತೆಗೆ ದೊಡ್ಡ ಧಕ್ಕೆಯನ್ನು ತಂದಂತಾಗಿದೆ.

ರಾಜ್ಯದಲ್ಲಿನ ಬೀಡಿ ಕಾರ್ಮಿಕರು, ಕಾರ್ಮಿಕರು ಮತ್ತು ಬಾಲಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರ ಬಗ್ಗೆ ಕೇವಲ ಉಲ್ಲೇಖವನ್ನು ಮಾತ್ರ ಮಾಡಿದ್ದಾರೆ. ಅವರ ಬಗ್ಗೆ ಯಾವ ಕಾರ್ಯಕ್ರಮಗಳನ್ನು ತಾವು ಕೊಡುತ್ತೀರಿ ಎಂಬ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ರಾಜ್ಯದಲ್ಲಿ 6,12,161 ಸಂಘಟಿತ ಕಾರ್ಮಿಕರು ಇದ್ದರೆ, ಹಾಗೆಯೇ 3.9 ಕೋಟಿ ಅಸಂಘಟಿತ ಕಾರ್ಮಿಕರು ಇದ್ದಾರೆ ಎನ್ನುವ ಮಾಹಿತಿಗಳು ನಮ್ಮಲ್ಲಿವೆ. ಇದರಲ್ಲಿ 2,43,129 ಬೀಡಿ ಕಾರ್ಮಿಕರು ಹಾಗೂ 97,520 ಬಾಲ ಕಾರ್ಮಿಕರಿಗೆ ಈ ವರ್ಗದ ಜನತೆಯ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದ ಯಾವುದೇ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದರೆ ಸಂತೋಷವಾಗುತ್ತಿತ್ತು. ಇದರ ಬಗ್ಗೆ ಸರ್ಕಾರ ಮುಂದಿನ ದಿನಗಳಲ್ಲಿ ಪರಿಶೀಲಿಸಬೇಕೆಂಬ ಅಂಶವನ್ನು ಹೇಳುತ್ತಾ ಇದ್ದೇನೆ. ದ.ಕ. ಜಿಲ್ಲೆಗೆ ಸಂಬಂಧಪಟ್ಟಂಥ ಬೀಡಿ ಉದ್ಯಮ ಯಾವುದು ಇದೆ ಅದು ಇವೊತ್ತು ಅಪಾಯಕರ ಸ್ಥಿತಿಯಲ್ಲಿದೆ. ಅಲ್ಲಿರುವ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವುದಕ್ಕೋಸ್ಕರವಾಗಿ ಬೀಡಿ ಉದ್ಯಮಕ್ಕೂ ಕೂಡ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ವಿಶೇಷವಾಗಿ ರಿಕ್ಷಾ, ಟೆಂಪೋ, ಟ್ಯಾಕ್ಸಿ, ಡ್ರೈವರ್‌ಗಳಿಗೆ ಆಕ್ಸಿಡೆಂಟ್ ಸಂದರ್ಭದಲ್ಲಿ ಅವರಿಗೆ ಕೊಡಬೇಕಾದಂಥ ಪರಿಹಾರಧನ ಏನಿದೆ, ಕಳೆದ ವರ್ಷದಲ್ಲಿ ಆ ಹಣವು ಕೂಡ ಬಿಡುಗಡೆಯಾಗಿಲ್ಲ. ಈ ಸರ್ಕಾರವು ಕೂಡ ಆ ಕುರಿತ ಸ್ಪಷ್ಟ ನೀತಿಯನ್ನು ಉಲ್ಲೇಖ ಮಾಡಿಲ್ಲ. ಈ ಕುರಿತು ಉಲ್ಲೇಖ ಮಾಡಬೇಕೆಂಬ ಅಂಶವನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಅಸಂಘಟಿತ ಕಾರ್ಮಿಕರ ಕುರಿತು ಹೇಳುವುದಾದರೆ, ಟೈಲರ್ಸ್ ಅಸೋಸಿಯೇಶನ್‌ಗೆ ಸಂಬಂಧಪಟ್ಟ ಒಂದು ಮನವಿಯು ನನ್ನಲ್ಲಿ ಬಂದಿತ್ತು. ಅದರಲ್ಲಿ ಸಾಕಷ್ಟು ವೃದ್ಧರು ಅದರಲ್ಲಿದ್ದರು. ಅವರು ಹೇಳುವಂಥ ಮಾದರಿಯಲ್ಲಿ ಬಹುಶಃ ತಿಂಗಳಿಗೆ 10-20 ರೂಪಾಯಿಗಳನ್ನು ಸಂಗ್ರಹ ಮಾಡಿದಲ್ಲಿ ಅದರ ಮೇಲೆ ಇನ್‌ಶ್ಯೂರೆನ್ಸ್ ಕೊಡುವಂಥ ಒಂದು ಪ್ರಾವಿಜನ್ ಮಾಡಿದಲ್ಲಿ, 60 ವರ್ಷಗಳ ನಂತರ ಅವರು ನಿವೃತ್ತಿ ಜೀವನ ನಡೆಸುವಂಥ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಅದರಿಂದ ಪಡೆಯಲು ಸಾಧ್ಯವಾಗುತ್ತದೆ. ಕನಿಷ್ಠ ನೂರು ರೂಪಾಯಿಗಳ ಪೆನ್‌ಶನ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಒಂದು ಸ್ಕೀಮನ್ನು ಪಕ್ಕದ ಕೇರಳ ರಾಜ್ಯವು ಅಳವಡಿಸಿಕೊಂಡಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಉಲ್ಲೇಖಿಸಬಯಸುತ್ತೇನೆ. ಈ ಬಗ್ಗೆ ನಮ್ಮ ಸರ್ಕಾರವು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯುವ ಡಾಟ್-ಕಾಂ ಬಗ್ಗೆ ಹೇಳುವುದಾದರೆ, ಮುಂದಿನ 12 ತಿಂಗಳಲ್ಲಿ 225 ವಿಧಾನಸಭಾ ಕ್ಷೇತ್ರಗಳಲ್ಲಿ ಯುವ ಡಾಟ್ ಕಾಂ ತರಬೇತು ಕೇಂದ್ರವನ್ನು ತೆರೆಯುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಈ ತಿಂಗಳಲ್ಲಿ ಕೇವಲ ನಾಲ್ಕು ಕೇಂದ್ರಗಳು ಅಂದರೆ ಬರುವ ತಿಂಗಳುಗಳಲ್ಲಿ ಎಷ್ಟು ಪ್ರಮಾಣದಲ್ಲಿ ಬರಲು ಸಾಧ್ಯ? 225 ಇಂಥ ಕೇಂದ್ರಗಳನ್ನು ತರುವ ನಿಟ್ಟಿನಲ್ಲಿ ಯಾವ ರೀತಿಯಲ್ಲಿ ಕ್ಷಿಪ್ರ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಇದಕ್ಕೆ ಯಾವುದೇ ರೀತಿಯಲ್ಲಿ ಎಸ್ಟಾಬ್ಲಿಶ್‌ಮೆಂಟ್ ಕಾಸ್ಟ್ ಬಾರದ ರೀತಿಯಲ್ಲಿ ಜಿಲ್ಲಾ ಕೇಂದ್ರ ಅಥವಾ ವಿಧಾನಸಭಾ ಕ್ಷೇತ್ರದಲ್ಲಿರುವಂಥ ನೆಹರು ಯುವಕ ಕೇಂದ್ರದ ಯಾವ ಕಟ್ಟಡ ಇದೆ ಅದನ್ನು ಸದುಪಯೋಗ ಮಾಡಿಕೊಳ್ಳಬೇಕು ಅಥವಾ ಶಾಲಾ ಕಾಲೇಜು ಕಟ್ಟಡಗಳು ಏನಿವೆ ಅವುಗಳನ್ನು ಉಪಯೋಗಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರಿ ನೌಕರರ ಸಂಬಳದ ಬಗ್ಗೆ ಸಾಕಷ್ಟು ಉಲ್ಲೇಖವಿದೆ. 1995-96ರಲ್ಲಿ 2,480 ಕೋಟಿ ರೂಪಾಯಿಗಳು ಈಗ 2000ನೇ ಇಸವಿಯಲ್ಲಿ 5042 ಕೋಟಿ ರೂಪಾಯಿಗಳು ಇದೆ.

6.40 ಪಿ.ಎಂ.

ವಿಶೇಷವಾಗಿ ನೇಮಕಾತಿ ಮಾಡುವ ಸಂದರ್ಭದಲ್ಲಿ ಕೆಳಮಟ್ಟದಲ್ಲಿ ಕಾನ್‌ಸ್ಟೇಬಲ್ ಅಥವಾ ಎಎಸ್‌ಐ ಮಟ್ಟದಲ್ಲಿ ಯೋಚನೆ ಮಾಡುವುದಕ್ಕಿಂತ ಮೇಲ್ಮಟ್ಟದಲ್ಲಿ ಕಡಿತ ಮಾಡಬೇಕಾಗಿದೆ. ಎಷ್ಟು ಡಿಜಿಪಿಗಳು ನಮಗೆ ಬೇಕು? ಎಷ್ಟು ಐಜಿಗಳು ನಮಗೆ ಬೇಕು? ನಾವು ಕಡಿತ ಮಾಡುವಾಗ ಇದರ ಬಗ್ಗೆ ವಸ್ತುನಿಷ್ಠವಾಗಿ ಯೋಚನೆ ಮಾಡಬೇಕೆಂದು ಉಲ್ಲೇಖ ಮಾಡುತ್ತಿದ್ದೇನೆ. ನಮ್ಮ ಮಾನ್ಯ ಗೃಹಸಚಿವರು ಇಲ್ಲಿದ್ದಾರೆ. ನಿಜವಾಗಿಯೂ ಗ್ರಾಮಾಂತರ ಮಟ್ಟದಲ್ಲಿ ಕಾನ್‌ಸ್ಟೇಬಲ್‌ಗಳನ್ನು ಕೊಡುವಂತಹ ವ್ಯವಸ್ಥೆ ಇವತ್ತು ಆಗಿಲ್ಲ. ಕರಾವಳಿ ಪಡೆ ಬಗ್ಗೆ ಸಾಕಷ್ಟು ಚರ್ಚೆ ಈ ಸದನದಲ್ಲಿ ನಡೆದಿದೆ. ಇದರ ಬಗ್ಗೆ ಪ್ರಶ್ನೋತ್ತರ ವೇಳೆಯ ಸಂದರ್ಭದಲ್ಲೂ ಸಾಕಷ್ಟು ಮಾಹಿತಿ ನನಗೆ ಸಿಕ್ಕಿತ್ತು. ವಿಷಯ ಏನಾಗಿದೆ ಅಂದರೆ ಬಹುಶಃ ಎರಡು ಸಾವಿರಕ್ಕಿಂತ ಜಾಸ್ತಿ ಪಾಕಿಸ್ತಾನಿಗಳು ಕರ್ನಾಟಕದಲ್ಲಿದ್ದಾರೆ. ಏಷ್ಟೋ ಐಎಸ್‌ಐ ಚಟುವಟಿಕೆಗಳು ನಡೆಯುತ್ತಿದೆ, ಅನೇಕ ರೀತಿಯಲ್ಲಿ ಅಪಾಯಕರ ಸ್ಥಿತಿ ಇದೆ ಎಂಬ ಪತ್ರಿಕಾ ಹೇಳಿಕೆಗಳು ನಮ್ಮ ಮುಂದಿವೆ. ಈ ಹಿನ್ನೆಲೆಯಲ್ಲಿ ಕರಾವಳಿ ತೀರವನ್ನು ಕಾಪಾಡುವ ನಿಟ್ಟಿನಲ್ಲಿ ವಿಶೇಷವಾಗಿ ಅಲ್ಲಿ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಕರಾವಳಿ ಪಡೆಯನ್ನು ಮಾಡಿರುವುದಾಗಿ ಕಳೆದ ಸರ್ಕಾರ ಘೋಷಣೆ ಮಾಡಿತ್ತು. ಆದರೆ ವಸ್ತುನಿಷ್ಠವಾಗಿ ಅದರ ಬಗ್ಗೆ ಅಧ್ಯಯನ ಮಾಡಬೇಕು. ಯಾವ ರೀತಿ ಈ ಕಾವಲುಪಡೆ ಕೆಲಸ ಮಾಡುತ್ತಿದೆ ಎಂಬುದನ್ನು ಗಮನಿಸಿದಾಗ ಅಲ್ಲಿಗೆ ಕೊಟ್ಟಿರುವ ಬೋಟ್‌ಗಳು ಕೆಲವು ತಿಂಗಳಿಂದ ಅಲ್ಲ ವರ್ಷಗಳಿಂದ ಅಲ್ಲಾಡದೆ ಒಂದೇ ಕಡೆ ನಿಂತಿವೆ. ಕಾರಣ ಕೇಳಿದರೆ ಹಾಳಾಗಿದೆ ಎನ್ನುತ್ತಾರೆ. ಅದರಲ್ಲಿ ಡ್ರೈವರ್‌ಗಳೂ ಇಲ್ಲವಂತೆ. ಇಂತಹ ನಾಮಕಾವಸ್ತೆ ಕಾವಲುಪಡೆ ನಮಗೆ ದಯವಿಟ್ಟು ಬೇಡ. ಕಾರ್ಯರೂಪಕ್ಕೆ ಬರುವಂತಹ ಕಾವಲು ಪಡೆ ಮಾಡುವ ನಿಟ್ಟಿನಲ್ಲಿ ಇದರ ಬಗ್ಗೆ ತಾವು ವಿಶೇಷ ಚಿಂತನೆ ಮಾಡಬೇಕು. ಅಲ್ಲಿ ಕೊಟ್ಟಿರುವ ಸಲಕರಣೆಗಳು ಯಾವುವು, ಎಂತಹ ಅಧಿಕಾರಿಗಳು ಬಂದಿದ್ದಾರೆ.

ಹೆಚ್ಚಿನ ಅಧಿಕಾರಿಗಳು ಬೆಂಗಳೂರಿನಲ್ಲೇ ಯಾಕಿರುತ್ತಾರೆ ಇವುಗಳ ಬಗ್ಗೆ ಸಮಗ್ರವಾಗಿ ತಾವು ಯೋಚನೆ ಮಾಡಿಕೊಂಡು ಇದಕ್ಕೆ ಕಾಯಕಲ್ಪ ಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ಇನ್ನು ಕಲ್ಯಾಣ ಮಂಟಪಗಳ ಬಗ್ಗೆ ಅವರು ಹೇಳಿದ್ದಾರೆ. ದೊಡ್ಡ ಕಲ್ಯಾಣ ಮಂಟಪಗಳನ್ನು ನಾನು ಉಲ್ಲೇಖಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಕರಾವಳಿ ಪ್ರದೇಶ ಅಂದರೆ ಉಡುಪಿ ಮತ್ತು ಮಂಗಳೂರಿನಲ್ಲೇ ನೀವು ಹೆಚ್ಚಾಗಿ ಉಲ್ಲೇಖಿಸುತ್ತಿದ್ದೀರಿ. ಅಲ್ಲಿಗೆ ಪಾಕಿಸ್ತಾನೀಯರು 300-400 ಜನ ಬಂದಿದ್ದಾರೆ ಅಂತ ಹೇಳಿದಿರಿ. ನೀವು ಪ್ರಶ್ನೆ ಹಾಕಿದ ಅನೇಕ ಸಂದರ್ಭಗಳಲ್ಲೂ ಅದರ ಬಗ್ಗೆಯೇ ಕೇಳುವುದನ್ನು ಮಾಡುತ್ತಿದ್ದೀರಿ. ಕನಿಷ್ಠಪಕ್ಷ ತಾವು ಮಿನಿಮಂ ಮಾಹಿತಿಯನ್ನಾದರೂ ನಮಗೆ ಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ. ಇಂಥ ಕಡೆ ಇಂಥಿಂಥವರು ಬಂದಿದ್ದಾರೆಂಬ ಮಾಹಿತಿ ನಿಮ್ಮ ಬಳಿ ಇದೆ, ಯಾಕೆಂದರೆ ನೀವು ಸ್ಥಳೀಯ ಶಾಸಕರು, ಅಥೆಂಟಿಕ್ಕಾಗಿ ಸ್ವಲ್ಪ ಸುಳಿವು ಕೊಟ್ಟರೆ ನಾವು ಆಗ ಏನಾದರೂ ಪ್ರಯತ್ನಪಡುತ್ತೇವೆ. ಹಿಂದಿನ ರಿಕಾರ್ಡ್ಸ್ ನೋಡಿಕೊಂಡು, ಈಗೇನಿದೆ ಅದನ್ನು ನೋಡಿಕೊಂಡು ನಾವು ಪ್ರಯತ್ನ ಮಾಡಲು ಬರುತ್ತದೆ. ಅನೇಕ ಸಾರಿ ನಾವು ಸುಮ್ಮನೆ ಅಲ್ಲಿ ಐಎಸ್ಐನವರು ಇದ್ದಾರೆ ಅಂತ ಹೇಳಿಕೊಳ್ಳುತ್ತಲೇ ಹೋದರೆ ಅದಕ್ಕೆ ಏನಾದರೂ ಒಂದು ಪರಿಹಾರ ಬೇಕಲ್ಲ? ಇದರ ಬಗ್ಗೆ ನಾವು ನೀವು ಕೂಡಿ ಏನಾದರೂ ಪ್ರಯತ್ನ ಮಾಡಬೇಕಲ್ಲ? ಅದಕ್ಕಾಗಿ ಹಾಗೇನಾದರೂ ನಿಮ್ಮ ಹತ್ತಿರ ಮಾಹಿತಿ ಖಚಿತವಾಗಿದ್ದರೆ ಅದರ ಬಗ್ಗೆ ಹೇಳಿ. ಎರಡನೆಯದು ತಮಗೆ ಗೊತ್ತಿದೆ, ಅಲ್ಲಿ ಪೋಲೀಸ್ ಫೋರ್ಸನ್ನು ಈಗಾಗಲೇ ಇದಕ್ಕಾಗಿಯೇ ನಾವು ಹಾಕಿದ್ದೇವೆ. ಆದರೆ ಕೆಲವು ಅಧಿಕಾರಿಗಳು ಇಲ್ಲೇ ಇರುತ್ತಾರೆ ಅಂತ ತಾವು ಹೇಳಿದಿರಿ. ಅಂದರೆ ಅನೇಕ ವೇಕೆನ್ಸಿಗಳು ಫಿಲಪ್ ಆಗಿಲ್ಲ. ಈಗಲೂ ಡೈರೆಕ್ಟ್ ರಿಕ್ರೂಟೆಡ್ ಎಸ್ಐಗಳಿಲ್ಲ, ಪ್ರಮೋಷನ್ ಕೊಟ್ಟು ಇನ್ಸ್‌ಪೆಕ್ಟರ್‌ಗಳನ್ನು ಕಳಿಸುವುದು ಆಗಿಲ್ಲ. ಈಗೇನೋ ಕೆಲವು ಇನಸ್ಪೆಕ್ಟರ್ಸ್ ಮತ್ತು ಡಿವೈಎಸ್‌ಪಿಗಳನ್ನು ನಾವು ಕಳುಹಿಸಿದ್ದೇವೆ. ವೇಕೆನ್ಸಿಗಳನ್ನು ಫಿಲಪ್ ಮಾಡುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಆದರೆ ಇದರ ಬಗ್ಗೆ ತಮ್ಮ ಬಳಿ ಏನಾದರೂ ಖಚಿತ ಮಾಹಿತಿ ಇದ್ದರೆ ಖಂಡಿತವಾಗಿ ನಮಗೆ ಕೊಡಿ, ನಾವು ಅದನ್ನು ವೆರಿಫೈ ಮಾಡಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ಪ್ರಶ್ನೆಗೆ ಸಂಬಂಧಪಟ್ಟಹಾಗೆ ಹಿಂದೆ ನಾನು ಗೃಹ ಮಂತ್ರಿಯಾಗಿದ್ದಾಗ ಒಂದು ಸಲ ಉತ್ತರ ಕೊಟ್ಟಿದ್ದೇನೆ. ಅದರಲ್ಲಿ ಸಾಕಷ್ಟು ಡೀಟೈಲಾಗಿ ಎಲ್ಲಾ ಇದೆ, ವಿದೇಶಿ ಪ್ರಜೆಗಳು ಎಷ್ಟಿದ್ದಾರೆ, ಕಾಣೆಯಾದವರು ಎಷ್ಟಿದ್ದಾರೆ ಅಂತ. ಅದನ್ನು ತಾವು ತೆಗೆದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಗುಲ್ಬರ್ಗದಲ್ಲಿ ಮತ್ತು ಮೂರ್ನಾಲ್ಕು ಪ್ಲೇಸ್ ಬಿಟ್ಟರೆ ಬೇರೆ ಕಡೆ ಎಲ್ಲೂ ಇಲ್ಲ.

ಶ್ರೀ ಎನ್. ಯೋಗೀಶ್ ಭಟ್ : ಅದಕ್ಕೋಸ್ಕರವೇ ನಾನು ವಿನಂತಿ ಮಾಡಿದ್ದು, ಕರಾವಳಿ ಶಾಸಕರನ್ನು ವೈಯಕ್ತಿಕವಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಸಭೆಯನ್ನು ಮಾಡಿ ಎಂದು

ಏಕೆಂದರೆ ಮಾನ್ಯ ಸಚಿವರು ಬಂದಾಗ ಅಲ್ಲಿ ಕೇವಲ ಅಧಿಕಾರಿಗಳನ್ನು ಭೇಟಿಯಾಗುತ್ತಾರೆ, ಬರುತ್ತಾರೆ. ಅಲ್ಲಿ ಮುಕ್ತ ಚಿಂತನೆ ಮತ್ತು ಸಾರ್ವಜನಿಕವಾಗಿ ಚರ್ಚೆ ಮಾಡಲು ಆಗುವುದಿಲ್ಲ. ಈ ಬಗ್ಗೆ ಏನು ಮಾಹಿತಿ ಇದೆ ಅದನ್ನು ತಮಗೆ ಕಳುಹಿಸಿಕೊಡುವ ಕೆಲಸ ನಾನು ಮಾಡುತ್ತೇನೆ. ಈ ಸಂದರ್ಭದಲ್ಲಿ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಆದರೆ ತುಂಬಾ ನೋವಿನ ವಿಚಾರವೆಂದರೆ ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನಗಳಂತಹವು ಇವತ್ತು ಸರಿಯಾಗಿ ವಿತರಣೆ ಆಗುತ್ತಿಲ್ಲ. ಅನೇಕರು ಬಂದು ನನಗೆ ದೂರು ಕೊಡುತ್ತಿದ್ದಾರೆ, ಈ ಒಂದು ಕನಿಷ್ಠ ವೇತನವನ್ನಾದರೂ ಕೊಡಿ, ನಾವು ಒಂದು ಹೊತ್ತು ಗಂಜಿ ಊಟವಾದರೂ ಮಾಡುತ್ತೇವೆ ಅಂತ. ಇದು ಸರಿಯಾಗಿ ಆಗುವ ನಿಟ್ಟಿನಲ್ಲಿ ಮಾನ್ಯ ಸಚಿವರು ಮತ್ತು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಮತ್ತೆ ಈ ಅನಾಥಾಶ್ರಮಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ವೃದ್ಧಾಶ್ರಮ, ಅನಾಥಾಶ್ರಮಗಳಿಗೆ 1999ರ ಏಪ್ರಿಲ್ ನಂತರ ಹಣ ಬಿಡುಗಡೆ ಆಗಿಲ್ಲ. ನನ್ನ ಹತ್ತಿರ ಮಾಹಿತಿ ಇದೆ. ಕಳೆದ ಒಂದು ವರ್ಷದಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎಂಬ ಲೆಕ್ಕಾಚಾರ ನನ್ನ ಹತ್ತಿರ ಇದೆ. ಇವತ್ತು ದಾನಿಗಳ ನೆರವಿನಿಂದ ಅನಾಥಾಶ್ರಮಗಳು ನಡೆಯುತ್ತಿವೆ. ಖಂಡಿತವಾಗಿ ನಮ್ಮ ಗ್ರಾಂಟಿನ ಹಣದಿಂದ ನಡೆಯಲು ಆಗುತ್ತಿಲ್ಲ. ಇದರ ಬಗ್ಗೆ ಖಂಡಿತ ತುರ್ತು ಕ್ರಮ ಕೈಗೊಳ್ಳಬೇಕು. ಈ ಮಾರ್ಚಿ ಒಳಗಾದರೂ ಕೂಡ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಬೇಕು, ಇಲ್ಲದೇ ಹೋದರೆ ಲ್ಯಾಪ್ಸಾಗುತ್ತದೆ ಎಂದು ಹೇಳಬಯಸುತ್ತೇನೆ. ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ತಾವು ಮಂಗಳೂರು ಕ್ಷೇತ್ರದಲ್ಲಿರುವ ಅಮ್ಮಂದೂರು ಅಂಗವಿಕಲರ ಶಾಲೆಗೆ ಗ್ರಾಂಟನ್ನು ಕೊಟ್ಟಿದ್ದೀರಿ. ಆದರೆ ಆ ಶಾಲೆಯಲ್ಲಿ ಒಳ್ಳೆಯ ಕೆಲಸ ನಡೆಯುತ್ತಿದ್ದರೂ ಕೂಡ ಸರ್ಕಾರದ ಕೆಲವು ತಾಂತ್ರಿಕ ತೊಡಕುಗಳಿಂದಾಗಿ ಇವತ್ತು ಗ್ರಾಂಟು ಸಿಗುತ್ತಿಲ್ಲ. ಅಂತಹ ಎನ್‌ಜಿಎಸ್ ಸಂಸ್ಥೆ ನಡೆಸುತ್ತಿರುವಾಗ ನಾವು ಗ್ರಾಂಟ್ ಕೊಟ್ಟು ಅವರಿಗೆ ಪ್ರೋತ್ಸಾಹ ಕೊಟ್ಟರೆ ಅದರ ಸದುಪಯೋಗವಾಗುತ್ತದೆ. ಈ ಬಗ್ಗೆ ಕೂಡ ತಾವು ಯೋಚಿಸಬೇಕೆಂದು ಹೇಳುತ್ತೇನೆ. ಇನ್ನು ಮಹಾನಗರಪಾಲಿಕೆ, ಪಂಚಾಯ್ತಿಗಳ ಅಭಿವದ್ಧಿ ಬಗ್ಗೆ ಅದು ಈ ಡೆಮಾಕ್ರಸಿಯಲ್ಲಿ ಮೂಲಭೂತ ಸಮಸ್ಯೆ ಅಲ್ಲವೆಂದು ಬಜೆಟ್ ಅಧಿವೇಶನದ ಸಮಯದಲ್ಲಿ ಉಲ್ಲೇಖವಾಗಿದೆ. ನಾವು ಯಾವ ರೀತಿಯ ಆದ್ಯತೆ ಕೊಡುತ್ತಿದ್ದೇವು ಎಂದು ನಾನು ಉಲ್ಲೇಖಿಸುತ್ತೇನೆ. ಮಹಾನಗರಪಾಲಿಕೆಗೆ ಕೊಡುವ ಗ್ರಾಂಟ್ ಏನಿದೆ ಮೊನ್ನೆ 80 ಲಕ್ಷ ಬಾಕಿ ಇತ್ತು. ಅಲ್ಲಿ ಸಂಬಳ ಕೊಡುವ ಸ್ಥಿತಿಯಲ್ಲಿಲ್ಲ. ಕಮೀಶನರ್ ಇಲ್ಲಿ ಬಂದು ನಮಗೆ ಕೊಡಬೇಕಾದ ಗ್ರಾಂಟ್ ಕೊಡಿ ಎಂದು ಕೇಳುವ ದುಸ್ಥಿತಿ ಇದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. ಕ್ಲುಪ್ತ ಸಮಯದಲ್ಲಿ ಕೊಡಬೇಕಾದ ಗ್ರಾಂಟ್ ಕೊಡಿ ಎಂದು ವಿನಂತಿಸುತ್ತೇನೆ. ಕರ್ನಾಟಕ 10ನೇ ಆರ್ಥಿಕ ಆಯೋಗದ ಮೂಲಕ 30 ಲಕ್ಷ ಏನು ಕೊಡಬೇಕಾಗಿತ್ತು ಇವತ್ತಿಗೂ ಅದು ಬಿಡುಗಡೆಯಾಗಿಲ್ಲ. ಇವತ್ತು ಅದನ್ನು ಬಿಡುಗಡೆ ಮಾಡಬೇಕೆಂದು ಮಂಗಳೂರು ಮಹಾನಗರ ಪಾಲಿಕೆ ಪರವಾಗಿ ನಾನು ವಿನಂತಿ ಮಾಡುತ್ತೇನೆ. ಮತ್ತು ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಶುಲ್ಕವನ್ನು ಹೆಚ್ಚಿಸುವ ಪ್ರಯತ್ನ ನಡೆದಿದೆ. ಸರ್ಕಾರಿ ಶಾಲೆ ಕಾಲೇಜುಗಳಿಗೆ ಬರುವವರು ಅತ್ಯಂತ ಬಡ ವಿದ್ಯಾರ್ಥಿಗಳು, ಅವರಿಗೆ ಇದರಿಂದ ದೊಡ್ಡ

ಆಘಾತವಾಗಿದೆ. ಮತ್ತೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಇಲಾಖೆಯ ಸಚಿವರು ಉತ್ತಮ ಸಚಿವರಿದ್ದರೂ ಅವರಲ್ಲಿ ನನ್ನ ವಿನಂತಿ ಏನೆಂದರೆ, ಔಷಧಿಯನ್ನು ಖರೀದಿಸುವ ಬಗ್ಗೆ ಒಂದು ಸ್ಪಷ್ಟ ನೀತಿ ಹಾಕಿಕೊಂಡು ಅಲ್ಲಿ ಆಗುವ ಭ್ರಷ್ಟಾಚಾರ ತಪ್ಪಿಸುವತ್ತ ವಿಶೇಷ ಕಾಳಜಿ ವಹಿಸಬೇಕೆಂದು ವಿನಂತಿಸುತ್ತೇನೆ. ಇನ್ನು ಸಮಾಜಕಲ್ಯಾಣಕ್ಕೆ ಸಂಬಂಧಿಸಿದಂತೆ ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನ ಕ್ಷೇತ್ರಕ್ಕೆ ಬಂದಿದ್ದರು. 23 ಲಕ್ಷದಲ್ಲಿ ಕಟ್ಟಿದ ಕಟ್ಟಡ ಇವತ್ತು ಅದನ್ನು ಕೆಡವುವ ಸ್ಥಿತಿಗೆ ಬಂದಿದೆ. ಅದು ಪರಿಶಿಷ್ಟ ಕೋಮಿಗೆ ಸೇರಿದ ವಿದ್ಯಾರ್ಥಿ ನಿಲಯ. ಅಂದರೆ ಯಾವ ರೀತಿ 18 ಪರ್ಸೆಂಟ್ ಹಣ ದುರುಪಯೋಗವಾಗುತ್ತಿದೆ ಎಂದು ಉದಾಹರಿಸಲು ಇದನ್ನು ಹೇಳಿದ್ದೇನೆ. ಇವತ್ತಿಗೂ ಅದನ್ನು ಏನು ಮಾಡಬೇಕೆಂದು ಸ್ಪಷ್ಟ ಸೂಚನೆ ಸರ್ಕಾರದಿಂದ ಬಂದಿಲ್ಲ. ಇದನ್ನು ಸರಿಪಡಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ವಿಶೇಷವಾಗಿ ಟೆಕ್ನಾಲಜಿ ಪಾರ್ಕಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಮಂಗಳೂರಿಗೆ ಮತ್ತು ಉಡುಪಿಗೆ ಟೆಕ್ನಾಲಜಿ ಪಾರ್ಕನ್ನು ಮಂಜೂರು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇದರ ಜೊತೆಗೆ ಮಂಗಳೂರನ್ನು ರಫ್ತೋದ್ಯಮ ಕೇಂದ್ರ ಹಾಗೂ ಪ್ರವಾಸೋದ್ಯಮ ಕೇಂದ್ರ ಮಾಡುವ ನಿಟ್ಟಿನಲ್ಲಿ ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಬೇಕಾಗುತ್ತದೆ. ಇದಕ್ಕಾಗಿ ಸರ್ಕಾರ 5 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿದಲ್ಲಿ ಅಲ್ಲಿರುವ ಎರಡನೇ ರನ್‌ವೇ ಏನಿದೆ ಅದನ್ನು ಅಭಿವೃದ್ಧಿಪಡಿಸಿ ಮುಂದಕ್ಕೆ ಅಂತರರಾಷ್ಟ್ರೀಯ ನಿಲ್ದಾಣವಾಗಿ ಅದನ್ನು ಅಭಿವೃದ್ಧಿಗೊಳಿಸಬಹುದು. ಅದಕ್ಕೆ 125 ಕೋಟಿ ರೂಪಾಯಿಗಳ ಕೇಂದ್ರದ ನೆರವನ್ನೂ ಸಹ ಪಡೆಯಲು ಸಾಧ್ಯವಿದೆ.

ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಒಂದು ವಿಶೇಷ ವಿನಂತಿ ಏನೆಂದರೆ, ತಾವು ತಮ್ಮ ಬಜೆಟ್‌ನಲ್ಲಿ ಚಿಟ್ ಫಂಡ್‌ಗೆ ಸಂಬಂಧಪಟ್ಟ ವಿಶೇಷ ಮಸೂದೆಯನ್ನು ತರುತ್ತೀರಿ ಎಂದು ನಾನು ಗಮನಿಸಿದ್ದೆ. ಕಳೆದ ಕೆಲವು ತಿಂಗಳ ಹಿಂದೆ ಮಂಗಳೂರಿನಲ್ಲಿ ಸುಮಾರು ಒಂದು ಸಾವಿರ ಜನ ಇನ್‌ವೆಸ್ಟರ್ಸ್, ಇನ್‌ವೆಸ್ಟರ್ಸ್ ಎಂದರೆ ನಾನ್ ಬ್ಯಾಂಕಿಂಗ್ ಫೈನಾನ್ಸ್ ಕಂಪನಿಗಳಲ್ಲಿ ಇನ್‌ವೆಸ್ಟ್ ಮಾಡಿದಂತಹ ವ್ಯಕ್ತಿಗಳು ಅವರಲ್ಲಿ ಹೆಚ್ಚಿನವರು ವೃದ್ಧಾಪ್ಯದಲ್ಲಿದ್ದರು, ನಿವೃತ್ತಿಯ ಅಂಚಿನಲ್ಲಿದ್ದರು. ಕೆಲವರು ನಿವೃತ್ತಿ ಕೂಡ ಆಗಿದ್ದರು. ಮಧ್ಯಮ ವರ್ಗದವರಾದ ಇವರು ತಮ್ಮ ಜೀವನದ ಕೊನೆಯ ಹಂತದಲ್ಲಿ ಏನಾದರೂ ಸಹಾಯವಾಗುತ್ತೆ ಎಂದು ಹೇಳಿ ಇಂಥ ನಾನ್-ಬ್ಯಾಂಕಿಂಗ್ ಫೈನಾನ್ಸ್ ಕಂಪನಿಗಳಲ್ಲಿ ತಮ್ಮ ಹಣವನ್ನು ಇಟ್ಟುಕೊಂಡಿದ್ದರು. ಆದರೆ ಇವತ್ತು ಅವರು ನೂರಾರು ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಇದರಿಂದಾಗಿ ಅನೇಕರಿಗೆ ಜೀವನ ನಡೆಸುವುದೇ ಕಷ್ಟವಾಗಿದೆ. ತಮ್ಮ ವೃದ್ಧಾಪ್ಯದ ಸಂದರ್ಭದಲ್ಲಿ ಯಾವುದೇ ಸಂದರ್ಭದಲ್ಲಿ ತುರ್ತು ಹಣ ಮಗಳ ಮದುವೆಗೆ ಬೇಕಾಗಬಹುದು, ಇನ್ನಿತರ ಖರ್ಚಿಗೆ ಬೇಕಾಗಬಹುದು ಎಂದು ಇಟ್ಟಂಥ ಹಣ ಕೂಡ ಖೋತಾ ಆಗುವ ಸ್ಥಿತಿ ಬಂದಿದೆ. ರಾಜ್ಯ ಸರ್ಕಾರದ ಕಡೆಯಿಂದ ಇದರ ಬಗ್ಗೆ ಯಾವುದೇ ರೀತಿಯಿಂದ ಚಿಂತನೆಯಾಗಿಲ್ಲ. ಬಹುಶಃ ಈ ಬಗ್ಗೆ ಕಟ್ಟುನಿಟ್ಟಿನ ಮಸೂದೆ ತಂದು ಇದನ್ನು ವಸೂಲಿ ಮಾಡುವ ಬಗ್ಗೆ ಯಾವುದೇ ರೀತಿಯಾದ ಕಾನೂನನ್ನು ತರುವುದು ಅವಶ್ಯಕತೆ ಇದೆ ಎನ್ನುವ ಅಂಶವನ್ನು ನಾನು ಒತ್ತಿ ಹೇಳುತ್ತಿದ್ದೇನೆ. ವಿಶೇಷವಾಗಿ ಇನ್‌ಸ್ಯೂರೆನ್ಸ್ ವ್ಯಾಪ್ತಿಗೆ

ಒಳಪಟ್ಟಲ್ಲಿ ಅವರು ಇಟ್ಟಿರುವ ಡಿಪಾಸಿಟ್‌ಗೆ ಸೆಕ್ಯುರಿಟಿ ಕೂಡ ಸಿಗುತ್ತೆ. ಅದೇ ರೀತಿ ಇನ್‌ಸ್ಯೂರೆನ್ಸ್ ಮೂಲಕ ಭದ್ರತೆ ಕೂಡ ಸಿಗುತ್ತೆ ಇದಕ್ಕೂ ಕೂಡ ಸರ್ಕಾರ ಸೂಕ್ತ ಗಮನವನ್ನು ಹರಿಸಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಮತ್ತೆ ವಿಶೇಷವಾಗಿ ನಮ್ಮ ಕೇರಳ, ತಮಿಳುನಾಡು, ಆಂಧ್ರ ರಾಜ್ಯಗಳ್ಲಲಿ ಕೂಡ ಇದರ ಬಗ್ಗೆ ಇಂಥ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದಾರೆ. ಮತ್ತು ಅದರ ಜೊತೆಯಲ್ಲಿ ಸ್ಪೆಷಲ್ ಕೋರ್ಟುಗಳನ್ನು ಮಾಡಿದರೂ ಪರವಾಗಿಲ್ಲ. ಮತ್ತೆ ಸೆಕ್ಷನ್ 138 ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟಿನ ಪ್ರಕಾರ ಇವತ್ತು ಯಾವ ರೀತಿ ಚೆಕ್‌ಗಳು ರಿಟರ್ನ್ ಆಗುತ್ತಿವೆ, ಬೌನ್ಸ್ ಆಗುತ್ತಿವೆ, ಅದರ ಬಗ್ಗೆ ಸಿವಿಲ್ ಕೋರ್ಟಿಗೆ ಹೋದರೆ ಅದರ ವಸೂಲಿ ಮಾಡುವುದಕ್ಕೆ ನಾಲ್ಕೈದು ವರ್ಷಗಳಾಗುತ್ತದೆ. ಕೇರಳದಲ್ಲಿ ಮತ್ತು ಇನ್ನಿತರ ಕಡೆಗಳಲ್ಲಿ ಇರುವಂತೆ ನಮ್ಮಲ್ಲಿ ಕೂಡ ತುರ್ತಾಗಿ ಸಮನ್ಸ್ ಜಾರಿ ಮಾಡಬೇಕು, ತಕ್ಷಣಕ್ಕೆ ಅದು ಕಾರ್ಯರೂಪಕ್ಕೆ ಬರುವಹಾಗೆ ಕಾನೂನಿಗೆ ತಿದ್ದುಪಡಿ ತಂದರೆ ಅನೇಕ ಬಡಪಾಯಿಗಳಿಗೆ ಇದರಿಂದ ಲಾಭವಾಗಬಹುದು. ಅವರ ನೊಂದ ಮನಸ್ಸಿಗೆ ಒಂದು ಸಾಂತ್ವನ ಕೂಡ ಸಿಗಬಹುದು ಎನ್ನುವ ಅಂಶವನ್ನು ನಾನು ಉಲ್ಲೇಖ ಮಾಡುತ್ತಿದ್ದೇನೆ. ಅದೇ ರೀತಿ ನ್ಯಾಯಾಂಗ ಸುಧಾರಣೆಗೆ ಸಂಬಂಧಪಟ್ಟ ಹಾಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಾನೂನು ತಜ್ಞರು ಸಹ ಆಗಿರುವುದರಿಂದ ಯಾವ ರೀತಿಯಲ್ಲಿ ಈ ಕೇಸುಗಳನ್ನು ತ್ವರಿತವಾಗಿ ಎರಡು-ಮೂರು ವರ್ಷಗಳಲ್ಲಿ ಇತ್ಯರ್ಥವಾಗುವ ನಿಟ್ಟಿನಲ್ಲಿ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು, ಯಾವ ರೀತಿ ಸ್ಪೆಷಲ್ ಕೋರ್ಟುಗಳ ಮೂಲಕ ಅಥವಾ ರಿಟೈರ್ಡ್ ಜಡ್ಜ್‌ಗಳನ್ನು ಅಲ್ಲಿ ನಿಯೋಜಿಸುವುದರ ಮೂಲಕ ಯಾವುದೇ ರೀತಿಯಲ್ಲಿ ಈ ರೀತಿ ಪೆಂಡಿಂಗ್ ಇರುವ ಕೇಸ್‌ಗಳು ಯಾವುದು ಇದೆ, ಲಕ್ಷಗಟ್ಟಲೇ ಇರುವ ಕೇಸ್‌ಗಳನ್ನು ಇತ್ಯರ್ಥ ಮಾಡುವ ಒಂದು ವಿಶೇಷ ಪ್ರಯತ್ನವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಅದರ ಜೊತೆಯಲ್ಲಿ ಇಡೀ ನ್ಯಾಯಾಂಗ ವ್ಯವಸ್ಥೆಯನ್ನು ಕಂಪ್ಯೂಟರೀಕರಣಗೊಳಿಸಿದಲ್ಲಿ ನಿಜವಾಗಿ ಬಡಜನರಿಗಂತೂ ವಿಶೇಷವಾಗಿ ಇದರಿಂದ ಲಾಭವಾಗುತ್ತದೆ. ಇವತ್ತೊಂದು ಕೋರ್ಟ್ ಜಡ್ಜ್‌ಮೆಂಟ್ ಬಂದರೆ ಮೂರು ತಿಂಗಳಾದರೂ ವಾಪಸ್ ಪಡೆಯಲು ಸಾಧ್ಯವಾಗುವುದಿಲ್ಲ. ಅದು ಪುಸ್ತಕ ರೂಪದಲ್ಲಿ, ಲಿಖಿತ ರೂಪದಲ್ಲಿ ಬರಬೇಕಾದರೆ ಅನೇಕ ಸಂದರ್ಭಗಳಲ್ಲಿ ಮೂರು ತಿಂಗಳುಗಳ ಕಾಲ ಹೋರಾಡಬೇಕಾಗುತ್ತದೆ. ಮರುದಿವಸವೇ ಕಂಪ್ಯೂಟರ್ ಮೂಲಕ ಪಡೆಯುವಂತೆ, ತಮ್ಮ ಜಡ್ಜ್‌ಮೆಂಟ್ ಏನಾಗಿದೆ ಎಂದು ಮನೆಯಲ್ಲಿ ಕುಳಿತುಕೊಂಡು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಬಹುಶಃ ಕರ್ನಾಟಕದ ನ್ಯಾಯಾಂಗ ಇಲಾಖೆಯಲ್ಲಿ ಕಂಪ್ಯೂಟರೀಕರಣಗೊಳಿಸಿ ಒಂದು ಹೊಸ ಕ್ರಾಂತಿಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತೆ ವಿಶೇಷವಾಗಿ ಜ್ಯುಡಿಷಿಯರಿಗೆ ಸಂಬಂಧಪಟ್ಟ ಹಾಗೆ ಯಾವುದೇ ರೀತಿ ಬಜೆಟ್‌ನಲ್ಲಿ ತೋರಿಸಿಲ್ಲ. ಇದಕ್ಕೆ ಸಂಬಂಧಿಸಿದಂತೆ ವಿಶೇಷವಾದ ಬಜೆಟನ್ನು ತಾವು ಕೊಡಬೇಕು. ಮಂಗಳೂರಿಗೆ ಸಂಬಂಧಪಟ್ಟಹಾಗೆ ನ್ಯಾಯಾಲಯಕ್ಕೆ ಸಂಬಂಧಪಟ್ಟ ಕಟ್ಟಡ ಯಾವುದು ಇದೆ, ಮಾನ್ಯ ಪಿ.ಎಫ್. ರೋಡ್ರಿಗಸ್ ಮಂತ್ರಿಗಳಾಗಿದ್ದಾಗ ಹಾಕಿರುವ ಶಂಕುಸ್ಥಾಪನೆ ಒಂದು ಹಂತದಲ್ಲಿ ಮಾತ್ರ ಬಂದಿದೆಯೇ ವಿನಹಾ ಅದನ್ನು ಪೂರ್ತಿಗೊಳಿಸಲಿಕ್ಕೆ ಇವತ್ತಿಗೂ ಸಹಾ ಸಾಧ್ಯವಾಗಿಲ್ಲ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚಿನ

ಅನುದಾನವನ್ನು ಬಿಡುಗಡೆ ಮಾಡಿ ಈ ನ್ಯಾಯಾಲಯದ ಕಟ್ಟಡವನ್ನು ಪೂರ್ತಿಗೊಳಿಸುವ ನಿಟ್ಟಿನಲ್ಲಿ ತಾವು ಸಹಾಯ ಮಾಡಬೇಕೆಂದು ಹೇಳುತ್ತೇನೆ. ನಾನು ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ಗಮನಿಸಿರುವ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅನೇಕ ನಮ್ಮ ನಿಗಮಗಳ ಕಾರ್ಯಾಚರಣೆಯನ್ನು ಗಮನಿಸತಕ್ಕದ್ದು ಮತ್ತು ಅವರ ಡೀಟೈಲ್ಡ್ ರಿಪೋರ್ಟನ್ನು ಪಡೆಯುವ ಅವಕಾಶ ನಮಗಾಯಿತು. ಆ ಸಂದರ್ಭದಲ್ಲಿ ಉಲ್ಲೇಖ ಮಾಡಬೇಕಾಗಿರುವುದು ಕೆಎಸ್ ಅಂಡ್ ಡಿಎಲ್ ಯಾವುದು ಇದೆ, ಅವರು ತೋರಿಸುವ ಒಂದು ಪ್ರಗತಿ 16 ಕೋಟಿ ರೂಪಾಯಿಗಳ ಲಾಭವನ್ನು ಅವರು ಹೇಗೆ ಮಾಡಿದರು ಎಂದು ಗಮನಿಸಿದಾಗ ಬೇರೆ ನಿಗಮಗಳಲ್ಲಿ ಪ್ರೊಫೆಷನಲ್ ಅಪ್ರೋಚ್‌ನಲ್ಲಿ ಎಲ್ಲೋ ಕೊರತೆಯಾಗಿದೆ ಎಂದು ಅನಿಸುತ್ತದೆ. ಆ ರೀತಿ ಲ್ಯಾಪ್ಸ್ ಆಗಿರುವುದನ್ನು ಸರಿಪಡಿಸದಲ್ಲಿ ಒಬ್ಬ ಅಧಿಕಾರಿ ಶ್ರಮಪಟ್ಟು ರಾತ್ರಿ ಹಗಲು ದುಡಿದಾಗ ಇಡೀ ಟೀಮನ್ನು ಮೋಟಿವೇಟ್ ಮಾಡಿದಾಗ ಅದರ ಫಲಶ್ರುತಿಯಾಗಿ ಹೇಗೆ ನಷ್ಟದಲ್ಲಿರುವ ಕಂಪನಿ ಲಾಭಕ್ಕೆ ಬಂತು ಎಂದು ಹೇಳುವ ಅಂಶ ನಮ್ಮ ಗಮನಕ್ಕೆ ಬಂದಿದೆ. ಇದೇ ರೀತಿ ಬೇರೆ ನಿಗಮಗಳೂ ಕೂಡ ಲಾಭದತ್ತ ಹೋಗುವ ನಿಟ್ಟಿನಲ್ಲಿ ಏನು ಕಾರ್ಯಕ್ರಮ ಹಾಕಿದ್ದೀರಿ ಎನ್ನುವ ಬಗೆಗೆ ಸ್ಪಷ್ಟೀಕರಣ ನೀಡಬೇಕು. ಹಾಗೂ ನಮ್ಮ ಕಠಾವಳಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ತುಂಬಾ ಆಶೋತ್ತರಗಳನ್ನು ಇಟ್ಟುಕೊಂಡರೂ ಕೂಡ ಯಾವುದೇ ಕಾರ್ಯಕ್ರಮಗಳ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡದೇ ಇರುವುದರಿಂದ ಅನಿವಾರ್ಯವಾಗಿ ಇದನ್ನು ನಾನು ವಿರೋಧಿಸಬೇಕಾಗುತ್ತದೆ. ಇಷ್ಟಿದ್ದರೂ ಕೂಡ ಉಲ್ಲೇಖ ಮಾಡಿರುವ ಒಳ್ಳೆಯ ಅಂಶಗಳು ಯಾವುದು ಇದೆ, ನಮ್ಮ ರಾಜ್ಯದ ಹಾಗೂ ಕರಾವಳಿಯ ಹಾಗೂ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಅದಕ್ಕೆ ಪೂರಕವಾಗಿರುವ ಅಂಶಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ತೆಗೆದುಕೊಂಡು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯತ್ತ ಖಂಡಿತ ಗಮನಹರಿಸುತ್ತಾರೆಂದು ಒಂದು ವಿಶ್ವಾಸದೊಟ್ಟಿಗೆ ಇಷ್ಟು ಕಾಲ ಅವಕಾಶವನ್ನು ಕೊಟ್ಟ ತಮಗೆ ವಿಶೇಷವಾದ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಬೆಳಿಗ್ಗೆ ನಾವು ಹೇಳಿದ ಹಾಗೆ ಇವತ್ತು ಚರ್ಚೆಯನ್ನು ಮುಗಿಸೋಣ ಎಂದು ಹೇಳಿದ್ದೆವಲ್ಲ, ಬಹುಶಃ ನೀವೆಲ್ಲ ಸಹಕರಿಸಿ ಮುಗಿಸಿದಂತೆ ಕಾಣುತ್ತದೆ, ಬಹಳ ಸಂತೋಷ. ಒಂದು ವಿಷಯ ನಮ್ಮ ಮುಂದಿದೆ. ನಾಳೆ ಬೆಳಿಗ್ಗೆ 12 ಗಂಟೆಗೆ ವಿಶ್ವಬ್ಯಾಂಕ್‌ನ ಡೈರೆಕ್ಟರ್ ಬರುತ್ತಿದ್ದಾರೆ, ಮುಖ್ಯಮಂತ್ರಿಗಳು ಅವರೊಡನೆ ಮಾತನಾಡುವುದು ಬಹಳ ಮುಖ್ಯವಾದುದು ಇದೆ. ಅದಕ್ಕಾಗಿ ನಾವು ಬೆಳಿಗ್ಗೆ 9.30 ಗಂಟೆಯಿಂದ 1.00 ಗಂಟೆಯವರೆಗೂ ಒಂದು ಸೆಷನನ್ನು ಕರೆದಿದ್ದೇವೆ. ಬೆಳಿಗ್ಗೆ ಪ್ರಶ್ನೋತ್ತರ ವೇಳೆ ಇಲ್ಲ. ಮತ್ತೆ ಪ್ರಶ್ನೋತ್ತರ ಮತ್ತು ಇತರ ಕಲಾಪಗಳು 2 ರಿಂದ 5 ಗಂಟೆಯವರೆಗೆ. ಏಕೆಂದರೆ 6 ಗಂಟೆಗೆ ಫಂಕ್ಷನ್ ಇದೆಯಲ್ಲ. ಮಾನ್ಯ ಮುಖ್ಯಮಂತ್ರಿಗಳು 12 ಗಂಟೆಗೆ ಅಲ್ಲಿಗೆ ಹೋಗಬೇಕಾಗಿದೆ. ಏಕೆಂದರೆ ವರ್ಲ್ಡ್ ಬ್ಯಾಂಕ್ ಡೈರೆಕ್ಟರ್ಸ್ ಅವರುಗಳು ಕಾಯುವುದಿಲ್ಲ. ಅವರಿಗೆ ಅಗೌರವ ಆದಂತಾಗುತ್ತದೆ. ಈಗ ಏನು ಮಾಡೋಣ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮ್ಮಲ್ಲಿ ಇಬ್ಬರೂ-ಮೂವರು ಮಾತನಾಡಬೇಕೆಂದು ಇದ್ದೇವೆ. ಅವರು ಒಪ್ಪಿದರೆ ಮಾತನಾಡುತ್ತೇವೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ವರ್ಲ್ಡ್ ಬ್ಯಾಂಕ್ ಮ್ಯಾನೇಜಿಂಗ್ ಡೈರೆಕ್ಟರ್ ಎರಡು ತಿಂಗಳ ಕೆಳಗೆ ನಾನು ನಾಳೆ ಬರುತ್ತಿದ್ದೇನೆ ಎಂದು ಹೇಳಿದ್ದಾರೆ. ಅವರ ಗೌರವಾರ್ಥ ಒಂದು ಲಂಚನ್ನು ಏರ್ಪಾಡು ಮಾಡಿದ್ದೇನೆ. ಅದ್ದರಿಂದ ನನಗೆ 12.30 ಗಂಟೆಯಿಂದ 3 ಗಂಟೆವರೆಗೆ ಬಿಡುವು ಮಾಡಿಕೊಡಬೇಕು. ಆಮೇಲೆ ನಾನು ಸದನದ ವಶದಲ್ಲಿರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಈಗ ಬಜೆಟನ್ನು ಮತ್ತು ಅಪ್ರೋಪ್ರಿಯೇಷನ್ ಬಿಲ್ಲನ್ನು ಯಾವುದೇ ಕಾರಣದಿಂದ ನಾಳೆ 4 ಗಂಟೆ ಒಳಗೆ ನಾವು ಪಾಸು ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆ. ಅದರ ಬಗ್ಗೆ ಮಾತನ್ನೂ ತಮಗೆ ಕೊಟ್ಟಿದ್ದೇವೆ, ಬಿಎಸಿ ಯಲ್ಲೂ ಕೂಡ ಅದನ್ನೇ ಹೇಳಿದ್ದೇವೆ. ಇಲ್ಲೂ ಕೂಡ ವಚನ ಕೊಡುತ್ತಿದ್ದೇವೆ. ಮತ್ತೊಮ್ಮೆ ಹೇಳುತ್ತೇವೆ. ಅದರ ಇಂಪ್ಲಿಕೇಷನ್ಸ್ ಏನು ಎಂದು ನಮಗೆ ಅರ್ಥವಾಗುತ್ತದೆ. ನಿಮಗೊಂದು ಬಫರ್ ಇರಬೇಕಾಗುತ್ತದೆ. ನಾಡಿದ್ದು ಬೆಳಿಗ್ಗೆ ಅಲ್ಲೇನಾದರೂ ಹೆಚ್ಚುಕಡಿಮೆಯಾದರೆ ಈ ಮನೆಗೆ ಅದನ್ನು ತೆಗೆದುಕೊಂಡು ಬಂದು 31ನೇ ತಾರೀಖು ಸಾಯಂಕಾಲದೊಳಗಡೆ ಪಾಸು ಮಾಡಲಿಕ್ಕೆ ಈ ಸಭೆಗೆ ವಿಷಯವನ್ನು ತಿಳಿಸಬೇಕಾಗುತ್ತದೆ. ಮತ್ತೆ ಮರುಪಾಸ್ ಮಾಡಬೇಕಾಗುತ್ತದೆ. ಅಲ್ಲೂ ಕೂಡ ಯಾರು ಬಿಲ್ಲನ್ನು ಪಾಸ್ ಮಾಡದೇ ಇರುವುದಿಲ್ಲ. ನಾವು ಇನ್ನು ಐದಾರು ಜನ ಮಾತನಾಡುವವರಿದ್ದೇವೆ. ನಾವು ಮಾತನಾಡಿಲ್ಲ. ಸ್ವಲ್ಪ ಹೊತ್ತು ಮಾಡನಾಡೋಣ ಎಂದು ಇದ್ದೇವೆ.

ಅಧ್ಯಕ್ಷರು : ಐದಾರು ಜನರು ಎಂದರೆ ಜಾಸ್ತಿಯಾಯಿತು. ನಿಮ್ಮ ನಿಮ್ಮ ಪಕ್ಷದ ಹೊಸ ಸದಸ್ಯರುಗಳು ಬಂದು ನನಗೆ ಹೇಳುತ್ತಾರೆ, ಯಾವಾಗಲೂ ಮುಂದುಗಡೆ ಇರುವವರಿಗೆ ಅವಕಾಶವನ್ನು ಜಾಸ್ತಿ ಕೊಡುತ್ತೀರಿ. ನಮಗೆ ಕೊಡುವುದೇ ಇಲ್ಲ ಎಂದು ಹೇಳುತ್ತಾರೆ. ಆ ರೀತಿ ಬೇಕಾದಷ್ಟು ಜನರು ಬಂದು ನನಗೆ ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಈ ಬಾರಿ ನಾವ್ಯಾರೂ ಮುಂದುಗಡೆ ಇರುವವರು ಮಾತನಾಡಿಲ್ಲ. ನಾವೆಲ್ಲಾ ಸುಮ್ಮನೆ ಕುಳಿತು ಹಿಂದುಗಡೆ ಇರುವವರು ಮಾತನಾಡಲಿ ಎಂದು ಹೇಳಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದು ಸರಿ. ಅದಕ್ಕೋಸ್ಕರ ನಾವು ಬೇರೆ ಬೇರೆ ಸದಸ್ಯರಿಗೆ ಈ ಸಾರಿ ಇನಿಷಿಯೇಟ್ ಮಾಡಲಿಕ್ಕೆ ಅವಕಾಶವನ್ನು ಮಾಡಿ ಕೊಡುತ್ತೇವೆ. ಸರ್ಕಾರಕ್ಕೆ ನಮ್ಮ ಅನುಭವ ಅಥವಾ ನಮ್ಮ ಅಭಿಪ್ರಾಯಗಳು ಬೇಕು ಎನ್ನುವುದಾದರೆ ಅವಕಾಶ ಮಾಡಿಕೊಡಿ ಅದು ಬೇಡ ಎನ್ನುವುದಾದರೆ ನಾವೇನು ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಒಳ್ಳೆಯ ಅಭಿಪ್ರಾಯಗಳನ್ನು ತಾವು ಕೊಡುತ್ತೀರಿ. ಬೇಡ ಎನ್ನುವ ಪ್ರಶ್ನೆ ಏನಿಲ್ಲ. ಒಂದು ಕೆಲಸ ಮಾಡೋಣ. ನಾಳೆ ಬೆಳಿಗ್ಗೆ 9.30 ಗಂಟೆಗೆ ಸಭೆ ಕರೆದಿದ್ದೇವೆ. 9.30

ಗಂಟೆಗೆ ಶುರು ಮಾಡಿದರೆ 10.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಶುರುವಾಗುತ್ತದೆ. ಅವರಿಗೆ ಒಂದು ಗಂಟೆ ಎಂದರೆ 11.30 ಗಂಟೆಯಾಗುತ್ತದೆ. ಆಮೇಲೆ ಸಪ್ಲಿಮೆಂಟರಿ ಬಜೆಟನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ಎಸ್.ಎಸ್. ಪಾಟೀಲರು ನಮ್ಮ ಕಡೆಯಿಂದ ಮಾತನಾಡುತ್ತಾರೆ. ನಾಳೆ ನಾನು ಅರ್ಧ ಗಂಟೆ ಮಾತನಾಡುತ್ತೇನೆ.

ಅಧ್ಯಕ್ಷರು : ಹಾಗಾದರೆ ಇನ್ನೂ ಅರ್ಧ ಗಂಟೆ ಕುಳಿತುಕೊಳ್ಳೋಣವೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮ್ಮ ಕಡೆಯಿಂದ ಮಾನ್ಯ ಕರಡಿ ಸಂಗಣ್ಣನವರು, ಮಾನ್ಯ ಎಸ್.ಎಸ್. ಪಾಟೀಲರು ಮಾತನಾಡುತ್ತಾರೆ. ನಾನು 10-15 ನಿಮಿಷ ಮಾತನಾಡುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ನಮ್ಮ ಕಡೆಯಿಂದ ಮಾನ್ಯ ಅರಗ ಜ್ಞಾನೇಂದ್ರ ಅವರು ಮಾತನಾಡುತ್ತಾರೆ.

ಅಧ್ಯಕ್ಷರು : ಹಾಗಾದರೆ ಅರ್ಧ ಗಂಟೆ ಮಾತನಾಡಿ 7.30 ಗಂಟೆಗೆ ಮುಗಿಸೋಣ. ಬೆಳಿಗ್ಗೆ 9.30 ಗಂಟೆಗೆ ಶುರುಮಾಡಿ ನಾನು 10.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದು ಬಿಟ್ಟಿದ್ದೇನೆ. ಇಲ್ಲದಿದ್ದರೆ ತಾವು ಈಗಲೇ ಮಾತನಾಡಿ. ಎಂಟು ಗಂಟೆಯವರೆಗೂ ಕೂರೋಣ. ತಾವು ಸಂಕ್ಷಿಪ್ತವಾಗಿ ಮಾತನಾಡಿದರೆ ಏನೂ ತೊಂದರೆ ಇಲ್ಲ.

+ ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೇ, 2000-2001ನೇ ಇಸವಿಯ ಬಜೆಟ್ ಮಂಡನೆಯನ್ನು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳಾದಂತಹ ಶ್ರೀಮಾನ್ ಎಸ್.ಎಂ. ಕೃಷ್ಣ ಅವರು ಮಾಡಿದ್ದಾರೆ. ಈ ದಿವಸ ಬಜೆಟ್‌ನ ಆಧಾರದ ಹಿನ್ನೆಲೆಯಲ್ಲಿ ಮಾತನಾಡಲು ನನಗೆ ಅವಕಾಶ ಕೊಟ್ಟಂತಹ ಮಾನ್ಯ ಸಭಾಧ್ಯಕ್ಷರಿಗೆ ಮೊದಲನೆಯದಾಗಿ ನನ್ನ ಅಭಿನಂದನೆಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

ಇವತ್ತು ಈ ಬಜೆಟ್‌ನ ಹಿನ್ನೆಲೆಯನ್ನು ಬಜೆಟ್‌ನ ಪೂರಕವಾದಂತಹ ವಿಚಾರಗಳನ್ನು ಅವಲೋಕಿಸಿದಾಗ ಈ ಬಜೆಟ್‌ನಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತಮವಾದಂತಹ ಯೋಜನೆಗಳನ್ನು ನಮ್ಮ ರಾಜ್ಯಕ್ಕೆ ಕೊಡತಕ್ಕಂಥ ಒಂದು ವಿಚಾರ ಕೂಡ ಒಂದು ಕಡೆ ಇದೆ. ಅದಲ್ಲದೆ ಇವತ್ತು ಹಲವಾರು ರೈತರ ಸಮಸ್ಯೆಗಳಿಗೆ ನಿರ್ದಿಷ್ಟವಾದಂತಹ ಯೋಜನೆಗಳನ್ನು ಗುರುತಿಸದೇ ಇದ್ದಂತಹ ಉದಾಹರಣೆ ಕೂಡ ಉಂಟು. ಹಾಗೆಯೇ ಇವತ್ತು ಬಡವರ್ಗದ ಜನಾಂಗಕ್ಕೆ ಕೂಡ ಕಳಕಳಿಯನ್ನು ತೋರಿಸತಕ್ಕ ವಿಚಾರ ಕಾಣುತ್ತಾ ಇಲ್ಲ. ಅದಕ್ಕೋಸ್ಕರ ಈ ಬಜೆಟ್ ಅನ್ನು ನಾನು ವಿರೋಧಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಉತ್ತರ ಕರ್ನಾಟಕದ ಬಗ್ಗೆ, ನಾವು ಹೈದರಾಬಾದ್-ಕರ್ನಾಟಕ ಪ್ರದೇಶ ಎಂದು ಏನು ಕರೆಯುತ್ತೇವೆ ಅಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎಂಬುದು ತಮಗೆ ಗೊತ್ತಿರತಕ್ಕಂಥ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಸಹ ತಿಳಿದಿರಬಹುದು. ಕರ್ನಾಟಕ ರಾಜ್ಯವನ್ನು ಸಮಗ್ರ ಅಭಿವೃದ್ಧಿಯ ರಾಜ್ಯವನ್ನಾಗಿ

ಮಾಡುತ್ತೇನೆಂದು ಅನೇಕ ಸಾರಿ ಹೇಳಿದ್ದಾರೆ. ಹಾಗೆ ಅವರು ಘೋಷಣೆ ಮಾಡಿದ್ದಾರೆ. ಅದರ ಹಿನ್ನೆಲೆಯನ್ನು ನೋಡಿದಾಗ, ಇವತ್ತು ನಮ್ಮ ಭಾಗದ ಬಗ್ಗೆ ವಿಶೇಷವಾಗಿ ಮಾತನಾಡಲು ನಾನು ಇಚ್ಛೆಪಡುತ್ತೇನೆ. ಇವತ್ತು ನಮ್ಮ ಹೈದರಾಬಾದ್ ಕರ್ನಾಟಕದ ಪ್ರದೇಶದಲ್ಲಿ ಒಂದು ಇಂಡಸ್ಟ್ರಿ ಬಗ್ಗೆ ವಿಚಾರವನ್ನು ಎತ್ತಿದ್ದೆವು. ಕಳೆದ ಬಾರಿ ಕೂಡ ನಾನು ಪ್ರಸ್ತಾಪ ಮಾಡಿದ್ದೆ. ಇವತ್ತು ಹಾವೇರಿಯಂತಹ ಪ್ರದೇಶ ಇರಬಹುದು, ಹಾವೇರಿ ಜಿಲ್ಲೆ ಇರಬಹುದು, ಕೊಪ್ಪಳ ಜಿಲ್ಲೆ ಇರಬಹುದು. ಅಲ್ಲಿ ನೀವು ಕೈಗಾರಿಕಾ ವಸಾಹತನ್ನು ಪ್ರಾರಂಭಿಸಬೇಕೆಂದು ನಾವು ಕೇಳಿಕೊಂಡೆವು. ಇವತ್ತು ಆ ಚಿಂತನೆಯನ್ನು ನಾವು ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ. ಯಾವ ತರಹ ಒಂದು ಸಮಗ್ರ ಅಭಿವೃದ್ಧಿ ರಾಜ್ಯವನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯ ಇದೆ ಎಂದು ಹೇಳಬೇಕು. ಅದಕ್ಕೋಸ್ಕರ, ಅದರ ಹಿನ್ನೆಲೆಯಲ್ಲಿ ಬೇರೆ ಬೇರೆ ಹೊಸ ಜಿಲ್ಲೆಗಳನ್ನು ನಮ್ಮ ಮಾನ್ಯ ಪಟೇಲ್ ಅವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಇವತ್ತು ಜನರ ಸಮಸ್ಯೆಗಳನ್ನು ನಾವು ನೇರವಾಗಿ ಸ್ಪಂದಿಸಬೇಕು. ಜನರಿಗೆ ನೇರವಾಗಿ ಆಡಳಿತ ಸಿಗಬೇಕು ಎನ್ನುವ ಸರಳ ರೀತಿಯಲ್ಲಿ ಜನಪರವಾದಂತಹ ಕೆಲಸಗಳು ಆಗಬೇಕು ಎನ್ನುವ ದೃಷ್ಟಿಯಿಂದ ಮತ್ತು ಅಂತರದ ಅಂದರೆ ಡಿಸ್ಟೆನ್ಸ್ ಬಗ್ಗೆ, ಒಂದೊಂದು ಜಿಲ್ಲೆಯ ಒಂದು ಕೇಂದ್ರ ಸ್ಥಾನಕ್ಕೆ ನಾವು ಹೋಗಬೇಕಾದರೆ ಎರಡೆರಡು ಕಿಲೋ ಮೀಟರ್ ಅನ್ನು ವ್ಯಯಿಸಬೇಕಾಗುತ್ತದೆ. ಅದಕ್ಕೆ ಜನರ ಸಮಯ ಕೂಡ ವ್ಯಯ ಆಗುತ್ತದೆ, ಹಣ ಕೂಡ ಹಾಳಾಗುತ್ತದೆ ಎನ್ನುವ ದೃಷ್ಟಿಯಿಂದ ಇವತ್ತು ಜನಪರ ಸ್ಪಂದನೆಯನ್ನು ಮಾಡಬೇಕು ಎಂದು ಹೇಳುವಂತಹ ವಿಚಾರದ ಸದುದ್ದೇಶದಿಂದ ಅನೇಕ ವರ್ಷಗಳಿಂದ ಇರತಕ್ಕಂಥ ಜ್ವಲಂತ ಸಮಸ್ಯೆಯನ್ನು ಮಾನ್ಯ ಪಟೇಲರು ಆ ಸಂದರ್ಭದಲ್ಲಿ ವಿಚಾರ ಮಾಡಿದರು. ಹಾಗೆ ವಿಚಾರ ಮಾಡಿ ಈ ರಾಜ್ಯದಲ್ಲಿ ಏಳು ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡಿದರು. ಆದರೆ ಈ ಜಿಲ್ಲೆಗಳ ಮೂಲಭೂತ ಸೌಕರ್ಯಕ್ಕೋಸ್ಕರ ಮುತ್ಸದ್ದಿ ಮುಖ್ಯಮಂತ್ರಿಗಳು ಈ ಒಂದು ಬಜೆಟ್‌ನಲ್ಲಿ ಯಾವುದೇ ಒಂದು ಹಣವನ್ನು ನಮೂದಿಸಿಲ್ಲ. ಹೀಗಿರುವುದರಿಂದ ಆ ಹೊಸ ಜಿಲ್ಲೆಗಳ ಅಭಿವೃದ್ಧಿಯ ಗಮನ ಯಾವ ತರಹ ಆಗುತ್ತದೆ ಎನ್ನುವುದನ್ನು ಕೂಡ ತಾವು ವಿಚಾರ ಮಾಡಬೇಕಾಗುತ್ತದೆ. ಇವತ್ತು ನಾವು ಬರೇ ಜಿಲ್ಲೆಗಳನ್ನು ಮಾಡಿದ್ದೇವೆ. ಇನ್ನೂ ಕೆಲವು ಕಡೆ ಬಜೆಟ್ ಪತ್ರದಲ್ಲಿ ಹೇಳಿದ್ದಾರೆ. ಅನೇಕ ವಿಭಾಗ ಮಟ್ಟದ ಕಛೇರಿಗಳನ್ನು ಉತ್ತರ ಕರ್ನಾಟಕಕ್ಕೆ ಮತ್ತು ಹುಬ್ಬಳ್ಳಿಯಲ್ಲಿ ಮತ್ತು ಗುಲ್ಬರ್ಗಾದಲ್ಲಿ ಸಾರಿಗೆಯ ಒಂದು ನಿಗಮವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಕೆಲವು ಸ್ವಾಗತಾರ್ಹವಾದಂತಹ ಕಾರ್ಯಕ್ರಮಗಳನ್ನು ಕೂಡ ಅವರು ಘೋಷಣೆ ಮಾಡಿದ್ದಾರೆ. ಆದರೆ ಈ ಒಂದು ದೃಷ್ಟಿಯಿಂದ ನೋಡಿದಾಗ ನಾವು ಇವತ್ತು ಉತ್ತರ ಕರ್ನಾಟಕ ಎಂದರೆ ಕೆಲವರು ಇಲ್ಲಿರತಕ್ಕವರು ಹುಬ್ಬಳ್ಳಿ-ಧಾರವಾಡ ಎಂದು ಮಾತ್ರ ತಿಳಿದುಕೊಂಡಿದ್ದಾರೆ. ಆದರೆ ಅದರಲ್ಲಿ ಬರತಕ್ಕಂಥ ಅನೇಕ ಪ್ರದೇಶಗಳನ್ನು ನಾವು ನೋಡಿದಾಗ ಇಲ್ಲಿಯೂ ಮೂಲಭೂತವಾದಂತಹ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ನಮಗೆ ಸಾಧ್ಯವಾಗಿಲ್ಲ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ತಾವು ಕೂಡ ಭೇಟಿ ಮಾಡಿದ್ದೀರಿ. ಮತ್ತು ಜಿಲ್ಲಾ ಮಟ್ಟದ ರಿವ್ಯೂ ಕೂಡ ಮಾಡಿದ್ದೀರಿ. ಅಲ್ಲೇನು ನಾವು ಇವತ್ತು ಒತ್ತನ್ನು ಕೊಡಬೇಕಾಗಿದೆ? ಯಾವ್ಯಾವ ಇಲಾಖೆಗಳಿಗೆ ನಾವು ಹೆಚ್ಚು ಹಣವನ್ನು ತೊಡಗಿಸಬೇಕು ಎನ್ನುವುದನ್ನು ತಿಳಿದುಕೊಂಡಿದ್ದೀರಿ. ಅದರ ಹಿನ್ನಲೆಯಲ್ಲಿ

ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ, ಈ ಒಂದು ಹೊಸ ಏಳು ಜಿಲ್ಲೆಗಳಿಗೆ ತಾವು ಪ್ರಾಮಾಣಿಕವಾಗಿ ಹುಡ್ಕೋ ನೆರವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದನ್ನು ಮಾಡುತ್ತೀರಾ ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಹೈದರಾಬಾದ್-ಕರ್ನಾಟಕದ ಬಗ್ಗೆ ಮಾತನಾಡುವುದಾದರೆ ಹಿಂದೆ ಮಾನ್ಯ ವೀರೇಂದ್ರ ಪಾಟೀಲ್ ಅವರು ಮುಖ್ಯಮಂತ್ರಿಗಳು ಆಗಿದ್ದಂತಹ ಸಂದರ್ಭದಲ್ಲಿ ಅವರು ಆ ಭಾಗದ ಜನರ ಕಳಕಳಿಯ ಬಗ್ಗೆ ವಿಚಾರ ಮಾಡಿ, "ಹೈದರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ" ಎಂದು ಮಾಡಿದ್ದರು. ಅಂದರೆ ಈಗ ರಾಜ್ಯದ ಎಲ್ಲ ಭಾಗ ಕೂಡ ಇವತ್ತು ಅಭಿವೃದ್ಧಿ ಆಗಲಿ ಎಂದು ಹೇಳಿ ಆ ಕನಸನ್ನು ಇಟ್ಟುಕೊಂಡು ಮಾಡಿದ್ದರು. ಆದರೆ ಕಳೆದ ಬಾರಿ ಕೂಡ ನೋಡಿದ್ದೇವೆ. ಮೊನ್ನೆಯ ದಿವಸ ಎಚ್‌ಕೆಡಿಬಿ ಅಧ್ಯಕ್ಷರು, ಮಾನ್ಯ ಖರ್ಗೆಯವರು, ಮತ್ತು ಇನ್ನಿತರ ಹಲವಾರು ನಮ್ಮ ಭಾಗದ ಮಂತ್ರಿಯವರು ಕೂಡ ಸಭೆ ಕರೆದಂತಹ ಸಂದರ್ಭದಲ್ಲಿ, ಕಳೆದ ಬಾರಿ ಜನತಾ ದಳದ ಸರ್ಕಾರ ಸಂಪೂರ್ಣವಾದಂತಹ ಹಣವನ್ನು ಕೊಟ್ಟಿಲ್ಲ, 40 ಕೋಟಿ ಅಥವಾ 42 ಕೋಟಿ ರೂಪಾಯಿಗಳನ್ನು ಒಂದೊಂದು ವರ್ಷದಲ್ಲಿ ಕೊಡತಕ್ಕ ಕೆಲಸ ಆಗಿದೆ. ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಒಂದೊಂದು ವರ್ಷದಲ್ಲಿ 60 ಕೋಟಿ ರೂಪಾಯಿಗಳ ಹಣವನ್ನು ಕೊಡತಕ್ಕಂಥಹ ಕೆಲಸವನ್ನು ಮಾಡಿದ್ದರು. ಅದನ್ನು ತಾವು ಕೂಡ ಮಾಡಬೇಕು ಎಂದು ಹೇಳುತ್ತೇನೆ. ಅವತ್ತು ಎಚ್‌ಕೆಡಿಬಿಯ ಅಧ್ಯಕ್ಷರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಧರ್ಮಸಿಂಗ್ ಅವರು ಹಾಗೂ ಆ ಭಾಗದ 33 ಜನ ಶಾಸಕರನ್ನು ಒಳಗೊಂಡಂತೆ ತಮ್ಮನ್ನು ಭೇಟಿ ಮಾಡಿದ್ದೆವು. ಆ ಸಂದರ್ಭದಲ್ಲಿ ತಾವು ಕೂಡ ಈ ಸಾಲಿನಲ್ಲಿ ಕಡಿಮೆ ಹಣ ಇರತಕ್ಕ ಬಗ್ಗೆ ಮಾನ್ಯ ವೀರೇಂದ್ರ ಪಾಟೀಲರು ಒತ್ತನ್ನು ಕೊಟ್ಟಿದ್ದರು. ಆ ಒತ್ತಿಗೆ ನಾನೂ ಕೂಡ ಸ್ಪಂದಿಸುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಈ ಬಜೆಟ್‌ನಲ್ಲಿ ಏನೂ ಅವಕಾಶವನ್ನು ತೋರಿಸಿಲ್ಲ. ಮತ್ತು ಇದಲ್ಲದೇ ಅದರ ಬಗ್ಗೆ ತಾವು ಚಿಂತನೆ ಮಾಡುತ್ತೀರಾ ಎಂದು ಕೇಳುತ್ತೇನೆ. ಏಕೆಂದರೆ ನಮ್ಮ ಭಾಗದಲ್ಲಿ ತಾವು ನೋಡಿರಬಹುದು. ಇವತ್ತು ಇಲ್ಲಿಯ ಒಂದು ಸೌಲಭ್ಯಗಳನ್ನು ಮತ್ತು ಆ ಭಾಗದ ಸೌಲಭ್ಯಗಳನ್ನು ನಾವು ತುಲನೆ ಮಾಡಿದಾಗ ನಾವಿನ್ನೂ ಬಹಳಷ್ಟು ಹಿಂದೆ ಇದ್ದೇವೆಂದು ಅನಿಸುತ್ತದೆ. ಅದ್ದಕೋಸ್ಕರ ತಾವು ಅತ್ಯಂತ ಕಾಳಜಿ ಇರತಕ್ಕಂಥ ಮುಖ್ಯಮಂತ್ರಿಗಳು ಇದ್ದೀರಿ. ಅದರ ಬಗ್ಗೆ ಲಕ್ಷ್ಯವನ್ನು ಕೊಟ್ಟು ನಮ್ಮ ಎಚ್‌ಕೆಡಿಬಿಗೆ ಅನುದಾನವನ್ನು ಹೆಚ್ಚು ಒದಗಿಸುತ್ತೀರಾ ಎಂಬುದನ್ನು ಮತ್ತೊಮ್ಮೆ ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಅದಲ್ಲದೇ ಇನ್ನು ತುಂಗಾ ಭದ್ರಾ ಪ್ರಾಜೆಕ್ಟ್ ವಿಚಾರ, ತುಂಗಭದ್ರಾ ಪ್ರಾಜೆಕ್ಟ್ ಕೊಪ್ಪಳ ಮತ್ತು ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಯನ್ನು ಒಳಗೊಂಡಿರತಕ್ಕದ್ದು ಇದೆ ಸುಮಾರು ಎಡದಂಡೆ ಕೆನಾಲನ್ನು ನವೀಕರಣಗೊಳಿಸಬೇಕು ನಾವು ದುರಸ್ಥಿಗೊಳಿಸಬೇಕು ಎಂದು ಹೇಳಿ ಹಿಂದಿನ ಸರ್ಕಾರ ಕೂಡ 28 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟು ಅದನ್ನು ದುರಸ್ತಿ ಮಾಡತಕ್ಕಂಥ ಕೆಲಸವನ್ನು ಮಾಡಿತ್ತು. ಆದಾಗ್ಯೂ ಕೂಡ ಇನ್ನೂ ಸಂಪೂರ್ಣವಾಗಿ ಆ ಕೆಲಸ ಆಗಿಲ್ಲ. ನಮ್ಮ ಎಡದಂಡೆ ಕೆನಾಲ್ ಎಷ್ಟು ಸಾರಿ ಒಡೆದಿದೆ ಎಂದರೆ ಅದನ್ನು ಪತ್ರಿಕೆಯಲ್ಲಿ ವರದಿ

ಬಂದ ಆಧಾರದ ಮೇಲೆ ನೋಡಿದ ಮೇಲೆ ಸುಮಾರು 100ಕ್ಕಿಂತ ಹೆಚ್ಚು ಅದು ಬ್ರೀಚ್ ಆಗತಕ್ಕಂತಹ ಪ್ರಸಂಗವನ್ನು ನಾವು ಎದುರಿಸಿದ್ದೇವೆ. ಮಾನ್ಯ ನೀರಾವರಿ ಮಂತ್ರಿಗಳಾದಂತಹ ಮಾನ್ಯ ಹೆಚ್.ಕೆ. ಪಾಟೀಲ್ ಅವರು ನಮ್ಮ ಭಾಗದ ಬಗ್ಗೆ ಅತ್ಯಂತ ಕಳಕಳಿಯನ್ನು ಇಟ್ಟುಕೊಂಡಿರತಕ್ಕವರು, ಅವರು ಈ ಸಾರಿ ಬಜೆಟ್‌ನಲ್ಲಿ ಸುಮಾರು 40 ಕೋಟಿ ರೂಪಾಯಿಗಳ ಹಣವನ್ನು ಕೊಡುತ್ತೇವೆಂದು ಅವತ್ತು ಹೇಳಿದ್ದರು. ಆದರೆ ಈ ಬಜೆಟನ್ನು ನೋಡಿದಾಗ ಬರೇ 4 ಕೋಟಿ ರೂಪಾಯಿಗಳ ಹಣವನ್ನು ಆ ಒಂದು ಎಡದಂಡೆ ಕೆನಾಲ್‌ಗೆ ಕೊಟ್ಟರೆ ಆ ಕೆನಾಲನ್ನು ನಾವು ನವೀಕರಣಗೊಳಿಸುವುದಕ್ಕೆ ಸಾಧ್ಯ ಇಲ್ಲ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಎಡದಂಡೆ ಕೆನಾಲ್‌ಗೆ 40 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟರೆ ಎಂಟೈರ್ ಲೆಂತನ್ನು ನಾವು ಸ್ಟೆಂತನ್ ಮಾಡಲಿಕ್ಕೆ ಸಾಧ್ಯ ಇದೆ ಎನ್ನುವಂತಹ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ.

ಇವತ್ತು ನಾವು ಶಿಕ್ಷಣದ ವಿಚಾರ ಹೇಳುವಾಗ, ಈ ಭಾಗದಲ್ಲಿನ ವಿಚಾರ ಹೇಳಬೇಕು. ನಮ್ಮ ಕೊಪ್ಪಳ ಜಿಲ್ಲೆಯ ವಿಚಾರ ಹೇಳಬೇಕು ಎಂದಾಗ ಕೊಪ್ಪಳ ಜಿಲ್ಲೆ ಆದಂತಹ ಸ್ಥಳದಲ್ಲಿ ಸರ್ಕಾರಿ ಡಿಗ್ರಿ ಕಾಲೇಜು ಇಲ್ಲ ಮತ್ತು ಕಾನೂನು ಪದವಿ ಕಾಲೇಜುಗಳು ಇಲ್ಲ. ಈ ಸಾರಿ ಉನ್ನತ ಶಿಕ್ಷಣ ಮಂತ್ರಿಗಳು, ನಾವು ಈ ಬಜೆಟನ್ನು ನೋಡಿದಾಗ ಉನ್ನತ ಶಿಕ್ಷಣದ ಬಗ್ಗೆ ಏನೂ ಮಹತ್ವವನ್ನು ಕೊಟ್ಟಿಲ್ಲ. ಹಾಗಾದಾಗ ಇವತ್ತು ಶಿಕ್ಷಣವನ್ನು ನಾವು ಅಭಿವೃದ್ಧಿ ಪಡಿಸದೇ ಇದ್ದಾಗ ಇವತ್ತು ರಾಜ್ಯ ಅಭಿವೃದ್ಧಿಯನ್ನು ಕಾಣುವುದು ಹೇಗೆ ಸಾಧ್ಯ ಎಂಬುದನ್ನು ಮಾನ್ಯ ಸಭಾನಾಯಕರು ಹೇಳಬೇಕಾಗುತ್ತದೆ. ಅದಕ್ಕೋಸ್ಕರ ಎಲ್ಲಿ ಶಿಕ್ಷಣದ ಸೌಲಭ್ಯ ಇಲ್ಲ, ಇವತ್ತು ಎಲ್ಲಿ ನೀರಾವರಿ ಸೌಲಭ್ಯ ಇಲ್ಲ, ಎಲ್ಲಿ ಇವತ್ತು ಸಾರಿಗೆ ಸೌಲಭ್ಯ ಇಲ್ಲ ಅಲ್ಲಿ ಎಲ್ಲಾ ಸೌಲಭ್ಯಗಳನ್ನು ಕೊಡಬೇಕು ಸಾರಿಗೆ ಸೌಲಭ್ಯಗಳನ್ನು ಕೊಡಲು ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕು ಎನ್ನುವ ವಿಚಾರದ ಬಗ್ಗೆ ರಾಜ್ಯದ ಎಲ್ಲಾ ವರದಿ ತಮ್ಮ ಮುಂದೆ ಇದೆ. ಅದಕ್ಕೋಸ್ಕರ ದಯಮಾಡಿ ಈಗೇನು ಕೊಪ್ಪಳ ಹೊಸ ಜಿಲ್ಲೆ ಆಗಿದೆ, ಅದಕ್ಕೆ ಕಾನೂನು ಪದವಿ ಕಾಲೇಜನ್ನು ಮತ್ತು ಸರ್ಕಾರಿ ಡಿಗ್ರಿ ಕಾಲೇಜನ್ನು ಕೊಡಬೇಕು ಎಂಬ ಒತ್ತಾಯವನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಹಾಗೂ ಉನ್ನತ ಶಿಕ್ಷಣ ಮಂತ್ರಿಗಳ ಗಮನಕ್ಕೆ ತರಲು ನಾನು ಇಚ್ಛೆಪಡುತ್ತೇನೆ.

ಇನ್ನು ಉನ್ನತ ಶಿಕ್ಷಣದಲ್ಲಿ ಕಟ್ಟಡದ ವಿಚಾರದ ಬಗ್ಗೆ ಈಗೇನು ಪದವಿ ಪೂರ್ವ ಕಾಲೇಜಿನ ಕಟ್ಟಡ ಇರಬಹುದು, ಪಾಲಿಟೆಕ್ನಿಕ್ ಕಾಲೇಜು ಕಟ್ಟಡ ಇರಬಹುದು, ಐಟಿಐ ಕಾಲೇಜು ಕಟ್ಟಡ ಇರಬಹುದು ಇದಕ್ಕೆಲ್ಲಾ ಸ್ವಂತ ಕಟ್ಟಡ ಇಲ್ಲವೇ ಇಲ್ಲ. ಇವತ್ತು ನಾವು ಒಂದೊಂದು ಬಿಲ್ಡಿಂಗ್‌ಗೆ ರೆಂಟಲ್ ಬೇಸಿಸ್ ಮೇಲೆ ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳ ಬಾಡಿಗೆ ಕೊಡುತ್ತೇವೆ. ಅವರಿಗೆ ಮಕ್ಕಳಿಗೆ ಥಿಯರಿ ಮತ್ತು ಪ್ರಾಕ್ಟಿಕಲ್ ಮಾಡುವುದಕ್ಕೆ ಆ ಕಟ್ಟಡದ ಅವಶ್ಯಕತೆಯನ್ನು ನೋಡಿದರೆ ಈಗಿರತಕ್ಕಂಥ ವ್ಯವಸ್ಥೆಯಿಂದ ನಿಜವಾಗಲೂ ಕೂಡ ಯಾವ ಮಕ್ಕಳೂ ಉನ್ನತ ವ್ಯಾಸಂಗವನ್ನು ಮಾಡಲಿಕ್ಕೆ ಆಗುವುದಿಲ್ಲ ಮತ್ತು ಗರಿಷ್ಠ ಮಟ್ಟದ ಮಾರ್ಕ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಇವತ್ತು ಸಾಧ್ಯ ಇಲ್ಲ. ಅದಕ್ಕೋಸ್ಕರ ಇವತ್ತು ಈ ಶಿಕ್ಷಣದ ವಿಚಾರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು

ಮತ್ತೆ ಮಾನ್ಯ ಶಿಕ್ಷಣ ಮಂತ್ರಿಗಳು ಹೆಚ್ಚಿನ ಗಮನವನ್ನು ಹರಿಸಬೇಕು ಎಂದು ನಾನು ಅವರಲ್ಲಿ ಕೇಳಿಕೊಳ್ಳುವುದಕ್ಕೆ ಬಯಸುತ್ತೇನೆ.

7.10 ಪಿ.ಎಂ

ಇನ್ನು ನೀರಾವರಿ ಕುರಿತು ಹೇಳುವುದಾದರೆ ಇವೊತ್ತು ರಾಜ್ಯದಲ್ಲಿ ಹೊಸದಾಗಿ ಎರಡು ಲಕ್ಷ ಹೆಕ್ಟೇರ್‌ಗಳಷ್ಟು ಕೃಷಿ ಭೂಮಿಗೆ ನೀರನ್ನು ಉಣಿಸತಕ್ಕಂಥ ಕೆಲಸ ಮಾಡುತ್ತೇವೆಂದು ಹೇಳಿರುವುದು ಬಹಳ ಸ್ವಾಗತಾರ್ಹವಾದುದಾಗಿದೆ. ಆದರೆ, ನಾವು ತುಂಗಭದ್ರ ಯೋಜನೆ ಬಗ್ಗೆ ಮಾತನಾಡುವಾಗ ಅಂದಾಜು ಸುಮಾರು 130 ಟಿಎಂಸಿಯಷ್ಟು ನೀರನ್ನು ಸಂಗ್ರಹಿಸತಕ್ಕಂಥ ಸಾಮರ್ಥ್ಯ ತುಂಗಭದ್ರ ಅಣೆಕಟ್ಟೆಗಿದೆ. ಇದರಲ್ಲಿ 30-31 ಟಿಎಂಸಿಯಷ್ಟು ನೀರನ್ನು ಸಂಗ್ರಹಿಸುವುದಕ್ಕೆ ಸಾಧ್ಯವಿರುವುದಿಲ್ಲ. ಕಾರಣ, ಅಣೆಕಟ್ಟೆಯಲ್ಲಿ ಸಿಲ್ಟ್ ಸಂಗ್ರಹವಾಗಿ ಅಣೆಕಟ್ಟೆ ಸಂಪೂರ್ಣವಾಗಿ ಮುಚ್ಚಿಹೋಗುವ ದಿನಗಳು ದೂರವೇನಿಲ್ಲವೆಂದು ಭಾವಿಸುತ್ತೇನೆ. ಇವೊತ್ತು ಸರ್ಕಾರ ಅದರ ಬಗ್ಗೆ ಏನಾದರೂ ಚಿಂತನೆ ಮಾಡಿ ಸರ್ವೆ ಕಾರ್ಯವನ್ನು ಕೈಗೊಂಡಿದೆಯಾ? ನೀರು ಎಷ್ಟು ಪ್ರಮಾಣದಲ್ಲಿ ಅಣೆಕಟ್ಟೆಯಲ್ಲಿ ನಿಲ್ಲುತ್ತದೆ? ಎಷ್ಟು ಸಿಲ್ಟ್ ಅರೆಸ್ಟ್ ಆಗಿದೆ? ಅದನ್ನು ತೆಗೆಸಬೇಕೇ? ಅಥವಾ ಅದಕ್ಕೊಂದು ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡಬೇಕೇ? ಅಥವಾ ಪ್ಯಾರೆಲಲ್ ಕೆನಾಲ್ ಮಾಡಬೇಕೇ? ಅಥವಾ ಅಣೆಕಟ್ಟಿನ ಹಿನ್ನೀರನ್ನು ಯಾವ ರೀತಿ ಬಳಸಿಕೊಳ್ಳಬೇಕೆಂಬ ಬಗ್ಗೆ ಚಿಂತಿಸಿದೆಯೇ? ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ. ಏಕೆಂದರೆ, ಒಂದು ಟಿಎಂಸಿಯಷ್ಟು ನೀರಿನಲ್ಲಿ ಕನಿಷ್ಠ ಹದಿನೈದು ಸಾವಿರ ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ. ಆದರೆ, ನಲವತ್ತೈದು ಸಾವಿರ ಎಕರೆಗಳಷ್ಟು ಪ್ರದೇಶಕ್ಕೆ ಕೊಡತಕ್ಕಂಥ ನೀರು ಇವೊತ್ತು ವೇಸ್ಟ್ ಆಗಿ ನದಿ ಮೂಲಕ ಆಂಧ್ರಪ್ರದೇಶಕ್ಕೆ ಹೋಗುತ್ತಿದೆ. ಈ ಕುರಿತು ನಾವು ಚಿಂತಿಸದಿದ್ದರೆ ಅಣೆಕಟ್ಟು ಮುಚ್ಚಿಹೋಗುತ್ತದೆ ಮತ್ತು ಉಪಯೋಗಿಸಿಕೊಳ್ಳುವ ನೀರನ್ನು ನಾವು ಕಳೆದುಕೊಳ್ಳುತ್ತೇವೆಂದರೆ ಇದರ ಬಗೆಗಿನ ಕಳಕಳಿ ಯಾರು ವ್ಯಕ್ತಪಡಿಸಬೇಕೆಂಬುದರ ಬಗ್ಗೆ ನಾನು ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಈ ಪ್ರಾಜೆಕ್ಟ ಅನ್ನು ಉಳಿಸಿದರೆ ಎಡದಂಡೆ ಕಾಲುವೆ ಮುಖಾಂತರ ಆರು ಲಕ್ಷ ಎಕರೆಗಳಷ್ಟು ಭೂಮಿಗೆ ನೀರಿನ ಸೌಲಭ್ಯ ಕೊಡತಕ್ಕಂಥ ವ್ಯವಸ್ಥೆಯಾಗುತ್ತದೆ. ಮತ್ತು ಬಲದಂಡೆ ಕಾಲುವೆ ಮೂಲಕ ಕೂಡ ಒಂದು ಲಕ್ಷ ಚಿಲ್ಲರೆ ಎಕರೆಗಳಷ್ಟು ಭೂಮಿಗೆ ನೀರಿನ ಸೌಲಭ್ಯವನ್ನು ನಾವು ಕೊಡುತ್ತಿರುವುದರಿಂದ, ಇವೊತ್ತು ಇಂತಹ ಒಂದು ಸಮೃದ್ಧ ಯೋಜನೆಯನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ರಾಜ್ಯದ ಅಭ್ಯುದಯದ ಚಿಂತನೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇನ್ನು ಎರಡು ಲಕ್ಷ ಮನೆಗಳನ್ನು ಬಡವರಿಗೋಸ್ಕರ ಈ ವರ್ಷ ಕಟ್ಟಿಸಿಕೊಡುತ್ತೇವೆಂದು ತಾವು ಆಯವ್ಯಯ ಪತ್ರದಲ್ಲಿ ತಿಳಿಸಿದ್ದೀರಿ. ಇದು ಬಹಳ ಸಂತೋಷದ ವಿಚಾರ. ಇವೊತ್ತು ಆರ್ಥಿಕವಾಗಿ ಬಡತನ ರೇಖೆಯಿಂದ ಕೆಳಗಿರುವ ಜನಾಂಗದವರಿಗೆ ಸೂರನ್ನು ಕಲ್ಪಿಸಿಕೊಡುತ್ತೇವೆಂಬುದರ ಬಗ್ಗೆ ನಾವು ಹೆಮ್ಮೆ ಪಡುತ್ತೇವೆ. ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದು 5-6 ತಿಂಗಳುಗಳಾದರೂ ಸಹ ಬಡವರಿಗೆ ರಾಜ್ಯದಲ್ಲಿ ಒಂದೂ ನಿವೇಶನ ಸೌಲಭ್ಯವನ್ನು ಒದಗಿಸಿಕೊಡುವುದಕ್ಕಾಗಿಲ್ಲ ಮತ್ತು ಮನೆಗಳನ್ನು ಸಹ ಕಟ್ಟಿಸಿಕೊಡಲು

ಆಗಲಾರದಂಥ ವಿಚಾರವೂ ತಮಗೆ ಗೊತ್ತಿದೆ. ಇದಕ್ಕೆ ತಾಂತ್ರಿಕ ದೋಷವುಂಟಾಗಿರುವುದೇ ಕಾರಣವಾಗಿದೆ. ಇದನ್ನು ತಾವು ತ್ವರಿತಗತಿಯಲ್ಲಿ ಮಾಡುತ್ತಿದ್ದೀರಾ? ಎಂಬುದನ್ನು ಅಧ್ಯಕ್ಷರ ಮೂಲಕ ನಾನು ಕೇಳಬಯಸುತ್ತೇನೆ.

ಇನ್ನು ಅರಣ್ಯದ ಬಗ್ಗೆ ಇವೊತ್ತು ಮಾತನಾಡಲೇಬೇಕಾಗುತ್ತದೆ. ಉತ್ತಮ ಪರಿಸರ ಉಳಿಸಿಕೊಂಡಾಗ ಮಾತ್ರ ನಮ್ಮ ಜನಜೀವನ ಸುರಕ್ಷತೆಯಿಂದ ಮತ್ತು ಉನ್ನತ ಮಟ್ಟದಲ್ಲಿ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ರಾಜ್ಯದಲ್ಲಿ ಪ್ರತಿಶತ 20ರಷ್ಟು ಅರಣ್ಯ ಭಾಗವನ್ನು ಕಾಣುತ್ತೇವೆ. ಅಂದರೆ ಇನ್ನು ಹೆಚ್ಚಿನ ಅರಣ್ಯವನ್ನು ಬೆಳೆಸುವುದಕ್ಕೆ ನಾವು ಚಿಂತನೆ ಮಾಡಬೇಕಾಗಿದೆ. ಯಾವ ರೂಪದಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸುವುದಕ್ಕೆ ತಾವು ಚಿಂತಿಸಿದ್ದೀರಿ ಎಂಬುದರ ಕುರಿತು ಇವೊತ್ತು ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. ನೆಡುತೋಪುಗಳನ್ನು ಇವೊತ್ತು ನಾವು ಉರುವಲು ಕಟ್ಟಿಗೆಯಾಗಿ ಬಳಸಿಕೊಳ್ಳುತ್ತಿದ್ದು, ಈ ರೀತಿ ಮಾಡಿದರೆ ಅರಣ್ಯ ಬೆಳೆಯುತ್ತದೆಂದು ತಾವು ಆಯವ್ಯಯ ಪತ್ರದಲ್ಲಿ ತಿಳಿಸಿದ್ದೀರಿ. ಆದರೆ, ಈ ಕುರಿತು ನನ್ನ ವಿಚಾರವೇನೆಂದರೆ ಭೂಮಿಯನ್ನು ಹೊಂದಿರುವ ಪ್ರತಿಯೊಬ್ಬ ಜಮೀನ್ದಾರರೇನಿದ್ದಾರೆ, ಅವರು ಹೊಂದಿರುವ ಭೂಮಿಯ ಪ್ರತಿಶತ ಎಕರೆಯಲ್ಲಿ ಇಂತಿಷ್ಟು ಮರಗಳನ್ನು ನೆಟ್ಟು ಬೆಳೆಸಬೇಕೆಂಬುದನ್ನು ರಾಜ್ಯ ಸರ್ಕಾರ ಕಾನೂನಿನ ಮೂಲಕ ಗೈಡ್‌ಲೈನ್ಸ್ ಕೊಟ್ಟರೆ ಅರಣ್ಯ ಬೆಳೆಸುವುದಕ್ಕೆ ಸಾಧ್ಯವಿದೆಯೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನು ಅಂತರ್ಜಲವನ್ನು ವೃದ್ಧಿಗೊಳಿಸುವ ವಿಚಾರದಲ್ಲಿ ಕೂಡ ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬೇಕಾಗಿದೆ. ಇವೊತ್ತು ಸಾಕಷ್ಟು ಹಣವನ್ನು ಕುಡಿಯುವ ನೀರಿಗೋಸ್ಕರ ಗ್ರಾಮಾಂತರ ಪ್ರದೇಶಗಳಲ್ಲಿ ಖರ್ಚು ಮಾಡುತ್ತಿದ್ದೇವೆ. ಅದು ಎಂಡಬ್ಲ್ಯೂಎಸ್ ಯೋಜನೆ ಇರಬಹುದು, ಎನ್‌ಆರ್‌ಡಬ್ಲ್ಯೂಎಸ್ ಯೋಜನೆ ಇರಬಹುದು ಮತ್ತು ನದಿ ನೀರಿನ ಮುಖಾಂತರ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಬೇರೆ ಬೇರೆ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ಇವೊತ್ತು ಕೊರೆದಿರುವ ಅನೇಕ ಬೋರ್‌ವೆಲ್‌ಗಳಿಂದಾಗಿ ಅಂತರ್ಜಲ ಮಟ್ಟ ಕುಸಿದಿರುವ ಪರಿಣಾಮವಾಗಿ ನಲ್ಲಿಯಲ್ಲಿ ನೀರು ಬಾರದೇ ನಾಲ್ಕು ಕಿಲೋಮೀಟರ್‌ಗಳಷ್ಟು ದೂರದವರೆಗೆ ಪೈಪ್ ಲೈನ್ ಹಾಕಿ ನೀರನ್ನು ತಂದಿದ್ದು, ಆ ನೀರು ಸಹ ಒಣಗಿದಾಗ ನಾವು ನೀರಿನ ಬೇರೆ ಮೂಲಗಳನ್ನು ಹುಡುಕ ಬೇಕಾಗುತ್ತದೆ ಮತ್ತು ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಇವೊತ್ತು ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ದಿಸೆಯಲ್ಲಿ ಸರ್ಕಾರ ಏನು ಚಿಂತನೆ ಮಾಡಿದೆ? ಎಂದು ಕೇಳುತ್ತಿದ್ದೇನೆ. ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿರುವ 25,000 ಕೆರೆಗಳಲ್ಲಿರುವ ಹೂಳು ತೆಗೆಸುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿರುವುದು ಬಹಳ ಸ್ವಾಗತಾರ್ಹವಾದುದಾಗಿದೆ. ಆದರೆ ಕೆರೆಗಳೇ ಇಲ್ಲದಂತಹ ಪ್ರದೇಶಗಳಲ್ಲಿ ಹೊಸದಾಗಿ ಕೆರೆಗಳನ್ನು ಪ್ರಾರಂಭಿಸಬೇಕಾಗುತ್ತದೆ ತನ್ಮೂಲಕ ಅಂತರ್ಜಲವನ್ನು ವೃದ್ಧಿಗೊಳಿಸಬೇಕಾಗಿರುತ್ತದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಕೊರೆದಿರುವ ಬೋರ್‌ವೆಲ್‌ಗಳ ಸಮೀಪದಲ್ಲಿ ಕುಡಿಯುವ ನೀರನ್ನು ಸಂಗ್ರಹಿಸುವುದಕ್ಕೆ ಆಗುತ್ತದೆಯೇ? ಇಲ್ಲವೇ? ಎಂಬದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ, ನೀರಿಗಾಗಿ

ನಾವು ಹಣ ಖರ್ಚು ಮಾಡಿ ನೀರಿನ ಸೌಲಭ್ಯವೇ ಇಲ್ಲವೆಂದರೆ ನಾಳಿನ ಬದುಕಿನ ಕುರಿತು ನಾವು ಚಿಂತನೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಇದಕ್ಕೆ ತಾವು ಒತ್ತುಕೊಡುತ್ತೀರಾ? ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಬಯಸುತ್ತೇನೆ. ಇಷ್ಟೇ ಅಲ್ಲದೆ, ಇವೊತ್ತು ಸುಮಾರು ಹನ್ನೆರಡು ಸಾವಿರ ಕೋಟಿ ರೂಪಾಯಿಗಳಷ್ಟು ಸಾಲದ ಹಣವನ್ನು ವಿಶ್ವ ಬ್ಯಾಂಕ್ ನೆರವಿನಿಂದ, ನಬಾರ್ಡ್ ಮೂಲಕ ಪಡೆಯಲಾಗುತ್ತಿದೆಯೆಂದು ಆಯವ್ಯಯ ಪತ್ರದಲ್ಲಿ ತೋರಿಸಿದ್ದೀರಿ. ಇದರಲ್ಲಿ ಪ್ರತಿಶತ 70ರಷ್ಟು ಬಡ್ಡಿಯ ಆಕರಣೆ ಮಾಡುವುದು ಮತ್ತು ಶೇಕಡ 30ರಷ್ಟು ಉಚಿತವಾಗಿ ಕೊಡತಕ್ಕಂಥ ವಿಚಾರವನ್ನು ಇದರಲ್ಲಿ ನಾವು ಕಾಣುತ್ತೇವೆ. ಪ್ರತಿಶತ 70ರಷ್ಟು ಎಂದರೆ ಮುಂದಿನ ಐದು ವರ್ಷಗಳಲ್ಲಿ ಶೇಕಡ 12ರಷ್ಟು ಬಡ್ಡಿಯನ್ನು ಕ್ರೋಢೀಕರಿಸಿದಾಗ ನಾವು ಎಷ್ಟು ತೆರಬೇಕಾಗುತ್ತದೆಂಬುದು ಬಹಳ ಮುಖ್ಯವಾದ ವಿಚಾರವಾಗಿದೆ. ಆದುದರಿಂದ, ಯಾವುದೇ ಯೋಜನೆಯನ್ನು ಕೈಗೆತ್ತಿಕೊಂಡಾಗ ಅದನ್ನು ತ್ವರಿತಗತಿಯಲ್ಲಿ ಮುಗಿಸಿದರೆ ಅದರ ಲಾಭ ನಮ್ಮ ರಾಜ್ಯಕ್ಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಸನ್ಮಾನ್ಯ ಅಧ್ಯಕ್ಷರೆ, 2000-2001ನೇ ಸಾಲಿನ ಆಯವ್ಯಯ ಪತ್ರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು 21ನೇ ಶತಮಾನದ ಮೂರನೇ ಸಹಸ್ರಮಾನದ ಪ್ರಪ್ರಥಮ ಮುಂಗಡ ಆಯವ್ಯಯ ಪತ್ರವೆಂದು ಏನು ಕೊಟ್ಟಿದ್ದಾರೆ, ಮುಖ್ಯಮಂತ್ರಿಗಳು ಅರ್ಥಮಂತ್ರಿಗಳಾಗಿದ್ದರೂ ಸಹ ಒಳ್ಳೆಯ ಅನುಭವಿ ರಾಜಕಾರಣಿಯಾಗಿದ್ದು, ಸಾಕಷ್ಟು ಧೀರ್ಘಕಾಲದ ಅನುಭವವನ್ನು ಪಡೆದಿದ್ದಾರೆ. ರಾಜ್ಯದಲ್ಲಿನ ಸಂಪನ್ಮೂಲಗಳ ಬಗ್ಗೆ ಅವರಿಗೆ ಸ್ಪಷ್ಟ ಅರಿವಿದ್ದು ಬಹುಶಃ ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ದಿಸೆಯಲ್ಲಿ ಮುಂಗಡ ಆಯವ್ಯಯ ಪತ್ರದಲ್ಲಿ ಅವರು ತಮ್ಮ ವಿಚಾರಧಾರೆಗಳನ್ನು ಹರಿಸಿದ್ದಾರೆ. ಭಾರತದಲ್ಲಿನ ಎಲ್ಲಾ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ಉತ್ತಮ ಸಂಪನ್ಮೂಲಗಳನ್ನು ಹೊಂದಿರುವ ರಾಜ್ಯವಾಗಿದೆ. ಕರ್ನಾಟಕದಲ್ಲಿರುವಷ್ಟು ನಿಸರ್ಗ ಸಂಪತ್ತು ಬೇರೆ ಯಾವ ರಾಜ್ಯವೂ ಪಡೆದಿಲ್ಲ. ಜೊತೆಗೆ ಪ್ರತಿಭಾವಂತ ಮಾನವ ಸಂಪನ್ಮೂಲವನ್ನು ಸಹ ಪಡೆದಿರುವ ರಾಜ್ಯವಾಗಿದೆ. ನಮ್ಮ ರಾಜ್ಯದಲ್ಲಿ ನಿಸರ್ಗವು ಬಹಳಷ್ಟು ಕೊಡುಗೆ ನೀಡಿದ್ದು ಇಲ್ಲಿ ಉತ್ತಮ ರೀತಿಯ ಫಲವತ್ತಾದ ಭೂಮಿಯಿದ್ದು ಯಾವುದೇ ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳದಿರುವಂಥ ಎಲ್ಲಾ ಬೆಳೆಗಳನ್ನು ಬೆಳೆಯುವಂಥ ಕರ್ನಾಟಕ ಇಡೀ ಭಾರತಕ್ಕಷ್ಟೇ ಅಲ್ಲ, ಪ್ರಪಂಚಕ್ಕೆ ಮಾದರಿ ಎನಿಸಿದ ರಾಜ್ಯವಾಗಿದೆ. ಇದನ್ನು ಗಣನೆಗೆ ತೆಗೆದುಕೊಂಡು ಇವೊತ್ತು ರಾಜ್ಯದಲ್ಲಿ ಪಾರದರ್ಶಕವಾದ, ಭ್ರಷ್ಟಾಚಾರರಹಿತವಾದ, ಹೊಸ ತಾಂತ್ರಿಕ ವಿಚಾರಗಳಿಂದೊಡಗೂಡಿದ ಉತ್ತಮ ರೀತಿಯ ಆಡಳಿತ ತರುವ ಮೂಲಕ ರಾಜ್ಯದ ಸಮೃದ್ಧತೆಯಲ್ಲಿ ತಮ್ಮನ್ನು ಅರ್ಪಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಆಯವ್ಯಯ ಪತ್ರವನ್ನು ತಂದು, ಎಲ್ಲಾ ಇಲಾಖೆಗಳ ಎಲ್ಲಾ ಕ್ಷೇತ್ರಗಳಲ್ಲೂ ಕೈಯಾಡಿಸಿದ್ದಾರೆ. ಆದರೆ ಅವರೇ ತಿಳಿಸಿರುವ ಮಾನವ ಸಂಪನ್ಮೂಲವನ್ನು ಯಾವ್ಯಾವ ರೀತಿಯಲ್ಲಿ ತೊಡಗಿಸಲಾಗುವುದೆಂಬುದರ ಬಗ್ಗೆ ಸರಿಯಾದ ವಿವರಣೆ ನೀಡಿರುವುದಿಲ್ಲ. ಬಹುಶಃ ನಮಗೆ ಇರುವಂಥ ಫಲವತ್ತಾದ

ಭೂಮಿ, ಅರಣ್ಯ ಪ್ರದೇಶ, ಖನಿಜ ಸಂಪತ್ತು ಮತ್ತು ಜಲ ಸಂಪತ್ತನ್ನು ಉಪಯೋಗಿಸಿಕೊಳ್ಳುವಲ್ಲಿ ಉಳಿದ ರಾಜ್ಯಗಳಿಗಿಂತ ಏನು ಹಿಂದುಳಿದಿದ್ದೇವೆ, ಮಾನವ ಸಂಪನ್ಮೂಲವನ್ನು ಸೂಕ್ತವಾಗಿ ಬಳಸಿಕೊಂಡು ಅದನ್ನು ತ್ವರಿತ ಗತಿಯಲ್ಲಿ ಜನತೆಗೆ ಅಂದರೆ ರೈತರಿಗೆ ಮುಟ್ಟಿಸುವಂಥ ಕಾರ್ಯದಲ್ಲಿ ತೊಡಗಿಸಿಕೊಂಡು ನಿರ್ದಿಷ್ಟ ಗುರಿಯನ್ನು ತಲುಪಬೇಕಾಗಿದೆ. ಆ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅನೇಕ ವಿಚಾರಗಳಲ್ಲಿ ತಮ್ಮ ದೃಷ್ಟಿಕೋನ ಇಟ್ಟುಕೊಂಡು ಈ ಬಜೆಟನ್ನು ಕೊಟ್ಟಿದ್ದಾರೆ. ಇದರಲ್ಲಿ ನಾನು ಬಹಳ ಮುಖ್ಯವಾಗಿ ಹೇಳಬೇಕಾದುದು ಧಾರವಾಡದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದವರು ಒಂದು ಕೃಷಿ ಶೃಂಗ ಸಭೆಯನ್ನು ನಡೆಸಿ ಅದರಲ್ಲಿ ಇಡೀ ಜಗತ್ತಿನ ಅನೇಕ ಜನ ವಿಜ್ಞಾನಿಗಳನ್ನು ಸೇರಿಸಿ ತಮ್ಮದೇ ಆದಂತಹ ರೀತಿಯಲ್ಲಿ ಈ ದೇಶ ಏನು ಸಂಪನ್ಮೂಲಗಳನ್ನು ಪಡೆದಿದೆ, ಅದರಲ್ಲೂ ನಮ್ಮ ದೇಶದಲ್ಲಿ ನಿಸರ್ಗ ಸಂಪನ್ಮೂಲ ಏನು ಇದೆ, ನಮ್ಮ ದೇಶದ ರೈತರಿಗೆ, ನಮ್ಮ ದೇಶದಲ್ಲಿ ಬಹುಸಂಖ್ಯೆಯಲ್ಲಿರುವ ಜನರಿಗೆ ನಾವು ಏನು ಸಹಾಯ ಮಾಡಬೇಕೆನ್ನುವ ದೃಷ್ಟಿಯಲ್ಲಿ ಆ ಶೃಂಗಸಭೆಯಲ್ಲಿ ವಿಜ್ಞಾನಿಗಳ ಮೂಲಕ ಒಂದು ವಿಶೇಷವಾದ ಆಯೋಗವನ್ನು ನೇಮಿಸಿದ್ದಾರೆ. ಇದರಿಂದ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚು ಉಪಯೋಗ ಮಾಡಲಿಕ್ಕೆ ಹೆಚ್ಚು ಪ್ರಯತ್ನ ಮಾಡಿದ್ದಾರೆ ಎನ್ನುವುದು ನಮಗೆ ಕಂಡು ಬರುತ್ತಿದೆ. ಇವತ್ತು ಈ ಕೃಷಿ ಶೃಂಗಸಭೆಯ ಮೂಲಕ ಡಾಕ್ಟರ್ ಕುರಿಯನ್ ಎನ್ನುವವರನ್ನು ಮತ್ತು ಡಾಕ್ಟರ್ ಸ್ವಾಮಿನಾಥನ್ ಎನ್ನುವಂತಹರನ್ನು ಮತ್ತು ಈ ರಾಜ್ಯದಲ್ಲಿ ಬಹಳ ಮುಂದುವರಿದ ವಿಜ್ಞಾನಿಗಳನ್ನು ಸಹ ಕರೆದು ಒಂದು ಶೃಂಗಸಭೆಯನ್ನು ಮಾಡಿದ್ದಾರೆ. ಡಾಕ್ಟರ್ ಕುರಿಯನ್ ಅವರು ಈ ರಾಜ್ಯದ ಕೃಷಿ, ಪಶುಸಂಗೋಪನೆ, ಇನ್ನಿತರೆ ಉತ್ತಮ ಯೋಜನೆಗಳಿಗೆ 500 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ. ಈ ರಾಜ್ಯದ ಅಭಿವೃದ್ಧಿಯಲ್ಲಿ ಈ ಹಣವನ್ನು ತೊಡಗಿಸುವುದಕ್ಕೆ ಅವರು ತಮ್ಮದೇ ಆದಂತಹ ಒಂದು ಗುರಿಯನ್ನು ಕೊಟ್ಟಿದ್ದಾರೆ. ಆ ಗುರಿಯನ್ನು ಸದುಪಯೋಗ ಮಾಡಿಕೊಳ್ಳುವಂತಹ ಒಂದು ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಇನ್ನು ಮಹಿಳೆಯರ ಸಲುವಾಗಿ 'ಸ್ತ್ರೀಶಕ್ತಿ' ಎನ್ನುವ ಒಂದು ನೂತನ ಯೋಜನೆಯನ್ನು ತಂದಿದ್ದಾರೆ. ಈ ರಾಜ್ಯದ 'ಸ್ತ್ರೀಶಕ್ತಿ' ಅಂದರೆ ಸ್ವಯಂ ಸಹಾಯಕ ಗುಂಪುಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರಿಗೆ ಈ ಯೋಜನೆ ಮೂಲಕ 50 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿಯೇ ನೀಡಿ ಆ ಜನತೆಯ ಅಭಿವೃದ್ಧಿಗೋಸ್ಕರ ಉದ್ಯೋಗವನ್ನು ಕೊಡುವಂತಹ ದೃಷ್ಟಿಯಲ್ಲಿ ಈ ಯೋಜನೆಯನ್ನು ತಂದಿದ್ದಾರೆ. ಆದರೆ ಈ ರಾಜ್ಯದ ಮಹಿಳೆಯರ ಶಿಕ್ಷಣದ ಬಗ್ಗೆ ಹೇಳುವುದಾದರೆ, ಧಾರವಾಡದಲ್ಲಿ ಹೆಣ್ಣು ಮಕ್ಕಳ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆ ಇದೆ. ಅದು ಈ ಕರ್ನಾಟಕ ರಾಜ್ಯದಲ್ಲಿಯೇ ಬಹಳ ಹಳೆಯದಾದುದು. ಈ ಸರ್ಕಾರಿ ಮಹಿಳಾ ಶಿಕ್ಷಕಿಯರ ತರಬೇತಿ ಸಂಸ್ಥೆಗೆ 105 ವರ್ಷಗಳಾಗಿದೆ. ಈ ಶಿಕ್ಷಕಿಯರ ತರಬೇತಿ ಸಂಸ್ಥೆಯಲ್ಲಿ ಮಹಿಳೆಯರಿಗೆ ಶಿಕ್ಷಣವನ್ನು ಕೊಟ್ಟು, ಮಹಿಳೆಯರು ಕುಟುಂಬದಲ್ಲಿ ಒಬ್ಬರು ವಿದ್ಯಾವಂತೆಯಾದರೆ ಇಡೀ ಕುಟುಂಬವೇ ಹೆಚ್ಚು ವಿದ್ಯಾವಂತರಾಗಿ ಅದರಿಂದ ಅವರ ಕುಟುಂಬಕ್ಕೆ ಮತ್ತು ರಾಜ್ಯಕ್ಕೆ ಅಭಿವೃದ್ಧಿಯಲ್ಲಿ ಅವರು ಪಾಲ್ಗೊಳ್ಳುತ್ತಾರೆ ಎನ್ನುವಂತಹ ದೃಷ್ಟಿಯನ್ನು ಏನು ಇಟ್ಟುಕೊಂಡಿದ್ದಾರೆ ಆ ಒಂದು ಶಿಕ್ಷಣ ಸಂಸ್ಥೆಯ

ಅಗತ್ಯತೆಯ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ನಾನು ಬಹಳ ದಿವಸಗಳಿಂದ ಕೇಳುತ್ತಿದ್ದೇನೆ. ಶತಮಾನೋತ್ಸವವನ್ನು ಆಚರಿಸಬೇಕಾದಂತಹ ಆ ಸರ್ಕಾರಿ ಮಹಿಳಾ ಶಿಕ್ಷಕಿಯರ ತರಬೇತಿ ಕೇಂದ್ರಕ್ಕೆ ಸುಸಜ್ಜಿತವಾದಂತಹ ಒಂದು ಕಟ್ಟಡವನ್ನು ಕಲ್ಪಿಸಿಕೊಡಬೇಕಾದುದು ಅಗತ್ಯವಾಗಿದೆ. ನಾನು ನಮ್ಮ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಭಾಗದ ಜನರ ಅಭಿವೃದ್ಧಿಯ ಬಗ್ಗೆ ಬಹಳಷ್ಟು ಕೂಗು ಇದೆ. ಆ ಕೂಗೂ ಏಕೆ ಇದೆ ಅಂದರೆ ಪ್ರತಿಯೊಂದು ದೃಷ್ಟಿಯಲ್ಲಿಯೂ ಸಹ ನಮ್ಮ ಉತ್ತರ ಕರ್ನಾಟಕದ ಜನತೆಗೆ ಅಗತ್ಯವಾದಂತಹ ಅವಶ್ಯಕತೆಗಳನ್ನು ಇಲ್ಲಿಯವರೆಗೂ ಪೂರೈಸಿಲ್ಲ ಎನ್ನುವಂತಾದ್ದನ್ನು ನಾನು ಇಲ್ಲಿ ಹೇಳುತ್ತೇನೆ. ಧಾರವಾಡದಲ್ಲಿ ಒಂದು ಮಾನಸಿಕ ಆಸ್ಪತ್ರೆ ಇದೆ. ಅದು ಬ್ರಿಟೀಷರ ಕಾಲದಿಂದ ಇದ್ದಂತಾದ್ದು. ಇದು ಸುಮಾರು 160 ವರ್ಷಗಳಷ್ಟು ಹಳೆಯದಾದ ಮಾನಸಿಕ ಆಸ್ಪತ್ರೆ. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಇವತ್ತು ಉತ್ತರ ಕರ್ನಾಟಕದ ಜನತೆ ಈ ಒಂದು ಉಪಚಾರವನ್ನು ಪಡೆಯಬೇಕಾದರೆ ಅವರು ಬೆಂಗಳೂರಿನಲ್ಲಿರುವ ನಿಮ್ಹಾನ್ಸ್ ಆಸ್ಪತ್ರೆಗೆ ಬರಬೇಕಾಗುತ್ತದೆ. ಬೆಂಗಳೂರಿನಲ್ಲಿರುವ ನಿಮ್ಹಾನ್ಸ್‌ಗೆ ಬರುವಂತಹ ದುಸ್ಥಿತಿ ಈ ಎಲ್ಲಾ ರೋಗಿಗಳಿಗೂ ಇದೆ. ಆದ್ದರಿಂದ ಈ ಆಸ್ಪತ್ರೆಯನ್ನು ಉತ್ತಮ ದರ್ಜೆಗೆ ಏರಿಸಬೇಕು, ಆ ಆಸ್ಪತ್ರೆಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಡಬೇಕು ಮತ್ತು ಆ ಆಸ್ಪತ್ರೆಯನ್ನು ಸಹ ನಿಮ್ಹಾನ್ಸ್ ಮಾದರಿಯಲ್ಲಿಯೇ ಒಂದು ಸ್ವಾಯತ್ತಾ ಸಂಸ್ಥೆಯನ್ನಾಗಿ ಮಾಡಿದರೆ ಇಡೀ ಉತ್ತರ ಕರ್ನಾಟಕದ 8-9 ಜಿಲ್ಲೆಗಳಿಗೆ ಸೇವಾ ಅವಕಾಶವನ್ನು ಮಾಡಿಕೊಟ್ಟಂತೆ ಆಗುತ್ತದೆ. ಅದೇ ರೀತಿಯಲ್ಲಿ ಧಾರವಾಡದಲ್ಲಿರುವ ಸಿವಿಲ್ ಆಸ್ಪತ್ರೆಯಲ್ಲಿ ಬೆಡ್ಸ್ ಸಂಖ್ಯೆ ಬಹಳ ಕಡಿಮೆ ಇದೆ. ರಾಜ್ಯದಲ್ಲಿರುವಂತಹ ಎಲ್ಲಾ ಶಸ್ತ ಚಿಕಿತ್ಸಾ ಆಸ್ಪತ್ರೆಗಳಲ್ಲಿ ಸುಮಾರು 250ರಿಂದ 500 ಬೆಡ್ಸ್‌ವರೆಗೂ ಇವೆ. ನಮ್ಮ ಧಾರವಾಡದ ಜಿಲ್ಲಾ ಆಸ್ಪತ್ರೆಗೆ ಸುಮಾರು 115 ವರ್ಷಗಳಾಗಿದೆ. ಆದರೆ ಆ ಆಸ್ಪತ್ರೆಗೆ ಇದುವರೆಗೂ 250 ಬೆಡ್ಸನ್ನು ಕೊಟ್ಟಿಲ್ಲ. ಮತ್ತು ಇವತ್ತಿನ ಅಗತ್ಯತೆಗೆ ತಕ್ಕಂತೆ ಏನು ಸೌಲಭ್ಯಗಳನ್ನು ಕೊಡಬೇಕಾಗಿದೆ ಆ ಸೌಲಭ್ಯಗಳನ್ನು ಪೂರೈಸುವಂತಹ ಕೆಲಸ ಅಲ್ಲಿ ಇನ್ನೂ ನಡೆದಿಲ್ಲ.

ಇವತ್ತು ಸರ್ಕಾರ ರಾಜ್ಯದಲ್ಲಿರುವ ಮಾರುಕಟ್ಟೆಗಳ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕಾಗಿತ್ತು. ರೈತ ಬೆಳೆದಂತಹ ಹುಟ್ಟುವಳಿಗಳು ಏನು ಇವೆ ಅವೆಲ್ಲಾ ಮಾರುಕಟ್ಟೆಗಳಿಗೆ ಬರಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಮಾರುಕಟ್ಟೆ ವ್ಯವಸ್ಥೆ ಸರಿಯಾಗಿಲ್ಲ. ಧಾರವಾಡ ಮತ್ತು ಹುಬ್ಬಳ್ಳಿ ಮಧ್ಯದಲ್ಲಿ ಏಷಿಯಾದಲ್ಲಿಯೇ ದೊಡ್ಡದಾದ ಒಂದು ಮಾರುಕಟ್ಟೆಯನ್ನು ನಿರ್ಮಾಣ ಮಾಡಿದ್ದಾರೆ. ಈ ಕೆಲಸಕ್ಕೆ ರೈತರ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಆ ಮಾರುಕಟ್ಟೆ ಇವತ್ತು ಭಾರತದಲ್ಲಿಯೇ ಮಾದರಿಯಲ್ಲ, ಇಡೀ ಏಷಿಯಾದಲ್ಲಿಯೇ ಒಂದು ಮಾದರಿ ಮಾರುಕಟ್ಟೆಯಾಗಿದೆ. ಈ ಮಾರುಕಟ್ಟೆಗೆ ಏನೇನು ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ ಅದನ್ನು ಒದಗಿಸಿಕೊಟ್ಟಿಲ್ಲ. ಆ ಪ್ರದೇಶದಲ್ಲಿ ಬೆಳೆಯುವಂತಹ ಕೃಷಿ ಹುಟ್ಟುವಳಿಗಳು ಯಾವುವು? ಮತ್ತು ತೋಟಗಾರಿಕಾ ಬೆಳೆಗಳು ಯಾವುವು? ಅದಕ್ಕೆ ಬೇಕಾದಂತಹ ಏನೇನು ಸೌಲಭ್ಯಗಳನ್ನು ರೈತರಿಗೆ ಒದಗಿಸಿಕೊಡಬೇಕು ಅವುಗಳನ್ನು ಅವರಿಗೆ ಒದಗಿಸಿಕೊಡಬೇಕು. ಇವತ್ತು ರೈತರು ಬೆಳೆದಂತಹ ಹುಟ್ಟುವಳಿಗಳನ್ನು ದಾಸ್ತಾನು ಮಾಡಲು ಗೋಡೌನ್ ಮಾಡಿಕೊಡುವಂತಹ ಅವಶ್ಯಕತೆ ಇದೆ. ಅಲ್ಲಿ ರೈತರು ಬೆಳೆದ ಹುಟ್ಟುವಳಿಗಳನ್ನು

ಇಡಲು ಶೈತ್ಯಾಗಾರಗಳನ್ನು ಕಟ್ಟಿಸಿಕೊಡುವ ಅವಶ್ಯಕತೆ ಇದೆ. ಇವತ್ತು ರೈತರು ಅಲ್ಲಿ ಆಲೂಗಡ್ಡೆ ಬೆಳೆಯುತ್ತಾರೆ, ಉಳ್ಳಾಗಡ್ಡೆ ಬೆಳೆಯುತ್ತಾರೆ, ತರಕಾರಿ ಬೆಳೆಯುತ್ತಾರೆ, ಮತ್ತು ಇತ್ತೀಚೆಗೆ ಅಲ್ಲಿ ತೋಟಗಾರಿಕಾ ಬೆಳೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ ಅಲ್ಲಿ ಶೈತ್ಯಾಗಾರಗಳ ಅವಶ್ಯಕತೆ ಇದೆ. ಅವುಗಳನ್ನು ಸಂಸ್ಕರಣ ಮಾಡುವಂತಹ ಉದ್ದಿಮೆಗಳು ಸಹ ಆ ಭಾಗಕ್ಕೆ ಬರಬೇಕಾಗಿದೆ. ಈ ಕಡೆಗೆ ಸರ್ಕಾರ ಹೆಚ್ಚು ಗಮನ ಕೊಡಬೇಕಾಗಿದೆ. ರೈತ ಬೆಳೆದಂತಹ ಉತ್ಪಾದನೆಗಳು ಏನು ಇದೆ, ಅವುಗಳನ್ನು ಸಂರಕ್ಷಣೆಯನ್ನು ಮಾಡುವುದು, ಸಂಸ್ಕರಣೆ ಮಾಡುವಂಥಾದ್ದು, ಅವನಿಗೆ ಯೋಗ್ಯವಾದ ಬೆಲೆಯನ್ನು ತಂದು ಕೊಡುವಂಥಾದ್ದರ ಕಡೆಗೆ ನಾವು ಹೆಚ್ಚು ಗಮನ ಕೊಡಬೇಕಾಗಿದೆ. ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳು ಪ್ರದೇಶವಾರು ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಬೆಳೆಯನ್ನು ಬೆಳೆಯುವದಕ್ಕೆ ಅಲ್ಲಿನ ಹವಾಗುಣ, ಅಲ್ಲಿನ ಭೂಮಿ ಗುಣ ಇವೆಲ್ಲವನ್ನು ಕಂಡುಕೊಂಡು ಪ್ರಾದೇಶಿಕವಾದಂಥ ಹುಟ್ಟುವಳಿಗಳನ್ನು ಗುರುತಿಸಿ ಆ ಒಂದು ಬೆಳೆಗಳಿಗೆ ಹೆಚ್ಚು ಉತ್ತೇಜನ ಕೊಡಬೇಕೆನ್ನುವ ದೃಷ್ಟಿಕೋನದಿಂದ ಅವರು ಒಂದು ಶೃಂಗಸಭೆಯನ್ನು ಧಾರವಾಡದಲ್ಲಿ ನಡೆಸಿದರು. ಅದರ ಮೂಲಕ ಒಂದು ಉತ್ತಮವಾದ ಕಮಿಟಿಯನ್ನು ನೇಮಕ ಮಾಡಿದ್ದಾರೆ. ಆ ಕಮಿಟಿ ಮೂಲಕ ಅವರು ಹೆಚ್ಚು ಬೆಳವಣಿಗೆಯನ್ನು ಮಾಡಬೇಕು.

ಇನ್ನು ಕರ್ನಾಟಕ ರಾಜ್ಯದಲ್ಲಿ ಹೈನುಗಾರಿಕೆಗೆ ಗುಜರಾತಿಗಿಂತಲೂ ಹೆಚ್ಚು ಹವಮಾನದ ಅನುಕೂಲತೆ ಇದೆ. ಈ ಪ್ರದೇಶದಲ್ಲಿ ಗುಜರಾತಿಗಿಂತಲೂ ಹೆಚ್ಚು ಹೈನು ಅಭಿವೃದ್ಧಿಯನ್ನು ಮಾಡಬಹುದು. ಇವತ್ತು ನಮ್ಮ ರಾಜ್ಯದ ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲ. ಇವತ್ತು ರಾಜ್ಯದಲ್ಲಿ ರೈತರ ದೊಡ್ಡ ಆಸ್ತಿ ಅಂದರೆ ದನಗಳು. ಅಂದರೆ ಪಶುಗಳು. ಇವುಗಳನ್ನು ಸಂರಕ್ಷಣ ಮಾಡುವುದಕ್ಕೆ ಸಾಕಷ್ಟು ಹಣವನ್ನು ಕೊಟ್ಟು ಆಸ್ಪತ್ರೆಗಳಿಗೆ ಸರಿಯಾಗಿ ಔಷಧಿಗಳನ್ನು ಒದಗಿಸಿ, ನಮ್ಮಲ್ಲಿರುವ ಉತ್ತಮವಾದ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಇದೆ. ನಮ್ಮಲ್ಲಿ ದೇವಣಿ ಎನ್ನುವಂತಹ ಉತ್ತಮವಾದ ಒಂದು ತಳಿ ಇದೆ. ಆ ತಳಿ ಈ ಪ್ರದೇಶಕ್ಕೆ ಉತ್ತಮವಾದ ಒಂದು ತಳಿ. ಈ ತಳಿ ಒಂದು ದಿವಸಕ್ಕೆ 20-30 ಲೀಟರ್ ಹಾಲು ಕೊಡುತ್ತದೆ. ಈ ಒಂದು ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೆ ವಿಶ್ವವಿದ್ಯಾನಿಲಯಗಳಲ್ಲಿ ಅವಕಾಶ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳ ಅಡಿಯಲ್ಲಿಯೇ ಪಶುಸಂಗೋಪನ ಕಾಲೇಜುಗಳು ನಡೆಯುತ್ತಿವೆ

7.40 ಪಿ.ಎಂ

ಇನ್ನೂ ಹೆಚ್ಚಿನ ಪಶುಸಂಗೋಪನಾ ಕಾಲೇಜುಗಳು ಅಲ್ಲಿ ಬರಬೇಕು. ಅದರ ಜೊತೆಗೆ ಪ್ರತ್ಯೇಕವಾದಂತಹ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ ಸಹಿತ ಕರ್ನಾಟಕದಲ್ಲಿ ಸ್ಥಾಪನೆಯಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಾಕಷ್ಟು ಬೆಳವಣಿಗೆಗೆ ಅವಕಾಶವಿರುವುದರಿಂದ ಈ ಕೆಲಸವನ್ನು ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

ಭೂಮಿಯಲ್ಲಿ ಈಗ ಜಲಪಾತಳಿ ಬಹಳ ಕಡಿಮೆಯಾಗುತ್ತಿದೆ ಎಂಬ ವಿಚಾರದಲ್ಲೂ ಕೂಡ ಇವತ್ತು ನಾವೆಲ್ಲರೂ ಬಹಳ ಚಿಂತನೆಯನ್ನು ಮಾಡಬೇಕಾಗಿದೆ. ನೀರಾವರಿ ಇಲಾಖೆ ಮೂಲಕವಾಗಲೀ ಅಥವಾ ಜಿಲ್ಲಾ ಪಂಚಾಯಿತಿಯ ಮೂಲಕವಾಗಲೀ ಇರುವಂತಹ ಕೆರೆಗಳ

ಹೂಳು ತೆಗೆಸುವ ಕಾರ್ಯವನ್ನು ಆದ್ಯತೆ ಮೇಲೆ ಕೈಗೆತ್ತಿಕೊಳ್ಳಬೇಕು. ಕುಡಿಯುವ ನೀರಿಗೂ ಸಹ ಎಲ್ಲೆಡೆ ಅಭಾವ ಬರುವಂತಹ ಒಂದು ಪ್ರಸಂಗವನ್ನು ನಾವು ಇತ್ತೀಚೆಗೆ ಕಾಣುತ್ತಿದ್ದೇವೆ. ಆ ದೃಷ್ಟಿಯಿಂದಾಗಿ ಜನರ ಸಹಕಾರದೊಂದಿಗೆ ಕೆರೆಗಳ ಹೂಳನ್ನು ತೆಗೆಸುವುದು ಬಹಳ ಮುಖ್ಯವಾದುದಾಗಿದೆ. ಧಾರವಾಡ ನಗರದಲ್ಲಿರುವ ಹಿರೇಕೆರೆಯ ಹೂಳನ್ನು ಕಳೆದ ವರ್ಷದಿಂದ ಜನರ ಸಹಕಾರದಿಂದ ನಾನು ತೆಗೆಸುವಲ್ಲಿ ಯಶಸ್ವಿಯಾಗಿದ್ದೇನೆ. 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹಾ ಅಷ್ಟೊಂದು ಹೂಳನ್ನು ತೆಗೆಯಲು ಸಾಧ್ಯವಾಗುತ್ತಿರಲಿಲ್ಲ, ಅಂತಹ ಹೂಳನ್ನು ನಾನು ರೈತರ ಸಹಯೋಗದಿಂದ ತೆಗೆಸಿದ್ದೇನೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಕೆಲಸ ಆಗಬೇಕಾಗಿದೆ. ಇಡೀ ಊರಿನಲ್ಲಿ ಅಂಡರ್ ಗ್ರೌಂಡ್ ಡ್ರೈನೇಜ್ ಕನೆಕ್ಷನ್ ಸರಿಯಾಗಿಲ್ಲದ ಕಾರಣ ಕೊಳಚೆ ನೀರು ಶುದ್ಧ ನೀರಿನಲ್ಲಿ ಸೇರುತ್ತಿದೆ. ಈ ಬಗ್ಗೆ ನಾನು ಕಾರ್ಪೊರೇಷನ್‌ಗೂ ಸಹ ಹೇಳಿದ್ದೇನೆ. ಅಂಡರ್ ಗ್ರೌಂಡ್ ಡ್ರೈನೇಜ್ ನೀರು ಹೋಗಲು ಪ್ರತ್ಯೇಕವಾದಂತಹ ಪ್ಯಾಸೇಜ್ ಮಾಡಿ ಶುದ್ಧ ನೀರು ಕಲುಷಿತಗೊಳ್ಳದಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಧಾರವಾಡದಲ್ಲಿರುವಂತಹ ಎಲ್ಲಾ ಕೆರೆಗಳೂ ಕೂಡ ಮುಚ್ಚಿ ಹೋಗಿವೆ. ಕೆರೆಗಳ ಹೂಳು ತೆಗೆಸಿ ಅವುಗಳನ್ನು ಸಂರಕ್ಷಣೆ ಮಾಡಿದಲ್ಲಿ ಹಾಗೂ ಒಳಚರಂಡಿ ನೀರು ಸರಿಯಾಗಿ ಹೋಗುವಂತಹ ವ್ಯವಸ್ಥೆ ಮಾಡಿದಲ್ಲಿ ನಗರಗಳಲ್ಲಿರುವಂತಹ ಬಾವಿಗಳಲ್ಲಿ ಜಲಪಾತಳಿ ಹೆಚ್ಚಾಗಲಿಕ್ಕೆ ಅವಕಾಶವಾಗುತ್ತದೆ. ಬೋರ್‌ವೆಲ್‌ಗಳಿಂದ ಈಗಾಗಲೇ ಸಾಕಷ್ಟು ನೀರು ಸಿಗುತ್ತಿಲ್ಲ ಮತ್ತು ಅವುಗಳು ಹಾಳಾಗುತ್ತಿವೆ. ನಮ್ಮಲ್ಲಿ ಕುಡಿಯುವ ನೀರಿನ ಬಹಳ ದೊಡ್ಡ ಸಮಸ್ಯೆ ಇದೆ. ಈ ಬಗ್ಗೆ ಮಹಾನಗರ ಪಾಲಿಕೆಯ ಬೇಡಿಕೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಿಸಿದ ಮಂತ್ರಿಗಳ ಮುಂದಿದೆ. ಇವತ್ತು ಇಡೀ ಕರ್ನಾಟಕದಲ್ಲಿಯ ಮಹಾ ನಗರಪಾಲಿಕೆಗಳ ಪೈಕಿ ಹುಬ್ಬಳ್ಳಿ-ಧಾರವಾಡ ಮಹಾ ನಗರಪಾಲಿಕೆ ವ್ಯಾಪ್ತಿಯಲ್ಲೇ ಕುಡಿಯುವ ನೀರಿನ ಅಭಾವ ಹೆಚ್ಚಾಗಿದೆ. ಅಲ್ಲಿರುವ ಜನತೆಯ ಮೊದಲನೇ ಸಮಸ್ಯೆಯೇ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಎರಡನೇ ಹಂತದ ಮಲಪ್ರಭಾ ಯೋಜನೆಯಿಂದ ನೀರು ಇನ್ನೂ ಬರಬೇಕಾಗಿದೆ. ಅದಕ್ಕಾಗಿ ಸರ್ಕಾರ 36 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಹಣವನ್ನು ತೀವ್ರವಾಗಿ ಬಿಡುಗಡೆ ಮಾಡುವಂತಹ ಅವಶ್ಯಕತೆ ಇದೆ. ಅದನ್ನು ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತಿದ್ದೇನೆ.

ಇನ್ನು ನಗರ ಪ್ರದೇಶಗಳಲ್ಲಿ ಅನೇಕ ಕೊಳಚೆ ಪ್ರದೇಶಗಳಿವೆ. ಅದಕ್ಕೆ ಸರಿಯಾದಂತಹ ದುಡ್ಡು ಕೊಡುತ್ತಿಲ್ಲ. ಸರಿಯಾದಂತಹ ರೀತಿಯಲ್ಲಿ ಅವುಗಳಿಗೆ ಹಣ ಬಿಡುಗಡೆ ಮಾಡಿದರೆ ಆ ಕೊಳಚೆ ಪ್ರದೇಶಗಳ ಅಭಿವೃದ್ಧಿ ಮಾಡಿ ಅವುಗಳಿಗೆ ಬೇಕಾದಂತಹ ಸೌಲಭ್ಯಗಳನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. ನಗರ ಪ್ರದೇಶಗಳಲ್ಲಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿ ಮಾಡುವ ಸಲುವಾಗಿ ಹೆಚ್ಚಿನ ಹಣಕಾಸನ್ನು ಒದಗಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕೋರುತ್ತೇನೆ.

ಇನ್ನು ಶಿಕ್ಷಣದ ಬಗ್ಗೆ ಹೇಳಬೇಕಾದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತು ಅನೇಕ ವಿಶ್ವವಿದ್ಯಾನಿಲಯಗಳಿವೆ. ಇವತ್ತು ನಮ್ಮ ಶಿಕ್ಷಣದ ನೀತಿಯಲ್ಲಿ ಬಹಳಷ್ಟು ಬದಲಾವಣೆ ಆಗಬೇಕಾಗಿದೆ.

ಮುಂದಿನ ಪೀಳಿಗೆಗೆ ಯಾವ ತರಹದ ಶಿಕ್ಷಣವನ್ನು ಕೊಡಬೇಕೆಂಬ ಬಗ್ಗೆ ವಿಚಾರ ಮಾಡಬೇಕು. ಬಂಡವಾಳ ಹೂಡಿಕೆ ಸಲುವಾಗಿ ಮಾನ್ಯ ಮುಖ್ಯಮಂತ್ರಿಯವರು ಅನೇಕ ಸಲ ವಿದೇಶ ಪ್ರವಾಸ ಮಾಡಿದ್ದಾರೆ. ಅವರಿಗೆ ಅಪಾರ ಅನುಭವ, ದೂರದೃಷ್ಟಿ ಇದೆ. ಎಷ್ಟೋ ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲಾ ವಿಷಯಗಳನ್ನು ಬೋಧನೆ ಮಾಡುವಂತಹ ಡಿಪಾರ್ಟ್‌ಮೆಂಟ್‌ಗಳಿವೆ. ಅನೇಕ ಡಿಪಾರ್ಟ್‌ಮೆಂಟ್‌ಗಳಲ್ಲಿ ಅಸಿಸ್ಟೆಂಟ್ ಪ್ರೊಫೆಸರ್‌ಗಳು, ಪ್ರೊಫಸರ್‌ಗಳು, ಲೆಕ್ಚರರ್ಸ್‌ಗಳು ಇತ್ಯಾದಿ ಸಿಬ್ಬಂದಿ ಹೆಚ್ಚಾಗಿದ್ದಾರೆ. ಅಲ್ಲಿರುವ ಸಿಬ್ಬಂದಿಗೆ ಖರ್ಚು ಮಾಡುತ್ತಿರುವ ಹಣಕ್ಕೆ ತಕ್ಕ ರೀತಿಯಲ್ಲಿ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಲ್ಲ. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಕೂಡ ಅಷ್ಟೊಂದು ಇಲಾಖೆಗಳ ಅವಶ್ಯಕತೆ ಇದೆಯೇ? ಎಂಬುದನ್ನು ಯೋಚಿಸಬೇಕಾಗಿದೆ. ಅವಶ್ಯಕತೆ ಇರುವಷ್ಟು ಡಿಪಾರ್ಟ್‌ಮೆಂಟ್‌ಗಳನ್ನು ಮಾತ್ರ ಅವಶ್ಯಕತೆ ಇರುವ ವಿಶ್ವವಿದ್ಯಾನಿಲಯಗಳಲ್ಲಿ ತೆರೆಯುವುದರ ಮೂಲಕ ಅನಾವಶ್ಯಕವಾದ ಹಣದ ವ್ಯಯವನ್ನು ತಡೆಯಬಹುದಾಗಿದೆ. ಅನೇಕ ಹುಡುಗರಿಗೆ ವಿದ್ಯೆ ಕಲಿಯುವ ಅವಶ್ಯಕತೆ ಇರುವುದಿಲ್ಲ. ಅಂತಹ ಹುಡುಗರನ್ನು ತಮ್ಮ ಸಲುವಾಗಿ ಕರೆದುಕೊಂಡು ಹೋಗಿ ಬಲಿ ಕೊಡಲಾಗುತ್ತಿದೆ. ಯಾವುದೇ ತರಹದ ಉದ್ಯೋಗಾವಕಾಶಗಳು ಇಲ್ಲದಂತಹ ರೀತಿಯಲ್ಲಿ ಇವತ್ತು ಅವರ ಶಿಕ್ಷಣ ನಡೆಯುತ್ತಿದೆ. ಇಂತಹದ್ದನ್ನು ಮೊಟಕುಗೊಳಿಸಬೇಕೆಂದು ಸರ್ಕಾರವನ್ನು ಕೋರುತ್ತೇನೆ.

ಹುಬ್ಬಳ್ಳಿಯಲ್ಲಿ ಬಹಳ ಮುಖ್ಯವಾಗಿ ಸಾಫ್ಟ್‌ವೇರ್ ಟೆಕ್ನಾಲಜಿ ಕೇಂದ್ರವೊಂದನ್ನು ಕೋರುತ್ತೇನೆ. ಅದರ ಬಗ್ಗೆ ಸರ್ಕಾರ ತ್ವರಿತವಾಗಿ ಗಮನ ಹರಿಸಬೇಕು. ಉತ್ತರ ಕರ್ನಾಟಕದ ಹುಬ್ಬಳ್ಳಿಯಿಂದಲೇ ಬಂಗಳೂರಿನಲ್ಲಿರುವ ಸಾಫ್ಟ್‌ವೇರ್ ಇಂಡಸ್ಟ್ರಿಗಳಿಗೆ ಮಾನವ ಸಂಪನ್ಮೂಲ ಬರುತ್ತಿದೆ. ಅನೇಕ ಇಂಜಿನಿಯರಿಂಗ್ ಕಾಲೇಜುಗಳಿರುವಂತಹ ಈ ಪ್ರದೇಶದಲ್ಲಿ ಟೆಕ್ನಾಲಜಿ ಕೇಂದ್ರ ಮಾಡಿದರೆ ಅದರ ಬೆಳವಣಿಗೆ ತ್ವರಿತಗತಿಯಲ್ಲಿ ಆಗುತ್ತದೆ. ಆ ದೃಷ್ಟಿಯಿಂದ ತ್ವರಿತವಾಗಿ ಟೆಕ್ನಾಲಜಿ ಕೇಂದ್ರವನ್ನು ಸ್ಥಾಪಿಸಬೇಕೆಂದು ಕೋರುತ್ತೇನೆ. ಇನ್‌ಫೋಸೀಸ್‌ನ ಶ್ರೀ ನಾರಾಯಣಮೂರ್ತಿಯವರು ಹುಬ್ಬಳ್ಳಿಯಲ್ಲಿ ತಮ್ಮದೊಂದು ಬ್ರಾಂಚ್ ಅನ್ನು ಆರಂಭಿಸುವ ಉದ್ದೇಶ ಇದೆ ಎಂದು ಹೇಳಿದರು. ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣದ ಸೌಲಭ್ಯವನ್ನು ಒದಗಿಸಿದಲ್ಲಿ ಅಲ್ಲಿ ತಮ್ಮ ಬ್ರಾಂಚ್ ಅನ್ನು ಆರಂಭಿಸಬಹುದು ಎಂದು ಶ್ರೀ ನಾರಾಯಣ ಮೂರ್ತಿಗಳು ನನ್ನೊಡನೆ ಮಾತನಾಡುತ್ತಾ ಹೇಳಿದರು. ಹುಬ್ಬಳ್ಳಿಯಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಬೆಳವಣಿಗೆಯಾಗಬೇಕಾದರೆ ಮೊಟ್ಟಮೊದಲು ಅಲ್ಲಿಗೆ ವಿಮಾನ ನಿಲ್ದಾಣದ ಸೌಲಭ್ಯ ಬೇಕಾಗುತ್ತದೆ. ರಾತ್ರಿಯಲ್ಲೂ ಸಹಾ ವಿಮಾನ ಇಳಿಯುವ ರೀತಿಯಲ್ಲಿ ನಿಲ್ದಾಣ ಇರಬೇಕಾಗುತ್ತದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು. ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ಆರಂಭಿಸಿದಲ್ಲಿ ಕೇವಲ ಸಾಫ್ಟ್‌ವೇರ್ ಇಂಡಸ್ಟ್ರಿಗಳು ಮಾತ್ರವಲ್ಲ ಉತ್ತರ ಕರ್ನಾಟಕದ ಅನೇಕ ಇಂಡಸ್ಟ್ರಿಗಳೂ ಕೂಡ ಬೆಳೆಯಲಿಕ್ಕೆ ಅದರಿಂದ ಸಹಕಾರಿಯಾಗುತ್ತದೆ. ಆ ಭಾಗದಲ್ಲಿರುವಂತಹ ಪ್ರತಿಭಾವಂತ ಮಾನವಸಂಪನ್ಮೂಲ ಉಪಯೋಗವಾಗಿ ಆ ಭಾಗದ ಬೆಳವಣಿಗೆಗೆ ಹೆಚ್ಚು ಸಹಾಯ ಮಾಡಿದಂತಾಗುತ್ತದೆ. ಅದರ ಜೊತೆಗೆ ರೈತರ ಕೃಷಿ ಉತ್ಪನ್ನಗಳ ಮಾರಾಟಕ್ಕೂ ಕೂಡ ಅದರಿಂದ ಸಹಾಯವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರ ಗಮನ ಹರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೋರುತ್ತಿದ್ದೇನೆ.

ಇನ್ನು ಟ್ಯಾಕ್ಸೇಷನ್ ಬಗ್ಗೆ ಹೇಳುವುದಾದರೆ, ನಮ್ಮ ಕರ್ನಾಟಕ ರಾಜ್ಯದ ಸುತ್ತಮುತ್ತಲಿನ ಐದು ರಾಜ್ಯಗಳೊಂದಿಗೆ ನಾವು ವ್ಯಾಪಾರ ವ್ಯವಹಾರ ನಡೆಸುತ್ತಿರುತ್ತೇವೆ. ರಾಜ್ಯದ ಬಾರ್ಡರ್ ಜಿಲ್ಲೆಗಳಲ್ಲಿ ಇದು ಹೆಚ್ಚಾಗಿ ನಡೆಯುತ್ತದೆ. ಕೇಂದ್ರ ಸರ್ಕಾರ ಒಂದು ಯೂನಿಫಾರಂ ಟ್ಯಾಕೇಷನ್ ಪಾಲಿಸಿಯನ್ನು ಜಾರಿಗೆ ತರಬೇಕೆಂದು ಇದೆ. ಅದನ್ನು ಎಲ್ಲಾ ರಾಜ್ಯಗಳೂ ಕೂಡ ಒಪ್ಪಿಕೊಂಡರೆ, ಅವರವರ ರಾಜ್ಯಗಳಲ್ಲಿ ಆದಾಯ ಹೆಚ್ಚು ಮಾಡಲಿಕ್ಕೆ ಸಹಾಯವಾಗುತ್ತದೆ. ಕರ್ನಾಟಕದ ಸುತ್ತಮುತ್ತಲ ರಾಜ್ಯಗಳು ಯೂನಿಫಾರಂ ಟ್ಯಾಕ್ಸೇಷನ್ ಅನ್ನು ಒಪ್ಪಿಕೊಳ್ಳದೇ ತಮ್ಮದೇ ಆದಂತಹ ಟ್ಯಾಕ್ಸ್ ಅಥವಾ ಟಾರೀಫ್ ಅನ್ನು ಫಿಕ್ಸ್ ಮಾಡಿಕೊಂಡರೆ, ರಾಜ್ಯ ಆ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಕರ್ನಾಟಕದ ಸುತ್ತಮುತ್ತಲ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಪಾಂಡಿಚೆರಿ, ಕೇರಳ ಮತ್ತು ಗೋವಾ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಟ್ಯಾಕ್ಸ್ ಪ್ರಮಾಣ ಹೆಚ್ಚು ಇದೆ. ಇದರಿಂದಾಗಿ ನಮ್ಮ ರಾಜ್ಯದ ಗಡಿ ಪ್ರದೇಶಗಳಲ್ಲಿನ ಜಿಲ್ಲೆಗಳ ವ್ಯವಹಾರ ಸುತ್ತಮುತ್ತಲ ರಾಜ್ಯಗಳಿಗೆ ಹೋಗುತ್ತಿದೆ. ನಮ್ಮ ರಾಜ್ಯಕ್ಕೆ ಬರುವಂತಹ ಆದಾಯ ಕಡಿಮೆಯಾಗುತ್ತಿದೆ. ಅನ್-ಅಕೌಂಟೆಡ್ ಬಿಸಿನೆಸ್ ಮಾಡುವವರೇ ಇಂದು ಹೆಚ್ಚಾಗಿದ್ದಾರೆ. ಇದರಿಂದಾಗಿ ಟ್ಯಾಕ್ಸ್ ತಪ್ಪಿಸುವ ಅವಕಾಶ ಹೆಚ್ಚಾಗುತ್ತದೆ. ಕರ್ನಾಟಕ ರಾಜ್ಯವೂ ಕೂಡ ಸುತ್ತಮುತ್ತಲಿನ ರಾಜ್ಯಗಳಲ್ಲಿರುವ ಸೇಲ್ಸ್ ಟ್ಯಾಕ್ಸ್‌ಗಿಂತ ಕಡಿಮೆ ಟ್ಯಾಕ್ಸ್ ಅನ್ನು ರಾಜ್ಯದಲ್ಲಿ ಫಿಕ್ಸ್ ಮಾಡಬೇಕು ಅಥವಾ ಪಕ್ಕದ ರಾಜ್ಯಗಳಲ್ಲಿರುವ ರೇಟ್‌ನಲ್ಲಾದರೂ ಟ್ಯಾಕ್ಸ್ ಅನ್ನು ಫಿಕ್ಸ್ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಸಲಹೆ ಕೊಡಬಯಸುತ್ತೇನೆ. ಇದರಿಂದಾಗಿ ರಾಜ್ಯದ ಸೇಲ್ಸ್ ಟ್ಯಾಕ್ಸ್‌ನಿಂದ ಬರುವಂತಹ ಆದಾಯ ಇಮ್ಮಡಿಯಾಗುವುದರಲ್ಲಿ ಸಂಶಯವಿಲ್ಲ. ನಾನು ಒಬ್ಬ ವ್ಯಾಪಾರಿಯಾಗಿ, ಒಬ್ಬ ಉದ್ದಿಮೆದಾರನಾಗಿ ಈ ಸಲಹೆಯನ್ನು ಕೊಡುತ್ತಿದ್ದೇನೆ. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಲಂಕಷವಾಗಿ ವಿಚಾರ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ. 1983ರಲ್ಲಿ ನಾನು ಶಾಸಕನಾಗಿ ಇಲ್ಲಿಗೆ ಮೊದಲ ಬಾರಿಗೆ ಆರಿಸಿ ಬಂದಾಗ ಮಾನ್ಯ ಗುಂಡೂರಾವ್‌ರವರ ಸರ್ಕಾರದಲ್ಲಿ ಸೇಲ್ಸ್ ಟ್ಯಾಕ್ಸ್ ರೆವಿನ್ಯೂ 545 ಕೋಟಿ ರೂಪಾಯಿಗಳಷ್ಟು ಇತ್ತು. ಮಾನ್ಯ ಸದಸ್ಯರ ಅನೇಕ ಸಲಹೆಗಳನ್ನು ಜಾರಿಗೊಳಿಸಿದ್ದರಿಂದ ಸರ್ಕಾರದ ಆದಾಯ ವರ್ಷದಿಂದ ವರ್ಷಕ್ಕೆ ಇದುವರೆಗೂ ಹೆಚ್ಚುತ್ತಲೇ ಇದೆ. ಪಕ್ಕದ ರಾಜ್ಯಕ್ಕಿಂತ ಕಡಿಮೆ ಟ್ಯಾಕ್ಸ್ ಅನ್ನು ಅಥವಾ ಪಕ್ಕದ ರಾಜ್ಯದಷ್ಟೇ ಟ್ಯಾಕ್ಸ್ ಅನ್ನು ಫಿಕ್ಸ್ ಮಾಡಿದರೆ ರಾಜ್ಯದ ಉದ್ದಿಮೆಗಳು ಬೆಳೆಯುತ್ತವೆ, ವ್ಯಾಪಾರಸ್ಥರು ಬೆಳೆಯುತ್ತಾರೆ. ಇಲ್ಲಿ ಪ್ರಾಮಾಣಿಕವಾಗಿ ವ್ಯಾಪಾರ ಮಾಡುವಂತಹವರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರು ನನಗೆ ಸಂಕ್ಷಿಪ್ತವಾಗಿ ಮಾತನಾಡಲು ಸೂಚಿಸಿದ್ದರಿಂದ ನಾನು ಕೆಲವು ವಿಷಯಗಳ ಮೇಲೆ ಮಾತ್ರ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದೇನೆ. ಇನ್ನೂ ಬಹಳಷ್ಟು ವಿಷಯಗಳ ಮೇಲೆ ಮಾತನಾಡಲು ನಾನು ಅಂಶಗಳನ್ನು ಗುರುತು ಹಾಕಿಕೊಂಡು ಬಂದಿದ್ದೆ. ಆದರೆ ಇವತ್ತು ಅದಕ್ಕೆ ಕಾಲಾವಕಾಶವಿಲ್ಲ. ಬಹುಶಃ ಮಾನ್ಯ ಅಧ್ಯಕ್ಷರು ಅದಕ್ಕೆ ನಾಳೆ ಅವಕಾಶ ಕೊಡಬಹುದು ಎಂದು ಆಶಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ಮಾನ್ಯ ಮುಖ್ಯಮಂತ್ರಿಗಳು ನನ್ನ ಎಲ್ಲಾ ಸಲಹೆಗಳನ್ನು ಜಾರಿಗೊಳಿಸಬೇಕೆಂದು ಆಗ್ರಹಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸುಭಾಷ್ ಗುತ್ತೇದಾರ್ (ಆಳಂದ್) : ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಬಜೆಟ್ ಮೇಲೆ ಮಾತನಾಡುವುದಕ್ಕೆ ತಾವು ನನಗೆ ಅನುವು ಮಾಡಿಕೊಟ್ಟಿರುವುದಕ್ಕಾಗಿ ತಮಗೆ ಮೊಟ್ಟಮೊದಲನೆಯದಾಗಿ ವಂದಿಸುತ್ತೇನೆ. ಗೌರವಾನ್ವಿತ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ. ಕೃಷ್ಣರವರು ಮಂಡಿಸಿರುವ ಬಜೆಟ್ ಮೇಲೆ ಮಾನ್ಯ ಅಧ್ಯಕ್ಷರು ಆದೇಶಿಸಿರುವ ಪ್ರಕಾರ ಹೆಚ್ಚು ಸಮಯ ತೆಗೆದುಕೊಳ್ಳದೇ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಬಜೆಟ್‌ನಲ್ಲಿ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿರುವ ಮೂರ್ತೆದಾರರ ಬಗ್ಗೆ ಪ್ರಸ್ತಾಪಿಸಲಾಗಿದೆ. ಸೇಂದಿಯನ್ನು ಮೂರ್ತೆದಾರರ ಸಹಕಾರಿ-ಸಂಘಗಳ ಮೂಲಕವಾಗಿ ಮಾರಾಟ ಮಾಡುತ್ತಿದ್ದುದನ್ನು ರದ್ದುಗೊಳಿಸಿ ಸೇಂದಿಯನ್ನು ಮಾರಾಟ ಮಾಡುವ ಹಕ್ಕನ್ನು ಹರಾಜಿನ ಮೂಲಕ ವಿಲೇವಾರಿ ಮಾಡಲು ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾವಿಸಿದೆ. ಇದು ಸರಿಯಲ್ಲ. ಇವತ್ತು ಮೂರ್ತೆದಾರರು ಬಹಳಷ್ಟು ಜನ ಈಚಲು ಮರದಿಂದ ಸೇಂದಿ ಇಳಿಸಿ ತಮ್ಮ ಬದುಕು ನಡೆಸುತ್ತಿದ್ದಾರೆ. ಈ ರೀತಿ ಸೇಂದಿ ಮಾರಾಟ ಹಕ್ಕನ್ನು ಹರಾಜಿನ ಮೂಲಕ ವಿಲೇವಾರಿ ಮಾಡಿದರೆ ತೆಂಗಿನ ಮರದಿಂದ ಸೇಂದಿ ಇಳಿಸುವಂತಹ ದೊಡ್ಡ ದೊಡ್ಡ ಗುತ್ತಿಗೆದಾರರಿಗೆ ಮಾತ್ರ ಅನುಕೂಲವಾಗುತ್ತದೆ. ಈಚಲು ಮರದಿಂದ ಸೇಂದಿ ಇಳಿಸುವವರು ತೆಂಗಿನ ಮರದಿಂದ ಸೇಂದಿ ತೆಗೆಯಲಿಕ್ಕೆ ಅವರಿಗೆ ಆಗುವುದಿಲ್ಲ. ಮೂರ್ತೆದಾರರಲ್ಲಿ ಬಹಳಷ್ಟು ಜನ ಈಡಿಗ ಜನಾಂಗದವರೇ ಇದ್ದಾರೆ. ಬಹಳಷ್ಟು ಜನ ಈಡಿಗ ಜನಾಂಗದವರು ಕಡು ಬಡವರಿದ್ದಾರೆ. ಅವರಿಗೆ ಇಂತಹ ಊರು, ಇಂತಹ ಸ್ಥಳ ಎಂದು ನೆಲೆಯೇ ಇಲ್ಲವಾಗಿದೆ. ಎಲ್ಲಿ ಈಚಲು ಮರಗಳು ಇರುತ್ತವೆಯೋ ಅಲ್ಲಿ ನಾಲ್ಕು ತಿಂಗಳ ಕಾಲ ಗುಡಿಸಲು ಹಾಕಿಕೊಂಡು ಅವರು ಸಂಸಾರ ಮಾಡಬೇಕಾಗುತ್ತದೆ. ಅಲ್ಲಿ ಸೇಂದಿ ಇಳಿಸಿದ ಬಳಿಕ ಅವರು ಬೇರೆ ಪ್ರದೇಶಕ್ಕೆ ಸ್ಥಳಾಂತರ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಇವತ್ತು ಈಡಿಗ ಜನಾಂಗದವರಿದ್ದಾರೆ. ಈಡಿಗ ಜನಾಂಗದವರಲ್ಲಿ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಮಾತ್ರ ಶ್ರೀಮಂತರಿದ್ದಾರೆ. ಮರಗಳನ್ನು ಕೆತ್ತಿ ಸೇಂದಿ ಇಳಿಸಿ ಅದರ ಸಂಪಾದನೆ ಮೇಲೆ ಬದುಕುವ ಬಡ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಆದ ಕಾರಣ ಮಾನ್ಯ ಮುಖ್ಯಮಂತ್ರಿಗಳು ಸೇಂದಿ ಮಾರಾಟ ಮಾಡುವ ಹಕ್ಕನ್ನು ಹರಾಜಿನ ಮೂಲಕ ವಿಲೇವಾರಿ ಮಾಡುವುದನ್ನು ವಾಪಸ್ ತೆಗೆದುಕೊಂಡು ಮೊದಲಿದ್ದಂತೆ ಸೇಂದಿಯನ್ನು ಮೂರ್ತೆದಾರರ ಸಹಕಾರಿ ಸಂಘಗಳ ಮೂಲಕವೇ ಮಾರಾಟ ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ 11 ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ನಬಾರ್ಡ್ ಮೂಲಕ ಷೇರು ಬಂಡವಾಳ ಒದಗಿಸಲಾಗುವುದು ಎಂದು ಹೇಳಿದ್ದಾರೆ. ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಒಂದು ರೋಗಗ್ರಸ್ತ ಸಕ್ಕರೆ ಕಾರ್ಖಾನೆಯಾಗಿದೆ. ಅದರ ವ್ಯಾಪ್ತಿಯ ಗುಲ್ಬರ್ಗಾ ಜಿಲ್ಲೆಯ ಆಳಂದ, ಅಫಜಲಪುರ ಮತ್ತು ಗುಲ್ಬರ್ಗಾ ತಾಲ್ಲೂಕುಗಳಲ್ಲಿ ರೈತರು ಸುಮಾರು 2 ಲಕ್ಷ 40 ಸಾವಿರ ಟನ್‌ಗಳಷ್ಟು ಕಬ್ಬನ್ನು ಬೆಳೆಯುತ್ತಾರೆ. ಈ ವರ್ಷ ಈಗಾಗಲೇ 60 ಸಾವಿರ ಟನ್‌ಗಳಷ್ಟು ಕಬ್ಬನ್ನು ಅರೆಯಲಾಗಿದ್ದರೂ ಇನ್ನೂ ಸುಮಾರು 2 ಲಕ್ಷ ಟನ್‌ಗಳಷ್ಟು ಕಬ್ಬು ಅರೆಯುವುದು ಬಾಕಿ ಇದೆ. ಆದರೆ ಕಾರ್ಖಾನೆಯ ಕೆಪಾಸಿಟಿ 1200 ಸಾವಿರ ಟನ್‌ಗಳಷ್ಟು ಮಾತ್ರ ಇದೆ. ಆದುದರಿಂದ ನಬಾರ್ಡ್ ಮೂಲಕ ಅದಕ್ಕೆ ಹಣವನ್ನು ಒದಗಿಸಿಕೊಟ್ಟು

ಅದರ ಅರೆಯುವ ಸಾಮರ್ಥ್ಯವನ್ನು 2500 ಸಾವಿರ ಟನ್‌ಗಳಿಗೆ ಏರಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಯವರನ್ನು ಕೋರುತ್ತಿದ್ದೇನೆ.

ಪ್ರಕೃತಿ ವಿಕೋಪದಿಂದಾಗಿ ಗುಡಿಸಲುಗಳು ಸುಟ್ಟಾಗ ಅದಕ್ಕೆ ಪರಿಹಾರ ಧನವಾಗಿ ತಹಶೀಲ್ದಾರ್‌ರವರು ಈಗ ಕೇವಲ 500 ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಗುಡಿಸಲಿಗೆ ಬೆಂಕಿ ಬಿದ್ದು ಗುಡಿಸಲಿನಲ್ಲಿದ್ದ ದವಸಧಾನ್ಯ ಬಟ್ಟೆ, ಹಾಸಿಗೆ, ಪಾತ್ರೆಗಳೆಲ್ಲ ಸುಟ್ಟು ಹೋಗಿರುವಾಗ ಕೇವಲ 500 ರೂಪಾಯಿಗಳ ಪರಿಹಾರದಿಂದ ಏನೂ ಉಪಯೋಗವಾಗುವುದಿಲ್ಲ. ಆ ಪರಿಹಾರ ಧನದ ಮೊತ್ತವನ್ನು 500 ರೂಪಾಯಿಗಳಿಂದ 5 ಸಾವಿರ ರೂಪಾಯಿಗಳಿಗೆ ಏರಿಸಿದರೆ ಒಳ್ಳೆಯದಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಪ್ರಾಥಮಿಕ ಶಾಲೆಗಳಲ್ಲಿ ಪೀವನ್‌ಗಳನ್ನು ನೇಮಕ ಮಾಡಿಕೊಳ್ಳದಿರುವುದರಿಂದ ತರಗತಿ ಕೊಠಡಿಗಳಲ್ಲಿ ಕಸವನ್ನು ಗುಡಿಸುವವರೇ ಇಲ್ಲದಂತಾಗಿದೆ. ಬಾಗಿಲು ಹಾಕುವವರು ಯಾರೂ ಇಲ್ಲದೇ ರಾತ್ರಿ ವೇಳೆಯಲ್ಲಿ ಕೊಠಡಿಗಳ ಬೀಗ ಹಾಕುವವರೂ ಸಿಗದೇ ಕೊಠಡಿಗಳು ಹಾಗೇ ಖುಲ್ಲಾ ಬಿಡುವುದರಿಂದ ಅಲ್ಲಿ ಕೆಲವರು ಹೇಸಿಗೆ ಕೂಡ ಮಾಡುತ್ತಿರುವುದಾಗಿ ನಾನು ಕೇಳಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳು ಅಂತಹ ಕೊಠಡಿಗಳಲ್ಲಿ ಓದುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಕೂಡಲೇ ಪ್ರಾಥಮಿಕ ಶಾಲೆಗಳಿಗೆ ಪೀವನ್‌ಗಳನ್ನು ನೇಮಕಮಾಡಿಕೊಳ್ಳಬೇಕೆಂದು ಆಗ್ರಹಿಸುತ್ತೇನೆ.

ಇನ್ನು ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ, ನಮ್ಮ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಜರ್ಮನ್ ರಾಷ್ಟ್ರದ ನೆರವಿನಿಂದ ಆಸ್ಪತ್ರೆಯೊಂದನ್ನು ಕಟ್ಟಲು ಮಂಜೂರಾತಿ ನೀಡಲಾಗಿದೆ. ಆ ಆಸ್ಪತ್ರೆಯನ್ನು ಕಟ್ಟಲು ಅವರು 10-15 ಎಕರೆ ಜಮೀನನ್ನು ಪುಕ್ಕಟೆಯಾಗಿ ಕೇಳುತ್ತಿದ್ದಾರೆ. ಆದರೆ ತಾಲ್ಲೂಕಿನ ಸಮೀಪ 10-15 ಎಕರೆ ಜಮೀನು ಸಿಗಬೇಕಾದರೆ ಬಹಳ ಕಷ್ಟವಾಗುತ್ತದೆ. ಯಾವುದೇ ಒಂದು ಕಛೇರಿಯನ್ನು ಆರಂಭಿಸಬೇಕೆಂದರೂ ಕೂಡ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಜಾಗ ಸಿಗುತ್ತಿಲ್ಲ. ಆಸ್ಪತ್ರೆಯನ್ನು ಕಟ್ಟುವ ಸಲುವಾಗಿ ಸ್ಥಳಾವಕಾಶದ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೇನು ಹೆಚ್ಚಿಗೆ ನಾನು ಮಾತನಾಡುವುದಿಲ್ಲ. ಹೆಚ್ಚಾಗಿ ಬಡ ಕುಟುಂಬಗಳೇ ಇರುವ ಮೂರ್ತೆದಾರರು ಇವತ್ತು ತಮ್ಮ ಬಜೆಟ್ ಅನ್ನು ನೋಡಿ ಬಹಳ ಕಂಗಾಲಾಗಿದ್ದಾರೆ. ದೊಡ್ಡ ದೊಡ್ಡ ಗುತ್ತಿಗೆದಾರರಿಗೆ ಮಾತ್ರ ಸೇಂದಿ ಮಾರಾಟ ಹಕ್ಕನ್ನು ಹರಾಜು ಮೂಲಕ ಮಾಡಿದರೆ ಒಳ್ಳೆಯದಾಗುತ್ತದೆ. ಬಡವರಿಗೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಗುಲ್ಬರ್ಗಾ ಜಿಲ್ಲೆಯ ಎಷ್ಟೋ ಜನ ಸೇಂದಿ ಬಂದ್ ಮಾಡಿದಾಗ ಮಹಾರಾಷ್ಟ್ರಕ್ಕೆ ಹೋಗಿದ್ದರು. ಈಗ ಅವರು ಮತ್ತೆ ವಾಪಸ್ ಬಂದು ಪುನಃ ಇಲ್ಲಿ ಕಾಯಕ ಶುರು ಮಾಡಬೇಕೆಂದಿರುವಾಗ ಸರ್ಕಾರ ಈ ರೀತಿ ಸೇಂದಿ ಮಾರಾಟ ಹಕ್ಕನ್ನು ಹರಾಜು ಮೂಲಕ ಮಾಡಲಿಕ್ಕೆ ಹೊರಟರೆ ಬಹಳ ಕಷ್ಟವಾಗುತ್ತದೆ.

ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿ ಯಾವ ರೀತಿ ಸಹಕಾರ ಸಂಘಗಳ ಮೂಲಕ ಕಳೆದೆರಡು ವರ್ಷಗಳಿಂದ ಸೇಂದಿ ಮಾರಾಟ ಮಾಡುತ್ತಿದ್ದಾರೋ ಅದೇ ರೀತಿಯ ವ್ಯವಸ್ಥೆಯನ್ನು ನಮ್ಮ ಜಿಲ್ಲೆಯಲ್ಲೂ ಸಹಾ ಮಾಡಬೇಕೆಂದು ಮತ್ತೊಮ್ಮೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡು, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೇ, ಮೂರ್ತೆದಾರರ ಬಗ್ಗೆ ನಾನೂ ಕೂಡ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಾವ ರೀತಿ ಸಹಕಾರ ಸಂಘಗಳ ಮೂಲಕ ಸೇಂದಿ ಮಾರಾಟ ಮಾಡುತ್ತಿದ್ದಾರೋ ಅದೇ ರೀತಿ ಅವಕಾಶವನ್ನು ಗುಲ್ಬರ್ಗಾ ಜಿಲ್ಲೆಯಲ್ಲೂ ಮಾಡಿಕೊಡಬೇಕು. ಮೂರ್ತೆದಾರರಲ್ಲಿ ಬಹಳಷ್ಟು ಬಡ ಕುಟುಂಬಗಳಿವೆ, ಹಿಂದುಳಿದ ವರ್ಗಗಳಿಗೆ ಸೇರಿದವರು ಇದ್ದಾರೆ. ಅವರಿಗೆ ಪುನರ್ ವಸತಿಯ ಯೋಜನೆಗಳನ್ನು ಸರ್ಕಾರದವರು ರೂಪಿಸಬೇಕು. ಮೂರ್ತೆದಾರರು ಇನ್ನು ಮುಂದೆ ಆ ಉದ್ಯೋಗದ ಮೇಲೆಯೇ ಅವಲಂಬಿತರಾಗುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಅವರಿಗೆ ಬೇರೆ ಉದ್ಯೋಗವಕಾಶಗಳನ್ನು ಒದಗಿಸಿಕೊಡುವ ಯೋಜನೆಯನ್ನೂ ಕೂಡ ಸರ್ಕಾರ ಹಮ್ಮಿಕೊಂಡು ಅವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಭಾಷಣದ ಮೇಲೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಮೊಟ್ಟಮೊದಲನೆಯದಾಗಿ ತಮ್ಮನ್ನು ವಂದಿಸುತ್ತಾ ಹೆಚ್ಚಿನ ಸಮಯಾವಕಾಶವಿಲ್ಲದಿರುವುದರಿಂದ ನೇರವಾಗಿ ನಾನು ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಬಯಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೋಸ್ಕರ 2-3 ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಆದರೆ ಕೊಡಗು ಜಿಲ್ಲೆಯ ಬಗ್ಗೆ ಈ ಬಜೆಟ್‌ನಲ್ಲಿ ಏನನ್ನೂ ತೋರಿಸದೇ ಕಡೆಗಣಿಸಲಾಗಿದೆ. ಕೊಡುಗು ಜಿಲ್ಲೆ ಇವತ್ತು ಶಿಕ್ಷಣದಲ್ಲಿ ಬಹಳ ಹಿಂದೆ ಉಳಿದಿದೆ. ಅಲ್ಲಿ ಯಾವುದೇ ಕಾಲೇಜುಗಳು ಇಲ್ಲ, ಆಸ್ಪತ್ರೆಗಳು ಇಲ್ಲ. ಈ ವಿಚಾರವಾಗಿಯೇ ಕೊಡಗು ಬೇರೆ ರಾಜ್ಯವಾಗಬೇಕು ಎಂಬುದರ ಬಗ್ಗೆ ಹೋರಾಟ ನಡೆಯುತ್ತಿದೆ. ಆದಕಾರಣ ಸರ್ಕಾರ ಆ ಭಾಗಕ್ಕೆ ವಿಶೇಷ ಒತ್ತನ್ನು ಕೊಟ್ಟು ರಸ್ತೆಗಳು ಹಾಗೂ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಹೆಚ್ಚೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳಬೇಕು. ನನಗೆ ತಿಳಿದಿರುವ ಹಾಗೆ ಕೊಡಗಿನಿಂದ ಸುಮಾರು 400 ಕೋಟಿ ರೂಪಾಯಿಗಳ ಆದಾಯ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಬರುತ್ತಿದೆ. ಇದರ ಜೊತೆಗೆ ಕಾಫಿಯಿಂದ ಕೂಡ ವಿದೇಶಿ ವಿನಿಮಯದಿಂದ ಸುಮಾರು 800 ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆ. ಆದಕಾರಣ ಪರಿಸ್ಥಿತಿ ಹೀಗಿದ್ದರೂ ಕೂಡ ತಾವು ಕೊಡಗನ್ನು ನೆಗ್ಲೆಕ್ಟ್ ಮಾಡಬಾರದೆಂದು ಹೇಳಬಯಸುತ್ತೇನೆ. ಈ ಕೊಡಗು ಕಾಮಧೇನು ಕಲ್ಪವೃಕ್ಷ ಇದ್ದ ಹಾಗೆ. ಏಕೆಂದರೆ ಹಸು ಯಾವ ರೀತಿಯಲ್ಲಿ ಹಾಲನ್ನು ಕೊಡುತ್ತದೋ ಹಾಗೆಯೇ ಆ ಹಸು ಮತ್ತು ಅದರ ಕರುಗಳು ಎರಡೂ ಉಳಿಯುವಂತಾಗಬೇಕು.

ಆದಕಾರಣ ತಾವು ಬಜೆಟ್‌ನಲ್ಲಿ ಕೊಡಗಿಗೆ ವಿಶೇಷವಾಗಿ ಹಣವನ್ನು ಇಟ್ಟು ಕೊಡಗಿನ ಅಭಿವೃದ್ಧಿಗೆ ವಿಶೇಷವಾಗಿ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ 9.30 ರಿಂದ 1.00 ಗಂಟೆಯವರೆಗೆ ಮೊದಲ ಸೆಷನ್ ಇರುತ್ತದೆ. ಇದಾದ ನಂತರ ಮತ್ತೆ 2.00 ಗಂಟೆಯಿಂದ 5.00ಗಂಟೆಯವರೆಗೆ ಮತ್ತೆ ಸದನ ಪುನರ್ ಸಮಾವೇಶಗೊಳ್ಳುತ್ತದೆ. ನಾಳೆ ಸಂಜೆ 6.00 ಗಂಟೆಗೆ ಕಾರ್ಯಕ್ರಮಕ್ಕೆ ಹೋಗಬೇಕಾಗಿರುವುದರಿಂದ 5.00 ಗಂಟೆಗೆ ಸದನ ಮುಗಿಯುತ್ತದೆ. ಪ್ರಶ್ನೋತ್ತರ ಹಾಗೂ ಶೂನ್ಯ ವೇಳೆಯ ಕಲಾಪಗಳು ಮಧ್ಯಾಹ್ನ 2.00 ಗಂಟೆಯ ಮೇಲೆ ನಡೆಯುತ್ತದೆ. ನಾಳೆ ಬೆಳಿಗ್ಗೆ ಮೊದಲು ವಿತ್ತೀಯ ಕಾರ್ಯಕಲಾಪವನ್ನು ತೆಗೆದುಕೊಳ್ಳಲಾಗುತ್ತದೆ. ಇದರಲ್ಲಿ ಫೈನಾನ್‌ಶಿಯಲ್ ಬಿಲನ್ನು ಪಾಸ್ ಮಾಡುವುದು ಇರುತ್ತದೆ. ಸಾಮಾನ್ಯವಾಗಿ 9.30ಕ್ಕೆ ಬಿಲ್ ಹಾಕಿದ್ದರೂ ಕೂಡ ಸದಸ್ಯರು ಲಾಬಿಯಲ್ಲಿಯೇ ಕುಳಿತಿರುತ್ತಾರೆಯೇ ವಿನಃ ಸಮಯಕ್ಕೆ ಸರಿಯಾಗಿ ಸದನದ ಒಳಗೆ ಬರುತ್ತಿಲ್ಲ. ಸದಸ್ಯರುಗಳು ಏಕೆ ಹೀಗೆ ಮಾಡುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಸರಿಯಾದ ಸಮಯಕ್ಕೆ ಬಂದು ಕುಳಿತುಕೊಂಡರೆ ಸದಸ್ಯರುಗಳೂ ಕೂಡ ಸಮಯಕ್ಕೆ ಸರಿಯಾಗಿ ಬಂದು ಕುಳಿತುಕೊಳ್ಳುತ್ತಾರೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಸರಿಯಾದ ಸಮಯಕ್ಕೆ ಸದನಕ್ಕೆ ಬರುತ್ತಾರೆ. ನಾನು ಅವರನ್ನು ಮೆಚ್ಚಿಕೊಳ್ಳುತ್ತೇನೆ. ಅವರು ಸದನಕ್ಕೆ ಸಮಯಕ್ಕೆ ಸರಿಯಾಗಿ ಬರುತ್ತಾರೆ ಹಾಗೂ ಸದನದ ಕಲಾಪ ಮುಗಿಯುವವರೆಗೂ ಇಲ್ಲಿ ಇರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಿದ್ದರೂ ಕೂಡ ಮಂತ್ರಿಗಳು ಇರುವುದಿಲ್ಲ. ನನಗಂತೂ ಇವರು ಮುಖ್ಯಮಂತ್ರಿಗಳಿಗೂ ಹೆದರುವುದಿಲ್ಲವಲ್ಲವೆಂದು ಭಯವಾಗುತ್ತದೆ.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 9 ಗಂಟೆ 30 ನಿಮಿಷಕ್ಕೆ ಸೇರುವುದು.

(ಸದನವು ಸಂಜೆ 7 ಗಂಟೆ 52 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 30ನೇ ಮಾರ್ಚ್ 2000 ಗುರುವಾರದಂದು ಬೆಳಿಗ್ಗೆ 9 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು, ಕಾಸೂ. 09 - 350 ಪುಸ್ತಕಗಳು ದಿ: 13-8-2001.